UNIVERSAL
LIBRARY
OU_198968
UNIVERSAL
LIBRARY

• ಲಲಿತ ಸಾಹಿತ್ಯಮಾಲೆಯ ೫ನೇ ವರ್ಷದ ೨ನೇ ಕುಸುಮ

# ಪರಿವರ್ತನೆ

ಅಥವಾ

# ಪ್ರವಾಹ

ಸ್ವತಂತ್ರ ಸಾಮಾಜಿಕ ಕಾದಂಬರಿ

ಶ್ರೀ. 'ನಿಶಾಕಾಂತ' ಬೆಂಗಳೂರು

ಲಲಿತ ಸಾಹಿತ್ಯ ಮಾಲೆ
ಧಾರವಾಡ

ಮಾರ್ಚ
೧೯೪೯

೨-೮-೦

ಸಂಪಾದಕರು :

**ಚುಳಕಿ ಗೋವಿಂದರಾಯರು**

ಮಾರಾಟಗಾರರು :

**ಮನೋಹರ ಗ್ರಂಥ ಭಾಂಡಾರ, ಧಾರವಾಡ**
**ಕನ್ನಡ ಪುಸ್ತಕಾಲಯ, ಬೆಳಗಾವಿ**

ಮುದ್ರಕರು :
**ಕುಲಕರ್ಣಿ ಶಂಕರರಾಯ**
ಲಲಿತ ಮುದ್ರಣಾಲಯ
ಧಾರವಾಡ

ಪ್ರಕಾಶಕರು :
**ದ. ಬಾ. ಕುಲಕರ್ಣಿ**
ಮನೋಹರ ಗ್ರಂಥ ಭಾಂಡಾರ
ಧಾರವಾಡ

# ವಿಜ್ಞಾಪನೆ

ಕನ್ನಡಿಗರ ಮುಂದೆ ಇಟ್ಟಿರುವ ನನ್ನ ಮೊದಲನೆಯ ಕಾದಂಬರಿ ‘ಪರಿವರ್ತನೆ ಅಥವಾ ಪ್ರವಾಹ.’ ಇದರಲ್ಲಿ ಸುತ್ತುಮುತ್ತಿನ ಪ್ರಪಂಚದಲ್ಲಿ, ವಾತಾವರಣದಲ್ಲಿ ಕಾಣಸಿಗುವ ವ್ಯಕ್ತಿಗಳನ್ನು ಸಾಧ್ಯವಾದಷ್ಟುಮಟ್ಟಿಗೆ ಯಥಾವತ್ತಾಗಿ ಚಿತ್ರಿಸಲು ಪ್ರಯತ್ನ ಮಾಡಿದ್ದೇನೆ. ರಾಜ, ರತ್ನ, ರೋಹಿಣಿ, ವಿಶ್ವನಾಥ ಮೊದಲಾದ ಪಾತ್ರಗಳು ಮತ್ತಷ್ಟು ಕಲಾಪೂರ್ಣರಾಗಿ ನಮ್ಮ ಕಣ್ಣೆದುರಿನಲ್ಲಿಯೇ ನೋಡಬಹುದು. ಸಹಜತೆಗೂ ಇಲ್ಲಿ ರಚಿಸಿರುವ ಚಿತ್ರಕ್ಕೂ ಓದುಗರಿಗೆ ವೈಷಮ್ಯಕ್ಕಿಂತ ಸಾಮ್ಯ ಹೆಚ್ಚಾಗಿ ಕಂಡುಬಂದಲ್ಲಿ ಲೇಖಕನ ಕಾರ್ಯ ಸಾಧಿತವಾದಂತಾಯಿತು.

ಇದನ್ನು ಹೊರತರುವ ಕಾರ್ಯದಲ್ಲಿ ನೆರವಾಗಿರುವ ಲಲಿತ ಸಾಹಿತ್ಯ ಮಾಲೆಯ ಸಂಪಾದಕರಿಗೆ ಮತ್ತು ಹಲವು ಗೆಳೆಯರಿಗೆ ನಾನು ಚಿರಕೃತಜ್ಞನಾಗಿದ್ದೇನೆ.

ಬೆಂಗಳೂರು
ಮಾರ್ಚ ೧೯೪೯

ನಿಶಾಕಾಂತ

# ಸಂಪಾದಕೀಯ ಮಾತು

ಈ 'ಪರಿವರ್ತನೆ ಅಥವಾ ಪ್ರವಾಹ'ವು ನಮ್ಮ ಲಲಿತ ಸಾಹಿತ್ಯ ಮಾಲೆಯ ೫ ನೇ ವರುಷದ ೨ ನೇ ಕುಡಿಯು. ಇದನ್ನು ನಮ್ಮ ಮಾಲೆಯಲ್ಲಿ ಪ್ರಕಟಿಸಲು ಅನುಮತಿಯನ್ನಿತ್ತ ಬೆಂಗಳೂರಿನ 'ನಿಶಾಕಾಂತ' ರಿಗೆ ನಾವು ಎಂದಿಗೂ ಕೃತಜ್ಞರಾಗಿದ್ದೇವೆ. 'ಪರಿವರ್ತನೆ' ಎಂಬ ಹೆಸರಿನ ಕಥಾಸಂಗ್ರಹವೂ, ಒಂದು ನಾಟಕವೂ ಇದೆ. ಆದಕಾರಣ ಹೆಸರಿನ ಮೂಲಕ ತೊಡಕಾಗಬಹುದೆಂದೆಣಿಸಿ ಇದಕ್ಕೆ 'ಪರಿವರ್ತನೆ ಅಥವಾ ಪ್ರವಾಹ' ಎಂದು ಮುದ್ರಿಸಿದ್ದೇವೆ ಮೇಲಾಗಿ ಇದು ಈ ಹೆಸರಿನ ಕಾದಂಬರಿ.

ಲ. ಸಾ. ಮಾಲೆಯ ಕುಡಿಗಳು ನಿಯಮಿತವಾಗಿ ಬಿಡಲೊಲ್ಲವು. ಯಾವ ದೋಷದಿಂದಲೋ ಏನೋ ಅನಿಯಮಿತತನ ಅಂಟುಕೊಂಡಿದೆ. ಅದರಿಂದ ಪಾರಾಗಲು ಯತ್ನ ಮಾಡುತ್ತೇವೆ. ವಾಚಕರು ಮನ್ನಿಸಬೇಕಾಗಿ ಬಿನ್ನಹ.

ಇನ್ನು ೩ನೇ ಕುಡಿಯಾಗಿ 'ಚಿರವಿರಹಿ' ಎಂಬ ದೀರ್ಘ ಕಾದಂಬರಿಯನ್ನು ಜುಲೈ ಕೊನೆಯೊಳಗೆ ವಾಚಕರಿಗೆ ಮುಟ್ಟಿಸಬೇಕೆಂದು ಹಾತೊರೆಯುತ್ತಿದ್ದೇವೆ. ಅದು ಸಕಾಲಕ್ಕೆ ಹೊರಟು ತಮ್ಮ ಕೈಸೇರುವದೆಂದು ಆಶಿಸಿದ್ದೇವೆ.

ಈ ವರುಷದಲ್ಲಿ ೧/೩ ಚಂದಾದಾರರು ಕಡಿಮೆಯಾಗಿದ್ದಾರೆ. ಆದರೂ ನಾವು ಮಾಲೆಯನ್ನು ಧೈರ್ಯದಿಂದ ಸಾಗಿಸಿದ್ದೇವೆ. ಸಾಗಿಸುತ್ತೇವೆ ಎಂದು ಆಶಾಬದ್ಧರಾಗಿ ನಮ್ಮ ವಾಚಕರಲ್ಲಿ ಅರಿಕೆಮಾಡಿಕೊಂಡಿದ್ದೇವೆ.

# ಪರಿವರ್ತನೆ

## ೧

ಕಮಲಮ್ಮನ ಮನಸ್ಸು ಎಂದಿನಂತಿರಲಿಲ್ಲ. ಎಷ್ಟೋ ಧೈರ್ಯ ತಂದು ಕೊಳ್ಳುವಳು. ಆದರೇನು ಕಳವಳದಿಂದಿದ್ದ ಅವಳ ಮನಸ್ಸಿಗೆ ಸಮಾಧಾನವೇ ಬಾರದು. ಸಕ್ಕರೆ ಕಾರ್ಖಾನೆಯಲ್ಲಿ ಇಂಜನಿಯರ್ ಆಗಿದ್ದ ತನ್ನ ಅಳಿಯ ಚಂದ್ರಶೇಖರ ಮಂಡ್ಯದ ಆಸ್ಪತ್ರೆಗೆ ಹೆಚ್ಚು ಖಾಯಿಲೆಯೆಂದು ಸೇರಿದ್ದ. ಮಗಳು ಗೌರಿ ಹೆರಿಗೆಗೆ ತವರನ್ನು ಸೇರಿದಮೇಲೆ ಹೋಟಲಿನ ಊಟ ಸರಿ ಬೀಳದೆ ಚಂದ್ರಶೇಖರ ತೊಂದರೆ ಪಡುತ್ತಿದ್ದ. ಕೆಲವು ದಿನಗಳಿಂದ ಜರ ಉಲ್ಬಣವಾಗಲೂ ಕಮಲಮ್ಮನ ಅಣ್ಣ ಸುಬ್ಬಣ್ಣ ಮಂಡ್ಯಕ್ಕೆ ಹೋಗಿ ಆಸ್ಪತ್ರೆಗೆ ಸೇರಿಸಿ ಒಂದೆರಡು ದಿನ ಆಗಿತ್ತು. ಭಯವೇನೂ ಇಲ್ಲವೆಂದು ತಿಳಿದ ಮೇಲೆ ಮೈಸೂರಿಗೆ ಬಂದ. ಒಂದೆರಡು ದಿನಗಳಲ್ಲಿಯೇ ಅವನ ಸ್ಥಿತಿ ಕೊಂಚ ಕೆಟ್ಟಿದೆ ಎಂದು ತಿಳಿದಿತ್ತು. ಗೌರಿ ಹಡೆದು ಇನ್ನೂ ೨೦ ದಿನಗಳಾಗಿರಲಿಲ್ಲ. ಆ ಸ್ಥಿತಿಯಲ್ಲಿ ಅವಳು ತಾನೆ ಏನು ಮಾಡಬಲ್ಲಳು? ಪೋಸ್ಟ್ ಆಫೀಸಿಗೆ ಹೋಗಿದ್ದ ತನ್ನ ಮಗ ನಾಗರಾಜ ಇನ್ನೂ ಬರದಿರಲು ಬೀದಿಯಕಡೆ ನೋಡಿದಳು. ಅವಳ ನೋಟ ಬಹಳ ಆಳವಾಗಿತ್ತು. ಅಲ್ಲಿಂದ ಎಂತಹ ಸುದ್ದಿ ಬರುತ್ತದೆಯೋ ಎಂದು ಆ ನೋಟದ ಅರ್ಥವೋ ಏನೋ. ಎಲ್ಲಾ ದೇವರು ಮಾಡಿದಹಾಗೆ ಆಗುತ್ತೆ ಎಂದು ನಿಟ್ಟುಸಿರನ್ನು ಬಿಟ್ಟು ಪುನಃ ಬೀದಿಯ

ಕೊನೆಯ ವರೆಗೂ ನೋಡಿದಳು. ಯಾರಾದರೂ ಯುವಕರು ದೂರದಲ್ಲಿ ಬರುತ್ತಿದ್ದರೆ ನಾಗರಾಜನೇನೋ ಎಂದು ಅವಳ ಮನಸು ಅಂದುಕೊಳ್ಳುತ್ತಿತ್ತು. ಸ್ವಲ್ಪ ಹತ್ತಿರ ಬಂದ ಮೇಲೆ ಅವನಲ್ಲ ಎಂದು ಪುನಃ ಕುತೂಹಲದಿಂದ ನೋಡುವಳು ಹೀಗೆ ನಾಗರಾಜನಿಗಾಗಿ ಸ್ವಲ್ಪ ಹೊತ್ತು ಕಾದಳು. ದೂರದಲ್ಲಿ ನಾಗರಾಜ ಬರುವುದನ್ನು ಕಂಡು ಗಾಬರಿಯೇ ಆಯಿತು. ಅವನು ಓಡಿ ಬರುತ್ತಿರುವುದನ್ನು ನೋಡಿ ಎಂತಹ ಸುದ್ದಿ ಇರಬೇಕೆಂದು ಎದೆ ಹೆಚ್ಚಿನ ವೇಗದಿಂದ ಹೊಡೆದುಕೊಳ್ಳಲಾರಂಭಿಸಿತು. ಮನೆಯ ಬಾಗಿಲಿಗೆ ನಾಗರಾಜ ಬಂದ. ಕೈಯಲ್ಲಿ ಟೆಲಿಗ್ರಾಂ ಹಿಡಿದು ಅತ್ತಿದ್ದನ್ನು ನೋಡಿ ಕಮಲಮ್ಮನ ಎದೆ ಒಡೆದು ಹೋಯ್ತು.

ಅಮ್ಮಾ! ಭಾವ ನಿನ್ನೆ ತೀರಿಹೋದರು ಎಂದು ಕಿರುಚಿದ ನಾಗರಾಜ ಕಮಲಮ್ಮ ಸ್ತಬ್ಧಳಾಗಿ ನಿಂತುಬಿಟ್ಟಳು. ಅವಳಿಗೆ ತಿಳಿಯದಂತೆಯೇ ಬಾಯಿಂದ ಅಯ್ಯೋ! ಎಂದು ಹೊರಬಿತ್ತು. ತಂತಿಯನ್ನು ನಾಗರಾಜನಿಂದ ತೆಗೆದುಕೊಂಡು ಸಂಪಿಗೆಹಳ್ಳಿಯಿಂದ ಸುಬ್ಬಣ್ಣನನ್ನು ಕರೆತರುವಂತೆ ಹೇಳಿ ಕಳುಹಿಸಿದಳು. ಇದನ್ನು ಗೌರಿಗೆ ಹೇಗೆ ತಿಳಿಸುವುದು ಎಂದು ಉಕ್ಕಿ ಬರದ ದುಃಖವನ್ನೂ ಲಕ್ಷಿಸದೆ ಯೋಚಿಸುವಲ್ಲಿ ಅಮ್ಮಾ! ಎಂದು ಗೌರಿ ಕೂಗುತ್ತಿದ್ದುದು ಹೊಡೆದೆಬ್ಬಿಸಿದಂತಾಯ್ತು. ಬೀದಿಯ ಬಾಗಿಲನ್ನು ಹಾಕಿಕೊಂಡು ಕೋಣೆಯೊಳಕ್ಕೆ ಹೋದಳು.

ಗೌರಿ ಬಚ್ಚಲುಮನೆಯಿಂದ ಆಗ ತಾನೆ ಬಂದಿದ್ದಳು. ಮುಖ ತೊಳೆದುಕೊಂಡಿದ್ದರಿಂದ ಹಣೆ ಬರಿದಾಗಿತ್ತು. ಅವಳ ಮುಖವನ್ನು ನೋಡಿ ಕಮಲಮ್ಮನ ಬಾಯಿಂದ ತಿರುಗಿ ಅಯ್ಯೋ! ಎಂದು ಹೊರಬಿತ್ತು.

"ಅಮ್ಮಾ ಏಕೆ ಹೀಗಿದ್ದಿ".... ಎಂದು ಆಶ್ಚರ್ಯದಿಂದ ಕೇಳಿದಳು.

"ಹೇಗಿದ್ದೇನೆ ಗೌರಿ?"

"ಅಳ್ತಿದ್ದೀಯಮ್ಮ ನೀನು"

"ಇಲ್ಲ ಗೌರಿ"....ಕಮಲಮ್ಮನಿಗೆ ಗೌರಿಯ ದುರಾದೃಷ್ಟವನ್ನು ಹೇಗೆ ತಿಳಿಸಬೇಕೆಂದು ಬಗೆಹರಿಯಲಿಲ್ಲ. ಹಾಸಿಗೆಯ ಮೇಲೆ ಮಲಗಿದ ಮಗುವನ್ನು ನೋಡಿದಮೇಲಂತೂ ತನಗೆ ಗೊತ್ತಾಗದಂತೆಯೇ ಕಣ್ಣೀರು ಹರಿಯಿತು. ಮಗುವಿನ ಗಲ್ಲವನ್ನಲುಗಿಸಿದಳು. ಮಗು ಸಂತೋಷದಿಂದ ಬಾಯಿಬಿಟ್ಟಿತು.

"ಅಮ್ಮಾ! ಅಲ್ಲಿಂದ ಏನಾದರೂ ಸುದ್ದಿ ಬಾರ್ತೇನಮ್ಮ!" ಎಂದು ಗೌರಿ ಪ್ರಶ್ನಿಸಿ ಒತ್ತಿ ಕೇಳಿದಳು.

ಕಮಲಮ್ಮ ಮಾತನ್ನು ಬದಲಾಯಿಸಿ "ಏನೋ ನೆನಪಿಗೆ ಬಂತು ಗೌರಿ....ಮೊಮ್ಮಗಳನ್ನು ನೋಡಲು ಅವರು ಈದಿನ...." ಎಂದು ಹೇಳುವ ಮುಂಚೆಯೇ ಅತ್ತುಬಿಟ್ಟಳು.

"ಪುನಃ ಜ್ಞಾಪಿಸಿಕೊಂಡ್ಯೇನಮ್ಮ. ಅಣ್ಣಾ ಇದ್ದಿದ್ರೆ ತುಂಬಾ ಸಂತೋಷ ಪಡುತ್ತಿದ್ದ; ತಡಿಯಮ್ಮ ಬಾಡೆ ಹಣೆಗಿನ್ನೂ ಕುಂಕುಮ ಇಟ್ಕೊಂಡಿಲ್ಲ" ಎಂದು ಹೇಳಿ ಕುಂಕುಮವನ್ನು ನಾಜೂಕಾಗಿ ಇಟ್ಟುಕೊಳ್ಳುವುದರಲ್ಲಿ ಒಂದು ನಿಮಿಷವನ್ನು ಕಳೆದಿದ್ದಳು. ಕಮಲಮ್ಮನಿಗೆ ಆ ಒಂದು ನಿಮಿಷ ಒಂದು ಯುಗದಂತಿತ್ತು.

"ಗೌರಿ! ಬಾ ಇಲ್ಲಿ"

"ಏನಮ್ಮ!" ಎಂದು ಹೇಳಿದ ಗೌರಿಯ ಮುಖವನ್ನು ಕಮಲಮ್ಮ ನೋಡಿದಳು. ಆ ದುಂಡು ಮುಖಕ್ಕೆ ದುಂಡಾದ ಕುಂಕುಮ ಎಷ್ಟು ಚೆನ್ನಾಗಿ ಹೊಂದಿತ್ತು. ಆದರೆ ಇನ್ನೆಲ್ಲಿಯ ಸೌಭಾಗ್ಯ!

ತನ್ನ ಮುಖವನ್ನೇ ನೋಡುತ್ತಿದ್ದ ಗೌರಿಗೆ ಹೇಗೊ ಆಗಿ "ಏಕಮ್ಮ ಹಾಗೆ ನೋಡ್ತಿ! ಅಳೋದೇಕಮ್ಮ!" ಎಂದು ಕೇಳಿದಳು.

"ಹೇಗೆ ನಿನಗೆ ಹೇಳಲೇ ಗೌರಿ! ಅಯ್ಯೊ ಹಾಳು ಹೆಣ್ಣೆ!" ಎಂದು ಅಳುತ್ತಾ 'ತಂತಿ'ಯನ್ನು ಗೌರಿಯ ಕೈಗೆ ಕೊಟ್ಟಳು.

ಒಂದು ನಿಮಿಷ ಗೌರಿ 'ತಂತಿ'ಯನ್ನು ಓದಿ ಸ್ತಬ್ಧಳಾಗಿ, ಎಚ್ಚತ್ತು ಅಯ್ಯೋ ಎಂದು ಹಾಸಿಗೆಯ ಮೇಲೆ ಉರುಳಿ ಬಿಕ್ಕಿಬಿಕ್ಕಿ ಅತ್ತಳು. ಕಮಲಮ್ಮ ಅವಳ ಸಮಕ್ಕೂ ಅತ್ತಳು.

"ಹೋದ ಜನ್ಮದಲ್ಲಿ ಒಳ್ಳೆಯ ಹೂವಿನಿಂದ ಪೂಜೆಮಾಡಲಿಲ್ಲಮ್ಮ! ಅಮ್ಮಾ ಹೇಗೆ ಬದುಕಬೇಕೆ" ಎಂದು ತಾಯಿಯನ್ನು ತಬ್ಬಿಕೊಂಡು ಅತ್ತಳು. ತಾಯಿಯ ತೊಡೆಯ ಮೇಲೆ ಮಲಗಿದ್ದ ಮಗುವನ್ನು ಎದೆಗೆ ಅವಚಿಕೊಂಡು "ತಬ್ಬಲಿಯಾದೆಯಾ ಚಿನ್ನ!" ಎಂದು ಪುನಃ ಬಿಕ್ಕಿಬಿಕ್ಕಿ ಅತ್ತಳು. ಮಗವೂ ಕಿರುಚಿತು.

ಸಂಪಿಗೆಹಳ್ಳಿ ಎಂದರೆ ಮೈಸೂರಿನಿಂದ ಹತ್ತುಮೈಲಿ ಸೈಕಲ್ಲಿನ ಮೇಲೆ ಹೋಗಬೇಕು. ನಾಗರಾಜನಾಗಲೇ ಸಂಪಿಗೆಹಳ್ಳಿಗೆ ಹೋಗಿ ಸುಬ್ಬಣ್ಣನನ್ನು ಕರೆದುಕೊಂಡು ಬಂದಿದ್ದ. ಅಷ್ಟು ಹೊತ್ತಿಗೆ ಸುಬ್ಬಣ್ಣ ಅಲ್ಲಿಗೆ ಬಂದ.

"ನೋಡಿದ್ಯಾ ಸುಬ್ಬ! ಗೌರಿ ಅದೃಷ್ಟಾನ" ಎಂದು ಕಮಲಮ್ಮ ಕಣ್ಣೀರಿಟ್ಟಳು.

ಕೋಣೆಯಿಂದ ಹೊರಕ್ಕೆಬಂದು "ನಾನು ಹೋದ ಜನ್ಮದಲ್ಲಿ ಯಾವ ಪಾಪ ಮಾಡಿದ್ದೆನೋ ಮಾವ...." ಎಂದು ಹೇಳುವುದನ್ನೂ ಪೂರ್ತಿ ಹೇಳದೆ ಗೌರಿ ಬಿಕ್ಕಿಬಿಕ್ಕಿ ಅತ್ತಳು. ಸುಬ್ಬಣ್ಣ ತನ್ನ ಬಾಳಿನಲ್ಲಿ ಎಷ್ಟೋ ಕಷ್ಟ ಅನುಭವಿಸಿದ್ದ. ಆದರೆ ಗೌರಿ ವಿಧವೆಯಾದುದು ಜೊಕ್ಕೆಯಮೇಲೆ ಬರೆಹಾಕಿದಂತಿತ್ತು. ನಾಗರಾಜನೂ ಗೌರಿಗೆ ಎಷ್ಟೋ ಸಮಾಧಾನ ಹೇಳಿದ. ಆದರೇನು....?

"ಸುಮ್ಮನೆ ಅತ್ತರೆ ಏನಮ್ಮ ಪ್ರಯೋಜನ? ಮುಂದಿನ ಏರ್ಪಾಡು ಮಾಡಬೇಕು" ಎಂದ ಸುಬ್ಬಣ್ಣ. ಅಳುವುದನ್ನು ನಿಲ್ಲಿಸಲು ಗೌರಿ ಪ್ರಯತ್ನಪಟ್ಟಳು.

"ನಾನೂ ನಾಗರಾಜ ಇಬ್ಬರೂ ಈ ರೈಲಿನಲ್ಲಿ ಮಂಡ್ಯಕ್ಕೆ ಹೊರಟುಬಿಡ್ತೇವೆ. ನೀನು ಗೌರಿಯನ್ನು ನೋಡಿಕೋ" ಎಂದ ಸುಬ್ಬಣ್ಣ.

"ಅವರ ಮುಖ ನೋಡಬೇಕು. ನಾನು ಹೋಗ್ತೀನಮ್ಮ" ಎಂದು ಬೇಡಿಕೊಂಡಳು ಗೌರಿ.

"ನಿನಗೆ ಹುಚ್ಚೇನೆ" ಎಂದು ತಗ್ಗಿಸಿದ ಧ್ವನಿಯಲ್ಲಿ "ಗೌರಿ! ಸರಸುನನ್ನು ನೋಡಿಯಾದರೂ ಸುಮ್ಮಗಿರು. ಚಿನ್ನದಮ್ಮಯ್ಯ ಎಂದು ಕಮಲಮ್ಮ ಎಷ್ಟೋ ಹೇಳಿದಳು. ಸುಬ್ಬಣ್ಣ ನಾಗರಾಜನೊಡನೆ ಮಂಡ್ಯಕ್ಕೆ ಹೊರಟುಬಿಟ್ಟ. ಹೋಗುವ ಮುಂಚೆ "ಗೌರಿನ ಹುಷಾರಾಗಿ ನೋಡ್ಕೋ" ಎಂದು ಸುಬ್ಬಣ್ಣ ಹೇಳಿದ. "ಆಗ್ಲಿ ದುಡ್ಡು" ಎಂದು ಕಮಲಮ್ಮ ಕೇಳಿದಾಗ "ಸಿದ್ಧವಾಗಿಯೇ ಬಂದೆ" ಎಂದು ಹೊರಟುಬಿಟ್ಟ. ಬೀದಿಯ ಬಾಗಿಲನ್ನು ಮುಂದಕ್ಕಿಟ್ಟು ಗೌರಿಯ ಕೋಣೆಗೆ ಬಂದಳು. ಅವಳ ಸ್ಥಿತಿಯನ್ನು ನೋಡಿ ಪುನಃ ಮಾತನಾಡಿಸುವ ಗೋಜಿಗೆ ಹೋಗಲಿಲ್ಲ. ತಡೆದುಕೊಳ್ಳಲಾಗದಂತಹ ಪೆಟ್ಟು ಬಿದ್ದಿತ್ತು. ತನ್ನ ಎರಡು ಕಣ್ಣಿನಂತಿದ್ದ ಗೌರಿ ನಾಗರಾಜರನ್ನು ನೆನೆದು—

ಗೌರಿಯ ದುರಾದೃಷ್ಟವನ್ನು ನೆನೆದು ಕಣ್ಣೀರಿಟ್ಟಳು. ನೆರೆಮನೆಯಾಕೆ ಬಾಗಿಲನ್ನು ತಟ್ಟಿದಾಗಲೇ ಕಮಲಮ್ಮನಿಗೆ ಎಚ್ಚರ. ಎದ್ದು ಬಾಗಿಲನ್ನು ತೆಗೆದಳು. ಕಮಲಮ್ಮನಿಗೆ ನೀರನ್ನು ಹಾಕಿ, ತಂದಿದ್ದ ಅಡಿಗೆಯನ್ನಿಟ್ಟು ನೆರೆಮನೆಯಾಕೆ ಮರಳಿ ಹಿಂತಿರುಗಿದಳು. ಆದರೆ ತಂದಿಟ್ಟಿದ್ದ ಅಡಿಗೆ ಸಾಜೆಯಾದರೂ ಇನ್ನೂ ಹಾಗೇ ಇತ್ತು.

೨

ಹತ್ತು ದಿನಗಳೂ ಕಳೆದವು. ಚಂದ್ರಶೇಖರನ ಅಂತ್ಯಕರ್ಮಗಳನ್ನೆಲ್ಲ ಮುಗಿಸಿ ಮೈಸೂರಿಗೆ ಹಿಂತಿರುಗುವವೇಳೆಗೆ ಸಾಕುಸಾಕಾಗಿತ್ತು. ದೀಪ ಹಚ್ಚುತ್ತಿದ್ದ ಕಮಲಮ್ಮ ಬಾಗಿಲನ್ನು ತೆಗೆದು ಸುಮ್ಮನಿಂತಳು. ಸುಬ್ಬಣ್ಣ ಕಮಲಮ್ಮನ ಮುಖವನ್ನು ನೋಡಿದ, ಅಷ್ಟೆ. ಬಾಯಿಂದ ಇಬ್ಬರಿಗೂ ಮಾತೇ ಹೊರಡಲಿಲ್ಲ. ನಾಗರಾಜ ಗೌರಿಯ ಕೋಣೆಗೆ ಹೋದ.

"ಎಲ್ಲ ಆಯ್ತು ಮ್ಮ!" ಎಂದು ಹೇಳುತ್ತಾ ಕೈಚೀಲವನ್ನು ಕಮಲಮ್ಮನ ಕೈಗೆ ಕೊಟ್ಟು ಚಾಪೆಯಮೇಲೆ ಸುಬ್ಬಣ್ಣ ಕುಳಿತುಕೊಂಡ.

ಕೋಣೆಗೆ ಬಂದ ನಾಗರಾಜ ಗೌರಿಯನ್ನು ಕೂಗಲು ಪ್ರಯತ್ನಪಟ್ಟ. ಮಂಚದಮೇಲೆ ಮಲಗಿದ್ದ ಗೌರಿ ಎದ್ದು ಕುಳಿತುಕೊಂಡಳು. "ಗೌರಿ!" ಎಂದು ಕೂಗಿದ್ದಲ್ಲದೆ ನಾಗರಾಜನ ಕೈಲಿ ಮಾತನಾಡಲಾಗಲಿಲ್ಲ. ಗೌರಿ ತುಂಬಾ ಅತ್ತುಬಿಟ್ಟಳು.

"ಅಕ್ಕಾ, ಕಣ್ಣಿಲ್ಲದ ದೇವರು ನಿನಗೆ ಅನ್ಯಾಯಮಾಡಿದ"

"ದೇವರನ್ಯಾಕೆ ಬೈಯ್ತೀ ರಾಜ. ನನ್ನ ಹಣೆಬರಹ"........ಮಗುವಿನ ಗಲ್ಲವನ್ನಲಗಿಸುತ್ತ "ಇವಳ ದುರಾದೃಷ್ಟ" ಎಂದಳು ಗೌರಿ.

ದುಃಖದ ಮಡುವಿನಲ್ಲಿದ್ದ ಗೌರಿಗೆ ಸಮಾಧಾನ ಮಾಡಲು ಕಮಲಮ್ಮ ಕೋಣೆಗೆ ಬಂದಳು. ಕಮಲಮ್ಮನೂ ಕಣ್ಣೀರಿಟ್ಟುದುದನ್ನು ನೋಡಿ ತಡೆಯಲಾರದೆ ರಾಜ ಕೋಣೆಯಿಂದ ಹೊರಬಿದ್ದ.

ಗೌರಿ ತಲೆಯನ್ನು ಕೆದರಿಕೊಂಡು ತುಂಬಾ ಅತ್ತಿದ್ದಳು. ಕಿರುಚಿ ಹಟ ಹಿಡಿದ ಮಗುವನ್ನು ಸಮಾಧಾನ ಮಾಡಿ ಎದೆಹಾಲನ್ನು ಉಣ್ಣಿಸಿದಳು. ಸರಸುವನ್ನು ತೊಡೆಯ ಮೇಲೆ ಮಲಗಿಸಿಕೊಂಡು ಹಾಲುಣ್ಣಿಸುವಾಗ

ಏನೋ ನೆನಪಿಗೆ ಬಂತು. ತಾನು 'ವಿಧವೆ' ಎಂದು ಜ್ಞಾಪಿಸಿಕೊಂಡಾಗ ಮೈಯೆಲ್ಲಾ ನಡುಗಿ ಮಗುವನ್ನು ಎದೆಗೆ ಅವಚಿಕೊಂಡಳು. ಮೌನವನ್ನೊಡೆದು,

"ನಿಜವಾಗಿಯೂ ನೀನು ಧೈರ್ಯವಂತೆಯಮ್ಮ. ಆ ದುಃಖದಲ್ಲಿ ನಿನಗೆ ಹುಚ್ಚು ಹಿಡಿಯದೇ ಇದ್ದುದು ಹೆಚ್ಚು."

"ಅವರನ್ನು ಬಿಟ್ಟು ಹತ್ತು ವರ್ಷ ಹೇಗೆ ಕಳೆದೆ ಅನ್ನಿಸುತ್ತೆ ಗೌರೀ! ನೀನೂ ಹಾಗೆ ಧೈರ್ಯ ತಂದುಕೋಬೇಕು. ಸರಸುವಿಗಾಗಿ ಬಾಳು ಬದುಕು" ಎಂದಳು ಕಮಲಮ್ಮ.

"ಹೌದಮ್ಮ.......ಮುಂಚ್ಯದಲ್ಲೇ ಇನ್ನು ಅವರ ಆರೋಗ್ಯ ನೋಡಿಕೊಂಡಿದ್ರೆ ಚನ್ನಾಗಿತ್ತಲ್ಲ—"

"ಅದು ಹೇಗೆ ಹೇಳು ಗೌರು........"

"ಅಮ್ಮಾ! ಕೊನೇವರಗೂ ಹೀಗೇ" ಎಂದು ಗೌರಿ ಪುನಃ ಅತ್ತಳು.

"ನಾವು ಕೇಳಿಕೊಂಡು ಬಂದಿರೋದು ಇಷ್ಟೆ ಗೌರಿ. ಅದಕ್ಕೇನು ಮಾಡುವುದಕ್ಕಾಗುತ್ತೆ" ಎಂದು ಕಮಲಮ್ಮ ಸಮಾಧಾನಮಾಡಿದಳು. ಗೌರಿಗೆ ಮೈತುಂಬ ಹೊದಿಸಿ ಕೋಣೆಯ ಬಾಗಿಲನ್ನು ಹಾಕಿದಳು. ಅವಳ ಮನಸ್ಸು ತನ್ನ ಹಿಡಿತದಲ್ಲೇ ಇರಲಿಲ್ಲ. ಸುಬ್ಬಣ್ಣ ನಾಗರಾಜ ಇಬ್ಬರಿಗೂ ಬಡಿಸಿ ತಾನೂ ಒಂದು ತುತ್ತನ್ನು ತಿಂದು ಹಾಗೇ ಚಾಪೆಯಮೇಲೆ ಉರುಳಿಕೊಂಡಳು. ಹಿಂದಿನ ದಿನಗಳು ಅವಳ ಸ್ಮೃತಿಪಥದ ಮೇಲೆ ಹಾದು ಹೋದವು.

ಕಮಲಮ್ಮನಗಂಡ ಕಪನೀಪತಯ್ಯ ಸಂಪಿಗೆಹಳ್ಳಿಯವರೆ. ತಾಯಿಯನ್ನು ಬಿಟ್ಟರೆ ಅವರಿಗಿನ್ಯಾರೂ ಬಂಧುಬಳಗವಿರಲಿಲ್ಲ. ಸಂಪಿಗೆಹಳ್ಳಿಯಲ್ಲಿದ್ದ ಹತ್ತು ಎಕರೆ ತರಿಜಮೀನು. ಒಂದು ಸಣ್ಣ ಮನೆ; ಇಷ್ಟೇ ಆಸ್ತಿ. ಹೆಚ್ಚಿನ ಆಡಂಬರಕ್ಕೆ ಹೋಗದೆ ಇದ್ದುದನ್ನು ಉಂಡು ಸಂತೋಷವಾಗಿಯೇ ಇದ್ದರು. ಮುಂದಿನ ವಿದ್ಯಾಭ್ಯಾಸಕ್ಕೆ ಅವಕಾಶವಿಲ್ಲದೆ 'ಹನ್ನೆರಡು' ರೂಪಾಯಿನ ಪರೀಕ್ಷೆಯೇ ಕೊನೆಯದಾಗಿತ್ತು. ಕಮಲಮ್ಮನೊಡನೆ ಕಪನೀಪತಯ್ಯನಿಗೆ ಮದುವೆ ಆದಾಗ ಸಂಪಿಗೆಹಳ್ಳಿಯ ಪ್ರೈಮರಿಸ್ಕೂಲಿನ ಉಪಾಧ್ಯಾಯರಾಗಿದ್ದರು.

ಕಪನೀಪತಯ್ಯನ ಬೆಂಗಾಡು ಜೀವನಕ್ಕೆ ಕಮಲಮ್ಮ ಕಾರಂಜಿ ಯಾಗಿಳು. ಕಷ್ಟವನ್ನಲ್ಲದೆ ಬೇರೆ ಕಂಡರಿಯದವನು ಒಂದು ರೀತಿ ಕಮಲ ಮ್ಮನ ಸುಧಾರಣೆಗಳನ್ನು ಒಪ್ಪಲೇಬೇಕಾಯಿತು. ಅವರ ಜೀವನದ ರೀತಿಯೂ ಮಾರ್ಪಟ್ಟಿತ್ತು. ಆ ಅಲ್ಪಸಂಬಳದ ಜೊತೆಗೆ ಜಮೀನಿಂದ ಬರುತ್ತಿದ್ದ ಕಡ್ಡಿ ಕಾಳು ಅವರ ಜೀವನದ ದಾರಿ. ಕಮಲಮ್ಮ ಒಪ್ಪನಾಗಿಯೇ ಸಂಸಾರ ನಡೆ ಸುತ್ತಿದ್ದುದರಿಂದ ನಾಲ್ಕು ಕಾಸನ್ನು ಕೂಡಿಡುವುದಾಯ್ತು.

ಬೆಳಗ್ಗೆದ್ದು ಕಪನೀಪತಯ್ಯ ಸ್ನಾನ ಸಂಧ್ಯಾವಂದನೆಗಳನ್ನು ಮುಗಿಸಿ, ಕಮಲಮ್ಮ ಮಾಡಿಟ್ಟಿದ್ದ ತಿಂಡಿಯನ್ನು ತಿಂದು ಬಟ್ಟೆಯನ್ನು ಹಾಕಿಕೊಳ್ಳುವ ಹೊತ್ತಿಗೆ ಎಂಟು ಘಂಟೆಯಾಗುವುದು. ಮನೆಯಿಂದ ನೇರವಾಗಿ ಪಾಠಶಾಲೆ, ಹನ್ನೆರಡಕ್ಕೆ ಮನೆ. ಊಟವಾಗಿ ಕಮಲಮ್ಮ ಕಸಮುಸುರೆ ಮಾಡುವ ವೇಳೆಗೆ ಕಪನೀಪತಯ್ಯ ನಿದ್ದೆಯನ್ನು ಮುಗಿಸಿ ಮತ್ತೆ ಪಾಠಶಾಲೆಗೆ ಹೋಗಲು ಸಿದ್ಧನಾಗಿರುತ್ತಿದ್ದ. ಸಾಯಂಕಾಲ ಐದು ಘಂಟೆಗೆಲ್ಲಾ ಪಾಠಶಾಲೆ ಮುಗಿ ದರೂ ಒಂದೆರಡು ಪಾಠಗಳನ್ನಿಟ್ಟುಕೊಂಡಿದ್ದುದರಿಂದ ಮನೆಗೆ ಬರಬೇಕಾ ದರೆ ಎಂಟುಗಂಟೆಯಾಗಿ ಬಿಡುತ್ತಿತ್ತು. ಊಟಮಾಡಿ ಸ್ವಲ್ಪಹೊತ್ತು ಅದೂ ಇದೂ ಮಾತನಾಡಿ ದಂಪತಿಗಳು ಮಲಗುವರು.

ನಾಲ್ಕುವರ್ಷಗಳಲ್ಲಿಯೇ ಸಂಸಾರದ ರೀತಿ ಬದಲಾಯಿಸಿತು. ಚೊಚ್ಚಲು ಮಗು ಗೌರಿ ಹುಟ್ಟಿ ಮನೆಗೆ ಭಾಗ್ಯಲಕ್ಷ್ಮಿ ತಂದಳು. ಕಪನೀಪತಯ್ಯನಿಗೆ ಮುಖ್ಯೋಪಾಧ್ಯಾಯರ ಕೆಲಸ ದೊರೆಯಿತು. ಸಂಬಳದ ಅಂತರ ಕೇವಲ ಹತ್ತೇ ರೂಪಾಯಿ ಆದರೂ ಹಳ್ಳಿಯಲ್ಲಿ ಹತ್ತು ರೂಪಾಯಿಗಿನ್ನೂ ಬೆಲೆ ಇದ್ದೇ ಇತ್ತು. ಮತ್ತೆ ಎರಡು ವರ್ಷ ಸಂಪಿಗೆಹಳ್ಳಿಯಲ್ಲಿದ್ದ ಮೇಲೆ ಮೈಸೂ ರಿನ ಶಿವರಾಮಪೇಟೆ ಮಿಡಲ್ ಸ್ಕೂಲಿಗೆ ವರ್ಗವಾಯಿತು. ಮೈಸೂರಿಗೆ ಬಂದು ಒಂದು ಸಣ್ಣ ಮನೆಯನ್ನು ಗೊತ್ತುಮಾಡಿ ಸಂಸಾರ ಹೂಡುವುದು ಒಂದು ದೊಡ್ಡ ಕೆಲಸವೇ ಆಯ್ತು.

ಮೈಸೂರಿನಲ್ಲಿ ಸಂಸಾರ ಶುರುಗುವುದು ಕಷ್ಟವಾದರೂ ವರಮಾನ ಹೆಚ್ಚುತ್ತಿತ್ತು. ಮಿಡಲ್ ಸ್ಕೂಲು ಪರೀಕ್ಷೆ ಆದರೆ ೫ ರೂಪಾಯಿನ ಪರೀಕ್ಷೆಗೆ ಕಟ್ಟಿದ್ದ ಹುಡುಗರು ಅನೇಕರು ಇವರ ಹತ್ತಿರ ಪಾಠ ಹೇಳಿಸಿಕೊಳ್ಳು ತ್ತಿದ್ದರು. ಒಳ್ಳೇ ಪಾಠ ಹೇಳುವವರೆಂದು ಪ್ರಸಿದ್ಧಿಯನ್ನೂ ಪಡೆದಿದ್ದರು.

ಹತ್ತಿರವಿದ್ದ ಕೆಲವು ಹಳ್ಳಿಗಳಿಂದ ಬರುತ್ತಿದ್ದ ಹುಡುಗರು ಬರುವಾಗ ಒಂದು ಚೊಂಬು ಹಾಲನ್ನು ತಂದುಬಿಡುತ್ತಿದ್ದರು. ಇನ್ನು ಕೆಲವರು ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಡುತ್ತಿದ್ದರು. ಈಗಿನಂತೆ ಆಗಿನ್ನೂ ಕಾಲ ಕೆಟ್ಟಿರಲಿಲ್ಲ. ವಿದ್ಯಾರ್ಥಿಗಳಲ್ಲದೆ ಅವರ ಪೋಷಕರು 'ಗುರುಸೇವೆ' ಎನ್ನುವುದನ್ನು ಒಪ್ಪಿಸಿದ್ದರು. ಮೈಸೂರಿಗೆ ಬಂದ ಒಂದು ವರ್ಷದಿಂದ ಅವರ ಬಾಳಿನ ಸುವರ್ಣಯುಗ ಪ್ರಾರಂಭವೆನ್ನಬಹುದು. ನಾಗರಾಜ ಹುಟ್ಟಿ ಸಂಸಾರದ ಕುಲದೀಪಕನಾದ. ಕಪನೀಪತಯ್ಯ, ಕಮಲಮ್ಮನವರ ಮೈಮೇಲಿನ ಬಟ್ಟೆ ಮಾರ್ಪಟ್ಟವು. ತಿಂಗಳಿಗೆ ಹತ್ತೋ ಹದಿನೈದೋ ರೂಪಾಯಿಗಳನ್ನು ಕಮಲಮ್ಮ ಕೂಡಿಟ್ಟ ಹಣದಿಂದ ಕೈಗೆ ಚಿನ್ನದ ಎರಡು ಬಳೆ, ಕತ್ತಿಗೆ ಚೈನು ಮಾಡಿಸಿಕೊಂಡಳು. ಇದ್ದ ಜಮೀನಿನ ಜೊತೆಗೆ ಒಂದೆರಡು ಎಕರೆ ಬಾಳೆ ತೋಟವೂ ಸೇರಿತು. ಅಂತೂ ಕಪನೀಪತಯ್ಯನೂ ಸಮಾಜದಲ್ಲಿ ಒಬ್ಬ 'ಮನುಷ್ಯ' ನೆನ್ನಿಸಿಕೊಂಡ. ಇನ್ನೂ ಕೆಲವು ದಿನ ಕಪನೀಪತಯ್ಯ ಇದ್ದಿದ್ದರೆ ಬಹಳ ಚೆನ್ನಾಗಿತ್ತು. ಆದರೆ....?

ಸಂತೋಷ ಉಕ್ಕಿಹರಿದು ಹಠಾತ್ತನೆ ಮಾರ್ಪಟ್ಟು ಸಂಸಾರದ ಸೂರ್ಯ ಮುಳುಗಿಬಿಟ್ಟ. ಕಪನೀಪತಯ್ಯ ಹತ್ತು ವರ್ಷದ ಹಿಂದೆ ಬಂದಿದ್ದ ಪ್ಲೇಗುಮಾರಿಗೆ ತುತ್ತಾಗಿದ್ದ. ಸಂಸಾರ ಒಡೆದು ಚೂರಾಯ್ತು. ನಾಗರಾಜನಿಗಿನ್ನೂ ಎಂಟು ವಯಸ್ಸು. ಗೌರಿಗೆ ಹನ್ನೆರಡು ತುಂಬಿ ಮದುವೆಯ ವಯಸ್ಸು. ಆಗ ಕಮಲಮ್ಮನ ದುಃಖ ಹೇಳತೀರದು. ಒಡೆದ ನೌಕೆಯಲ್ಲಿ ಏನೂ ಅರಿಯದ ತನ್ನಿಬ್ಬರು ಮಕ್ಕಳನ್ನು ತಬ್ಬಿಕೊಂಡು ದಡ ಎಂದು ಸೇರುವೆನೋ ಎಂದು ಕಾಲ ತಳ್ಳಿದಳು.

ಕಮಲಮ್ಮನ ಅಣ್ಣ ಮೈಸೂರಿನ ಹತ್ತಿರವೇ ಇದ್ದ ಸಂಪಿಗೆಹಳ್ಳಿಯಲ್ಲಿ ಸ್ವಲ್ಪ ಭೂಮಿಕಾಣಿಯನ್ನು ಹೊಂದಿದ್ದ. ತಂಗಿಯ ಕಷ್ಟಸುಖಕ್ಕೆ ಆಗುತ್ತಿದ್ದು 'ಇರೋ ಒಬ್ಬಳೇ ತಂಗಿ, ನಿನ್ನ ಕಷ್ಟ ಸುಖ ನನ್ನದಲ್ಲವೆ' ಎಂದು ತವರನ್ನು ನಡೆಸಿಕೊಟ್ಟಿದ್ದ. ಸಂಪಿಗೆಹಳ್ಳಿಯಲ್ಲಿದ್ದ ಜಮೀನಿನ ಮೇಲ್ವಿಚಾರಣೆಯನ್ನು ಸುಬ್ಬಣ್ಣ ವಹಿಸಿಕೊಂಡು ಕಮಲಮ್ಮನ ಸಂಸಾರಕ್ಕೆ ಒಂದು ದಾರಿ ಮಾಡಿದ. ಎಲ್ಲರೂ ಮೈಸೂರಿನಿಂದ ಸಂಪಿಗೆಹಳ್ಳಿಗೆ ಬಂದುಬಿಡೋಣವೆಂದಿದ್ದರೂ 'ಬೆಳೆಯುವ ಹುಡುಗರು ಪಟ್ಟಣದಲ್ಲೇ ಇರೋದು

ಮೇಲಲ್ಲವೆ' ಎಂದು ಸುಬ್ಬಣ್ಣ ಎಚ್ಚರಿಸಿದ್ದ. ಅಂದಿನಿಂದ ಸುಬ್ಬಣ್ಣ ಕಮಲಮ್ಮನ ತಾಯಿ, ತಂದೆ ಬಂಧುಬಳಗವಾದ. ಯಾವ ಕೆಲಸ ಮಾಡಬೇಕಾದರೂ ಸುಬ್ಬಣ್ಣ ಬರಲಿ ಎಂದು ಕಮಲಮ್ಮ ಹೇಳುತ್ತಿದ್ದಳು.

ಸುಬ್ಬಣ್ಣ ಗೌರಿಯ ಮದುವೆಯನ್ನು ಸುಲಭವಾಗಿ ಮಾಡಿಬಿಟ್ಟ. ಸಂಪಿಗೆಹಳ್ಳಿಯ ಸೀತಾರಾಮಯ್ಯನವರ ಮಗ ಚಂದ್ರಶೇಖರ ಆಗತಾನೆ ಇಂಜಿನಿಯರಿಂಗ್ ಪರೀಕ್ಷೆಗೆ ಓದುತ್ತಿದ್ದ. ಗೌರಿಯನ್ನು ನೋಡಿದ್ದ ಸೀತಾರಾಮಯ್ಯನವರೂ ಅವರ ಹೆಂಡತಿ ಅವಳನ್ನು ಸೊಸೆಯಾಗಿ ಹೊಂದಲು ಒಪ್ಪಿದರು. ಉಳಿದುದು ಚಂದ್ರಶೇಖರನ ಒಪ್ಪಿಗೆ. ಅವನು ಬೇಸಿಗೆ ರಜಕ್ಕೆ ಹಳ್ಳಿಗೆ ಬಂದಾಗ ಸುಬ್ಬಣ್ಣ ಅವನ ಕೈಯಲ್ಲಿ ಹೂಂ! ಅನ್ನಿಸಿಬಿಟ್ಟ. ಮದುವೆಯ ಖರ್ಚು ಎಷ್ಟು ಕಮ್ಮಿ ಎಂದರೂ ಒಂದು ಸಾವಿರ ಮುಟ್ಟಿತು. ಮದುವೆಯ ಜೊತೆಯಲ್ಲೇ ನಾಗರಾಜನಿಗೆ ಬ್ರಹ್ಮೋಪದೇಶವೂ ನಡೆಯಿತು. ಅನಂತರ ನಾಗರಾಜನ ವಿದ್ಯಾಭ್ಯಾಸ. ಮೂರು ವರ್ಷದ ಕೆಳಗೆ ಇಂಟರ್ ಪರೀಕ್ಷೆಯನ್ನು ಮೊದಲನೇ ತರಗತಿಯಲ್ಲಿ ತೇರ್ಗಡೆ ಹೊಂದಿ ಕಾಲೇಜಿನಲ್ಲಿ ಓದುತ್ತಿದ್ದ. ಗೌರಿ ದೊಡ್ಡವಳಾಗಿ ಮಂಡ್ಯಕ್ಕೆ ಹೋದಳು. ನಾಗರಾಜನೊಬ್ಬನೆ ತನ್ನ ಜೀವದುಸಿರು. ಸುಬ್ಬಣ್ಣ ಸಂಸಾರದ ಊರುಗೋಲು. ಈ ಸಂತೋಷದಲ್ಲಿ ತನ್ನ ದುಃಖವನ್ನು ಕಮಲಮ್ಮನಿಗೆ ಮರೆತಹಾಗೆ ಆಗಿತ್ತು.

* * * * *

ಆದರೆ ಗೌರಿಯ ಬಾಳು ಹೀಗಾಯ್ತೆ ?–ತನ್ನಂತೆಯೇ ಆದಳಲ್ಲಾ! ಎಂದು ಹೃದಯ ಕೂಗಿತು....ಇಲ್ಲಾ ಹೀಗಿರಲಾರದು! ಎನ್ನಿಸಿ ತಕ್ಷಣ ಎಚ್ಚರವಾಯ್ತು. ಕಮಲಮ್ಮ ಎದ್ದು ನೋಡಿದಳು. ಹಚ್ಚಿದ್ದ ದೀಪ ಇನ್ನೂ ಉರಿಯುತ್ತಿತ್ತು. ಏನೋ ನೆನಪು! ಎಂದುಕೊಂಡು ಗೌರಿಯ ಕೋಣೆಯ ಬಾಗಿಲನ್ನು ಸರಿಸಿ ಅವಳು ಮಲಗಿರುವುದನ್ನು ನೋಡಿ ದೀಪವನ್ನಾರಿಸಿ ಮಲಗಿಬಿಟ್ಟಳು. ಕೊಠಡಿಯೆಲ್ಲಾ ಕತ್ತಲೆಯಿಂದ ಆವೃತವಾದಂತೆ ಅವಳ ಹೃದಯವೂ ಅಂಧಕಾರದಿಂದ ತುಂಬಿಹೋಯ್ತು.

೩

“ ಕಮಲಮ್ಮನೋರೆ....”

“ ............... ”

“ ಕಮಲಮ್ಮನೋರೇ....ಬಾಗಿಲು ”

ಪುನಃ ಬಾಗಿಲು ತಟ್ಟಿದ ಶಬ್ದ.

“ ಯಾರು ಅದು ” ಎಂದು ಕಮಲಮ್ಮ ಕೂಗಿದಳು.

“ ನಾನು ರೋಹಿಣಿ....ಬಾಗಿಲು ತೆಗೀರಿ ”

“ ನೀನೆ ” ಎಂದು ಉದ್ಗಾರ ತೆಗೆಯುತ್ತಾ ಕಮಲಮ್ಮ ಬಾಗಿಲನ್ನು ತೆಗೆದಳು. ರೋಹಿಣಿ ಬಿಸಿಲಿನಲ್ಲಿ ಬಂದಿದ್ದುದರಿಂದ ಹಣೆಯ ಮೇಲೆಲ್ಲಾ ಮುತ್ತಿನಂತಹ ಬೆವರು ಹನಿಮೂಡಿದ್ದವು. ಬಹುಶಃ ಸ್ಕೂಲಿನಿಂದ ಅವರ ಮನೇಗೇ ಬಂದಿರಬೇಕು.

“ ಏತಕ್ಕೆ ಇಷ್ಟು ಅವಸರ” ಎಂದು ಪುನಃ ಚಕ್ಕುಲಿಮಾಡಲು ಪ್ರಾರಂಭಿಸಿದಳು ಕಮಲಮ್ಮ.

“ ಮನೇಲಿದ್ದಾನೇನೋ ನೋಡಿಕೊಂಡು ಹೋಗೋಣ ಎಂದು ಬಂದೆ ”

“ ಯಾರೆ ? ”

‘ ನಾಗರಾಜ ’ ಎಂದು ನಾಚುತ್ತಾ ಹೇಳಿದಳು ರೋಹಿಣಿ.

‘ ಯಾತಕ್ಕೆ ? ’

‘ ಕೆಲವು ಲೆಖ್ಖಗಳನ್ನು ಹೇಳಿಸಿಕೊಳ್ಳಬೇಕು.’

“ ಆಮೇಲೆ ”

“ ಆಮೇಲೆ ಇನ್ನೇನೂ ಇಲ್ಲ. ನಾನಿನ್ನು ಮನೆಗೆ ಹೋಗ್ತೀನ್ರಿ ”

“ ಕೂತ್ಕೋಬಾರೆ ಸಾಕು....ನಾಗರಾಜನ ವಿಷಯ ತಿಳಿದಮೇಲೆ ನಿನ್ಗಿನ್ನೇನು ಕೆಲ್ಸ ಅಲ್ವೆ ?”

“ ಹಾಗೇನೂ ಇಲ್ಲಹೋಗ್ರಿ ” ಎಂದು ಪುಸ್ತಕಗಳನ್ನು ಚಾಪೆಯ ಮೇಲಿಟ್ಟು ರೋಹಿಣಿ ಕಮಲಮ್ಮನ ಹತ್ತಿರಬಂದಳು. ಒಂದೊಬ್ಬೆ ಚಕ್ಕುಲಿಯನ್ನು ತಟ್ಟೆಗೆಹಾಕಿ ರೋಹಿಣಿಗೆ ಕೊಟ್ಟಳು. ಅವಳು ತಿನ್ನುತ್ತಾ,

“ ಕಮಲಮ್ಮನೋರೆ, ನೀವು ತಿಂಡೀನ ಚೆನ್ನಾಗಿಮಾಡ್ತೀರ್ರಿ.”

" ಹೌದುಕಣೆ ನಿನ್ನ ಸರ್ಟಿಫಿಕೇಟು ಸಿಗ್ಲಿ ಅಂತ ಕಾದಿದ್ದೆ....ಅದಿರ್ಲಿ ಅಮ್ಮ ಏನುಮಾಡುತ್ತಿದ್ರೆ ?"

" ನಾನಿನ್ನೂ ಮನೇಗೆ ಹೋಗಿಲ್ಲವಲ್ರೆ."

ರೋಹಿಣಿ ಚಕ್ಕುಲಿಯನ್ನು ತಿಂದು ಮುಗಿಸಿ ನೀರನ್ನು ಕುಡಿದಳು. ಕೋಣೆಯಿಂದ ಗೌರಿಯ ಮಗು ಸರಸು ಅಳುವುದು ಕೇಳಿಸಿತು. ಕಮಲಮ್ಮ ರೋಹಿಣಿಯ ಮುಖ ನೋಡಿದಳು.

" ಗೌರಿಯ ಅದೃಷ್ಟ " ಎಂದು ಪೂರ್ತಿ ಹೇಳದೆ ರೋಹಿಣಿ ತಲೆತಗ್ಗಿಸಿದಳು.

" ಅವಳ ದುಃಖ ಹೇಳತೀರದು. ಮಗೂಗೆ ಆ ವಡವೆ ಮಾಡಿಸ್ತೀನಿ ಈ ವಡವೆ ಮಾಡಿಸ್ತೀನಿ ಎನ್ನುತ್ತಿದ್ದಳು."

" ಪಾಪ ! "

" ಇನ್ನೆಲ್ಲಿಯ ವಡವೆ? ರೋಹಿಣಿಯ ಮುಖ್ಯವಾದ ವಡವೆಯೇ ಇಲ್ಲದ ಮೇಲೆ—" ಎಂದು ಕಮಲಮ್ಮ ಕಣ್ಣೀರಿಟ್ಟಳು.

" ಗೌರೀನ ನೋಡ್ತೇನೆ ಎಂದು " ಎಂದು ಹೇಳಿ ರೋಹಿಣಿ ಗೌರಿಯಿದ್ದ ಕೋಣೆಗೆ ಬಂದಳು. ಅವಳು ಬಂದುದುನ್ನು ನೋಡಿ ಗೌರಿ ಎದ್ದು ಕುಳಿತಳು. ಯಾವ ರೀತಿ ಮಾತನಾಡಿಸಬೇಕೋ ರೋಹಿಣೀಗೆ ಗೊತ್ತಾಗಲಿಲ್ಲ. ಗೌರಿಯ ತೊಡೆಯ ಮೇಲೆ ಮಲಗಿದ್ದ ಮಗುವಿನ ಗಲ್ಲವನ್ನು ಅಲುಗಿಸಿದಳು. ಸರಸು ರೋಹಿಣಿಯನ್ನು ನೋಡಿ ನಕ್ಕಳು. ರೋಹಿಣಿ ಮಾತನಾಡಿಸಲು ಪಡುತ್ತಿದ್ದ ಕಷ್ಟವನ್ನು ತಿಳಿದು " ನೋಡಿದ್ಯಾ ರೋಹಿಣಿ " ಎಂದು ಗದ್ಗದಕಂಠದಿಂದ ಗೌರಿ ಅವಳನ್ನು ತಬ್ಬಿಕೊಂಡು ಅತ್ತಳು. ಆ ಸ್ವಲ್ಪ ಹೊತ್ತಿನಲ್ಲಿ ಇಬ್ಬರಿಗೂ ತಮ್ಮ ಚಿಕ್ಕಂದಿನ ದಿನಗಳು ಮೊದಲುಗೊಂಡು ಜ್ಞಾಪಕಕ್ಕೆ ಬಂದವು. ಎಷ್ಟೋ ಸಾರಿ ಗೌರಿ ತನ್ನ ಸುಖ-ದುಃಖವನ್ನು ರೋಹಿಣಿಯ ಹತ್ತಿರ ಹೇಳಿಕೊಂಡಿದ್ದಳು. ರೋಹಿಣಿಯೂ ಅಷ್ಟೆ; ಗೌರಿಯನ್ನು ತನ್ನ ಅಕ್ಕನೆಂದೇ ಭಾವಿಸಿದ್ದಳು.

ಗೌರಿ ಕಣ್ಣೀರನ್ನು ಒರಸಿಕೊಳ್ಳುತ್ತಾ "ನಿನಗೇತಕ್ಕಮ್ಮ ಈ ಗೋಳು?" ಎಂದಳು.

" ಹಾಗನ್ನಬೇಡಿ ಅಕ್ಕ...."

"ಅಮ್ಮ ಬೈದಾರು ಹೋಗು."

"ಪರೀಕ್ಷೆ ಬಂದುಬಿಡ್ತು."

"ನಿನಗೇನು ಬಿಡೆ...."

"ಲೆಖ್ಖ ಚೆನ್ನಾಗಿ ಬರೋಲ್ಲಕಣ್ರಿ"

"ನಾಗರಾಜ ಹೇಳಿಕೊಡ್ತಾನೆ ನಿನಗೇನಮ್ಮ" ಎಂದು ಗೌರಿ ಹೇಳಿದಾಗ ರೋಹಿಣಿಯ ಮುಖ ಅರಳಿತು.

ಸಾಯಂಕಾಲ ಬರ್ತೀನೆ ಎಂದು ಹೇಳಿ ಕಮಲಮ್ಮನಿದ್ದ ಹಜಾರಕ್ಕೆ ರೋಹಿಣಿ ಬಂದಳು. ಕೋಣೆಯಲ್ಲಿ ನಡೆದ ವಿವರವನ್ನು ಕಮಲಮ್ಮ ತಿಳಿಯಲು ಕುತೂಹಲಪಡಲಿಲ್ಲ. ತಿಳಿಸಲು ರೋಹಿಣಿಗೆ ಬಾಯೇ ಬರಲಿಲ್ಲ. ಸಾಯಂಕಾಲ ಬಾಮ್ಮ! ಎಂದು ಕಮಲಮ್ಮ ಹೇಳಿದಮೇಲೆ ರೋಹಿಣಿ ತಮ್ಮ ಮನೆಯಕಡೆ ಹೊರಟಳು. ಐಶ್ವರ್ಯವಂತರ ಮಗಳಾಗಿದ್ದರೂ ರೋಹಿಣಿಗೆ ಎಳ್ಳಷ್ಟು ಜಂಭ ಇರಲಿಲ್ಲ. ರೋಹಿಣಿ ಚಿಕ್ಕಮಗುವಾದಾಗಿನಿಂದಲೂ ಕಮಲಮ್ಮ ನೋಡುತ್ತಿದ್ದಳು. ಕಮಲಮ್ಮನವರ ಮನೆಯಿಂದ ನಾಲ್ಕನೆಯ ಮನೆಯೇ ರೋಹಿಣಿಯ ಮನೆ.

ಕಮಲಮ್ಮನವರ ಮನೆಗೆ ಹೋದಾಗ ಇದ್ದ ಉಲ್ಲಾಸ ಮನೆಬಿಟ್ಟು ಬಂದಾಗ ಇರಲಿಲ್ಲ. ರೋಹಿಣಿ ಕಾಲನ್ನೆಳೆಯುತ್ತಾ ಮನೆಗೆ ಬಂದಳು. ಬೀದಿಯ ಬಾಗಿಲನ್ನು ತೆಗೆದಾಗ ನಾಯಿ ಅವಳ ಹತ್ತಿರ ಓಡಿಬಂತು. ಪ್ರತಿದಿನವೂ ತನಗೆ ಸಿಕ್ಕುತ್ತಿದ್ದ ಆದರ ಇಂದು ಒಡತಿಯಿಂದ ಸಿಗದಿರುವುದನ್ನು ನೋಡಿ ಜೂಲಿ ಬಾಲವನ್ನಲ್ಲಾಡಿಸುತ್ತಾ ಎರಡು ಸಾರಿ ಬೊಗಳಿ ಅವಳ ಹಿಂದೆ ಹೊರಟಿತು. ಬೀದಿಯ ಬಾಗಿಲಿನಿಂದ ಬಲಕ್ಕೇ ಹೂದೋಟ; ಹೂದೋಟದ ಮಧ್ಯೆ ಒಂದು ಉಯ್ಯಾಲೆ. ಉಯ್ಯಾಲೆಯ ಹಿಂದಿದ್ದ ದೊಡ್ಡ ಬೇವಿನಮರ ಅದರ ಸುತ್ತುಮುತ್ತಲಿನ ಪ್ರದೇಶವನ್ನು ತಂಪಾಗಿಟ್ಟಿತ್ತು. ಎಡಗಡೆ ಕಾರನ್ನು ನಿಲ್ಲಿಸುವ ಗ್ಯಾರೇಜು. ಮಧ್ಯದಲ್ಲಿ ವಾಸಿಸುತ್ತಿದ್ದ ಮನೆ. ಹೊಸದಾಗಿ ಕಟ್ಟಿಸಿದ್ದ ಮನೆ. ಇನ್ನು ಕೇಳಬೇಕೆ—ಸಕಲಸೌಕರ್ಯಗಳನ್ನೂ ನಿರ್ಮಿಸಿಕೊಂಡಿದ್ದರು.

ರೋಹಿಣಿಯ ಮನಸ್ಸು ಆಂದೋಲನದಲ್ಲಿತ್ತು. ಏಕೋ ಏನೋ ಕಣ್ಣಲ್ಲಿ ನೀರೂ ಬಂದಿತ್ತು. ಉಯ್ಯಾಲೆಯಮೇಲೆ ಕುಳಿತುಕೊಂಡು ತೂಗಿಕೊಂಡಳು.

ಹಾಳು ಜೂಲಿಯೂ ಬಂದು ಪಕ್ಕದಲ್ಲಿ ಕೂತುಕೊಳ್ಳಬೇಕೆ. ಕೋಪದಿಂದ ಅದನ್ನು ತಳ್ಳಿದಳು. ಜೂಲಿ ಕೊಯ್ ಕೊಯ್ ಎನ್ನುತ್ತಾ ಓಡಿತು.

ರೋಹಿಣಿಯ ತಂದೆ ಆನಂದರಾಯರು ತುಂಬಾ ಹಣವಂತರು. ಶ್ರೀರಂಗಪಟ್ಟಣದ ನಾಲೆಯ ಕೆಳಗೆ ೫೦ ಎಕರೆ ಜಮೀನು ಅಮೃತೂರಿನಲ್ಲಿ ೨೦ ಎಕರೆ ತೆಂಗಿನತೋಟವೂ ಇತ್ತು. ಇದರ ಜೊತೆಗೆ ಮೈಸೂರಿನಲ್ಲಿ ಭಾರಿ ಜವಳಿ ಅಂಗಡಿಯ ಮಾಲೀಕರಾಗಿದ್ದರು. ಎಂಟು ವರ್ಷದ ಹಿಂದೆ ರೋಹಿಣಿಯ ತಾಯಿ ತೀರಿಕೊಂಡಮೇಲೆ ಆನಂದರಾಯರ ಜೀವನವೇ ಮಾರ್ಪಟ್ಟಿತ್ತು. ಒಂದೆರಡು ವರ್ಷ ಎರಡನೆಯ ಮದುವೆಗೆ ಒಪ್ಪದಿದ್ದರೂ ಮಂಡ್ಯದ ಲಕ್ಷ್ಮಣರಾಯರ ಮಗಳು ಸುಂದರಮ್ಮನೊಡನೆ ಮದುವೆ ಆಯ್ತು. ಚಿಕ್ಕಸಂಸಾರ; ರೋಹಿಣಿ ಮತ್ತು ಸುಂದರಮ್ಮ. ಇಬ್ಬರು ಆಳುಗಳ ಜೊತೆಗೆ ಅಡಿಗೆಯವನು, ಕಾರುನಡೆಸುವವನು. ಹೀಗಿದ್ದು ಹೆಚ್ಚಿನ ಆದಾಯದಲ್ಲಿ ಖರ್ಚು ಬಹಳ ಕಮ್ಮಿಯಿತ್ತು. ಬ್ಯಾಂಕಿನಲ್ಲಿ ೫೦ ಸಾವಿರ ರೂಪಾಯಿ ನಗದು ಇಟ್ಟಿದ್ದಾರೆಂದು ಜನ ಆಡಿಕೊಳ್ಳುತ್ತಿದ್ದರು. ಆನಂದರಾಯರ ಒಂದೇ ಆಸೆಯೆಂದರೆ ಮಗಳೂ, ಮಗನೂ ಆಗಿದ್ದ ರೋಹಿಣಿಗೆ ಬೇಗ ಮದುವೆಮಾಡಿಬಿಟ್ಟು ಅಳಿಯನೂ ತಮ್ಮ ಮನೆಯಲ್ಲೇ ಇರಬೇಕೆಂದು. ಹಣವಂತರಾದುದರಿಂದ ಅವರ ಆಸೆ ಈಡೇರುವುದು ಕಷ್ಟವಾಗಿರಲಿಲ್ಲ. ಸುಂದರಮ್ಮ ರೋಹಿಣಿಗೆ ಮಲತಾಯಿಯ ಕಾಟ ಕೊಡದಿದ್ದರೂ ಸ್ವಲ್ಪ ಮುಟ್ಟಿಸಿದ್ದಳು. ತಾಯಿಯಿಲ್ಲದ ಹುಡುಗಿ ರೋಹಿಣಿಯ ವಿಷಯದಲ್ಲಿ ಸುಂದರಮ್ಮ ಹೇಗೆ ನಡೆದುಕೊಳ್ಳಬೇಕೆಂದು ಆನಂದರಾಯರು ಎಚ್ಚರಿಸಿದ್ದರಿಂದ ಸುಂದರಮ್ಮನ ಧೋರಣೆ ನಡೆಯುತ್ತಿರಲಿಲ್ಲ. ಅಲ್ಲದೆ ರೋಹಿಣಿ ಅದೆಲ್ಲವನ್ನೂ ಅಲಕ್ಷದಿಂದ ಕಂಡಿದ್ದಳು. ಆನಂದರಾಯರು ಮಗಳ ಮದುವೆಯ ವಿಷಯವನ್ನು ಸುಂದರಮ್ಮನ ಕೈಲಿ ಮಾತನಾಡುತ್ತಿದ್ದಾಗಲೆಲ್ಲ ಅವಳು ತನ್ನ ತಮ್ಮ ವಿಶ್ವನಾಥನ ವಿಷಯವನ್ನು ಜ್ಞಾಪಿಸುತ್ತಿದ್ದಳು. ಚೆನ್ನಾಗಿ ಓದಿ, ಲೋಕವ್ಯವಹಾರ ತಿಳಿದಿದ್ದ ಯೋಗ್ಯ ತನ್ನ ಅಳಿಯನಾಗಬೇಕೆಂದು ಆನಂದರಾಯರ ಇಷ್ಟವಾದರೆ ಅಷ್ಟು ಓದಿಲ್ಲದಿದ್ದರೂ ತನ್ನ ತಮ್ಮನನ್ನು ತಂದುಕೊಳ್ಳಬೇಕೆಂದು ಸುಂದರಮ್ಮನ ಒತ್ತಾಯ. ವಿಶ್ವನಾಥ ಶುದ್ಧ ಶುಂಠಿಕಾಯಿ, ಬರೀ L. M. P. ಪರೀಕ್ಷೆಯಲ್ಲೇ ಮೂರುಸಾರೆ 'ಗೋತ' ಹೊಡೀತಿದ್ದಾಗ, ಅವನಿಗೆ ಏನು ಅಂತ ರೋಹಿಣಿಯನ್ನು ಕೊಡುವುದೆಂದರೆ, ಯಾರೋ ಏನೋ, ಮಗಳನ್ನು ಮದುವೆಮಾಡಿಕೊಟ್ಟರೆ

ಮ್ಮುಂದೆ ಅನುಭವಿಸುವುದನ್ನು ನೋಡುವುದರಬದಲು, ನನ್ನ ತಮ್ಮನೇಕೆ ಆಗಬಾರದು ಎಂದು ಸುಂದರಮ್ಮ ಸವಾಲುಹಾಕುತ್ತಿದ್ದಳು. ಅವಳ ತರ್ಕ ವನ್ನೂ ಒಪ್ಪಿ ಚಿನ್ನದ ಬೊಂಬೆಯಂತಹ ರೋಹಿಣಿಯನ್ನು ವಿಶ್ವನಾಥನಿಗೆ ಕೊಡುವುದಕ್ಕೆ ನಾನು ಒಪ್ಪಲಾರೆ ಎಂದಾಗ, ಅವನೂ ಎಣ್ಣೆಗೆಂಪೇ, ಸ್ವಲ್ಪ ದಿನ ಹಾಯಾಗಿದ್ದರೆ, ಸರಿಹೋಗ್ತಾನೆ ಎನ್ನುತ್ತಿದ್ದಳು ಸುಂದರಮ್ಮ. ಎಣ್ಣೆ ಗೆಂಪೇನು ಟಾರೆಣ್ಣೆಯೇ. ಕಾದರೆ ಕೆಂಪಾಗಿಯೇ ಇರುತ್ತೆ ಎಂದು ನಗುತ್ತಾ ಆನಂದರಾಯರು ಹೇಳಿದಾಗ ಸುಂದರಮ್ಮನ ಮುಖದಮೇಲೆ ಕೋಪ ತಾಂಡವಾಡಿಬಿಡುತ್ತಿತ್ತು. ಒಂದು ರಂಪವಾಗಿ ಕೊನೆಗೆ ನನ್ನ ಮಗಳ ಮದುವೆ ಯನ್ನು ನನಗಿಷ್ಟಬಂದವನೊಡನೆ ಮಾಡೋದು ಎಂದು ಗದರಿಸಿದಾಗಲೇ ಸುಂದರಮ್ಮ ಸುಮ್ಮನಾಗುತ್ತಿದ್ದುದು. ಇವರಿಬ್ಬರ ಜಗಳ ಹೇಗಿದ್ರೂ ಇರಲಿ, ರೋಹಿಣಿಗೆ ತುಂಬಾ ದುಃಖವಾಗಿತ್ತು. ಚಿಗಳಿಗೊಂಬಿಯಾಗಿದ್ದ ವಿಶ್ವನಾಥ ನನ್ನು ಪ್ರೇಮಿಸುವುದು ಇರಲಿ, ನೋಡಲೂ ಇಷ್ಟಪಡುತ್ತಿರಲಿಲ್ಲ. ಒರಟು ಒರಟು ಮನುಷ್ಯ. ಮೂರುಹೊತ್ತೂ ಸಿನಿಮ ನಾಟಕವೆಂದು ಅಲೆದಾಟ. ನಾಲ್ಕುಜನ ಏನೆಂದಾರು ಎನ್ನುವುದೂ ಇಲ್ಲ. ಒಂದು ರೀತಿಯಲ್ಲಿ ತಾಯಿ ತಂದೆಯರ ಮುಖ್ಯಪ್ರಶ್ನೆಯಾದ ಮದುವೆಗೆ ಒಪ್ಪಿಕೊಂಡಿದ್ದಳು. ತನ್ನ ಇಷ್ಟ ವನ್ನೂ ಒಂದೆರಡುಸಾರಿ ತಂದೆಗೆ ಹೇಳೋಣವೆಂದಿದ್ದರೂ ನಾಚಿಕೆಯಿಂದ ತಿಳಿಸಿರಲಿಲ್ಲ. ಆನಂದರಾಯರು ಅಭಿಪ್ರಾಯಪಟ್ಟಿದ್ದಂತೆ ವಿಶ್ವನಾಥ ತನ್ನ ಪತಿಯಾಗುವುದು ಸರಿಕಾಣಲಿಲ್ಲ. ಆದರೆ ತಾನು ಒಪ್ಪಿದವನನ್ನು ತಂದೆಯೂ ಒಪ್ಪುವಂತೆ ತೋರಲಿಲ್ಲ. ಕಾರಣ ಅವನು ತುಂಬಾ ಬಡವನೆಂದೆ. ತಮ್ಮ ಅಂತಸ್ತಿಗೆ ಸರಿಯಾಗಿ ಕೊಟ್ಟು ತರುವವರಲ್ಲದೆ ಒಪ್ಪುವಂತಿರಲಿಲ್ಲ. ವಿಷಯ ಹೀಗಿರುವಲ್ಲಿ ನಾಗರಾಜನ ವಿಷಯವನ್ನು ತಿಳಿಸುವುದು ಹೇಗೆ? ತನ್ನ ತಾಯಿ ಜೀವಿಸಿದ್ದರೆ ಅವಳ ಹತ್ತಿರ ಎಲ್ಲಾ ಹೇಳಿಕೊಳ್ಳಬಹುದಿತ್ತು. ಸುಂದರಮ್ಮ ಒಪ್ಪುವುದಿರಲಿ ಆನಂದರಾಯರಂತೂ ಖಂಡಿತ ಒಪ್ಪುವಂತಿರಲಿಲ್ಲ. ತಾಯಿ ಯನ್ನು ಜ್ಞಾಪಿಸಿಕೊಂಡು ಅತ್ತಳು. ಅತ್ತೂ ಅತ್ತೂ ಮುಖವೆಲ್ಲಾ ಕೆಂಪಾಗಿ ತಲೆಸುತ್ತಿ ಬಂತು. ಉಯ್ಯಾಲೆಯಿಂದ ಕೆಳಗಿಳಿದು ರೋಹಿಣಿ ಮನೆಯ ಒಳಕ್ಕೆ ಹೋದಳು. ಹಜಾರದಲ್ಲಿ ಸುಂದರಮ್ಮ ಮತ್ತು ಆನಂದರಾಯರು ಮಾತನಾಡು ತ್ತಿದ್ದರು. ಅವರು ಯಾವ ವಿಷಯ ಮಾತನಾಡುತ್ತಿದ್ದರೆಂದು ರೋಹಿಣಿಗೆ

ತಿಳಿಯಿತು. ಪುನಃ ಅದೇ ವಿಷಯ. ತನ್ನ ಮದುವೆ. ತನ್ನ ಕೋಣೆಗೆ ಹೋಗಿ ಒಂದೆರಡು ನಿಮಿಷ ಅವರು ಮಾತನಾಡುತ್ತಿದ್ದುದನ್ನು ಕೇಳಿದಳು. "ರೋಹಿಣಿ ಒಪ್ಪುವವನನ್ನು ತನ್ನ ಅಳಿಯುನನ್ನಾಗಿ ಮಾಡಿಕೊಳ್ಳುತ್ತೇನೆ" ಎಂದು ಆನಂದರಾಯರು ಹೇಳಿದಾಗ ರೋಹಿಣಿಗೆ ಸಂತೋಷವಾಯ್ತು. ಮಾತು ಅಲ್ಲಿಗೆ ನಿಂತಿತು. ಸುಂದರಮ್ಮನಿಗೆ ತಾನು ಹೇಳಿದ್ದು ಅರ್ಥವಾಗಿರಬೇಕೆಂದು ಆನಂದರಾಯರು ಸುಮ್ಮನಾದರೆ ರೋಹಿಣಿಗೆ ಒಪ್ಪಿಸಿಬಿಟ್ಟರಾಯಿತಲ್ಲ ಎಂದು ಸುಂದರಮ್ಮ ತೆಪ್ಪಗಾದಳು. ತನ್ನ ಇಷ್ಟಾರ್ಥ ನೆರವೇರುವುದೆಂದು ರೋಹಿಣಿಗೆ ಸಂತೋಷವಾಯ್ತು. ಒಂದು ನಿಟ್ಟುಸುರನ್ನು ಬಿಟ್ಟು ಕೋಣೆಯ ಬಾಗಿಲನ್ನು ಹಾಕಿಕೊಂಡಳು.

## ೪

ಯಾವ ವಿಷಯ ಹೇಗಿದ್ರೂ ಇರಲಿ ಎಂದಿನಂತೆ ಕೆಲಸ ನಡೆಯ ಬೇಕಲ್ಲ; ಗಡಿಯಾರದ ಮುಳ್ಳಿನಂತೆ ಕೆಲಸ ಸಾಗುತ್ತಿತ್ತು. ಜೀವನದಲ್ಲಿ ಬರೀ ಕಷ್ಟವನ್ನೇ ಕಂಡಲ್ಲದೆ ಸುಖವನ್ನರಿಯದ ಕಮಲಮ್ಮ ತನ್ನ ಅಳಿಯನ ಸಾವಿನಿಂದ ಬಹಳ ಮರುಗಿ ಮೆತ್ತಗಾದಳು. ಎಲ್ಲವೂ ಪ್ರಪಂಚದ ಒಂದು ನಿಯಮವೆಂದು ಗಟ್ಟಿಮಾಡಿರಬೇಕು. ಸಾಯಂಕಾಲದ ಅಡಿಗೆಗೆ ಒಲೆಯನ್ನು ಹೊತ್ತಿಸುತ್ತಿದ್ದಳು. ಸೌದೆ ಹಸಿಯಾಗಿದ್ದುದರಿಂದ ಹೊಗೆ ಸುತ್ತಿ ಉಸಿರುಕಟ್ಟುವಂತಿತ್ತು. ಸೌದೆ ಉರಿಯದು; ಇವಳು ಊದುವುದನ್ನು ಬಿಡಳು. ಊದಿ ಊದಿ ಕಮಲಮ್ಮನ ಗಂಟಲು ಹತ್ತಿಬಂತು. ಕೆಮ್ಮುತ್ತಾ ಮತ್ತೆ ಊದಿದಳು. ಕಮಲಮ್ಮನ ಕಷ್ಟವನ್ನು ಕಂಡೇನೋ ಒಲೆ ಉರಿಮುಖವಾಗಿ ಒಂದೆರಡು ನಿಮಿಷದ ನಂತರ ಮತ್ತೆ ಹೊಗೆ ಸುತ್ತಿಕೊಂಡಿತು; ಬರಿ ಅಡಿಗೆಮನೆಯಲ್ಲ—ಗೌರಿಯ ಕೋಣೆಯಲ್ಲೂ ತುಂಬಿತು.

"ಏನಮ್ಮ ಇಷ್ಟೊಂದು ಹೊಗೆ" ಎಂದು ಕೋಣೆಯಲ್ಲಿದ್ದ ಗೌರಿ ಕೇಳಿದಳು.

"ಹಾಳಾದ್ದು ಹಸಿ ಸೌದೆ.... ಬೇರೆ ತರಿಸಬೇಕು" ಎಂದು ಕಮಲಮ್ಮ ಪಕ್ಕದ ಮನೆಗೆ ಹೋದಳು.

ಸರಸುವಿಗೆ ಎರಡು ವರ್ಷ ತುಂಬಿತ್ತು. ಮಗು ನೆಲದ ಮೇಲೆ ಹಾಸಿದ್ದ ಹಚ್ಚಡದ ಮೇಲೆ ಮಲಗಿ ಕೈಲೊಂದು ಗಿಲಕಿಯನ್ನು ಹಿಡಿದು ಆಟ ಆಡಿ ಕೊಂಡು ಒಮ್ಮೊಮ್ಮೆ ಹತ್ತಿರ ಕುಳಿತಿದ್ದ ಗೌರಿಯ ಕೈಯನ್ನು ಹಿಡಿದು ಹಿಗ್ಗುವುದು. ಮಗುವಿನಾಟ ಗೌರಿಗೆ ಬೇಕಾಗಿರಲಿಲ್ಲ. ಅಂದು ಅವಳಿಗೆ ತುಂಬಾ ದುಃಖವಾಗಿತ್ತು. ತನ್ನ ಬಾಳಿನ ಮಹತ್ತರವಾದ ಪ್ರಶ್ನೆಗೆ ತಕ್ಕ ಉತ್ತರವನ್ನು ಯೋಚಿಸುತ್ತಿದ್ದಳು. ಹೆಣ್ಣುಮಕ್ಕಳಿಗೆ ಸಹಜವಾಗಿರುವಂತೆ ಜೀವನದಲ್ಲಿ ಮಹತ್ತರವಾದ ಆಸೆಯನ್ನಿಟ್ಟುಕೊಂಡು ಕನಸನ್ನು ಎದುರು ನೋಡುತ್ತಿದ್ದಳು. ಆಸೆ ಕೈಗೂಡುವ ಹಾದಿಯನ್ನೂ ಜಾಗ್ರತಳಾಗಿಯೇ ತುಳಿದಿದ್ದಳು. ಮುಖ್ಯವಾಗಿ ಜೀವನವನ್ನು ಸುಗಮವನ್ನಾಗಿಡುವ ಸಂಗಾತಿ; ತನ್ನ ಅಂತಸ್ತಿಗೆ ಮೀರಿ ಚಂದ್ರಶೇಖರ ಸಂಸಾರ ನಡೆಸಿದ. ಗೌರಿ ಕನಸು ನನಸಾಯಿತೆಂದುಕೊಂಡಳು. ಅವಳು ಇಷ್ಟಪಟ್ಟಂತೆ ಪುಟ್ಟಸಂಸಾರ. ಎರಡು ಹಕ್ಕಿಗಳು ಸುಖವಾಗಿದ್ದುವು. ಇವಳಿಗೆ ಯಾವ ಕಷ್ಟವನ್ನೂ ಅನುಭವಕ್ಕೆ ಬರದಂತೆ ನೋಡಿಕೊಳ್ಳುವುದು ತನ್ನ ಕರ್ತವ್ಯವೆಂದು ಚಂದ್ರಶೇಖರ ನೆನೆದರೆ, ಅವರು ನನ್ನನ್ನು ಕಟ್ಟಿಕೊಂಡು ದುಃಖಪಡಬಾರದೆಂದು ಗೌರಿಯ ಆಸೆ. ಹಾಗೆಯೇ ಸಂಸಾರ ಸಾಗಿತ್ತು. ಸರಸು ಹುಟ್ಟಿದಾಗಲಂತೂ ಗೌರಿ ಯನ್ನುಹಿಡಿಯುವವರೇ ಇಲ್ಲ.ಆದರೆ ತಮ್ಮ ನೌಕೆ ಇಷ್ಟುಬೇಗ ಒಡೆಯುತ್ತದೆ ಎಂದು ಯಾರೂ ಕಂಡಿರಲಿಲ್ಲ. ಗೌರಿ ಮತ್ತು ಸರಸುವನ್ನು ಬಿಟ್ಟು ಇಹ ಲೋಕದಿಂದ ಚಂದ್ರಶೇಖರನೇನೋ ಪಾರಾದ. ಆದರೆ ಅವರ ಮುಂದಿನ ಜೀವನ? ಎಂತಹ ಅನ್ಯಾಯವಾಯ್ತು. ಯಾವ ಪಾಪದ ಪ್ರಾಯಶ್ಚಿತ್ತಕ್ಕಾಗಿ ಜೀವಮಾನದ ಪರ್ಯಂತ ಅನುಭವಿಸಬೇಕಾದ ಶಿಕ್ಷೆ. ಇದು ಒಂದು ರೀತಿಯ ಶಿಕ್ಷೆ. ಎಷ್ಟೋಜನರು ಎಂತೆಂತಹ ಕಷ್ಟಗಳನ್ನು ಅನುಭವಿಸುತ್ತಿಲ್ಲ! ಮದುವೆ ಯಾದ ಮರುದಿನವೇ ವಿಧವೆಯಾದ ನತದೃಷ್ಟರಿಲವೆ? ಸಂಸಾರಕ್ಕೆ ಊರು ಗೋಲಿನಂತಿರುವ ತಂದೆಯನ್ನು ಕಳೆದುಕೊಂಡವರೆಷ್ಟೋ! ತಮ್ಮ ಜೀವನದ ಸರ್ವಸ್ವ ಎಂದುಕೊಂಡಿದ್ದ ಮಕ್ಕಳನ್ನು ಕಳೆದುಕೊಂಡು ಮುಪ್ಪಿನಲ್ಲಿ ಬೆಂಗಾಡು ಜೀವನವನ್ನು ಕಳೆಯುವವರೆಷ್ಟೊ! ಒಂದುತರಹದಲ್ಲಲ್ಲ ಒಂದು ತರಹದಲ್ಲಿ ಎಲ್ಲರೂ ಕಷ್ಟವನ್ನೂ ಅನುಭವಿಸುವವರೆ. ಅದರಲ್ಲಿ ತನ್ನದೇನು ಹೆಚ್ಚುಗಾರಿಕೆ? ಇಂತಹ ಕಷ್ಟಗಳು ಇತರರಿಗೆ ಒದಗಿದಾಗ ಸಂತಾಪ

ಪಡುವಷ್ಟು ಪರಿಚಯವಾಗಿದ್ದರೂ ತನಗೇ ಬಂದೊದಗಿದಾಗ ಚೇತರಿಸಿಕೊಳ್ಳಲು ಹೊಸದಾಗಿ ಕಲಿಯಬೇಕಾಗಿದೆ. ಇದು ನನಗೆ ಹೊಸದಷ್ಟೆ. ಅಮ್ಮನಿಗೇನು ಹೊಸದಲ್ಲ. ನಮಗೆ ಮುಂದೆ ಇನ್ನ್ಯಾವ ವಿಪತ್ತು ಕಾದಿಟ್ಟುಕೊಂಡಿದೆಯೋ ಕಂಡವರ್ಯಾರು? ಧಗ್ಗನೆ ಹತ್ತಿಕೊಂಡು ಅನುಭವವಾದಾಗ ಮಾತ್ರ ಅಪ್ರತಿಭರಾಗುತ್ತೇವೆ. ಅಲೆ ತಳ್ಳಿದ ಹಾಗೆ ತೇಲಬೇಕು. ಅದರಲ್ಲಿ ನಮ್ಮ ಕೂಗು ಸಮುದ್ರದ ಆರ್ಭಟದಲ್ಲಿ ಮುಳುಗಿ ಯಾರಿಗೆ ಕೇಳಿಸುತ್ತೆ? ಗೌರಿ ತನ್ನ ಬಾಳನ್ನೆಲ್ಲ ಒರೆಹಚ್ಚಿ ನೋಡಿದಳು. ಆದರೆ ಪ್ರಪಂಚದ ಕಷ್ಟವನ್ನು ಎದುರಿಸುವ ಗುಣ ಅವಳಲ್ಲೆಲ್ಲಿತ್ತು? ದೊಡ್ಡಸಾಗರದ ಅಲೆಗಳಂತೆ ಮನಸ್ಸು ಅಲ್ಲೋಲಕಲ್ಲೋಲವಾಗಿತ್ತು. ದೊಡ್ಡ ಅಲೆಗಳು ಭೋರ್ಗರೆಯುವುದು ಸಣ್ಣಸಣ್ಣ ಅಲೆಗಳು ಚಿನ್ನಾಟವಾಡುವುದು. ತುಂತುರ ಮನಸ್ಸಿಗೆ ಹಿತವನ್ನುಂಟುಮಾಡಿತು. ಅಲೆಯೊಡನೆ ಎದುರಿಸಿ ಹೋರಾಡಬೇಕು ವಿಧಿ ತಳ್ಳಿದ ಕಡೆ ಬಿದ್ದಿರಬೇಕು. ತನಗೆ ಯಾವ ಸ್ವಾತಂತ್ರ್ಯವೂ ಕಾಣದೆ ಕಮ್ಮಿಯಾದ ಅಲೆಯೊಡನೆ ಭಯಂಕರ ಶಬ್ದವೂ ನಿಂತು ಬೆಳದಿಂಗಳಲ್ಲಿ ಹರಿಯುತ್ತಿರುವ ನದಿಯ ದಡದಲ್ಲಿ ಕುಳಿತು ದುಃಖವನ್ನು ಮರೆಯುವಂತೆ ಅವಳಿಗೆ ಭಾಸವಾಯ್ತು.

ನಾಗರಾಜ ಮತ್ತು ರೋಹಿಣಿ ನಗುತ್ತಾ ಮನೆಯೊಳಕ್ಕೆ ಬಂದಾಗಲೆ ಅವಳಿಗೆ ಎಚ್ಚರ. ಆ ಸ್ವಲ್ಪಹೊತ್ತಿನಲ್ಲಿ ಎಂತಹ ಅನುಭವವಾಗಿತ್ತು. ರಾಜ ಮತ್ತು ರೋಹಿಣಿ ಕಮಲಮ್ಮನ ಹತ್ತಿರ ಏನೋ ಹೇಳುತ್ತಿದ್ದರು. ಮನೆಯ ಮುಂದಿದ್ದ ತೆಂಗಿನ ಮರದ ನೆರಳನ್ನು ರೋಹಿಣಿ ನೋಡಿ ಹೆದರಿಕೊಂಡಳು ಎಂದು ರಾಜ ಹೇಳಿದಾಗ ಕಮಲಮ್ಮನಿಗೆ ಆದ ಸಂತೋಷ 'ರಾಜನೇ ಮೊದಲು ಹೆದರಿ ಓಡಿದ್ದು' ಎಂದು ರೋಹಿಣಿ ಹೇಳಿದಾಗ ಆಗಿರಬೇಕು. ಮಗುವನ್ನು ಎತ್ತಿಕೊಂಡು ಕಿಟಕಿಯಿಂದಾಚೆ ಒಮ್ಮೆ ನೋಡಿದಳು. ತುಂಬಿ ಚೆಲ್ಲಿದ್ದ ಬೆಳದಿಂಗಳು; ಜೊತೆಗೆ ತಂಪಾದಗಾಳಿ. ಗೌರಿ ಕೋಣೆಯನ್ನು ಬಿಟ್ಟು ಹಜಾರಕ್ಕೆ ಬಂದಾಗ "ಮಗು ನಾನು ಎತ್ಕೋತೇನೆ ಕೊಡಿ ಗೌರಕ್ಕ" ಎಂದು ರೋಹಿಣಿ ಹೇಳಿ ಬೊಮ್ಮಟಿಯನ್ನು ಎತ್ತಿಕೊಂಡಳು. ರೋಹಿಣಿ ಮಗುವನ್ನು ಮುದ್ದಾಡುತ್ತಿದ್ದುದನ್ನು ರಾಜ ನೋಡಿದ. ಕಮಲಮ್ಮ ಗೌರಿಯನ್ನು ನೋಡಿ ನಕ್ಕಿದ್ದು ರಾಜ ರೋಹಿಣಿಯನ್ನು ನೋಡುತ್ತಿದ್ದುದರಿಂದ ಅವನಿಗೆ ಕಾಣಲಿಲ್ಲ. ಗೌರಿ ನಕ್ಕುಬಿಟ್ಟಳು.

" ಏತಕ್ರೀ ನಗೋದು " ಎಂದಳು ರೋಹಿಣಿ.

" ಮಗೂನ ಎತ್ತಿಕೊಂಡು ಮುದ್ದಾಡಲು ಪ್ರಾರಂಭಿಸಿದೆಯಲ್ಲೆ? "

" ಅದರಲ್ಲೇನ್ರಿ ತಪ್ಪು "

" ತಪ್ಪಿಲ್ಲಕಣೆ.... ಈಗ್ಲೇ ಅಂತ " ನಗುತ್ತಿದ್ದ ಗೌರಿಯ ಜೊತೆಗೆ ಕಮಲಮ್ಮನೂ ನಕ್ಕುಬಿಟ್ಟಳು. ರೋಹಿಣಿಗೆ ಕೋಪವೇನೋ ಬಂತು. ಅದನ್ನು ತೋರಿಸದೆ " ಮಗುವನ್ನುಕರೆಮುಕೊಳ್ರಿ " ಎಂದು ಗೌರಿಯ ತೊಡೆಯಮೇಲೆ ಮಲಗಿಸಿದ ಮೇಲೆ ಸರಸು ಅಳಲು ಪ್ರಾರಂಭಿಸಿದಳು. " ಕರೆದುಕೊಳ್ಳಿ ಅಂದ್ರೆ ಜಂಭ " ಎಂದು ಗೌರಿ ಹಾಸ್ಯಮಾಡಿದಳು. ಅಳುತ್ತಿದ್ದ ಸರಸುವನ್ನು ಪುನಃ ರೋಹಿಣಿ ಎತ್ತಿಕೊಂಡಾಗ ಅಳುವುದನ್ನು ನಿಲ್ಲಿಸಿ ಪುಟ್ಟ ಕೈಗಳಿಂದ ರೋಹಿಣಿಯನ್ನು ಮೆಲ್ಲನೆ ಹೊಡೆಯಲಾರಂಭಿಸಿದಳು.

" ನಿಮ್ಮ ಕೈಲಿ ಬೈಸಿಕೊಳ್ಳುವುದಲ್ಲದೆ ಇವಳ ಕೈಲಿ ಬೇರೆ ಹೊಡೆಸಿಕೊಳ್ಳಬೇಕು " ಎಂದು ರೋಹಿಣಿ ಸರುಪಿನ ಗಲ್ಲವನ್ನು ಅಲುಗಿಸಿದಳು.

" ಇಲ್ಲೇ ಊಟಕ್ಕೆ ಎದ್ಬಿಡೆ ರೋಹಿಣಿ, ಬೆಳದಿಂಗಳಲ್ಲಿ ಕೈತುತ್ತು ಹಾಕ್ತೇನೆ " ಎಂದು ಕಮಲಮ್ಮ ಹೇಳಿ ಅಂಗಳಕ್ಕೆ ನೀರು ಹಾಕಲು ಹೋದಳು. ಗೌರಿ ನಾಗರಾಜನೂ ಊಟಕ್ಕೆ ಬರುವಂತೆ ಕರೆದು ಅಂಗಳಕ್ಕೆ ಬರುವ ಹೊತ್ತಿಗೆ ಕಮಲಮ್ಮ ಅಡಿಗೆಯನ್ನು ತಂದಿಟ್ಟಿದ್ದಳು. ಹಿಟ್ಟು ಚೆಲ್ಲಿದಂತೆ ಬೆಳದಿಂಗಳು. ಹಾಸಿದ ಚಾಪೆಯಮೇಲೆ ನಾಗರಾಜ ಮತ್ತು ರೋಹಿಣಿ ಕುಳಿತರು. ಗೌರಿ ಹಜಾರದಲ್ಲಿ ಕುಳಿತುಕೊಂಡಿದ್ದಳು. ಕಮಲಮ್ಮ ತುತ್ತು ಹಾಕಲು ಪ್ರಾರಂಭಿಸಿದಳು. ಈರುಳ್ಳಿಹುಳಿ, ಮೊಸರನ್ನ ಜೊತೆಗೆ ನಂಜಿಕೊಳ್ಳಲು ಉಪ್ಪಿನಕಾಯಿ, ಕರಿದಿದ್ದ ಸಂಡಿಗೆ. ರೋಹಿಣಿ ಐದಾರು ತುತ್ತು ತಿಂದು ಮುಗಿಸಿದಳು.ಸಾಕು ಕಣ್ರೀ ಎಂದು ಮೇಲುಸಿರಿಬಿಟ್ಟುಎದ್ದೇಬಿಟ್ಟಳು. ರಾಜ ಒಂದೆರಡು ತುತ್ತು ತಿಂದನಂತರ ಕೈತೊಳೆದುಕೊಂಡ. ದುಃಖದಿಂದಲೋ ಅಥವಾ ಸಂತೋಷದಿಂದಲೋ ತಿಳಿಯದು. ಕಮಲಮ್ಮನೇಕೋ ಕಣ್ಣೀರಿಟ್ಟಿದ್ದಳು. ಬಹುಶಃ ಕಪನೀಪತಯ್ಯನವರನ್ನು ನೆನೆಸಿಕೊಂಡಿರಬೇಕು. ಅವರ ಅತ್ತೆ ಒಂದುಸಾರಿ ತಮ್ಮಿಬ್ಬರಿಗೂ ಬೆಳದಿಂಗಳಲ್ಲಿ ಕೈತುತ್ತು ಹಾಕಿದ್ದು ಜ್ಞಾಪಕಕ್ಕೆ ಬಂತು. ಹತ್ತಿರವೇ ರೋಹಿಣಿ ಕುಳಿತಿದ್ದು ಕಮಲಮ್ಮ ಕಣ್ಣೀರಿಟ್ಟಿದ್ದನ್ನು ನೋಡಿ—

" ಏಕ್ರಿ ? " ಎಂದಳು.

ಕಮಲಮ್ಮ ಮಾತು ಬದಲಾಯಿಸಲು " ನೀನು ಚಿನ್ನದಂತಹ ಹುಡುಗಿ ರೋಹಿಣಿ " ಎಂದಳು.

" ನೀವು ಯಾವಾಗ಼್ೂ ಹಾಗೇನೆ. "

" ಬೇಗ ಮದ್ವೆ ಆಗ್ಬಿಡೇ...."

" ಥೂ ! ಹೋಗ್ರಿ " ಎಂದು ಮುಖವನ್ನು ಗಂಟಿಡುವ ಹೊತ್ತಿಗೆ ರಾಜ ಷರಟನ್ನು ಹಾಕಿಕೊಂಡು ಸಿದ್ಧವಾಗಿದ್ದ.

" ಇನ್ನು ಹೊತ್ತಾಯ್ತು. ಬರ್‍ತೀನ್ರಿ ಕಮಲಮ್ಮನೋರೆ " ಎಂದು ರೋಹಿಣಿ ಹೊರಡಲು ಎದ್ದುನಿಂತಳು.

" ಜೊತೆಗೆ ರಾಜ ಬರ್‍ತಾನೆ ತಡಿಯೆ ?"

" ಎಷ್ಟು ಮಹಾ ದೂರ ನಾನೊಬ್ಬಳೇ ಹೋಗ್ತೀನೆ. "

" ಯಾಕೆ ? ಒಬ್ಬಳೇ ಹೋಗಿ ತೆಂಗಿನಮರದ ಹತ್ತಿರ ಹೆದರಿ ಕೊಳ್ಳೋಕೇನೋ ? " ಎಂದ ರಾಜ.

" ತೆಂಗಿನ ಮರದ ಹತ್ತಿರ " ಎಂದಾಗ ರೋಹಿಣಿಗೆ ಎದೆ ಹೊಡೆದು ಕೊಂಡಿತು. ಜೊತೆಗೆ ರಾಜ ಬರಿದಿದ್ರೇ ಒಳ್ಳೆಯದೆನಿಸಿತು. ರೋಹಿಣಿ ಯನ್ನು ಅವರ ಮನೆಗೆ ಬಿಟ್ಟುಬಂದಾಗ ಸುಂದರಮ್ಮ ತುಂಬಾ ಕೋಪ ಗೊಂಡಳು.

೫

ಹಾಗೂಹೀಗೂ ಅನ್ನುವ ಹೊತ್ತಿಗೆ ರಾಜನ ಪರೀಕ್ಷೆ ಬಂದೇಬಿಟ್ಟಿತು. ಬಿ. ಎ. ( ಆನರ್ಸ್ ) ಪರೀಕ್ಷೆಯಾದ್ದರಿಂದ ಹೆಚ್ಚಿನ ಶ್ರಮವಹಿಸಿ ರ್‍ಯಾಂಕು ತೆಗೆಯಬೇಕೆಂದು ಅವನ ಇಷ್ಟ. ಮನೆಯ ಯಾವ ಚಿಂತೆಯನ್ನೂ ಹಚ್ಚಿ ಕೊಳ್ಳದಿರಲೆಂದು ಕಮಲಮ್ಮ ಪ್ರಯತ್ನಪಟ್ಟರೂ ಮನೆಯಲ್ಲಿ ರಾಜನ ಹೊರತು ಬೇರೆ ಗಂಡುಪಿಳ್ಳೆಯಿಲ್ಲದ್ದರಿಂದ ಅದು ಆಗುತ್ತಿರಲಿಲ್ಲ. ರಾಜ ತನ್ನ ವ್ಯಾಸಂಗದ ಜೊತೆಗೆ ಒಂದೆರಡು ಪಾಠಗಳನ್ನಿಟ್ಟುಕೊಂಡಿದ್ದ. ಆದರೆ ಪರೀಕ್ಷೆಗೆ ಮೂರುತಿಂಗಳ ಮುಂಚೆಯೇ ಎಲ್ಲವನ್ನೂ ಬಿಟ್ಟಿದ್ದರಿಂದ ಬರು ತ್ತಿದ್ದ ಅಲ್ಪಸ್ವಲ್ಪ ಆದಾಯಕ್ಕೂ ಕಲ್ಲುಬಿತ್ತು. ರಾಜನೂ ಅಷ್ಟೆ. ತಾನಾಯ್ತು

ಓದುವುದಾಯ್ತು. ಮತ್ತೆ ಸ್ವಲ್ಪ ಹೊತ್ತು ಗೌರಿಯೊಡನೆ ಮಾತನಾಡುತ್ತಿದ್ದು ಸರಸಳೊಡನೆ ಆಟ ಆಡುವನು.

ಹತ್ತಿರಹತ್ತಿರ ಬರುತ್ತ ಪರೀಕ್ಷೆ ಎರಡೇ ದಿನಗಳಿದ್ದವು. ರಾತ್ರಿಯೆಲ್ಲಾ ಓದಿ ಓದಿ ಕಣ್ಣು ಕೆಂಪಾಗಿತ್ತು. ಕಮಲಮ್ಮ ಇತರ ಕೆಲಸಗಳಿಗೆ ಹೆಚ್ಚು ಗಮನಕೊಡದೆ ರಾಜನ ಸೌಕರ್ಯಗಳನ್ನು ನೋಡಿಕೊಂಡಳು. ಸ್ನಾನಕ್ಕೆ ಬಿಸಿನೀರು, ಹೊತ್ತಿಗೆ ಊಟ, ಕಾಫಿಯಂತೂ ಎಷ್ಟೋ ಸಾರಿ. ಮೇಲೆ ವಾತ್ಸಲ್ಯದ ಮಾತುಗಳು. ತನ್ನ ಭವಿಷ್ಯದೊಡನೆ ತನ್ನ ತಾಯಿ ಮತ್ತು ತಂಗಿಯರ ಭವಿಷ್ಯ ಎನ್ನುವುದನ್ನು ಸೂಕ್ಷ್ಮವಾಗಿ ರಾಜ ತಿಳಿದಿದ್ದ.

ಈ ಮಧ್ಯೆ ಸುಬ್ಬಣ್ಣ ಹಳ್ಳಿಯಿಂದ ದವಸಧಾನ್ಯಗಳನ್ನು ಗಾಡಿಯಲ್ಲಿ ತುಂಬಿಕೊಂಡು ಬಂದಿದ್ದ. ಮನೆಗೆ ಆರು ತಿಂಗಳ ಗ್ರಾಸಕ್ಕಾಯ್ತು. ಸುಬ್ಬಣ್ಣ ಮನೆಗೆ ಬಂದಾಗ ನಾಲ್ಕು ಗಂಟೆಯಾಗಿತ್ತು. ಉರಿಬಿಸಿಲಿನಲ್ಲಿ ಬಂದ ಸುಬ್ಬಣ್ಣನಿಗೆ ಕೈಕಾಲು ತೊಳೆದುಕೊಳ್ಳಲು ಕಮಲಮ್ಮ ನೀರನ್ನು ಕೊಟ್ಟಳು. ಟವಲಿನಿಂದ ಮುಖವನ್ನು ಒರಸಿಕೊಂಡು ಹಜಾರದಲ್ಲಿ ಹಾಸಿದ್ದ ಚಾಪೆಯಮೇಲೆ ಕುಳಿತುಕೊಳ್ಳುವ ಹೊತ್ತಿಗೆ ಒಂದು ಲೋಟ ನಿಂಬೆಹಣ್ಣಿನ ಪಾನಕ ತಂದು ಕೊಟ್ಟಳು. ಸುಬ್ಬಣ್ಣ ಪಾನಕ ಕುಡಿಯುತ್ತಾ "ನಿನ್ನ ಹೊಟ್ಟೆ ತಣ್ಣಗಿರಲಿ ತಾಯಿ" ಎಂದು ಲೋಟವನ್ನು ಕೆಳಗಿಟ್ಟು ಮಲಗಿದ್ದ ರಾಜನ ಕಡೆ ನೋಡಿದ.

"ಪಾಪ! ಮಲಗಿದ್ದಾನೆ, ರಾತ್ರಿಹಗಲೂ ಅವನ ಓದು" ಎಂದಳು ಕಮಲಮ್ಮ.

"ಪರೀಕ್ಷೆ ಯಾವಾಗ?"

"ನಾಳೆಗೆ."

"ಓ! ಅದು ಸರಿ ಕಮಲು! ನೀನು ಒಂದನ್ನುಮಾತ್ರ ಯೋಚಿಸಿಲ್ಲ?"

"ಯಾವುದು ಸುಬ್ಬಣ್ಣ?"

"ರಾಜನ ಮದುವೆ."

"ಈಗ್ಲೇ ಏನಪ್ಪ....ಮುಂದಿನ ವೈಶಾಖಕ್ಕೆ ೨೦ ವರ್ಷ ತುಂಬುತ್ತೆ."

"ಕಮಲ....ಪಟ್ಟಣದ ಈಶ್ವರೈಯ ಬಂದಿದ್ದ."

"ಯಾರು ಗೊತ್ತಾಗಲಿಲ್ಲವೆ?"

"ಸಂಪಿಗೆ ಹಳ್ಳೀಲಿ ಗಂಗಾಧರೈಯ ಇಲ್ಲವೆ....ಅವರಣ್ಣ."

" ರಾಜಲಕ್ಷ್ಮಮ್ನೋರ ಗಂಡನೆ ? "

" ಹೌದು.... ಅವರ ಮಗಳಿಗೆ ರಾಜನನ್ನು ತರುಕೊಬೇಕೆಂದು."

" ನಾಗರತ್ನ ತಾನೇ.... ಇನ್ನೂ ಚಿಕ್ಕಹುಡ್ಗಿ."

" ನೀನು ಯಾವಾಗ ನೋಡಿದ್ದು ? "

" ಈಗ್ಲೆ ೫-೬ ವರ್ಷ ಆಗಿರಬೇಕು."

" ಹಾಗೆ ಹೇಳು.... ಈಗ ರತ್ನ ಬೆಳೆದುಬಿಟ್ಟಿದ್ದಾಳೆ."

" ಅದು ಸರಿಯಪ್ಪ........ ಅವನನ್ನೇ ಕೇಳೋಣ........ ಈಗಿನ ಕಾಲದೋರು."

" ನಿನ್ನ ಮಾತು ಮೀರುವಷ್ಟು ಈಗಿನ ಕಾಲದೋನಲ್ಲ ರಾಜ" ಎಂದು ಸುಬ್ಬಣ್ಣ ಕಮಲಮ್ಮನನ್ನು ನೋಡಿದ. ರಾಜನ ವಿಷಯ ನೆನೆಸಿಕೊಂಡಾಗಲೆಲ್ಲಾ ಹೃದಯ ಉಬ್ಬಿಬರುತ್ತಿತ್ತು.

" ಈಶ್ವರ್ಯವೂ ಇದ್ದಿದ್ದರಲ್ಲೇ ಪರವಾಗಿಲ್ಲ" ಎಂದು ಸುಬ್ಬಣ್ಣ ಪ್ರಾರಂಭಿಸಿದ.

" ಸರಿ ರೂಪ ಸಂಬಂಧವಾದ್ರೆ ಆಯ್ತು.... ಆದ್ರೆ ನಮ್ಮನ್ನು ಸಾಕುವ ಭಾರ ರಾಜನದು."

" ಹೌದು ಕಮಲು."

" ನಿನಗೆ ಆನಂದರಾಯರು ಗೊತ್ತಿಲ್ಲವೆ ? "

" ಜವಳಿ ಅಂಗಡಿ ಆನಂದರಾಯರೆ ? ಗೊತ್ತು. ಅವರ ಮಗಳಿಗೆ ವರ ಹುಡುಕುತ್ತಿದ್ದಾರೆ. ಬೆಂಗಳೂರಿನಲ್ಲಿ ಮಾತುಕತೆ ಆಗುತ್ತಿತ್ತು. ನಿಶ್ಚಯವಾಯಿತೋ ಏನೋ ಗೊತ್ತಿಲ್ಲ."

ಕಮಲಮ್ಮನ ಉತ್ಸಾಹ ರೆಲ್ಲ ಭಂಗವಾಯ್ತು. ಏನು ಹೇಳಬೇಕೆಂದು ಹೊರಟಿದ್ದಳೋ ಅದನ್ನೇ ಮರೆತಳು.

" ಆನಂದರಾಯರ ವಿಷಯ ಹೇಳ್ತಿದ್ದೆಯಲ್ಲ...." ಎಂದು ಸುಬ್ಬಣ್ಣ ಎಚ್ಚರಿಸಿದ.

" ಅವರೂ ನಮ್ಮ ಜನ.... ಸುಬ್ಬಣ್ಣ."

" ಸುಬ್ಬಣ್ಣನಿಗೆ ಸೂಕ್ಷ್ಮವಾಗಿ ಅರ್ಥವಾಯ್ತು. ಸ್ವಲ್ಪ ಹುಷಾರಾಗಿರಬೇಕು. ದೊಡ್ಡ ಕುದ್ರೆ ಸಮಾಚಾರ ಅಷ್ಟೆ " ಎಂದು ಸುಮ್ಮನಾದ.

ಆ ವೇಳೆಗೆ ರಾಜ ನಿದ್ದೆಯಿಂದ ಎದ್ದುದರಿಂದ ಮಾತು ಅಲ್ಲಿಗೆ ನಿಂತಿತ್ತು. ರಾಜ ಮೈಕೈ ಮುರಿಯುತ್ತಾ ಎದ್ದುನಿಂತು ಕಿಟಕಿಯ ಕಡೆ ನೋಡಿ “ ಆಗ್ಲೇ ಬಹಳ ಹೊತ್ತಾಗಿದೆ. ಎಷ್ಟು ಹೊತ್ತುಮಲಗಿಬಿಟ್ಟೆ ” ಎಂದು ತಿರುಗಿದಾಗ ಸುಬ್ಬಣ್ಣನನ್ನು ನೋಡಿದ. ‘ ಯಾವಾಗ ಬಂದೆ ಮಾವ?’ ಎಂದು ಸುಬ್ಬಣ್ಣನ ಹತ್ತಿರ ಕುಳಿತ.

“ ಮಧ್ಯಾನ್ಹ ಬಂದೆ, ಹೇಗೆ ಓದಿದ್ದೀಯಪ್ಪಾ ? ”

“ ಪರವಾಗಿಲ್ಲ ಮಾವ.... ?”

ಎರಡು ಲೋಟ ಕಾಫಿಯನ್ನು ಕಮಲಮ್ಮ ತಂದಿಟ್ಟಳು. ಸುಬ್ಬಣ್ಣ ಕಾಫಿಯನ್ನು ಕುಡಿದು ಲೋಟವನ್ನು ಕೆಳಗಿಟ್ಟು “ ನಿನ್ನ ಮಗನಿಗೆ ಹೇಳಿದ್ದನಮ್ಮ, ಬೇಗ ಮದುವೆಮಾಡಿಕೊಂಡು, ಸೊಸೆ ಬಂದರೆ ನಿನಗೆ ಸಹಾಯವಾಗುತ್ತೆ ” ಎಂದು ನಗುತ್ತಾ ಹೇಳಿದ. ಅವರ ಜೊತೆಗೆ ರಾಜನೂ ನಕ್ಕ.

“ ಮಾವ ಮಾಡಿದ್ರೆತಾನೆ ಮದ್ವೇನ ” ಎಂದು ಕಮಲಮ್ಮ ಸೇರಿಸಿದಳು. ರಾಜ ಅದನ್ನು ಗಮನಿಸದೆ, “ ನಾನು ಓದ್ದೋಕೆಹೋಗ್ತೆನೆ–೮ ಗಂಟೆಗೆಲ್ಲಾ ಬಂದುಬಿಡ್ತೇನೆ. ” ಎಂದು ಕಮಲಮ್ಮನಿಗೆ ಹೇಳಿ ಹೊರಟೇಬಿಟ್ಟ.

ರಾಜ ನಾಲ್ಕು ಗಂಟೆಗೆಲ್ಲಾ ತನ್ನ ಸ್ನೇಹಿತ ವೆಂಕಟೇಶನ ಮನೆಗೆ ಹೋಗಬೇಕಿತ್ತು. ಮಾರನೆಯದಿನ ಪರೀಕ್ಷೆಯಲ್ಲಿ ಬರಬಹುದಿದ್ದ ಪ್ರಶ್ನೆಗಳನ್ನು ಚರ್ಚಿಸುವುದೆಂದು ಗೊತ್ತುಮಾಡಿದ್ದರು. ಆಗ್ಲೆ ೫ ಗಂಟೆಯಾಗಿಬಿಟ್ಟಿತ್ತು. ಅವಸರವಾಗಿ ನಡೆದ.

ತಾನು ಮಲಗಿದ್ದಾಗ ಸುಬ್ಬಣ್ಣ ಕಮಲಮ್ಮನೊಡನೆ ಆಡಿದ್ದ ಕೊನೆಯ ಮಾತು ಕೇಳಿಸಿತ್ತು. ಆನಂದರಾಯರ ಮಗಳನ್ನು ತನಗೆ ತಂದುಕೊಳ್ಳಬೇಕೆಂದು ಕಮಲಮ್ಮ ಸೂಚಿಸಿದಾಗ, ಅವರು ಬಹಳ ದೊಡ್ಡವರು; ಅವರೆಲ್ಲಿ ಒಪ್ಪುತ್ತಾರೆ ಎಂದು ಅರ್ಥಕೊಡುವ ಮಾತನ್ನು ಸುಬ್ಬಣ್ಣ ಆಡಿದ್ದ. ಇನ್ನು ಮಾತು ಬೆಳೆದು ತಾಯಿಯ ಉತ್ಸಾಹ ಕುಗ್ಗದಿರಲೆಂದು ರಾಜ ‘ನಿದ್ದೆ’ ಯಿಂದ ಎದ್ದು ಆ ಮಾತನ್ನು ಬೆಳೆಯದಂತೆ ಮಾಡಿದ್ದ. ಹೌದು ರೋಹಿಣಿ ರಾಜಕುಮಾರಿಯೆ........ತಾನು ಬಡಹುಡುಗ. ಆದರೆ ಅವಳಿಗೂ ಹೃದಯವಿಲ್ಲವೆ ? ಎಂಬ ವಿಚಾರ ತಲೆಯಲ್ಲಿ ಬಂದರೂ ತನ್ನ ಮುಂದಿದ್ದ ಪರೀಕ್ಷೆಯ ವಿಷಯ ಈ ‘ ಸಣ್ಣ ’ ವಿಷಯಕ್ಕೆ ಅವಕಾಶ ಕೊಡಲಿಲ್ಲ. ಬೇಗ ಬೇಗ ನಡೆದು

ವೆಂಕಟೇಶನ ಮನೆಗೆ ಬರುವಾಗ್ಗೆ ಅವನು ಬಟ್ಟೆಯನ್ನು ಹಾಕಿಕೊಂಡು ಸಿದ್ಧವಾಗಿದ್ದ.

"ಅಲ್ಲಯ್ಯಾ ೪ ಗಂಟೆಗೆ ಬರ್‍ತೀನಿ ಅಂದೋನು 5¼ ಗಂಟೆಗೆ ಆದ್ರೂ ಬಂದ್ದೀಯಲ್ಲ" ಎಂದು ನಗುತ್ತಾ ವೆಂಕಟೇಶ ಮನೆಯ ಒಳಕ್ಕೆ ಕರೆದು ಕೊಂಡುಹೋದ.

"ಒಂದು ಸ್ವಲ್ಪಹಾಗೆ ಮಲಗಿಕೊಂಡೆ....ಎದ್ದಾಗ್ಲೆ ಜ್ಞಾಪಕ" ಎಂದ ರಾಜ. ಕೊಠಡಿಯಲ್ಲಿ ಕುಳಿತುಕೊಂಡು ವಾರಪತ್ರಿಕೆಯೊಂದನ್ನು ತಿರುವಿ ಹಾಕುವ ಹೊತ್ತಿಗೆ ವೆಂಕಟೇಶ ತನ್ನ ತಂಗಿಗೆ ಏನನ್ನೋ ಹೇಳುತ್ತಿದ್ದ.

"ಬೇಡ ವೆಂಕಟೇಶ, ತಿಂಡಿ ಆಗಿದೆ."

"ಬರೀ ಕಾಫಿನಯ್ಯ."

"ಬೇಡಯ್ಯ ಈಗ್ತಾನೆ ಆಯ್ತು."

ವೆಂಕಟೇಶನ ತಂಗಿ ಗಿರಿಜೆ ಆಗಲೆ ಎರಡು ಲೋಟ ಕಾಫಿಯನ್ನು ತಂದಿದ್ದಳು. ಕಾಫಿಯನ್ನು ಕುಡಿದು ಎಷ್ಟೋ ಜನರಿಗೆ ವಿಹಾರಸ್ಥಳವಾಗಿದ್ದ ಕುಕ್ಕನಹಳ್ಳಿ ಕೆರೆಯಕಡೆ ನಡೆದರು. ನಡೆದು ಬಂದು ಒಂದು ಕಲ್ಲುಬಂಡೆಯ ಮೇಲೆ ಕುಳಿತರು. ದಾರಿಯಲ್ಲಿ ವೆಂಕಟೇಶ ಪರೀಕ್ಷೆಗೆ ಸಂಬಂಧಿಸಿದ ವಿಷಯ ಮಾತನಾಡಿದಾಗಲೆಲ್ಲಾ ರಾಜ ಬೇಜಾರನ್ನು ಸೂಚಿಸಿದ್ದ. ಅವನು ಯಾವ ಯೋಚನೆಯಲ್ಲಿ ಮುಳುಗಿದ್ದಾನೆಂಬ ವೆಂಕಟೇಶನಿಗೆ ತಿಳಿಯಲಿಲ್ಲ. ಸ್ವಂತ ವಿಷಯಗಳನ್ನೆಲ್ಲಾ ಮುಚ್ಚುಮರೆಯಿಲ್ಲದೆ ಹೇಳಿಕೊಳ್ಳುತ್ತಿದ್ದ ಆಪ್ತಸ್ನೇಹ ಅವರದು.

'ಏಕೆ ರಾಜ ಮಂಕಾಗಿದ್ದೀಯಲ್ಲೋ?' ಎಂದು ವೆಂಕಟೇಶ ಮಾತನ್ನು ಪ್ರಾರಂಭಿಸಿದ.

'ಇಲ್ಲಪ್ಪ! ಸರಿಯಾಗಿದ್ದೇನೆ.'

'ಓದಿ ಓದಿ ಹಾಗಾಗಿರಬೇಕು.'

'ಪುಸ್ತಕಾನೇ ಹಿಡಿದಿಲ್ಲ ನೀನೊಬ್ಬ?'

'ಮನೇಲಿ ಇನ್ನೇನಾದ್ರೂ ನಡೀತೇನೋ?'

'ಇಲ್ಲ....ನಮ್ಮ ಮಾವ ಬಂದಿದ್ದಾರೆ.

'ಸುಬ್ಬಣ್ಣೋರೆ? ಬಹಳ ಒಳ್ಳೆಯವರಯ್ಯ ಎಂತಹ ಅನುಭವ ಅವರದು.'

‘ ಭತ್ತ ತುಂಬ್ರು....ಒಂದೆರಡು ದಿನ ಇರ್ತಾರೆ.’

‘ ಅವರನ್ನು ನೋಡಬೇಕಿತ್ತು..........ಹೋಗ್ಲಿ ನಿಮ್ಮ ಹಳ್ಳಿಗೆ ಹೋದಾಗ ಎಷ್ಟು ಉಪಚಾರನೋ..?

" ................................... "

" ರಾಜ, ಮದ್ವೆ ವಿಷಯ ಬಂತೇ ?"

" ಹೋಗ್ಲಿಬಿಡು ವೆಂಕಟೇಶ .... ಇನ್ನು ಪರೀಕ್ಷೆ ವಿಷಯ ಮಾತ ನಾಡೋಣ. "

" ಎಂತಹ ಪರೀಕ್ಷೆನೋ........ಹೋಗ್ಲಿ ಬೇರೆ ಮದ್ವೆ ಪ್ರಸಂಗವೇ ನಾದ್ರೂ "

" ಅಲ್ಲಿವಗೂ - ಬಂದಿಲ್ಲ. "

" ನಿಮ್ಮ ಮಾವನಿಗೆ ರೋಹಿಣಿ ವಿಷಯ ತಿಳಿಸಿಬಿಡೋ.... ಹೂಂ ! ಅಂತಾರೆ. "

" ನನಗೇನೋ ತುಂಬಾ ಯೋಚನೆಯಪ್ಪಾ. "

" ಅದಕ್ಕೆ ಯೋಚನೆ ಏನೂ ? "

" ರೋಹಿಣಿಯೊಡನೆ ಮದುವೆಗೆಲ್ಲ....ನಮ್ಮಗೌರಿ, ನಮ್ಮ ತಾಯಿಯ ವಿಷಯ. "

ತಮಾಷೆಯಾಗಿ ಮಾತನಾಡುತ್ತಿದ್ದ ವೆಂಕಟೇಶ ಸುಮ್ಮನಾದ. ಮುಂದಾಲೋಚನೆ ಮಾಡಿದ್ದ ರಾಜನನ್ನು ಮೆಚ್ಚಿದ.

" ಹೌದು, ಅದನ್ನು ನೀನೇ ನಿರ್ಧರಿಸಬೇಕು. ರೋಹಿಣಿ ನಿಮ್ಮ ತಾಯಿಗೆ ಸರಿಯಾದ ಸೊಸೆಯಾಗ್ತಾಳೆ ಎಂದು. "

" ನೀನೇನು ಹೇಳ್ತಿ ವೆಂಕಟೇಶ ? "

" ನಿನಗೆ ಇಷ್ಟವಿದ್ದರೆ ಮದುವೆಯಾಗು—ಜೊತೆಗೆ ನಿನ್ನ ಸ್ವಂತ ಸುಖ ವಲ್ಲದೆ ಇತರ ಕಷ್ಟಸುಖ ಬೇಕೆಂದರೆ.... "

" ಸರಿಯಾಗಿ ಯೋಚನೆಮಾಡು ಅಂತೀಯೇನು ? "

" ಹೌದಪ್ಪಾ ! ಇದು ಚರ್ಚೆಯ ವಿಷಯವಲ್ಲ....ಪರೀಕ್ಷೆಯಾದನಂತರ ನಿರ್ಧರಿಸುವಂತೆ ಬಿಡು "

" ನಿನ್ನ ಅಭಿಪ್ರಾಯ ಏನಯ್ಯಾ ಅಂತ ಕೇಳಿದ್ರೆ ವೇದಾಂತ ಷುರು ಮಾಡ್ದೆ. "

" ನಿನ್ನ ವಿಷಯದಲ್ಲಿ ನನ್ನ ಅಭಿಪ್ರಾಯ ಹೇಳುವಂತಿಲ್ಲ....ಈಗ ನನ್ನ ತಂಗಿ ಗಿರಿಜೆಯ ವಿಷಯ ನೋಡು. "

" ಮದ್ವೆ ಗೊತ್ತಾಯ್ತೇನೋ ? "

" ನಮ್ಮಪ್ಪ ದೊಡ್ಡ ಕಡೆ ಅಂತ ಹಾರಾಡೋದು ಬಿಟ್ಟಾಗ್ಲೇ ಗೊತ್ತಾಗೋದು. "

' ಗೌರಿಗೆ ತುಂಬ ಹೊಂದಿಬಿಟ್ಟಿದ್ದಾಳೆ ಗಿರಿಜ. '

' ಅದೆಲ್ಲಾ ಒಂದು ವಯಸ್ಸು ನೋಡು.... ನಾವು ಹೀಗಿರಬೇಕು, ಹೀಗಾಗ್ಬೇಕು ಅನ್ನೋ ವಯಸ್ಸು....ಹೀಗಾಗಬೇಕಿತ್ತು, ಹೀಗಾಯ್ತು ಎನ್ನುವ್ರು ದನ್ನು ನಂಬುವದಿಲ್ಲ. ಆದ್ರೆ ಒಂದಲ್ಲ ಒಂದು ದಿನ ಈ ಸೂತ್ರವೇದ್ಯವಾಗುತ್ತೆ."

" ಎಂತಹ ಮಾತೋ ವೆಂಕಟೇಶ ? "

ಕತ್ತಲಾಗುತ್ತಾ ಬಂದುದರಿಂದ ಸ್ನೇಹಿತರು ಮನೆಯಕಡೆ ಹೊರಟರು. ರಾಜ ತಮ್ಮ ಮನೆಯಿದ್ದ ಬೀದಿಯ ಹತ್ತಿರ ಬರುವ ವೇಳೆಗೆ ರೋಹಿಣಿಯವರ ಕಾರು ಎದುರಿಗೆ ಸಿಕ್ಕಿತು. ಒಳಗೆ ರೋಹಿಣಿ ಮತ್ತು ಇನ್ನೊಬ್ಬಳು—ಗಿರಿಜೆಯಿರಬೇಕು ಕುಳಿತಿದ್ದರು. ಜೊತೆಯಲ್ಲಿ ಸ್ನೇಹಿತೆ ಬೇರೆ ಇದ್ದಾಳೆ, ಹೇಗೆ ಮಾತನಾಡಿಸುವುದು ಎಂದೋ ಏನೋ ರೋಹಿಣಿ ರಾಜನನ್ನು ಮಾತನಾಡಿಸಲಿಲ್ಲ.

ಆ ರಾತ್ರಿಯನ್ನು ರಾಜ ಹೇಗೆ ಕಳೆದನೋ—ಕಮಲಮ್ಮ ರಾತ್ರಿ ಒಂದು ಹೊತ್ತಿನಲ್ಲಿ ಮಲಗಿಕೊಳ್ಳುವಂತೆ ಹೇಳಿದಳು. ಅಂತೂ ಬೆಳಿಗ್ಗೆ ಕಾಫಿಯನ್ನು ಕಮಲಮ್ಮ ತೆಗೆದುಕೊಂಡು ಹೋದಾಗ ಅವನಿನ್ನೂ ಮಲಗಿದ್ದ. ಎಬ್ಬಿಸಿದ ಮೇಲೆ ಬೇಗ ಮುಖವನ್ನು ತೊಳೆದುಕೊಂಡು ಬಂದು ಕಾಫಿಯನ್ನು ಹೀರಿದ. ಕಮಲಮ್ಮ ಲೋಟವನ್ನು ತೆಗೆದುಕೊಂಡು ಹೋದಳು.

ರಾಜ ಬೇಗಬೇಗ ಪಾಠದ ಬಹು ಮುಖ್ಯ ಭಾಗಗಳನ್ನು ತಿರುವಿ ಹಾಕಲು ಪ್ರಾರಂಭಿಸಿದ. ಆಗಾಗ್ಲೆ ೮ ಗಂಟೆಯಾಗಿತ್ತು. ಇನ್ನೊಂದು ಗಂಟೆಗೆಲ್ಲಾ ಊಟಮಾಡಿ ಹೊರಟುಬಿಡಬೇಕು. ಪಕ್ಕದ ಕೋಣೆಯಲ್ಲಿ ಗೌರಿಯೊಡನೆ ಇನ್ಯಾರೋ ಮಾತನಾಡುತ್ತಿದ್ದುದು ಕೇಳಿಸಿತು. ಕಮಲಮ್ಮನಿರ

ಬಹುದೆ ಎಂದುಕೊಂಡ. ಅವಳಲ್ಲದೆ ಮಾತಿನಿಂದ ಗಿರಿಜೆ ಎಂದು ತಿಳಿಯಿತು. ಅವಳು ರೋಹಿಣಿಯ ವಿಷಯವನ್ನು ಮಾತನಾಡುತ್ತಿರಬಹುದೆಂದು ಹೆಚ್ಚು ಗಮನದಿಂದ ಕೇಳತೊಡಗಿದ. ಮಾತು ಅಸ್ಪಷ್ಟವಾಗಿ ಕೇಳಿಸಿದರೂ ಮುಖ್ಯ ಅಂಶ ತಿಳಿಯಿತು. “ಪಾಪ! ರೋಹಿಣಿ ನನಗಾಗಿ ಏಕೆ ಮರುಗಬೇಕು! ಅವಳ ತಂದೆಯ ಇಷ್ಟದಂತೆ ನಡೆಯಬಾರದೇಕೆ? ಅವಳಿಗಲ್ಲದೆ ತನಗೂ ಕ್ಷೇಮ. ಆದರೆ ಗೌರಿ ತನ್ನ ಹಿತಕ್ಕಾಗಿ ಎಷ್ಟು ಒದ್ದಾಡುತ್ತಾಳೆ” ಎಂಬ ವಿಚಾರಗಳಿಗೆ ಗಮನಕೊಡದೆ ಓದುವುದಕ್ಕೆ ಪ್ರಯತ್ನಪಟ್ಟ. ಸ್ವಲ್ಪ ಹೊತ್ತಿ ನಂತರ ಕಿಟಕಿಯಲ್ಲಿ ನೋಡಿದಾಗ ದೂರದಲ್ಲಿ ಗಿರಿಜೆ ತಮ್ಮ ಮನೆಯಿಂದ ಹಿಂದಿರುಗಿ ಹೋಗುತ್ತಿದ್ದುದು ಕಾಣಿಸಿತಲ್ಲದೆ ಗೌರಿಯ ಕೋಣೆ ಮತ್ತೆ ನಿಶ್ಶಬ್ದವಾಗಿತ್ತು.

೬

ತಾನು ತಿಳಿದಿದ್ದಂತೆ ರೋಹಿಣಿಗೆ ತಕ್ಕ ವರನನ್ನು ಹುಡುಕುವ ಕೆಲಸ ಅಷ್ಟು ಸುಲಭವಲ್ಲವೆಂದು ಆನಂದರಾಯರಿಗೆ ಕ್ರಮೇಣ ಅರ್ಥವಾಗುತ್ತಾ ಬಂತು. ತಮ್ಮ ಅಂತಸ್ತಿಗೆ ತಕ್ಕ ಕಡೆ ಎಂದು ನೋಡಿದರೆ ವರ ಶುದ್ಧ ಕುಂಬಳ ಕಾಯಿ ಇಲ್ಲವೆ ಅತಿ ಜಂಭದ ಕೋಳಿ ಆಗಿರುತ್ತಿದ್ದ. ಬುದ್ಧಿವಂತನೆಂದು ಆರಿಸಿದರೆ ತಮ್ಮ 'ಅಂತಸ್ತಿಗೆ ಧಕ್ಕೆ ತಗಲುತ್ತಿತ್ತು. ಅವರಿಗೆ ಎರಡೂ ಮುಖ್ಯ; ಅಂತಸ್ತೂ ಬೇಕು, ಬುದ್ಧಿಯೂ ಬೇಕು. ಆ ತಕ್ಕ ವರನನ್ನು ಬ್ರಹ್ಮ ನಿರ್ಮಾಣಮಾಡಿರಲಿಲ್ಲವೇನೋ. ಅಂತೂ ಆ ಆಸೆ ಮಾಸಿ ಹೋಗುತ್ತಾ ಬಂತು. ಹಾಗೆಂದು ಸುಮ್ಮನೆ ಕುಳಿತರೆಂದಲ್ಲ. ವರಾನ್ವೇಷಣವೇನೋ ನಡೆಯುತ್ತಲೇ ಇತ್ತು.

ಈ ಮಧ್ಯೆ ಸುಂದರಮ್ಮ ತನ್ನ ಚುರುಕು ಬುದ್ಧಿಯನ್ನು ಉಪಯೋಗಿಸಿದ್ದಳು. ರೋಹಿಣಿಗೆ ದಿನವಹಿ ವಿಶ್ವನಾಥ ವಿಷಯವನ್ನು ಹೇಳುವುದು, ಜೊತೆಗೆ ಆನಂದರಾಯರ ಕಿವಿಯಲ್ಲಿ 'ಊದು'ತ್ತಿದ್ದಳು. ಅವಳಿಗೆ ಇನ್ನೊಂದು ಹೆಮ್ಮೆ ಏನೆಂದರೆ ಕೊನೆಗೂ ತನ್ನ ತಮ್ಮ ನಾಲ್ಕು ಸಾರಿ ಫೇಲಾದ ಮೇಲೆ ಡಾಕ್ಟರ್ ಪರೀಕ್ಷೆ ಪಾಸುಮಾಡಿಬಿಟ್ಟನೆಂದು. ಅದೇನೂ ಹೆಚ್ಚಿನ ವಿಷಯವಲ್ಲದಿದ್ದರೂ ಸುಂದರಮ್ಮನಿಗೆ ಹಾಗಂದಿದ್ದರೆ ಆ ಮಾತೇ ಬೇರೆ.

ಇದ್ದಕ್ಕಿದ್ದಂತೆ ಒಂದು ದಿನ ವಿಶ್ವನಾಥ ಟ್ರಂಕು, ಹಾಸಿಗೆ ಸಮೇತ ಮೈಸೂರಿಗೆ ಬಂದೇಬಿಟ್ಟ. ಆನಂದರಾಯರು ಆಶ್ಚರ್ಯದಿಂದ ಕೇಳುವಾಗ್ಗೆ "ಮೊನ್ನೆ ಕಾಗದ ಬರೆಸಿದೆ. ಅವನಿಗೆ ಹೇಗಿದ್ರೂ ರಜ ಬಂದಿದೆ" ಎಂದಳು ಸುಂದರಮ್ಮ. ಆ ವಿಷಯವನ್ನು ದೊಡ್ಡದುಮಾಡದೆ ಸುಮ್ಮನಾದದ್ದನ್ನು ನೋಡಿ ಅವರು ಈ ಏರ್ಪಾಡಿಗೆ ಒಪ್ಪಿರಬೇಕು ಎಂದು ಸುಂದರಮ್ಮ ತಿಳಿದು ಕೊಂಡಳು. ವಿಶ್ವನಾಥ ಮೈಸೂರಿಗೆ ಬಂದು ತಮ್ಮ ಮನೆಯಲ್ಲೇ ಇದ್ದುದು ರೋಹಿಣಿಗೆ ಇಷ್ಟವಿಲ್ಲದಿದ್ದರೂ 'ಅವನ ಪಾಡಿಗೆ ಅವನಿರಲಿ' ಎಂದು ಕೊಂಡಳು. ಮೇಲೆ ಮೇಲೆ ಮಾತನಾಡಿಸಿಕೊಂಡು ಬಂದರೆ ಒಂದೆರಡು ಮಾತನಾಡುವಳು. ಅವನಿಗೆ ಅದೇ ಸಂತೋಷ. ರೋಹಿಣಿಯ ಪರೀಕ್ಷೆ ಮುಗಿದು ರಜ ಬಂದಿತ್ತು. ಆನಂದರಾಯರಿಗೂ ವರಗಳನ್ನು ಶೋಧಿಸಿ ಸಾಕಾಗಿತ್ತು. ಇದೇ ಸಮಯ ಎಂದು ಕಾದಿದ್ದ ಸುಂದರಮ್ಮ ಒಂದು ಮಧ್ಯಾನ್ಹ

"ಹುಡುಕಿ ಹುಡುಕಿ ಸಾಕಾಗಿದ್ದೀರಿ, ಎಷ್ಟು ದಿವಸ ಅಂತ ಬೆಳದ ಹುಡ್ಗೀನ ಮನೇಲಿಟ್ಟುಕೊಂಡಿರ್ತೀರಿ?" ಎಂದು ಆರಂಭಮಾಡಿಯೇಬಿಟ್ಟಳು.

"ಏನು ಮಾಡು ಅಂತಿ....ನಾನು ಮಾಡ್ತಿರೋ ಪ್ರಯತ್ನ ನೋಡಿದ್ದೀ ಯಲ್ಲ"

"ವೃಥಾ ಮಾಡುತ್ತಿದ್ದೀರಿ. ಏನೋ ಹೇಳ್ತಾರಲ್ಲ ಬೆಣ್ಣೆ ಇಟ್ಟು ಕೊಂಡು ತುಪ್ಪಕ್ಕೆ ಅತ್ತರೂ ಅಂತ, ಹಾಗೆ."

"ಸರಿಯಾಗಿ ಹೇಳೇ ಸಾಕು."

"ವಿಶ್ವನಾಥನನ್ನು ಯಾತಕ್ಕೇ ಅಂದ್ರೆ ಕರೆಸಿರೋದು....ನಿಶ್ಚಯ ಮಾಡಿಬಿಡಿ...."

ಇರಲಿ ಎಂದುಕೊಂಡು ಆನಂದರಾಯರಿಗೆ ಸುಂದರಮ್ಮನ ಪಿತೂರಿ ಅರ್ಥ ವಾಯ್ತು. ಮೊದಲು ಸಮ್ಮತಿಸದಿದ್ದರೂ ಏಕೆ ಆಗಬಾರದು ಎನಿಸಿತು.ಆದರೂ

"ಅದು ಹೇಗೆ ಸಾಧ್ಯ ?" ಎಂದರು.

"ನೀವು ಹೀಗೇನೆ. ಇದು ಹೇಗೆ ಸಾಧ್ಯ ಅಂತ ವರಗಳನ್ನು ಹುಡುಕಿ ದರೆ ಸಿಗುತ್ತವೆಯೆ ? ಯಾವುದೋ—ಪಾಲಿಗೆ ಬಂದದ್ದು ಪಂಚಾಮೃತ ವೆಂದು ಇರಬಾರದೆ ?"

" ರೋಹಿಣಿ ಏನಂತಾಳೋ ಏನೋ ? "

" ಅವಳು ಹೇಗಾದ್ರೂ ಇರಲಿ....ಮದ್ವೆಮಾಡಿಕೊಳ್ಳುವರಿಗಿಂತ ನೀವೇ ಹೆಚ್ಚಾಗಿ ಕುಣೀತೀದ್ದೀರಿ."

ಸುಂದರಮ್ಮನ ಮಾತಿನ ಜಡಿಮಳೆಯಿಂದ ಕೊಚ್ಚಿಹೋದ ಆನಂದ ರಾಯರೂ " ಆಗ್ಲಿ ಅವಳನ್ನೂ ಕೇಳಿ ನೋಡ್ತೀನಿ " ಎಂದು ಸುಮ್ಮನಾದರು. ಏನಾದರಾಗಲಿ–ಸಧ್ಯ ಒಪ್ಪಿದರಲ್ಲ ಎಂದು ಸುಂದರಮ್ಮ ಸಂತೋಷಭರಿತ ಳಾದಳು. ಸುಂದರಮ್ಮ ಅಲ್ಲಿಂದ ಎದ್ದು ನೇರವಾಗಿ ವಿಶ್ವನಾಥನ ಕೋಣೆಗೆ ಬಂದುಬಿಟ್ಟಳು.

ಆನಂದರಾಯರು ವಿಷಯವನ್ನು ಅವಲೋಕಿಸುತ್ತಿದ್ದರು. ಬಹಳ ಯೋಚಿಸಿದ ಮೇಲೆ ಅವಳ ಇಷ್ಟ ಮುಖ್ಯ. ವಿಶ್ವನಾಥನನ್ನು ಒಪ್ಪಿದರೆ ಬೇಗ ಮದುವೆ ನಡೆಯಲಿ ಅಂದುಕೊಂಡರು. ಅಡಿಗೆಯವನು ಕಾಫಿ ತಿಂಡಿ ತೆಗೆದು ಕೊಂಡು ಬಂದಾಗ ರೋಹಿಣಿ ತಂದೆಯ ಹತ್ತಿರ ಕುಳಿತಿದ್ದಳು. ಅವಳೊಡನೆ ಉಪಹಾರ ತೆಗೆದುಕೊಂಡ ಮೇಲೆ " ಯಾವುದಾದರೂ ಚಲಚಿತ್ರಕ್ಕೆ ಹೊಗೋಣ ನಡಿ ರೋಹಿಣಿ ' ಎಂದು ಆನಂದರಾಯರು ಹೇಳಿದಾಗ ಅವಳಿಗೆ ಆಶ್ಚರ್ಯವಾಗಲಿಲ್ಲ. ಅವರು ಹಾಗೇನೆ ಬೇಜಾರಾದಾಗಲೆಲ್ಲ ಮಗಳೊಡನೆ ಸಿನಿಮಾಕ್ಕೆ ಹೋಗುವರು. ಆದರೆ ರೋಹಿಣಿಗೆ ಬೇಡವಾಗಿತ್ತು ಎಂದು ತೋರುತ್ತದೆ.–''ಇವತ್ತು ಬೇಡ ಅಣ್ಣ....ಇನ್ನೊಂದು ದಿನ" ಅಂದಳು. ಬಳಸಿ ಹೇಳುವುದು ಬೇಡವೆಂದು " ನಿನ್ನ ಹತ್ತಿರ ಮಾತನಾಡಬೇಕು....ಹಾಗೆ ಕಾರಿ ನಲ್ಲಿ ಹೋಗಿಬರೋಣ ಬಾ !'' ಎಂದರು. ರೋಹಿಣಿಗೆ ಮೊದಲು ಅಂತಹ ಮಾತೇನು ಎಂದು ಆಶ್ಚರ್ಯವಾದರೂ, ಅದೇ ಮದುವೆಯ ವಿಷಯ ಎಂದು ಊಹಿಸುವದು ಕಷ್ಟವಾಗಲಿಲ್ಲ. ರಾಜನ ವಿಷಯವನ್ನು ಸೂಚಿಸಲು ಸಮಯ ಸಿಗಬಹುದೆಂದುಕೊಂಡು ತಂದೆಯೊಡನೆ ಕಾರಿನಲ್ಲಿ ಹೋದಳು. ನಿಷಾದ್ ಬಾಗಿನ ಬಳಿ ಬಂದು ಹಸರು ಹುಲ್ಲಿನ ಮೇಲೆ ಕುಳಿತರು. ಅವಳ ವಿದ್ಯಾ ಭ್ಯಾಸ, ತಾಯಿಯ ನೆನಪುಂಟುಮಾಡಿ ವಿಶ್ವನಾಥನ ವಿಷಯ ಹೇಳುತ್ತಾ ಅವಳ ಮದುವೆಯ ವಿಷಯಕ್ಕೆ ಪೀಠಿಕೆ ಹಾಕಿದರು. ರೋಹಿಣಿ ಕುತೂಹಲ ದಿಂದಿದ್ದಳು.

" ಅವಳು ನಿನ್ನನ್ನು ವಿಶ್ವನಾಥನಿಗೇಕೆ ಕೊಡಬಾರದೆಂದು ಹೇಳ್ತಾಳೆ" ಎಂದು ಆನಂದರಾಯರು ಒಂದು ಬಾಂಬನ್ನೇ ಎಸೆದರು. ರೋಹಿಣಿ ಆನಂದ ರಾಯರ ಕಡೆ ತೀಕ್ಷ್ಣದೃಷ್ಟಿಯಿಂದ ನೋಡಿದಳು ಅಷ್ಟೆ!

" ಆದ್ರೆ ನನಗೆ ಮಾತ್ರ ಇಷ್ಟವಿಲ್ಲ ನೋಡು. ನಿನ್ನ ಅಭಿಪ್ರಾಯ ತಿಳಿದು ಕೊಂಡು —" ಎಂದು ಮತ್ತೆ ಮಾತಿಗೆ ಆರಂಭಿಸಿದರು.

" ಅಣ್ಣಾ ನನಗೆ ಮದುವೇನೆ ಬೇಡ....ಈ ಸಂಬಂಧ ಬೇಡ" ಎಂದು ಕಣ್ಣೀರಿಟ್ಟಳು.

" ನಿನಗೆ ಇಷ್ಟವಿಲ್ಲದಿದ್ದರೆ ಬಿಡು....ನಿನಗೆ ಇಷ್ಟವಿಲ್ಲದವನೊಡನೆ ಮದುವೆ ಹೇಗೆ ಸಾಧ್ಯ ?" ಎಂದರು.

ರೋಹಿಣಿಯ ಮುಖದಲ್ಲಿ ಸಂತೋಷದ ರೇಖೆ ಸುಳಿಯಿತು. ರಾಜನ ವಿಷಯ ತಿಳಿಸೋಣವೆಂದು ಹವಣಿಸುವಲ್ಲಿ ಆನಂದರಾಯರೆ ' ಇನ್ನೇನೋ ಸಮಾಚಾರ ಕೇಳಿದೆ ' ಎಂದು ಅನುಮಾನದಲ್ಲಿ ಕೆಡವಿದರು.

" ಏನಣ್ಣಾ ? "

" ನೀನು ನಾಗರಾಜ...."

" ಥೂ ಹೋಗಣ್ಣಾ."

" ಗಿರಿಜೆ ಎಲ್ಲಾ ನನಗೆ ಹೇಳಿದಳು."

" ಎಲ್ಲಾ ಸುಳ್ಳು ಹೇಳಿದ್ದಾಳೆ."

" ಹಾಗಾದರೆ ನಾಗರಾಜನನ್ನು ಕಂಡರೆ ಇಷ್ಟವಿಲ್ಲವೆ ? "

ರೋಹಿಣಿ, ನಾಚಿಕೆಯಿಂದ ಮುಖವೆಲ್ಲಾ ಕೆಂಪೇರಿ ತಲೆತಗ್ಗಿಸಿದಳು.

" ಆದರೆ ಒಂದು ವಿಷಯ ನೋಡು....ಇವತ್ತೇನೋ ಸರಿ. ನಾಗ ರಾಜನೂ ಬುದ್ಧಿವಂತ, ರೂಪವಂತ; ಆದರೆ ಅವನಿಗೇನೂ ಗತಿಯಿಲ್ಲ.... ನೀನು ಬಾಳಬೇಕೆನ್ನುವ ಹಾಗೆ ಸಾಧ್ಯವೆ" ಎಂದು ಒಂದೇ ಉಸುರಿನಲ್ಲಿ ಹೇಳಿದರು.

ರೋಹಿಣಿ " ಬಡತನವೇ ಒಂದು ಕುಂದಾದರೆ ಬಾಳುವುದೇ ಕಷ್ಟ" ಎಂದುಬಿಟ್ಟಳು. ರೋಹಿಣಿಯ ಆ ಮಾತಿನಿಂದ ಆನಂದರಾಯರ ಪ್ರಶ್ನೆಗಳಿಗೆಲ್ಲಾ ಉತ್ತರ ದೊರೆತಿತ್ತು. ಇನ್ಯಾವ ವಿಷಯವನ್ನೂ ಮಾತಾಡಲಿಲ್ಲ. ಪುನಃ ಕಾರಿನಲ್ಲಿ ಕುಳಿತು ಮನೆಯ ಕಡೆ ಹೊರಟರು. ಆನಂದರಾಯರಿಗೆ

ದಾರಿಯುದ್ದಕ್ಕೂ ಅದೇ ಯೋಚನೆ. ರೋಹಿಣಿ ಇದೇ ಹಟಹಿಡಿದಿದ್ದಾಳೆ. ಅವಳು ವಿಶ್ವನಾಥ ಎಂದು ಹಿಡಿದಿದ್ದಾಳೆ. ಹೇಗೆ ನಡೆದುಕೋಬೇಕೋ? ಮೇಲೆ ನಾಗರಾಜ ತಮ್ಮ ಅಂತಸ್ತಿಗೆ ತಕ್ಕವನೆ? ಕೊನೆಯ ಪ್ರಶ್ನೆ ತಾನಾಗಿಯೇ ಇಲ್ಲದಾಯಿತು. ನಾಗರಾಜನನ್ನು ತಮ್ಮ ಮನೆಯಲ್ಲೇ ಇರುವಂತೆ ಏರ್ಪಾಡುಮಾಡಿದರೆ ಸರಿ. ಇನ್ನು ಸುಂದರಮ್ಮನಿಗೆ ಸಮಾಧಾನ ಹೇಳುವುದು ಎಂದುಕೊಂಡರು. ಕಾರು ಪೋರ್ಟಿಕೋದಲ್ಲಿ ಬಂದು ನಿಂತಿತು. ಕಾರಿನಿಂದಿಳಿದು ರೋಹಿಣಿ ಮಹಡಿಯ ಮೇಲಿದ್ದ ತನ್ನ ಕೋಣೆಗೆ ಹೋದಳು. 'ಅವರು' ವಿಶ್ವನಾಥನನ್ನು ಮದುವೆಯಾಗಬೇಕೆಂದು ಬೋಧಿಸಿರಬೇಕು ಎಂದು ನಿರೀಕ್ಷಿಸಿದ್ದ ಸುಂದರಮ್ಮನಿಗೆ, ತನಗೆ ವಿಷಯವನ್ನು ತಿಳಿಸದೆ ತಮ್ಮ ಕೋಣೆಗೆ ಹೋದುದು ಅರ್ಥವಾಗಲಿಲ್ಲ.

## ೭

ಪರೀಕ್ಷೆ ಮುಗಿದ ಮಾರನೆಯ ದಿನ ಪ್ರಶ್ನೆ ಪತ್ರಿಕೆಗಳಿಗೆ ಚೆನ್ನಾಗಿಯೇ ಉತ್ತರ ಬರೆದಿದ್ದ ವಿದ್ಯಾರ್ಥಿಗಳಿಗೆ ತಲೆಯಮೇಲಿಂದ ದೊಡ್ಡ ಭಾರ ಇಳಿಸಿದಂತಾಗುತ್ತೆ. ಆಗಲೇ ಆರಂಭ; ಮುಂದೆ ಏನು ಮಾಡಬೇಕೆನ್ನುವ ಯೋಚನೆ. ನಾಗರಾಜ ಎಲ್ಲಾ ಪತ್ರಿಕೆಗಳಲ್ಲೂ ಚೆನ್ನಾಗಿ ಬರೆದಿದ್ದ. ಆದರೆ ರ್‍ಯಾಂಕು ಬರುತ್ತೆ ಎಂದು ಹೇಳುವಂತಿರಲಿಲ್ಲ. ಸದ್ಯ ಪಾಸಾದರೆ ಸಾಕು ಎಂದು ಕಮಲಮ್ಮ ಸಮಾಧಾನಮಾಡಿದಳು. ಅದು ಹೇಗೆ ಸಾಕು? ಮುಂದಕ್ಕೆ ಓದುವವರಿಗೆ ರ್‍ಯಾಂಕು ಬಂದರೆ ಎಷ್ಟು ಅನುಕೂಲ ನಿನಗೆ ತಿಳಿಯದಮ್ಮ ಎಂದು ಗೌರಿ ಹೇಳಲು "ನಾನೇನು ಬೇಡ ಎಂದೆನೆ. ಖಂಡಿತ ರ್‍ಯಾಂಕು ಬರಲಿ" ಎಂದು ಅಭಿಮಾನದಿಂದ ನುಡಿದಳು.

ಪೇಟೆಗೆ ಹೋಗಿದ್ದ ರಾಜ ಸುಬ್ಬಣ್ಣನೊಡನೆ ಮನೆಗೆ ಬಂದ. ಸಾಮಾನಿನ ಚೀಲವನ್ನು ಕಮಲಮ್ಮನ ಕೈಗೆ ಕೊಟ್ಟು ರಾಜ ತನ್ನ ಕೋಣೆಗೆ ಹೋದ. ಸುಬ್ಬಣ್ಣ ನೆಲದಮೇಲೆ ಹಾಸಿದ್ದ ಚಾಪೆಯ ಮೇಲೆ ಕುಳಿತುಕೊಂಡ. ಬಂದ ಕೆಲವು ದಿನಗಳಲ್ಲಿಯೇ ರೋಹಿಣಿಯ ವಿಷಯ ಸುಬ್ಬಣ್ಣನಿಗೆ ತಿಳಿಯಿತು. ರೋಹಿಣಿ ನಾಗರಾಜನಿಗೆ ತಕ್ಕ ವಧುವೆಂದು ಮೊದಲಿನ ಅಭಿಪ್ರಾಯವನ್ನು ಸುಬ್ಬಣ್ಣ ಬದಲಾಯಿಸಬೇಕಾಯ್ತು. ಆದರೆ ಅದೊಂದೇ ಯೋಚನೆ—ಮುಂದೆ ಈ ಸಂಬಂಧದಿಂದ ಕಮಲಮ್ಮ ಮತ್ತು ಗೌರಿಗೆ ಏನು

ಸಹಾಯ ಆಗುತ್ತೆ ಎಂದು. ಕಮಲಮ್ಮನಾಗಲೆ ಕೆಲಸವನ್ನೆಲ್ಲಾ ಮುಗಿಸಿ ಸುಬ್ಬಣ್ಣ ಬರುವುದನ್ನೇ ಎದುರು ನೋಡುತ್ತಿದ್ದಳು. ಗೌರಿ ಸರಸುವನ್ನು ತಟ್ಟಿ ಮಲಗಿಸಿ ತಾನೂ ಹಜಾರಕ್ಕೆ ಬಂದು ಸೇರಿದಳು. ಅದೇ ಮಾತು. ವಿಷಯ ರಾಜನ ಮದುವೆ. ಅವರಲ್ಲದೆ ಇನ್ಯಾರು ಮಾತನಾಡಿ ನಿರ್ಧರಿಸ ಬೇಕು ?

ಸುಬ್ಬಣ್ಣ ಹಾಗೆಯೇ ಹೇಳಿದ....ತನ್ನ ಒಪ್ಪಿಗೆಯಿದೆ. ಈ ಸಂಬಂಧ ದಿಂದ ರಾಜನ ಮುಂದಿನ ಓದಿಗೆ ಸಹಾಯವಲ್ಲದೆ ನಿಮಗೂ ದಿಕ್ಕಾಗಿರು ತ್ತಾನೆ ಎಂದು.

ಕಮಲಮ್ಮ ಸಂಬಂಧಪಟ್ಟ ವರೋಪಚಾರ, ವಧುವಿಗೆ ಕೊಡಬೇಕಾದ ವಡವೆ ಮತ್ತಿತರ ವಿಷಯಗಳನ್ನು ಚರ್ಚಿಸಿದಳು.

ಗೌರಿ ಮಾತ್ರ ಈ ಸಂಗತಿಗಳಿಂದ ದೂರ ಯೋಚಿಸಿ ಮಾತ ನಾಡಿದ್ದಳು.

"ರೋಹಿಣಿಯೇನೋ ಸರಿ. ಆದರೆ...." ಎಂದಳು ಗೌರಿ.

"ಆದರೇನು ಗೌರಿ...."

"ಇನ್ನೇನಮ್ಮ ಹೇಳಲಿ....ಮುಂದೆ ಈ ಸಂಬಂಧ ಹಳಸಬಾರದು."

"ನೀನು ಹೇಳುವುದು ತಿಳೀಲಿಲ್ಲ...."

"ಮುಂದೆ ಅವರು ಕಡೆಗಣ್ಣಿನಿಂದ ಅಲಕ್ಷಿಸಬಾರದೆಂದು."

"ಸರಿ ! ನಮ್ಮ ವಡವೆ ಸರಿಯಾಗಿದ್ರೆ....ಅಲ್ಲವೆ ಗೌರಿ...."

"ಅದು ನಿಜ ಅಮ್ಮ....ರಾಜನಿಗೂ ಉಭಯಸಂಕಟಕ್ಕಿಟ್ಟುಕೊಳ್ಳ ಬಾರದು."

"ಒಂದು ಪಕ್ಷ ಹಾಗಾದ್ರೆ ಏನು ಮಾಡೋದು....ಮುಖ್ಯವಾಗಿ ಅವನು ಸುಖವಾಗಿರಬೇಕು, ಅಷ್ಟೆ."

"ನೀನು ಹೇಳೋದೇನೋ ಸರಿ, ಕಮ್ಲು; ಆದ್ರೆ ಗೌರಿ ಯೋಚಿ ಸುವುದೂ ಒಂದು ರೀತಿ ನ್ಯಾಯವೆ" ಎಂದ ಸುಬ್ಬಣ್ಣ.

"ನನ್ನ ಮಾತೇನು ಬಿಡು, ಮಾವ."

"ಹಾಗುಂಟೆ ಗೌರಿ....ನೀನು ಹೇಳುವುದೇನು ಅಂತ ?"

"ಈ ಸಂಬಂಧನೇ ನಡಿಯಲಿ....ಆದ್ರೆ ಒಳ್ಳೆಯದನ್ನು ಮಾಡುವಾಗ್ಗೆ

ಕೆಟ್ಟದ್ದನ್ನೂ ಯೋಚಿಸಿಬಿಡೋದು ಒಳ್ಳೆಯದಲ್ಲವೆ ?"

"ಅದು ನಿಜ....ಮುಂದೆ ರೋಹಿಣಿಗೆ ನಮ್ಮ ಬಾಳು ಒಗ್ಗಿ ನಮ್ಮೊಡನೆ ಕಲೆತು ಇರಬಲ್ಲಳೆ" ಎಂದು ಯೋಚಿಸುತ್ತೀ ಅಲ್ಲವೆ ಗೌರಿ ?

"ಹೌದೋ ಅಲ್ಲವೋ ಹೇಳಿ ಮಾವ: ರೋಹಿಣಿ ಜಂಬದಮರಿಯಾಗಿ ನೆಚ್ಚಿದ ಎಮ್ಮೆ ಕೋಣವನ್ನು ಈದರೆ ? ಸಂಸಾರದಲ್ಲಿ ಒಡಕು ಹುಟ್ಟಿದರೇನು ಗತಿ ?" ಎಂದು ಗೌರಿ ಹೇಳಿದಳು.

"ರಾಜ ಅಂತಹ ಹುಡುಗನಲ್ಲ. ಆ ರೀತಿ ರೋಹಿಣಿ ಚಂಡಿಸಲಾರಳು" ಎಂದು ಕಮಲಮ್ಮ ಹೇಳುವ ಹೊತ್ತಿಗೆ ಆನಂದರಾಯರ ಮನೆಯಾಳು ಬಂದು ರಾಜನನ್ನು ಕೂಗಿದ. ರಾಜನ ಕೋಣೆಗೆ ಹೋಗಿ ಕೂಗೋಣವೆಂದು ಕಮಲಮ್ಮ ಏಳುವಷ್ಟರಲ್ಲಿ ರಾಜ ಬಂದ ಆಳಿನ ಜೊತೆಯಲ್ಲಿ ಆನಂದರಾಯರ ಮನೆಗೆ ಹೋದ.

"ಅವನಿಗೆ ಎಚ್ಚರವಾಗಿದ್ದು ನಾವು ಆಡುತ್ತಿದ್ದ ಮಾತು ಕೇಳಿಸಿರಬೇಕು" ಎಂದು ಹೇಳಿದ ಸುಬ್ಬಣ್ಣ.

"ನನ್ನ ನಾನು ಮಾತನಾಡಿದ್ದಕ್ಕೆ ಏನಂದುಕೊಳ್ಳುತ್ತಾನೋ" ಎಂದುಕೊಂಡಳು ಗೌರಿ.

ಕಮಲಮ್ಮ "ಬೇಗ ಮದುವೆ ನಿಶ್ಚಯವಾದರೆ ಸಾಕು" ಎಂದು ಹೇಳುತ್ತಾ ಅಡಿಗೆ ಮನೆಯ ಕಡೆ ಹೊರಟಳು.

ರೋಹಿಣಿಯ ಮನೆಗೆ ಬರುವುದರಲ್ಲಿ ಗೌರಿ ಆಡಿದ ಮಾತನ್ನು ರಾಜ ಯೋಚಿಸಿದ. ಹೌದು ! "ರೋಹಿಣಿ ಜಂಬದಮರಿಯಾಗಿ ನೆಚ್ಚಿದ ಎಮ್ಮೆ ಕೋಣವನ್ನು ಈದರೆ ? ಸಂಸಾರದಲ್ಲಿ ಒಡಕು ಹುಟ್ಟಿದರೇನು ಗತಿ ?"

ಎಲ್ಲವನ್ನೂ ಯೋಚಿಸಬೇಕಾಗಿದೆ ಈಗಿನ ತನ್ನ ಸ್ಥಿತಿ ನಾಲ್ಕು ಜನರ ಸಹಾಯದ ಜೊತೆಗೆ ತಾಯಿಯ ಹೆಚ್ಚಿನ ತ್ಯಾಗದ ಪರಿಣಾಮದಿಂದ ಆಗಿರುವುದಲ್ಲವೆ ? ಅದನ್ನೆಲ್ಲಾ ಮರೆತು "ಹೊಸ ನೀರು ಬಂದು ಹಳೆಯ ನೀರನ್ನು ಕೊಚ್ಚಿಕೊಂಡು ಹೋಗುವುದು" ಸರಿಯೆ ? ಹೆಚ್ಚಿಗೆ ಯೋಚಿಸುವಷ್ಟು ಕಾಲವಿರಲಿಲ್ಲ. ಗೇಟಿನ ಬಳಿ ಬರುವ ಹೊತ್ತಿಗೆ ಎಂದಿನಂತೆ ಜೂಲಿ ಬಾಲವನ್ನಾಡಿಸುತ್ತಾ ಓಡಿಬಂತು. ಪೋರ್ಟಿಕೋ ಹತ್ತಿರ ರೋಹಿಣಿ ನಿಂತಿದ್ದಳು. ತಿಳಿ ನೀಲಿಬಣ್ಣದ ಸೀರೆ ಉಟ್ಟು ಅಳ್ಳಕವಾಗಿ ಜಡೆಹಣೆದುಕೊಂಡು,

ಮಲ್ಲಿಗೆದಂಡೆಮುಡಿದಿದ್ದ ರೋಹಿಣಿ ಚೆಲುವಾಗಿ ಕಂಡಳು. ಮುಗುಳು ನಗೆಯಿಂದ 'ನೀವು ಮನೆಯಲ್ಲಿರುತ್ತೀರೋ ಇಲ್ಲವೋ ಎಂದುಕೊಂಡೆ' ಎಂದು ನುಡಿದು ರೋಹಿಣಿ ತನ್ನ ಕೋಣೆಗೆ ಕರೆದುಕೊಂಡುಹೋದಳು. ರಾಜನನ್ನು ಕುಳ್ಳಿರಿಸಿ ಹೋದವಳು ಪುನಃ ಅಡಿಗೆಯವನ ಜೊತೆಗೆ ತಿಂಡಿ ತೀರ್ಥಗಳೊಂದಿಗೆ ಬಂದಳು. ಒಡತಿಯ ಕಣ್ಣುಸನ್ನೆಯನ್ನು ಅರ್ಥಮಾಡಿಕೊಂಡು ಅಡಿಗೆಯವನು ಬಾಗಿಲನ್ನು ಹಾಕಿಕೊಂಡು ಹೊರಟ. ಕರವಸ್ತ್ರದಿಂದ ಹಣೆಯ ಮೇಲೆ ಮೂಡಿದ್ದ ಬೆವರುಹನಿಗಳನ್ನು ಒರಸಿಕೊಂಡು 'ಏನು ಬಿಸಿಲು' ಎಂದ ರಾಜ. ಬೋಂಡದ ತಟ್ಟೆಯನ್ನು ರಾಜನ ಕೈಗೆ ಕೊಟ್ಟು ಡಿಕಾಕ್ಷನ್ ಕಪ್ಪಿಗೆ ಸುರಿದು ಸಕ್ಕರೆ ಹಾಲನ್ನು ಬೆರಸಿಟ್ಟಳು ರೋಹಿಣಿ. ಇಬ್ಬರೂ ಫಲಹಾರ ತೆಗೆದುಕೊಂಡಮೇಲೆ 'ಏತಕ್ಕೆ ಹೇಳಿ ಕಳುಹಿಸಿದೆ. ರೋಹಿ ?'

'ಸುಮ್ಮನೆ........'

'ಸುಮ್ಮನೆ !....ಹಾಗಂದ್ರೆ'

'ಸುಮ್ಮನೆ ಬರಬಾರ್ದೇನು ನೀವು'

'ವಿಚಾರ ಏನು ಅಂತ ಹೇಳಬಾರ್ದೆ ರೋಹಿ?'

'ನಿಮ್ಮನ್ನ ಕೇಳ ಬಿಡೋಣ ಎಂದು........ನಾನು ಹೇಗೆ ನಡೆದುಕೋಬೇಕೋ ನೀವೆ ತಿಳಿಸಿ'

'ಹೇಳು ರೋಹಿ....ನನಗೆ ತೋರಿದ ನಾಲ್ಕು ಮಾತು ಹೇಳ್ತೀನೆ.'

'ಚಿಕ್ಕಮ್ಮ ಅಣ್ಣನನ್ನು ಒತ್ತಾಯ ಮಾಡುತ್ತಿದ್ದಾಳೆ. ಅವನೂ ಬಂದಿದ್ದಾನೆ' ಎಂದು ರೋಹಿಣಿ ಹೇಳಿದಾಗ ಖಿನ್ನಳಾಗಿದ್ದಳು.

ರಾಜನಿಗೆ ಗೊತ್ತಿತ್ತು; ಸುಂದರಮ್ಮ ಯಾವ ವಿಷಯವನ್ನು ಆನಂದರಾಯರಲ್ಲಿ ಒತ್ತಾಯ ಮಾಡುತ್ತಿದ್ದುದು, ಅಲ್ಲದೆ ಅವನು-ಅಂದರೆ ವಿಶ್ವನಾಥ ಬಂದಿದ್ದೂ ತಿಳಿದಿತ್ತು.

'ನಿನ್ನಿಷ್ಟ ತಿಳಿಸು ರೋಹಿ !'

'ಮತ್ತೆ ತಿಳಿಸಬೇಕೆ ?'

'ನಾನೂ ಅಷ್ಟೆ....'

ರೋಹಿಣಿಯ ಮುಖ ಅರಳಿತು. ರಾಜನಿಗೂ ಒಂದು ಸಮಾಧಾನವಾದಂತಾಯ್ತು. ಆ ಸಂತೋಷದ ಹಿಂದೆ ಇನ್ನೇನನ್ನೋ ಹೇಳಬೇಕೆಂದು ರೋಹಿಣಿ ಹವಣಿಸುತ್ತಿದ್ದಳು.

' ನಿಮ್ಮ ತಂದೆ ಏನಂತಾರೆ ರೋಹಿ ?'

' ಒಮ್ಮೆಶಃ ನನ್ನ ಇಷ್ಟದಂತೆ ಒಪ್ಪುತ್ತಾರೆ. '

' ನಿಮ್ಮ ಚಿಕ್ಕಮ್ಮ.... '

' ಬೇರೆ ಇನ್ನೇನು ಹೇಳ್ತಾಳು.... '

' ನೋಡು ರೋಹಿ ! ನಮ್ಮ ಮನೆಯ ಸಂಬಂಧ ನಿನಗೆ ಸರಿಹೋಗುವುದೆ? '

' ಏಕೆ ಹಾಗೆ ಅಂತೀರಿ ?'

' ನಿಮ್ಮ ಅಂತಸ್ತಿಗೆ ನಾವು ತೂಗಬಹುದೆ ?'

' ಅದನ್ನು ದಾಟಿದ್ದೇವೆ, ಅದನ್ನೇಕೆ ಯೋಚಿಸುತ್ತೀರಿ ?'

' ಮುಖ್ಯ ನಿಮ್ಮ ತಂದೆ ಹೇಳಿದಂತೆ ನಡೆಯುವುದು ನಿನ್ನ ಧರ್ಮ '

' ನನ್ನ ಹಿತವನ್ನು ಬಗೆದು ಅದರಂತೆ ನಡೆಯುವುದು ಅವರ ಧರ್ಮ ಅಲ್ಲವೆ ?'

' ಹೌದು....'

' ಅವರಿಗೆ ಸೂಕ್ಷ್ಮವಾಗಿ ಗೊತ್ತಾಗಿದೆ.'

' ಏನಂತ.... '

' ನನ್ನನ್ನು ಕಂಡರೆ ನಿಮಗೆ ತುಂಬಾ ಇಷ್ಟ ಎಂತ '

' ಅಥವಾ........ '

' ಆಗ್ಲಿ ಹಾಗೆಂತ ಇಟ್ಟುಕೊಳ್ಳಿ '

' ಏನಂದರು.... '

' ಏನೂ ಹೇಳಲಿಲ್ಲ....ನಿನ್ನಿಷ್ಟ ಎಂದರು ಅಷ್ಟೆ. '

' ಸರಿ ನಿನ್ನಿಷ್ಟ ' ಎಂದು ರಾಜ ನಗುತ್ತಾ ಹೇಳಿದ. ರೋಹಿಣಿಯೂ ಕಿಲಕಿಲನೆ ನಕ್ಕು ಅವನನ್ನು ನೋಡಿದಳು.

' ನಾವಿಬ್ಬರೇ ಹಕ್ಕಿಗಳಂತೆ ಬಾಳಬೇಕೆಂದಾಸೆ ' ಎಂದು ರೋಹಿಣಿ ಮಾತಿಗೆ ಆರಂಭಿಸಿದಳು.

' ನಾವಿಬ್ಬರೆ ?'

' ಹೌದು! ನಾವಿಬ್ಬರೇ ಇನ್ಯಾರ ಆತಂಕವೂ ಇಲ್ಲದೆ ಬಾಳಬೇಕು. '

' ಆಳು ಕಾಳುಗಳು ?'

'ಯಾರೂ ಬೇಡ.... ನನ್ನ ಮನೆಯ ಕೆಲಸ....ನನಗೆ ಮಾಡಲು ತುಂಬಾ ಆಶೆ. ನಾನೆ ಅಡಿಗೆ ಮಾಡಬೇಕು....ನನ್ನ ಪ್ರೇಮವನ್ನು ಕಸಿದು ಕೊಳ್ಳಲು ಇನ್ಯಾರೂ ಬೇಡ.'

'ಅಂದರೆ?'

'ನಾವಿಬ್ಬರೇ ಸಂಸಾರ ಮಾಡಬೇಕು.' ಪುನಃ ಅದೇ ಪಲ್ಲವಿ.

'ಅದು ಹೇಗೆ ಸಾಧ್ಯ' ಎಂದು ರಾಜ ನುಡಿದ. ರೋಹಿಣಿ ಮುಂದೆ ಮಾತನಾಡಲಿಲ್ಲ. ರೋಹಿಣಿಯ ಆಸೆ ಎಂತಹುದೆಂದು ಆ ಅಂತರದಲ್ಲಿ ಯೋಚಿಸಿದ. ಅವಳು ಆ ರೀತಿ ಆಸೆ ಪಟ್ಟಿದುದೇನೂ ಅತಿಶಯವಲ್ಲ....ಆದರೆ ತನ್ನ ವಿಚಾರದಲ್ಲಿ ಅದು ಸರಿಯಾಗಲಾರದು. ಕೊನೆಗೆ ತನ್ನ ತವರನ್ನೂ ಬಿಟ್ಟು ತನ್ನೊಡನೆ ಬರಲು ಸಿದ್ಧ. ಆದರೆ ತಾನು?

'ನಾನು ತುಂಬಾ ಸ್ವಾರ್ಥಿ ಎನ್ನುತ್ತೀರಾ' ಎಂದು ರೋಹಿಣಿ ಮೌನ ವನ್ನೊಡೆದಳು.

'ಹಾಗಲ್ಲ....ಅದು ನಡೆಯುಬಲ್ಲದೆ ಎಂದು'

'ಏಕಾಗಬಾರದು....'

'ಕೆಲವು ದಿನ ಹಾಗೆ ನಡೆಯುಬಹುದು....'

'ಅದೇಕೆ....'

'ಮಕ್ಕಳನ್ನು ನೋಡಿಕೊಳ್ಳಲು ದಾದಿಯೂ ಬೇಡವೆ?'

ರೋಹಿಣಿಗೆ ತುಂಬಾ ನಗು ಬಂದುಬಿಡ್ತು. ನಗುತ್ತಲೇ 'ದಾದಿಯೇನು ಬೇಡ....ನಾನೇ ನೋಡಿಕೋತೇನೆ' ಎಂದು ಹೇಳಿದಳು. ಅವಳಿಗೆ ಸಮಾಧಾನವಾಗಿರಬೇಕು. ಈಗಲೇ ಆ ವಿಷಯ ಚರ್ಚಿಸುವುದನ್ನು ಇಷ್ಟಪಡದೆ ಮಾತನ್ನು ನಗುವಿನ ಲಹರಿಗೆ ರಾಜ ತಿರುಗಿಸಿದ್ದ. ಅವಳ ಕೋಣೆಯಿಂದ ಹೊರಬಿದ್ದು ಮಹಡಿಯ ಮೆಟ್ಟಲನ್ನು ಇಳಿಯುತ್ತಾ ರೋಹಿಣಿಯನ್ನು ಮತ್ತೊಮ್ಮೆ ನೋಡಿದ. ರೋಹಿಣಿ ರಾಜನನ್ನು ನೋಡಿ ಒಮ್ಮೆ ನಕ್ಕಳು. ರಾಜ, ಹಜಾರದಿಂದ ಹೊರಕ್ಕೆ ಬರುವ ಹೊತ್ತಿಗೆ ಜೂಲಿ ಗೇಟಿನವರೆಗೂ ಬಂತು. ಬಹುಶಃ ಅದಕ್ಕೆ ಅದೇ ಅಭ್ಯಾಸವಿರಬೇಕು; ಬಂದವರ ಹಿಂದೆ ಗೇಟಿನಿಂದ ಮನೆಯವರೆಗೆ ಓಡಿ ಹಿಂತಿರುಗುವುದು ಪಾಪ!

## ೮

'ಚುರುಕು' ಬುದ್ಧಿಯಿಂದಲೂ ಮೋಸಹೋದಾಗ ಸುಂದರಮ್ಮನಿಗೆ ಹೇಗಾಗಿರಬೇಕು? ಸ್ವಲ್ಪದರಲ್ಲಿ ಮೋಸಹೋದೆನೆಂದು ನೊಂದಳು. ಅವಳು ಕುಣಿದ ಹಾಗೆ ಕುಣಿಯಬಹುದೆ ಎಂದು ಹಾರಿಹಾರಿ ಬಿದ್ದಳು. ತನ್ನ ತಮ್ಮನಿಗೆ ಅವಮಾನ ಮಾಡಿದ್ರಿ ಎಂದು ಅತ್ತಳು. ಇದಕ್ಕೆಲ್ಲ ಆನಂದ ರಾಯರು "ಅವಳ ಇಷ್ಟದಂತೆ ನಡೆಯುವುದು ನನ್ನ ಧರ್ಮ" ಎನ್ನುವರು. ತನ್ನ 'ಆಟ' ನಡೆಯುವುದಿಲ್ಲವೆಂದು ತಿಳಿದು ನಾಗರಾಜ ತನ್ನಲ್ಲದೆ ಕಮಲಮ್ಮ ಗೌರಿ ಎಲ್ಲರನ್ನೂ ಶಪಿಸಿದಳು. ರಾಜ ತಮ್ಮ ಮನೆಯಲ್ಲಿ ಅಷ್ಟು ಸಲಿಗೆಯಿಂದ ಓಡಾಡುತ್ತಿದ್ದುದೇ ಕಾರಣ ಎನ್ನಿಸಿತು. ಕೆಲವು ದಿನ ಮನ ಸ್ತಾಪದಲ್ಲೇ ಕಳೆದವು. "ಎರಡು ದಿನ ಹೋದರೆ ಅವಳೇ ಸರಿಹೋಗ್ತಾಳೆ" ಎಂದುಕೊಂಡು ಆನಂದರಾಯರು ಇದ್ಯಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳ ಲಿಲ್ಲ. ವಿಶ್ವನಾಥ ಇನ್ನೂ ಕೆಲವು ದಿನ ಅಲ್ಲಿಯೇ ಇದ್ದು ತನ್ನ ಭವಿಷ್ಯವನ್ನು— ಸರ್ಕಾರಿ ಕೆಲಸಕ್ಕೆ ಸೇರುವುದೇ ಅಥವಾ ಆಸ್ಪತ್ರೆ ಇಡುವುದೇ ಎಂದು ನಿರ್ಧರಿ ಸುವುದೆಂದು ಯೋಚಿಸಿದ.

ಬೇಗ ಲಗ್ನಪತ್ರಿಕೆ ಮಾಡಿ ಮುಹೂರ್ತ ಏರ್ಪಡಿಸಬೇಕೆಂದು ಆನಂದ ರಾಯರ ಒತ್ತಾಯ ಜಾಸ್ತಿಯಾಯ್ತು. ಶಾಸ್ತ್ರದಂತೆ ವಧುವನ್ನು 'ನೋಡು' ವುದಕ್ಕಲ್ಲದೆ ಲಗ್ನ ಪತ್ರಿಕೆ ಮಾಡುವುದಕ್ಕೆಂದು ಸುಬ್ಬಣ್ಣ ಹೆಂಡತಿ ಸಮೇತ ಹಳ್ಳಿಯಿಂದ ಮೈಸೂರಿಗೆ ಬಂದಿದ್ದ. ಎಲ್ಲರಿಗೂ ಆನಂದ. ಕಮಲಮ್ಮನ ಸಂಭ್ರಮ ಹೇಳತೀರದು. ಆದರೆ ರಾಜನ ಮನಸ್ಸಿನ್ನೂ ಸ್ಥಿಮಿತಕ್ಕೆ ಬಂದಿರ ಲಿಲ್ಲ. ಅವನ ಮನಸ್ಸು ಎರಡು ನಿರ್ಧಾರದ ಮಧ್ಯೆ ಹೊಯ್ದಾಡುತ್ತಿತ್ತು. ರೋಹಿಣಿಯನ್ನು ಮದುವೆಯಾಗುವುದೇ-ಅಥವಾ ಬೇಡವೇ ಎಂದು. ಮದುವೆ ಯಾದರೆ ಮುಂದೆ ಬರಬಹುದಿದ್ದ ಕಷ್ಟಗಳು. ಅದರಿಂದ ತಮ್ಮ ಪ್ರೇಮ ಮಾಸುವುದೇ ಎಂದು ಯೋಚಿಸುವನು. ಹೇಗೆ ಇತ್ಯರ್ಥ ಮಾಡಬೇಕು. ಹಾಗೆ ನಿರ್ಧರಿಸಲು ಇನ್ನೂ ಸಮಯವಿದೆಯೆಂದು ಸುಮ್ಮನಿದ್ದ.

ಭಾನುವಾರದ ದಿನ ಮೂರು ಗಂಟೆಗೆಲ್ಲಾ ಆನಂದರಾಯರು ಕಾರನ್ನು ರಾಜನ ಮನೆಗೆ ಕಳುಹಿಸಿದ್ದರು. "ನಾಲ್ಕೈದು ಮನೆ ದಾಟಿ ಹೋಗಲು ಕಾರೇಕೆ,ನಡೆದು ಹೋದ್ರೆ ಆಯ್ತು" ಎಂದು ರಾಜನೊಡನೆ ಸುಬ್ಬಣ್ಣ ನಡೆದೇ

ಹೋದರು. ಅವರಿಗೆ ಅಸಮಾಧಾನವಾಗದಿರಲೆಂದು ಸ್ವಲ್ಪ ಹೊತ್ತಾದಮೇಲೆ ಗೌರಿ, ಕಮಲಮ್ಮ ಮತ್ತು ಸರಸು ಕಾರಿನಲ್ಲಿ ಹೋದರು. ಆನಂದರಾಯರು ಇವರನ್ನು ಎದುರುಗೊಂಡರು. ರಾಜನ ಬಳಗವನ್ನೆಲ್ಲಾ ನೋಡಿ ಸರಿ ಹೋಗ ಲಿಲ್ಲವೇನೋ. ಅವರ ಮುಖ ಚಿಕ್ಕದಾಯಿತು. ಎಲ್ಲರನ್ನೂ ಮಹಡಿಯ ಮೇಲಿದ್ದ ಹಾಲಿನೊಳಕ್ಕೆ ಕರೆದುಕೊಂಡು ಹೋಗಿ ನೆಲದ ಮೇಲೆ ಹಾಸಿದ್ದ ರತ್ನಗಂಬಳಿ ಮೇಲೆ ಕುಳ್ಳಿರಿಸಿದರು. ಸುಬ್ಬಣ್ಣನನ್ನು ಆನಂದರಾಯರು ಸರಿ ಯಾಗಿ ಮಾತನಾಡಿಸಲಿಲ್ಲ. ರಾಜನಿಗೆ ಅದು ಸಹಿಸಲಸಾಧ್ಯವಾದರೂ ಆಗ ಸುಮ್ಮ ನಿರಬೇಕಿತ್ತು. ಕಮಲಮ್ಮ ಗೌರಿ ಮುಂದಿನ ಕೋಣೆಯಲ್ಲಿ ಕುಳಿತರು. ತಿಂಡಿ ತೀರ್ಥವಾದನಂತರ ಸುಂದರಮ್ಮ ರೋಹಿಣಿಯನ್ನು ಕರೆತಂದು ದೂರದಲ್ಲಿ ಕೂರಿಸಿದಳು. ಅವಳಿಗೆ ಎಂದೂ ಇಲ್ಲದ ಗಂಭೀರ ಅಲ್ಲದೆ ನಾಚಿಕೆ ಬಂದಿತ್ತು. ದಿನವಹಿ ಅವರ ಮನೆಯಲ್ಲಿ ಓಡಾಡುವವಳಿಗೆ ಅವರೆದುರಿಗೇ ನಾಚಿಕೆ. ರಾಜನಿಗೆ ರೋಹಿಣಿ ಅಂದು ತುಂಬಾ ಚನ್ನಾಗಿ ಕಂಡಳು. ಭಾರೀ ಸೀರೆ ಉಟ್ಟು ಚಿನ್ನದ ಒಡವೆಗಳನ್ನು ಹಾಕಿಕೊಂಡಿದ್ದರಿಂದ ದೊಡ್ಡ ಹೆಂಗಸಾಗಿ ಕಂಡಳು. ಅವಳ ಮುಖದಲ್ಲಿ ಅಂದು ಯಾವುದೋ ಅಪೂರ್ವ ಕಳೆ ಇತ್ತು. ನಾಗರಾಜ ನನ್ನೊಮ್ಮೆ ನೋಡಿದಳು. ಅವಳಿಗೆ ಮೈ ಜುಂ ಎನ್ನಿಸಿತು.

' ನೀವೂ ನೋಡಿ ಹೇಳಿ ಕಮಲು' ಎಂದು ಹೇಳಿದ ಸುಬ್ಬಣ್ಣ.

ಅದು ಸುಂದರಮ್ಮನಿಗೆ ಬೇಡವಾಯ್ತೇನೋ. ' ಅವರೇನು ದಿನಾಗ್ಲೂ ನೋಡ್ತಲೇ ಇರ್‍ತಾರೆ ' ಅಂದಳು. ಅಭಿಮಾನದ ರಾಜನಿಗೆ ಇದು ತಡೆಯ ಲಿಲ್ಲ. ' ಇವರ ಜಂಭ ಇವರಿಗೆ ಹೆಚ್ಚು. ' ನಮಗೆ ಗೌರವ ಕೊಡಬೇಡವೆ ? ಅನ್ನಿಸಿತು. ವಧುವನ್ನು ನೋಡಿದ ಶಾಸ್ತ್ರ ಆಯ್ತು. ಇನ್ನು ಲಗ್ನ ಪತ್ರಿಕೆ ಮಾಡಿಸುವುದು. ಶಾಸ್ತ್ರಿಗಳು ಅರಿಸಿನ ಕುಂಕುಮದ ತಟ್ಟೆ ತನ್ನಿ ಅಂದಾಗ ಸುಂದರಮ್ಮ ಬೆಳ್ಳಿಯ ತಟ್ಟೆಯನ್ನು ತಂದು ಕೆಳಗಿಡುವ ಮುಂಚೆಯೇ ಕೈ ಜಾರಿ ತಟ್ಟೆ ನೆಲದ ಮೇಲೆ ಬಿದ್ದುಬಿಡ್ತು. ಅದನ್ನು ರೂಮಿನಿಂದ ನೋಡಿದ ಕಮಲಮ್ಮ ಎದ್ದು ಕಿಟಕಿಯ ಹತ್ತಿರ ನಿಂತು ಕೈ ಕೈ ಹಿಸುಕಿಕೊಂಡಳು. ಶಕುನ ' ಕೂಡಲಿಲ್ಲ ' ಎಂದು ಸುಬ್ಬಣ್ಣ ಎದ್ದೇ ಬಿಟ್ಟ. ರೋಹಿಣಿ ಬೆಚ್ಚಿ ಒಳಕ್ಕೆ ಹೊರಟು ಹೋದಳು. ಮಾರನೆಯದಿನ ಯಾವುದನ್ನೂ ತಿಳಿಸುವಂತೆ ಹೇಳಿ ರಾಜ ಎಲ್ಲರೊಡನೆ ಮನೆಗೆ ಬಂದು ಬಿಟ್ಟ. 'ಏನೋ ಕೈತಪ್ಪಿತು.

ದೊಡ್ಡ ಮನಸ್ಸುಮಾಡಿ ತಂದುಕೊಳ್ಳಿ' ಎಂದಾದರೂ ಒಂದು ಮಾತು ಆನಂದರಾಯರು ಹೇಳಿದರಲ್ಲಾ ಎಂದು ಸಮಾಧಾನದಿಂದ ಸುಬ್ಬಣ್ಣ ಹೆಚ್ಚು ಚರ್ಚಿಸದೆ ಬಂದುಬಿಟ್ಟ.

ರಾಜ ಮನೆಗೆ ಬಂದವನೆ ತನ್ನ ಕೋಣೆಗೆ ಹೋಗಿ ಒಬ್ಬನೇ ಕುಳಿತು ಯೋಚಿಸಿದ. ಸುಂದರಮ್ಮ ಆ ರೀತಿ ತಮ್ಮನ್ನು ಕಾಣುತ್ತಾರೆಂದು ತಿಳಿದಿರಲಿಲ್ಲ. ಈಗಲೇ ಆ ರೀತಿ ನಡೆದರೆ ಮುಂದೆ ಹೇಗೆ? ಆದರೆ ಇದಕ್ಕೆ ರೋಹಿಣಿ ಹೇಗೆ ಜವಾಬ್ದಾರಳು. ಅವಳು ಹೇಳಿದ್ದಂತೆ ಇಬ್ಬರೇ ಹಕ್ಕಿಗಳಂತೆ ಇದ್ದುಬಿಡಬಹುದು. ನನ್ನ ಮದುವೆ ನಮ್ಮಿಬ್ಬರ ಸುಖಕ್ಕೇನೆ. ವಯಸ್ಸಿಗೆ ಬಂದ ಮಗನನ್ನು ಮುಷ್ಟಿನಲ್ಲಿ ಕಟ್ಟಿಕೊಳ್ಳುವುದೆ? ನನ್ನ ಸುಖವೂ ಒಂದು ಪಾಲು, ನನ್ನ ಜವಾಬ್ದಾರಿ ಇನ್ನೊಂದು ಪಾಲು. ರೋಹಿಣಿಯೇನೋ ತಕ್ಕ ಸಂಗಾತಿ; ಆದರೆ? ರಾಜ ಉಭಯ ಸಂಕಟದಲ್ಲಿ ಸಿಕ್ಕಿಬಿದ್ದ. ಒಂದುಕಡೆ ತನ್ನವರಿಗೆ ಸಲ್ಲಿಸಬೇಕಾದ ಕರ್ತವ್ಯ. ಇನ್ನೊಂದುಕಡೆ ರೋಹಿಣಿ ಮೇಲಿನ ಪ್ರೇಮ. ಪ್ರೇಮವೆಂದು ಕುರುಡನಾಗಬಾರದು. ತಾನು ಮದುವೆಯಾಗುವವಳು ರೋಹಿಣಿಯಷ್ಟು ಸುಂದರಿ, ಚತುರೆ ಅಲ್ಲದಿದ್ದರೂ ತನ್ನ ಮನಸ್ಸನ್ನು ಅರಿತು ನಡೆವ, ಕೊನೆಯ ಪಕ್ಷ ತನ್ನವರ ಮನಸ್ಸನ್ನು ನೋಯಿಸದ ಸಂಗಾತಿ ಸಾಕು. ತನ್ನ ಬಾಳನ್ನು ತನ್ನವರೊಡನೆ ಕೂಡಿಸುವ ಮುದ್ರೆಯಾಗಿರಬೇಕು. ವಜ್ರ ರತ್ನಗಳು ಶ್ರೇಷ್ಠವೆ. ಅವು ಎಲ್ಲಿ ಥಳಥಳ ಹೊಳೆಯಬೇಕೋ ಅಲ್ಲಿರಬೇಕು. ಅದರಿಂದ ವಿಪತ್ತು ಒದಗಬಾರದಷ್ಟೆ. ರೋಹಿಣಿಯ ಮುಖ ತನ್ನೆದುರಿಗೆ ಬಂದು ಬೇಡಿ ನಿರ್ಧಾರವನ್ನು ತನ್ನಕಡೆ ವಾಲುವಂತೆ ಮಾಡಿದರೂ ವಿಷಯವನ್ನು ಕೂಲಂಕಷವಾಗಿ ಯೋಚಿಸಿ ದೃಢಮಾಡಿದ್ದ ರಾಜನ ಮನಸ್ಸಿನ ಮುಂದೆ ನಡೆಯಲಿಲ್ಲ. ಗೌರಿಯ ಮಾತುಗಳೂ ಜ್ಞಾಪಕಕ್ಕೆ ಬಂದುವು.

"ಜಂಬದ ಮರಿಯಾಗಿ.... ಸಂಸಾರದಲ್ಲಿ ಒಡಕು ಹುಟ್ಟಿದರೆ ಗತಿ?"

ತಲೆಸುತ್ತಿ ಬಂತು. ಬರುಬರುತ್ತಾ ರೋಹಿಣಿಯ ಮುಖ ಕಾಣದಾಯ್ತು. ತನ್ನ ಮುಂದೆ ಕಮಲಮ್ಮ ಅಳುವಂತೆ ಕಂಡಿತು. ಗೌರಿಯ ಕರುಣಾಪೂರಿತ ಮುಖದ ಹತ್ತಿರ ತಬ್ಬಲಿ ಸರಸುವಿನ ಮುಖ ನೃತ್ಯಮಾಡಿತು. ಸುಬ್ಬಣ್ಣ ಕೈನೀಡಿ ಆಕ್ಷೇಪಣೆ ಮಾಡುವಂತೆ ಕಂಡಿತು. ತನ್ನಮೇಲೆ ಬೆಳ್ಳಿಯ ತಟ್ಟೆ ಬಿದ್ದಂತಾಗಿ ಅರಿಸಿನ ಕುಂಕುಮ ಮೈಮೇಲೆ ಚೆಲ್ಲಿತು. ಅಯ್ಯೋ ಎಂದು ಕಿರುಚಿ ಮೇಜಿನ ಮೇಲೆ ಮುಖವಿಟ್ಟು ಅತ್ತ.

ಇವನ ಸಂಕಟ ಕಮಲಮ್ಮನ ಕರುಳಿಗೆ ತಟ್ಟಿತೇನೋ ರಾಜನ ಕೋಣೆಗೆ ಬಂದಳು. ಅವನು ಅಳುತ್ತಿರುವುದನ್ನು ಕಂಡು ಮರುಗಿದಳು ಅವನ ತಲೆಯನ್ನು ನೇವರಿಸಿ "ಸುಮ್ಮನಿರು ರಾಜ" ಎಂದಳು. ವಾತ್ಸಲ್ಯ ದಿಂದಾಡಿದ ಮಾತು ರಾಜನಿಗೆ ಸಮಾಧಾನ ಮಾಡಿತು.

"ಅವರ ಯೋಗ್ಯತೆ ಇರಲಿಬಿಡು.....ಒಪ್ಪಿಗೆ ಕೊಟ್ಟುಬಿಡು."

"................"

"ಗೌರಿಯ ಮಾತನ್ನು ಕಟ್ಟಿಕೋಬೇಡಪ್ಪ...."

"................"

"ಮುಖ್ಯ ನೀನು ಸುಖವಾಗಿರೋದು ನನಗೆ ಬೇಕು. ಎಲ್ಲಾದರೂ ಚೆನ್ನಾಗಿ ಬದುಕು. ನಾನೂ ಒಬ್ಬಳು ಇದ್ದೀನಿ ಅಂತ ಜ್ಞಾಪಿಸಿಕೊಂಡರೆ ಸಾಕು."

ರಾಜನಿಗಿನ್ನು ತಡೆಯದೆ "ಅಮ್ಮಾ ಆ ಮಾತು ಆಡಬೇಡ....ಅಂತಹ ಮಾತೆ? ನಿನ್ನ ಮಗ ಅಂತಹ ನೀಚನೆಂದುಕೊಂಡೆಯಲ್ಲ...." ಎಂದು ಕಮಲಮ್ಮನ ಕೈಯನ್ನು ತನ್ನ ಮುಖದ ಮೇಲಿಟ್ಟುಕೊಂಡು ಅತ್ತುಬಿಟ್ಟ. ಸ್ವಲ್ಪ ಹೊತ್ತಿನನಂತರ ರಾಜನೇ

"ಯೋಚನೆ ಮಾಡಿದೆನಮ್ಮ....ಈ ಸಂಬಂಧ ನಮಗೆ ಸರಿಹೋಗಲ್ಲ" ಎಂದ.

"ಆದೇಕೆ....ಅಪಶಕುನವೆಂದೇ"

"ಅಲ್ಲಮ್ಮ....ಅವರ ಧೋರಣೆ ಬೇಡ"

"ಹಾಗಲ್ಲ ರಾಜ. ದೊಡ್ಡಕಡೆ ಮದುವೆಯಾದ್ರೆ ನಮಗೂ ಅನು ಕೂಲಾನೇ"

"ಯಾವ ಅನುಕೂಲಾನೂ ಬೇಡಮ್ಮ...."

"ಮುಖ್ಯ ನಿನಗೆ ಬೇಗ ಮದುವೆಯಾಗಿ ಸೊಸೆ ಬರೋದನ್ನು ನೋಡಲು ನನಗೆ ಅದೃಷ್ಟವಿಲ್ಲದೇ ಹೋಯ್ತು" ಎಂದು ಕಣ್ಣೀರಿಟ್ಟಳು.

ರಾಜನಿಗೆ ಸಾಕಾಗಿತ್ತು. ಅವರ ಪರೀಕ್ಷೆಯ ಫಲಿತಾಂಶ ಬೇರೆ ಅಂದು ಹೊರಬೀಳುವುದರಲ್ಲಿತ್ತು. ವೆಂಕಟೇಶನಾಗಲೇ ಅವರ ಮನೆಯ ಹತ್ತಿರ

ಬಂದು ಕೂಗುತ್ತಿದ್ದ. ಬೇಗ ಬಂದು ಬಿಡ್ತೀನಮ್ಮ ಎಂದು ತಾಯಿಗೆ ಹೇಳಿ ವೆಂಕಟೇಶನ ಜೊತೆಗೆ ಹೋದ.

ಇದುವರೆಗೂ ಒಂದು ಯೋಚನೆ; ವೆಂಕಟೇಶನ ಜೊತೆಗೆ ಹೋದಾಗ ಬೇರೆ ಯೋಚನೆ. ಅವರ ಕ್ಲಾಸಿನ ಸುಬ್ರಹ್ಮಣ್ಯನಿಗೆ ರ್‍ಯಾಂಕು ಬಂದಿದೆ ಯೆಂದು ವರ್ತಮಾನ ಹಬ್ಬಿತ್ತು.

" ತುಂಬಾ ಯೋಚನೆ ಮಾಡುತ್ತಿದ್ದೀಯಲ್ಲೋ ರಾಜ. "

" ಏನಾಗುತ್ತೋ ಎಂದು "

" ಬುಲೆಟಿನ್ ನಂಬಬೇಡ್ವೊ....ಸುಬ್ರಹ್ಮಣ್ಯನಿಗೆ ರ್‍ಯಾಂಕಂದರೇನು "

" ಯಾಕೆ ಬರಬಾರದು.... "

" ಬಂದರೂ ನಿನಗೆ ಎರಡನೆಯ ರ್‍ಯಾಂಕು ಸಿದ್ಧ "

" ಆಗ್಩ಿ ಬಾರಯ್ಯ....ಇನ್ನೇನು ಬಂಡವಾಳ ಗೊತ್ತಾಗುತ್ತಲ್ಲ "

" ನನ್ನ ತಂಗಿಯ ಮದುವೆ ಗೊತ್ತಾದಹಾಗೆ ರಾಜ "

" ಯಾರಪ್ಪ ಗಂಡು "

" ಇಂಟರ್ ಮೀಡಿಯೇಟ್ ಕಾಲೇಜ ಲೆಕ್ಚರರ್ ರಾಮಯ್ಯನೊಡನೆ"

" ಓ ! ಒಳ್ಳೆಹೋಕೀಲಾಲ್; ನಿಮ್ಮ ತಂದೆ ಒಪ್ಪಿದ್ದು ಹೆಚ್ಚೆ "

" ಹೌದು ! ಈ ಬೇಸಿಗೆಯಲ್ಲಿ ಮದುವೆ ಏರ್ಪಾಡು.... "

" ಹೋಗಲಿಬಿಡಪ್ಪ....ನಮಗೆ ಒಂದೆರಡು ದಿನ ಭರ್ಜರಿ ಊಟ ಬೀಳುತ್ತೆ "

ಅಷ್ಟುಹೊತ್ತಿಗೆ ವಿಶ್ವವಿದ್ಯಾಲಯದ ಆಫೀಸಿಗೆ ಬಂದಿದ್ದರು. ನೋಟೀಸ ಬೋರ್ಡಿನ ಹತ್ತಿರ ಹೆಚ್ಚು ಹುಡುಗರು ಕಾಣಲಿಲ್ಲ. ಅಂದು ಫಲಿತಾಂಶ ಪ್ರಕಟವಾಗದೆ ಮಾರನೆಯ ದಿನ ಪ್ರಕಟವಾಗುವಂತೆ ನೋಟೀಸ್ ಹಾಕಿದ್ದರು. ಮಾರನೆಯ ದಿನ ಬೆಳಿಗ್ಗೆ ವಿಶ್ವವಿದ್ಯಾನಿಲಯದ ಆಫೀಸಿನ ಹತ್ತಿರ ಭೇಟಿ ಮಾಡುವುದಾಗಿ ಮಾತನಾಡಿ ಸ್ನೇಹಿತರು ಮನೆಗೆ ಹಿಂತಿರುಗಿದರು. ರಾಜನು ಮನೆಗೆ ಬರುವ ಹೊತ್ತಿಗೆ ಕಮಲಮ್ಮ ಕುತೂಹಲದಿಂದ ಕಾದಿದ್ದಳು. ಸಪ್ಪಗಿದ್ದ ರಾಜನ ಮುಖವನ್ನು ನೋಡಿ ಸಂದೇಹಪಟ್ಟಳು.

" ನಾಳೆ ಫಲಿತಾಂಶ ಗೊತ್ತಾಗುತ್ತೆ " ಎಂದು ರಾಜ ಹೇಳಿದಮೇಲೆ ಪೂರ್ತಿ ಸಮಾಧಾನವಾಗದಿದ್ದರೂ ಒಂದು ಭಾರ ಇಳಿಸಿದಂತಾಯ್ತು. ಆ

ರಾತ್ರಿ ಸುಬ್ಬಣ್ಣನಿಗೆ ರಾಜ ತನ್ನ ಅಭಿಪ್ರಾಯವನ್ನು ತಿಳಿಸಿದ. ಸುಬ್ಬಣ್ಣ ಅವನ ಮುಂದಾಲೋಚನೆಯನ್ನು ಒಪ್ಪಿಕೊಂಡ. ಅಂತೆಯೇ ಆನಂದ ರಾಯರಿಗೆ ತಿಳಿಸಿ ಬಿಡುವುದೆಂದುಕೊಂಡರು. ಯಾರು ತಿಳಿಸಬೇಕು? ರಾಜ! ನೀನೇ ಹೋಗಿ ಹೇಳಿಬಿಡು ಎಂದು ಕಮಲಮ್ಮ ಹೇಳಿದಳು. ಅವನಿಗಿಂತ ಮಾವ ಹೋಗಿ ಹೇಳಿದರೆ ವಾಸಿಯಲ್ಲವೆ ಎಂದು ಗೌರಿ ಹೇಳಿದಾಗ ಗೌರಿಯ ಬುದ್ಧಿಯನ್ನು ಸುಬ್ಬಣ್ಣ ಹೊಗಳಿದ.

೬

ಮಾರನೆಯ ದಿನ ಬೆಳಿಗ್ಗೆ ಸುಬ್ಬಣ್ಣ ಆನಂದರಾಯರ ಮನೆಗೆ ಹೋದ ಅಂದು ರೋಹಿಣಿಗೆ ಎರಡು ಫಲಿತಾಂಶ ಗೊತ್ತಾಗಬೇಕಿತ್ತು. ಒಂದು ಇಂಟರ್ ಪರೀಕ್ಷೆಯದು, ಇನ್ನೊಂದು--ರಾಜನ ಉತ್ತರ. ಸುಬ್ಬಣ್ಣ ಆನಂದರಾಯರ ಮನೆಗೆ ಹೋದಾಗ ಒಂಬತ್ತು ಗಂಟೆ ಹೊಡೆದಿತ್ತು. ರಾಯರಿನ್ನೂ ಜವುಳಿ ಅಂಗಡಿಗೆ ಹೋಗಿರಲಿಲ್ಲ. ರಾಜ ಬರದೆ ಸುಬ್ಬಣ್ಣ ಮಾತ್ರ ಬಂದುದನ್ನು ಕಂಡು ಸಂದೇಹಪಟ್ಟರು. ಬಹುಶಃ ಪರೀಕ್ಷೆಯ ಫಲಿತಾಂಶ ನೋಡಲು ಹೋಗಿರಬಹುದು ಅಂದುಕೊಂಡರು. ಹಿಂದಿನ ದಿನದಂತೆ ತಿಂಡಿ ತೀರ್ಥದ ಉಪಚಾರವಾಯ್ತು. ಆದರೆ ಸುಬ್ಬಣ್ಣನಿಗೆ ಇವರ 'ಋಣ' ಬೇಕಿರಲಿಲ್ಲ. ಕೊನೆಗೆ ಮುಖ್ಯ ವಿಷಯವನ್ನು ಕುರಿತು ಮಾತನಾಡಿದರು. ರೋಹಿಣಿ ತನ್ನ ಕೊಠಡಿಯಲ್ಲಿ ಓಡಾಡುತ್ತಿದ್ದಳು. ಬಾಗಿಲನ್ನು ಸ್ವಲ್ಪ ತೆರೆದು ಹಜಾರದಲ್ಲಿ ಅವರು ಆಡುತ್ತಿದ್ದ ಮಾತು ಕೇಳಿಸುವಂತೆ ಮಾಡಿದಳು.

'ದೊಡ್ಡ ಕಡೆ ಸಂಬಂಧ ಬೆಳೆಸಲು ನಮಗೆ ಅದೃಷ್ಟವಿಲ್ಲ' ಎಂದು ನಯವಾಗಿ ಸುಬ್ಬಣ್ಣ ಪ್ರಾರಂಭಿಸಿದ.

'ಹಾಗಂದ್ರೆ....' ಆಶ್ಚರ್ಯದಿಂದ ರಾಯರು ಕೇಳಿದರು.

'ಇದು ಬಹು ಕಷ್ಟದ ಕೇಸ ನೋಡಿ....ಗಂಡಿನವರು ಈ ಮದುವೆಗೆ ಒಪ್ಪಿಗೆ ಇಲ್ಲ ಎಂದು ಹೇಳುವುದು....'

'ಚೆನ್ನಾಗಿದೆ.... ಒಂದೆರಡು ವರ್ಷಗಳಿಂದ ಒಪ್ಪಿಗೆ ಇತ್ತು ಈಗ ದೊಡ್ಡದಾಗಿ ಬೇಡ ಎನ್ನುವುದು....ಕಾರಣ ಏನು ಸ್ವಾಮಿ....'

'ಕಂಕಣ ಕೂಡುವುದು ಒಂದು ವಿಚಿತ್ರ ವಿಷಯ ಹತ್ತು ವರ್ಷಗಳಿಂದ ನೆಚ್ಚಿದ್ದ ಹುಡುಗ, ವಧುವನ್ನು ಬೇಡವೆನ್ನುವುದು ಒಂದು ಘಳಿಗೇನೇ ಆದ್ರೂ

ಇನ್ನೊಂದು ಘಳಿಗೆಯಲ್ಲೇ ಮೊದಲ ಕಡೆಗಿಂತ ಒಳ್ಳೆಯ ವರ ಗೊತ್ತಾಗಿ ಬೇಗನೆ ಮದುವೆಯಾಗುತ್ತೆ. ಇದೆಲ್ಲಾ....ಋಣಾನುಬಂಧ....'

'ಏನೋ ಕೇಳಿದರೆ ಮನಸ್ಸಿಗೆ ಬಂದದ್ದನ್ನು ಹರಟುತ್ತೀರಿ....' ಆನಂದ ರಾಯರು ಮಾತಿನಲ್ಲಿ ಹದ್ದು ಮೀರಿದ್ದರು.

'ಆನಂದರಾಯರೆ....ನೀವೇನೋ ದುಡ್ಡಿನವರು. ಒಂದು ದೊಡ್ಡ ಮಾತ ನಾಡಿದರೂ ತಡೆಯುತ್ತೆ. ನಾನು ಬಡವ ಹೌದು. ಆದರೆ ಲೋಕಾನುಭವ ದಲ್ಲಿ ನಿಮಗಿಂತ ಹಳಬ. ಒಟ್ಟಿನಲ್ಲಿ ಈ ಸಂಬಂಧ ಬೆಳಸಲು ನಮಗೆ ಇಷ್ಟ ವಿಲ್ಲ....ಶಕುನ ಕೂಡಿ ಬರಲಿಲ್ಲ....ಬೇರೆ ಮಾತೇಕೆ' ಎಂದು ಹೇಳಿ ಸುಬ್ಬಣ್ಣ ಎದ್ದು ನಿಂತ.

'ನಿಮ್ಮ ಮಾತಿರಲಿ....ನಾಗರಾಜ ಏನು ಹೇಳಿದ....'

'ಅವನು ಹೇಳಿದ ಮಾತನ್ನೇ ನಿಮಗೆ ತಿಳಿಸಿ ಅನ್ನಸಿಕೊಂಡೆ ಬರ್ತೇನೆ' ಎಂದು ಸುಬ್ಬಣ್ಣ ಮಹಡಿಯ ಮೆಟ್ಟಲನ್ನು ಇಳಿದರು. ಎದುರು ಮೆಟ್ಟಲಿನಿಂದ ರೋಹಿಣಿ ಧಡ ಧಡ ಎಂದು ಇಳಿದು ನಡುಮನೆಗೆ ಹೋದಳು. ಅವಳು ಖಂಡಿತ ಅತ್ತಿರಬೇಕು. ಸುಬ್ಬಣ್ಣನಿಗೂ ಅಯ್ಯೋ ಎನ್ನಿಸಿತು. ಒಟ್ಟಿನಲ್ಲಿ ಆ ಹೆಣ್ಣು ಮಗಳಿಗೆ ಸುಖವಿಲ್ಲ. ಆನಂದರಾಯರು ಕೋಪದಿಂದ ಕೆಳಗಿಳಿದು ಬಂದಾಗ ಸುಂದ್ರಮ್ಮ 'ಏನಂದ್ರು....' ಎಂದಳು.

'................................'

'ಏಕೆ ಮಾತಾಡ ಬಾರದೆ....ಏನಂದ್ರು ?'

'ಆಗೊಲ್ಲ ಅಂದ್ರು.'

'ಯಾಕಂತೆ....'

'ಶಕುನ ಕೂಡಿ ಬರಲಿಲ್ಲವಂತೆ....'

'ಅದೆಂತಹ ಶಕುನವೋ....ಇಬ್ಬರು ವಿಧವೆಯರು ಬಂದಾಗ್ಲೆ ಅಂದು ಕೊಂಡೆ....'

'....................................'

'ನಾನಾಗ್ಲೆ ಹೇಳಿದ್ರೆ ಕೇಳ್ತೀರಾ! ತಿರುಪೆಯವರ ಹತ್ತಿರ ಸಂಬಂಧ ಬೆಳಸ್ತೀನಿ ಎಂದ್ರೆ ಹೀಗೇನೆ' ಎಂದು ಸುಂದ್ರಮ್ಮ ಚುರುಕಾಗಿ ನುಡಿದಳು.

'ತಲೆಹೋಕರು' ಎಂದಷ್ಟೇ ಹೇಳಿ ಆನಂದರಾಯರು ತಮ್ಮ ಕೋಣೆಗೆ ಹೋದರು.

ರೋಹಿಣಿಯ ಸ್ಥಿತಿ ಹೇಳತೀರದು. 'ಮಂಕು ಬಡಿದವಳಂತೆ ತನ್ನ ಕೋಣೆಯಲ್ಲಿ ಕುಳಿತು ಕಂಬನಿಯಿಟ್ಟಳು. ಮುಖವನ್ನು ನೋಡಿದರೆ ಆ ನಿರ್ಣಯವನ್ನು ನಂಬದೆ ಸ್ತಬ್ಧಳಾಗಿದ್ದಳೋ ಅಥವಾ ಹಾಗಾಗಬಾರದಿತ್ತೆಂದು ನೆನೆದು ಸುಮ್ಮನಿದ್ದಳೋ. ತನ್ನ ಹೃದಯದಲ್ಲಿ ರಾಜನಿಗೆ ಮುಖ್ಯ ಸ್ಥಾನ ಕೊಟ್ಟಿದ್ದಳು. ವಿದ್ಯಾವಂತ ಅಲ್ಲದೆ ರಸಿಕನಾದ ರಾಜನೊಂದಿಗೆ ಸುಖ ಸಂಸಾರದ ಚಿತ್ರವೆಲ್ಲಾ ಕಣ್ಮುಂದೆ ಕಟ್ಟಿದಂತಾಗಿತ್ತು. ತಾವಿಬ್ಬರೇ ಹಕ್ಕಿಗಳಂತೆ ಹಾಯಾಗಿ ಇರೋಣ ಎಂದಿದ್ದಕ್ಕೆ ರಾಜ ಒಪ್ಪಿದ್ದ. ಇಂದೇಕೆ ಹೀಗೆ ನಿರ್ಧರಿಸಿದ? ತನ್ನನ್ನು ಕಂಡರೆ ಕಮಲಮ್ಮನಿಗೆ ಎಷ್ಟು ಪ್ರೀತಿ, ಗೌರಿಗೆ ಎಷ್ಟು ಆದರ; ಅವರೂ ನನ್ನ ಪರವಾಗಿ ರಾಜನಿಗೆ ಹೇಳಲಿಲ್ಲವೆ? ಸುಬ್ಬಣ್ಣ ಹೇಳಿದಷ್ಟು ಸುಲಭವಾಗಿ ರಾಜನನ್ನು ಮರೆಯಲು ಸಾಧ್ಯವೆ? ಎಲ್ಲವನ್ನೂ ಯೋಚಿಸುತ್ತಿದ್ದಳು. ಕಣ್ಣೀರು ಮಾತ್ರ ಯೋಚನೆಗೆ ಸಿಲುಕದೆ ಧಾರಾಕಾರವಾಗಿ ಹರಿಯುತ್ತಿತ್ತು. ಮುಂಗುರುಳೂ ಹಾರಾಡಿ ಅವಳಿಗೆ ಆಗಾಗ್ಗೆ ಎಚ್ಚರ ಮಾಡುತ್ತಿತ್ತು.

ಸುಂದರಮ್ಮ ಕೋಣೆಯ ಒಳಕ್ಕೆ ಬಂದು ಅವಳ ಮನಸ್ಸಿನ ವೇಗವನ್ನು ಹೆಚ್ಚಿಸಿದಳು. ಚಿಕ್ಕಮ್ಮಾ ಎಂದು ರೋಹಿಣಿ ಅತ್ತುಬಿಟ್ಟಳು. "ಹೋಗ್ಲಿ ಬಿಡು ತಾಯಿ, ಇದಕ್ಕೇಕೆ ಅಳಬೇಕು" ಎಂದು ಅವಳ ಕುರುಳನ್ನು ನೇವರಿಸಿ ಮತ್ತೆ 'ಗಿರಿಜೆ ಬಂದಿದ್ದಾಳೆ' ಎಂದು ಸುಂದರಮ್ಮ ಹೇಳಿದಾಗ ಪರೀಕ್ಷೆಯ ಫಲಿತಾಂಶ ಗೊತ್ತಾಗುವುದೆಂದು ಗಿರಿಜೆಯನ್ನು ಎದುರುಗೊಳ್ಳಲು ಹಜಾರಕ್ಕೆ ಬಂದಳು.

'ರೋಹಿಣಿ ನಿನಗೆ II Class ಪಾಸಾಯ್ತು.' ಎಂದಳು ಗಿರಿಜ. ರೋಹಿಣಿಯ ಮುಖ ಅರಳಿ, ಕಷ್ಟಪಟ್ಟು ಓದಿದ್ದು ಸಾರ್ಥಕವಾಯ್ತೆಂದುಕೊಂಡು

"ನಿಮ್ಮ ಅಣ್ಣನದು ?"

" ನಮ್ಮ ಅಣ್ಣನ ಸ್ನೇಹಿತನದು ಬೇಡವೋ....ಅವರ ರಿಜಲ್ಟ್ ಅವರ ಬಾಯಿಂದಲೇ ಕೇಳಬೇಕೆಂದು ಆಸೆ ಅಲ್ಲವೆ ?" ರೋಹಿಣಿ ನಾಚಿಕೆಯಿಂದಲ್ಲದೆ ಕುತೂಹಲದಿಂದ ರಾಜನ ಪರೀಕ್ಷೆ ಫಲಿತಾಂಶ ಕೇಳುತ್ತಾಳೆಂದು ತಿಳಿದಿದ್ದ ಗಿರಿಜೆಗೆ ನಿರಾಶೆಯಾಯ್ತು.

" ನಮ್ಮಣ್ಣನಿಗೂ II ಕ್ಲಾಸೆ "

ರಾಜನದು ಏನಾಯ್ತು ಎಂದು ಕೇಳುವಂತೆ ರೋಹಿಣಿ ಅವಳ ಕಡೆ ನೋಡಿದಳು.

" ರಾಜ ಒಬ್ಬನೇ I ಕ್ಲಾಸು, ರ್‍ಯಾಂಕು ಬಂತೂಂತ ನಮ್ಮಣ್ಣ ಹೇಳ್ದ" ಎಂದಳು. ಮತ್ತೆ ದುಃಖ ಆವರಿಸಿದ್ದನ್ನು ರೋಹಿಣಿ ತೋರ್ಪಡಿಸಿಕೊಳ್ಳದೆ " ನಿಮ್ಮ ಮನೆಗೆ ಸಾಯಂಕಾಲ ಬರ್ತೀನೆ. ಏಕೋ ಮೈಯಲ್ಲಿ ಚೆನ್ನಿಲ್ಲ" ಎಂದು ಹೇಳಿದಾಗ ಸೂಕ್ಷ್ಮ ತಿಳಿದ ಗಿರಿಜೆ ತಮ್ಮ ಮನೆಗೆ ಹೋದಳು.

ರೋಹಿಣಿ ತನ್ನ ಕೋಣೆಗೆ ಬಂದವಳೆ ಸೋಫಾದ ಮೇಲೆ ಕುಸಿದು ಬಿದ್ದಳು. ಹೊಸ ಸಂಘಟನೆಯನ್ನು ನೆನೆದು ಅತ್ತಳು. ಮಧ್ಯೆ ತನ್ನ ಮತ್ತು ರಾಜನ ಸ್ನೇಹದ ಅನೇಕ ಕಿಡಿಗಳನ್ನು ನೆನೆದುಕೊಳ್ಳುವಳು ಮತ್ತೆ ಅಳು ವಳು. ಎದುರುಗೋಡೆಗೆ ಹಾಕಿದ್ದ ತನ್ನ ತಾಯಿಯ ಚಿತ್ರವನ್ನು ನೋಡಿ ದಾಗ ಅವಳಿಗೆ ತಡೆಯದೆ ಎದ್ದುಸಿಂತು ಅಮ್ಮಾ ! ಎಂದು ಕೂಗಿದಳು. ಗು ಸಿದ ತನ್ನ ತಾಯಿ ತನ್ನನ್ನು ಕೂಗುತ್ತಿದ್ದಂತೆ ಭಾಸವಾಯ್ತು. ಭಾವಚಿತ್ರ ವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದಳು. ತಾಯಿಯ ಕೊನೆಯ ದಿನ ಗಳು ಅವಳಿಗಿನ್ನೂ ನೆನಪಿದ್ದುವು. ಏಳೆಂಟು ವರ್ಷದ ಹಿಂದಿನ ನೆನಪು. ರೋಹಿಣಿಯೆಂದರೆ ಅವಳ ಕಣ್ಮಣಿಯಾಗಿದ್ದಳು. ತಾನು ರಾಜ ಕುಮಾರಿಯೋ ಏನೋ ಅನ್ನುವಂತೆ ಮಾಡಿದ್ದಳು. ಆದರೆ ತನ್ನ ತಾಯಿ ಒಂದು ದಿನ ತನ್ನಿಂದ ದೂರವಾದಳು. ಮೈಮೇಲೆ ಪ್ರಜ್ಞೆತಪ್ಪಿದ ದಿನ ತನ್ನನ್ನು ತಂದೆ ಎಷ್ಟು ಸಮಾಧಾನಮಾಡಿದ್ದ. ಅಮ್ಮ ಇದ್ದಿದ್ದರೆ ಅವಳಿಗೆ ಹೇಳಿಕೊಳ್ಳಬಹುದಿತ್ತು. ಮತ್ತೆ ರೋಹಿಣಿ ಕೈಯಲ್ಲಿದ್ದ ತಾಯಿಯ ಭಾವ ಚಿತ್ರವನ್ನು ನೋಡಿದಳು. ಅವಳಿಗೆ ಚಿತ್ರವೆಂದು ಕಾಣಲಿಲ್ಲ. ಮತ್ತೆ ತುಂಬಿದ ಕೆನ್ನೆಗಳು, ತನ್ನಂತೆಯೇ ಗುಂಗುರು ಗುಂಗುರು ಕೂದಲಿನ ತನ್ನ ಭಾಗದ ದೇವತೆ. ದುಃಖದಲ್ಲೂ ಭಾಗಿಯಾದಂತೆ ಅವಳೂ ಅತ್ತಿರುವಳು. ಅಮ್ಮಾ ! ಎಂದು ರೋಹಿಣಿ ಕರೆದಳು. ಅವಳ ಭಾಗಕ್ಕೆ ಅವಳ ತಾಯಿ ಉತ್ತರ ಕೊಟ್ಟಳು. ಈಗೇನು ಮಾಡಲಿ ಎಂದು ರೋಹಿಣಿ ಕೇಳಿದಳು. ಅವಳಿಗೆ ಸರಿ ಯಾದ ಸಮಾಧಾನ ಹೇಳಿರಬೇಕು. ತಾಯ ಭಾವಚಿತ್ರವನ್ನು ಮೊದಲಿ ನಂತೆ ಇಟ್ಟು ಕಿಟಕಿಯಲ್ಲಿ ನೋಡಿದಳು. ಸೋನೆಯ ಮಳೆ ಸುರಿಯುತ್ತಿತ್ತು.

ತನ್ನ ಬಗ್ಗೆ ಪ್ರಕೃತಿಯೂ ಸಂತಾಪಪಟ್ಟಿರಬೇಕು. ಮನೆಯ ಸೂರಿನಿಂದ ತೊಟ್ಟು ತೊಟ್ಟಾಗಿ ನೀರುಬೀಳುತ್ತಿತ್ತು. ಸ್ವಲ್ಪ ಹೊತ್ತು ನೋಡುತ್ತಿದ್ದು ನಿಟ್ಟುಸುರುಬಿಟ್ಟು ಏನನ್ನೋ ಜ್ಞಾಪಿಸಿಕೊಂಡು ಆನಂದರಾಯರ ಕೋಣೆಗೆ ಹೋದಳು.

## ೧೦

ಕಮಲಮ್ಮ ಎಂದಿನಂತೆ ಬೆಳಿಗ್ಗೆ ದೇವರಮನೆಯಲ್ಲಿದ್ದಳು. ದೇವರ ಮನೆಯೆಂದರೆ ಒಂದು ಗಾಯಿತ್ರಿ ಭಾವಚಿತ್ರ. ಅದರ ಕೆಳಗೆ ತನ್ನ ಪತಿಯ ಚಿತ್ರ. ಅದರ ಹತ್ತಿರ ಬೆಳಗುತ್ತಿದ್ದ ಎರಡು ಸೊಡರುಗಳು ಅಷ್ಟೆ. ಹೆಚ್ಚಿನ ಆಡಂಬರವಿಲ್ಲದೆ ಮುಖ್ಯ ದೇವರನ್ನು ಒಮ್ಮೆ ನೆನೆದು ತನ್ನ ಪತಿಯನ್ನೊಮ್ಮೆ ಜ್ಞಾಪಿಸಿಕೊಳ್ಳಲು ಸಾಕಷ್ಟು ಅವಕಾಶವಿತ್ತು. ತನ್ನ ಮಗ ಬಿ ಎ (ಆನರ್ಸ) ಪಾಸ್ ಮಾಡಿದ್ದಲ್ಲದೆ ರ್‍ಯಾಂಕು ಬಂದಿದ್ದು ಕಮಲಮ್ಮನಿಗೆ ತುಂಬಾ ಸಂತೋಷ ಆಗಿತ್ತು. ರಾಜನನ್ನು ವಿದ್ಯಾವಂತನನ್ನಾಗಿ ಮಾಡಬೇಕೆಂದಿದ್ದ ಹಂಬಲ ಕಂಡಾಯ್ತು. ಹಂಬಲವೇನು ತನ್ನ ಪತಿಗೆ ಹಾಗೆಂದು ಮಾತುಕೊಟ್ಟಿದ್ದಳು. ಇಲ್ಲ, ಇಷ್ಟಕ್ಕೋಸ್ಕರ ತಪಸ್ಸುಮಾಡಿದ್ದಳೋ ? ಅಂತು ತನ್ನ ಹೊಣೆಗಾರಿಕೆ ಒಂದು ವಿಧದಲ್ಲಿ ಮುಗಿದಿತ್ತು. ಇನ್ನು ಅವನಿಗೊಂದು ಮದುವೆ ಮಾಡಿ ಬಿಡುವುದು. ಅದೂ ಕೂಡಿ ಬಂದಿತ್ತು. ಅದು ಒಳ್ಳೆಯದಕ್ಕೇನೋ ಕಾರಣಾಂತರದಿಂದ ಮಾತು ಮುರಿದು ಬಿತ್ತು. ಮಗನ ಮದುವೆ ಬೇಗ ಆಗಲಿ ಎಂದು ದೇವರನ್ನು ಪ್ರಾರ್ಥಿಸಿದಳು. ಪತಿಯ ಭಾವಚಿತ್ರವನ್ನು ನೋಡಿ ಕಣ್ಣೀರಿಟ್ಟು "ನಿಮ್ಮ ಇಷ್ಟ ಈ ದಿನ ನೆರವೇರಿತು. ಅದನ್ನು ನೋಡಲು ನೀವಿರಬೇಕಿತ್ತು—ಕಮಲಮ್ಮನಿಗೆ ದುಃಖ ಹೆಚ್ಚಾಯ್ತು....ಮತ್ತೆ ಯೋಚಿಸಿದಳು. 'ಅವರನ್ನು' ಕಳೆದುಕೊಂಡಾಗ ರಾಜನಿಗಿನ್ನೂ ಎಂಟು ವಯಸ್ಸು. ಈಗ ಯುವಕ, ಪದವೀಧರ. ಅಬ್ಬಾ ! ಅವರು ಖಂಡಿತ ನೋಡಬೇಕಿತ್ತು. ಪತಿಯ ಚಿತ್ರಕ್ಕೆ ನಮಸ್ಕಾರ ಮಾಡಿ ಎದ್ದುನಿಂತು "ನಿಮ್ಮ ಮಾತು ನಡೆದೇ ನಡೆಯಿತು....ಇನ್ನೊಂದು ಇದರಂತೆ ನಡೆಯದೇ ಹೋಗುವುದೆ. ಸಾಯುವ ಮುನ್ನ ಹೇಳಿದ್ದ ಮಾತುಗಳು" ಕಮಲಮ್ಮನಿಗೆ ಹೊಡೆದೆಬ್ಬಿಸಿದಂತೆ ಮತ್ತೆ ಕೇಳಿಸಿತು.

" ನೀನು ಇರೋವಾಗಲೇ ರಾಜನ ಓದು ಸಾಗುವಂತೆ ನೋಡಿಕೋ ! ಭೂಮಿ, ಕಾಣಿ, ಒಡವೆ ವಸ್ತ್ರ ಯಾವುದು ಮಾರಿದರೂ ಸರಿ....ಅವನೆ ಒಂದು ಒಡವೆ "

" ಅವನಿಗೊಂದು ಮದುವೆಮಾಡಿ ಸೊಸೆ ಮನೆಗೆ ಬಂದರೆ ತೀರಿತು. ಜೀವಮಾನವೆಲ್ಲಾ ಕಾಪಾಡುತ್ತಾನೆ " ಎಂದಿದ್ದರು.

ಹೌದು ಅವನಿಗೊಂದು ಮದುವೆ ಮಾಡಬೇಕು. ಇನ್ನು ನಮ್ಮ ಕಷ್ಟ ಪರಿಹಾರವಾದಂತೆ.

ಇನ್ನು ದಿನದ ಕೆಲಸ ನಡೆಯಬೇಕು. ಕಮಲಮ್ಮ ದೇವರ ಮನೆ ಯಿಂದ ಹೊರಕ್ಕೆ ಬರುವಾಗ, ರಾಜ ಆಗ ತಾನೆ ಅಲ್ಲಿಂದ ತನ್ನ ಕೋಣೆಗೆ ಹೋಗುತ್ತಿದ್ದ. ಇಲ್ಲೇ ನಿಂತಿದ್ದನೇನೋ ಅಂದುಕೊಂಡಳು ಕಮಲಮ್ಮ.

ಕಮಲಮ್ಮ ಅಂದುಕೊಂಡಂತೆ ರಾಜ ಎಲ್ಲವನ್ನೂ ಯೋಚಿಸಿದ. ಅದ ರಲ್ಲೂ " ನನ್ನ ಜವಾಬ್ದಾರಿ ನಾನು ಮುಗಿಸ್ದೆ" ರಾಜನನ್ನು ಕೆರಳಿಸಿ ನಿನ್ನ ಜವಾಬ್ದಾರಿ ' ತಾಯಿ ತಂಗಿಯರನ್ನು ಜೀವವಿರುವವರೆಗೂ ಸಾಕುವುದು ' ಎಂದು ಕೂಗಿತು. ಪಾಪ ! ರಾಜ ಅದನ್ನು ಯೋಚಿಸಿ ರೋಹಿಣಿಯ ಪ್ರೇಮ ವನ್ನೂ ತ್ಯಜಿಸಿದ್ದ. ರಾಜನಿಗೆ ಮುಂದೇನು ಮಾಡುವುದು ಎಂದು ಸಮಸ್ಯೆ ಯಾಯ್ತು. ಮುಂದೆ ಓದುವುದೆ; ಇಲ್ಲ ಬಿಟ್ಟು ಕೆಲಸಕ್ಕೆ ಸೇರುವುದೆ ಎಂದು. ಈಗಲೇ ತನಗೆಂತಹ ಕೆಲಸ ಸಿಕ್ಕಬಹುದು ? ಆದರೆ ಓದಿಗೆ ಸಹಾಯ. ಓದಿಗೆ ಇನ್ನೂ ತಾಯಿಯ ರಕ್ತಹೀರುವುದೆ ? ಅದನ್ನೇ ಯೋಚಿಸುತ್ತಿದ್ದಾಗ ಕಮ ಲಮ್ಮ ಕಾಫಿಯನ್ನು ತಂದು ಯೋಚನೆಯಲ್ಲಿ ಮುಳುಗಿದ್ದ ರಾಜನನ್ನು ನೋಡಿ, " ದೇವರ ಮನೆಗೆ ಬರದೆ ಓಡಿಬಿಟ್ಟೆ ಏಕಪ್ಪಾ ?" ಎಂದಳು.

" ನೀನೇಕಮ್ಮ ಅಳ್ತಿದ್ದೆ ? "

" ಅಳುವುದೇಕೆ ಮಗು ? "

ಅವಳ ಮಾತನ್ನು ಕೇಳಿ ರಾಜನಿಗೆ ನಗುಬಂತು.

" ಅಮ್ಮಾ ! ಮುಂದೇನು ಮಾಡಲೆ ? "

" ಓದು ರಾಜ...."

" ಓದಿಗೆ ದುಡ್ಡು ದಂಡ ತೆರಬೇಕು."

" ಆಗ್ಲಿ ರಾಜ...."

" ಎಲ್ಲಾದ್ರೂ ಕೆಲಸಕ್ಕೆ ಸೇರ್ಬಿಡ್ತೇನಮ್ಮ."

" ಎರಡು ದಿನ ಆಗ್ಲಿ....ನೋಡೋಣ. ಒಂದ್ಮಾತು ಸುಬ್ಬಣ್ಣನನ್ನ ಕೇಳು. "

" ಮಾವನನ್ನೂ ಕೇಳ್ದೆ....ಮುಂದೆ ಓದು ಅಂತಾನೆ. "

" ನನಗೂ ಅದೇ ಇಷ್ಟ...." ಎಂದು ಹೇಳಿ ಕಮಲಮ್ಮ ಅಡಿಗೆ ಮನೆಗೆ ಬಂದುಬಿಟ್ಟಳು. ಬಗೆಹರಿಯುವ 'ಸಮಸ್ಯೆ' ವೆಂಕಟೇಶನನ್ನೂ ಕೇಳಿ ನಿರ್ಧರಿಸೋಣವೆಂದು ಯೋಚಿಸಿದ. ಅವನು ಗಿರಿಜೆಯ ಮದುವೆ ಏರ್ಪಾಡಿಗೆ ಓಡಾಡ್ತಾ ಇರಬಹುದು. ಪರವಾಗಿಲ್ಲ ಒಂದು ಸಾರಿ ಹರಟೆಹೊಡಿಯೋದು ಎಂದು ಅವರ ಮನೆಗೆ ಹೊರಟ. ರೋಹಿಣಿಯ ಮನೆಯ ಹತ್ತಿರ ಬಂದಾಗ್ಗೆ ಮುಖದ ಮೇಲೆ ಎದ್ದಿದ್ದ ಬೊಕ್ಕೆಗೆ ಉಗುರು ತಗುಲಿದಷ್ಟು ನೋವಾಯ್ತು. ರೋಹಿಣಿ ಬಾಗಿಲಿನ ಮೇಲೆ ಹಬ್ಬಿದ್ದ ಮಲ್ಲಿಗೆ ಬಳ್ಳಿಯ ಕೆಳಗೆ ನಿಂತು ಮೊಗ್ಗುಗಳನ್ನು ಬಿಡಿಸುತ್ತಿದ್ದಳು. ಬಳ್ಳಿಯ ಹತ್ತಿರ ಬಳುಕಿ ನಿಂತಿದ್ದ ರೋಹಿಣಿ ಮೊದಲು ಕಾಣಲಿಲ್ಲ. ರಾಜನ ಮನಸ್ಸು ತನ್ನ ಭವಿಷ್ಯದಲ್ಲಿ ಕೇಂದ್ರ ವಾಗಿತ್ತು. ಇತರ ದಿನಗಳಾಗಿದ್ದರೆ ರೋಹಿಣಿಯ ಮನೆಯ ಕಡೆಯಾದರೂ ಒಂದು ಸಾರಿ ನೋಡದೆ ಹೋಗುತ್ತಿದ್ದನೆ? ಒಂದೇ ದಿನದಲ್ಲಿ ಎಷ್ಟು ಬದ ಲಾವಣೆ! ರೋಹಿಣಿಯೋ ರಾಜನನ್ನು ನೋಡಿ ಬಾಗಿಲಿನಹತ್ತಿರ ಬಂದಳು. ರಾಜನಂತೆ ಅವಳು ಮರೆಯಲು ಸಾಧ್ಯವೆ? ಬೀದಿಯಲ್ಲಿ ನಡೆಯುತ್ತಿದ್ದ ರಾಜ ಆನಂದರಾಯರ ಮನೆಯ ಗೇಟನ್ನು ದಾಟುವುದರಲ್ಲಿದ್ದ. ಎದುರಿಗೆ ಬಂದ ಮೋಟಾರು ಅವನ ದೃಷ್ಟಿಯನ್ನು ಬಾಗಿಲಿನ ಕಡೆ ತಳ್ಳಿತು. ಎಡಗೈ ಯಲ್ಲಿ ಹೂವಿನ ಬುಟ್ಟಿ ಹಿಡಿದು ನಿಂತಿದ್ದಾಳೆ ರೋಹಿಣಿ. ಇನ್ನೆಲ್ಲಿಯ ಮಾತು ಹೊರಟುಬಿಡೋಣ ಎಂದುಕೊಂಡರೂ ಒಂದುಸಾರಿ ಕ್ಷಮೆ ಕೇಳಿ ಬಿಡೋಣ ಎಂದು ರಾಜ ಬಾಗಿಲಿನಹತ್ತಿರ ಬಂದ. ಗೇಟನ್ನು ತೆಗೆಯಲು ಹೋದ ರೋಹಿಣಿಯ ಕೈಯನ್ನು ಅಮುಕಿ ಹಿಡಿದು " ಬೇಡ ರೋಹಿಣಿ.... ನನ್ನ ಮರೆತು ಕ್ಷಮಿಸಿಬಿಡು " ಎಂದು ಒಂದೇ ಉಸುರಿನಲ್ಲಿ ನುಡಿದ.

" ಇನ್ನೊಂದು ಸಾರಿ ಯೋಚಿಸಿ ಎಂದು ಕೇಳಿಕೊಂಡರೆ " ಎಂದು ನಿರೀಕ್ಷಣೆಯಿಂದ ರೋಹಿಣಿ ಕೇಳಿಕೊಂಡಳು.

" ಅದು ನಿನ್ನ ದೊಡ್ಡತನ....ಆದ್ರೆ ಯೋಚಿಸಿ ನಿರ್ಧರಿಸಿದ್ದು...." ನಿರಾಶೆಯಿಂದ ರೋಹಿಣಿ ಸುಮ್ಮನಾದಳು.

"ನನ್ನ ಬಾಳು ಈ ಸ್ಥಿತಿಗೆ ಬರಲು ನೀನೂ ಕಾರಣಳೆಂದು ಜೀವಮಾನ ಮರೆಯಲಾರೆ" ಎಂದು ಹೇಳಿ ರಾಜ ಪುನಃ ಹೊರಟುಬಿಟ್ಟ.

ಭಗ್ನಹೃದಯದ ರೋಹಿಣಿಗೆ ಅನ್ನಿಸಿತು: "ನನ್ನ ಈ ಸ್ಥಿತಿಗೆ ನೀನು ಕಾರಣನೆಂದು, ಎಂದಿಗೂ ಮರೆಯಲಾರೆ" ಎಂದು. ಆದರೆ ರಾಜ ಹೇಳಿದ್ದಂತೆ ಹೃದಯದಿಂದ ಬಂದಂತೆ ಕಾಣದ ಆ ಮಾತು ವೇದ್ಯವಾಗದೆ ವ್ಯಂಗ್ಯವಾಗಿತ್ತು.

ತಾನು ಮುಂದೆ ಓದುವುದೇ, ಬಿಡುವುದೆ ಎಂದು ರಾಜನೊಡನೆ ಚರ್ಚಿಸಬೇಕೆಂದಿದ್ದ ವೆಂಕಟೇಶನಿಗೆ ರಾಜನೇ ಬಂದದ್ದು ಆಶ್ಚರ್ಯವಾಯ್ತು. ಸ್ನೇಹಿತರು ಮತ್ತೆ ತಮ್ಮ ವಿಜಯವನ್ನು ಶ್ಲಾಘಿಸಿದ್ದಾಯ್ತು. ತಾವು ಕಷ್ಟಪಟ್ಟು ಓದಿದ್ದು ಎಲ್ಲವನ್ನೂ ನೆನೆದು ತಮ್ಮ ವಿಜಯದೊಡನೆ ಮಾತು ಮುಗಿದು ಸಂತೋಷ ಉಂಟಾದರೂ ಮುಂದೆ ಏನು ಮಾಡಬೇಕೆಂದು ಹೊಳೆಯದೆ ಹೋಯ್ತು. ವೆಂಕಟೇಶನೇನೋ ಮುಂದೆ ಓದದೆ ಪತ್ರಿಕಾ ಕೆಲಸವನ್ನು ಅಭ್ಯಾಸ ಮಾಡಬೇಕೆಂದು ಯೋಚಿಸಿದ್ದ. ರಾಜ ಆ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ಕೊಡುವ ಸ್ಥಿತಿಯಲ್ಲಿಲ್ಲದಿದ್ದರೂ ಅದು ಯೋಗ್ಯವೆಂದು ತಿಳಿಸಿದ. ರಾಜ ಎಂ. ಎ. ಗೆ ಓದುವುದರ ಬದಲು ತಾತಾ ವಿಜ್ಞಾನ ಶಾಲೆಯಲ್ಲಿ ಪ್ರೌಢ ಶಿಕ್ಷಣವನ್ನು ಪಡೆಯುವುದು ಸೂಕ್ತವೆಂದು ನಿರ್ಧರಿಸಿದರೂ ಒಂದೇ ಕೊರತೆಯಿತ್ತು. ಬೆಂಗಳೂರಿನಲ್ಲಿದ್ದು ಓದಲು ಮತ್ತೆ ದುಡ್ಡು ಬೇಕೆಂದು. ಎರಡು ವರ್ಷ ಕಷ್ಟಪಡಬೇಕು. ಅನಂತರ ಎಲ್ಲಿಯಾದರೂ ತನಗೆ ಪ್ರೋತ್ಸಾಹ ಸಿಕ್ಕೇಸಿಕ್ಕುತ್ತೆ. ಸ್ವಲ್ಪಹೊತ್ತು ಗಿರಿಜೆ ಮದುವೆಯ ವಿಷಯ ಕೇಳಿ ರಾಜ ಮನೆಗೆ ಬಂದುಬಿಟ್ಟ.

ಊಟ ಆದಮೇಲೆ "ಸುಬ್ಬಣ್ಣ ನಾಳೆ ಹಳ್ಳಿಗೆ ಹೋಗ್ತಾನೆ. ಓದಿನ ವಿಷಯವನ್ನು ಮಾತನಾಡಿಬಿಡು" ಎಂದು ಕಮಲಮ್ಮ ಸೂಚಿಸಿದಳು. ಪುನಃ ಎಲ್ಲಾ ವಿಷಯಗಳನ್ನೂ ಕಮಲಮ್ಮ, ಸುಬ್ಬಣ್ಣ ಅಲ್ಲದೆ ಗೌರಿ ಯೋಚಿಸಿದರು. ಎಲ್ಲರ ನಿರ್ಧಾರವೇನೋ ಒಂದೆ. ರಾಜ ಬೆಂಗಳೂರಿನ ತಾತಾ ವಿಜ್ಞಾನ ಶಾಲೆಗೆ ಸೇರಲೆಂದು. ಆದರೆ ಅದು ಹೇಗೆ ನಡೆಯಬೇಕು, ಅವನ ಖರ್ಚಿಗೆ ಏರ್ಪಾಡು, ಎಂದು ರಾಜ ಯೋಚಿಸಿದ. ಸ್ವಲ್ಪ ಜಮೀನನ್ನು ಮಾರಿ ಓದುವುದೆಂದು ಸುಬ್ಬಣ್ಣ ಸೂಚಿಸಿದ. ಗೌರಿ ಯಾವ ಸಲಹೆಯನ್ನು ಕೊಡದೆ

ತಿಸ್ಸಗಿದ್ದರೂ ಅವಳು ಗಾಢವಾಗಿ ಯೋಚಿಸಿದಳು. ಅವಳಿಗೆ ಅನ್ನಿಸಿತು, ಇರುವ ಚೂರು ಭೂಮಿಯನ್ನು ಮಾರಿದರೆ/ಕಷ್ಟವಾಗುತ್ತೆ ಎಂದು. ಆದರೆ ಅದನ್ನು ಹೇಳಿದರೆ ರಾಜನಾಗಲಿ, ಕಮಲಮ್ಮನಾಗಲಿ ತಪ್ಪು ಅರ್ಥ ಮಾಡಿಕೊಂಡಾರೆಂದು ಹೇಳದೆ ಇದ್ದಳು. ಕಮಲಮ್ಮನ ಇಷ್ಟವೆಂದರೆ ತನ್ನ ಪ್ರಾಣ ಕೊಟ್ಟಾದರೂ ರಾಜನನ್ನು ಇನ್ನೆರಡು ವರ್ಷ ಓದಿಸಬೇಕೆಂದು. ಭೂಮಿ ಮಾರಿ ತಾನು ಓದದೆ, ಭಿಕ್ಷಾನ್ನ ಮಾಡಿಯಾದರೂ ಓದುತ್ತೇನೆ ಎಂದು ರಾಜ ಹೇಳಿದ. ಹೇಗೆ ಅನುಕೂಲವೋ ಹಾಗೆ ಮಾಡಪ್ಪ ಎಂದು ಸುಬ್ಬಣ್ಣ ಸುಮ್ಮನಾದ. ಇನ್ನೂ ಹದಿನೈದು ದಿನಗಳಿವೆಯಲ್ಲಾ ಎಂದು ರಾಜ ಮತ್ತೆ ಯೋಚಿಸಲಿಲ್ಲ.

ಈ ಅಂತರದಲ್ಲಿ ತನ್ನ ವಿದ್ಯಾಭ್ಯಾಸಕ್ಕೆ ಬೇಕಾಗಿದ್ದ ವಿಷಯಗಳನ್ನು ರಾಜ ಸಂಗ್ರಹಿಸಿದ. ತಾಂತ್ರವಿಜ್ಞಾನ ಶಾಲೆಗೆ ಅರ್ಜಿಯನ್ನೂ ಹಾಕಿದ್ದ. ರ‍್ಯಾಂಕು ಬಂದಿದ್ದ ತನಗೆ ಸೀಟು ಸಿಗುವುದು ಖಂಡಿತವಾಗಿ ಕಂಡರೂ ಅಲ್ಲಿಂದ ತಿಳಿದು ಬರುವವರೆಗೂ ಹೇಳುವಂತಿರಲಿಲ್ಲ. ಒಂದುಸಾರಿ ತನ್ನ ಮುಂದಿನ ವಿದ್ಯಾಭ್ಯಾಸ ಹೇಗೆ ಜರುಗುವುದು ಎಂದು ಬೆಟ್ಟವಾಗಿ ತೋರುವುದು ಅದನ್ನು ಯೋಚಿಸಿ ಸಮಾಧಾನ ತಂದುಕೊಂಡರೆ ರೋಹಿಣಿಯ ಪ್ರೇಮ ಪೀಡಿಸುವುದು ಇದನ್ನು ತಟ್ಟುವ ಶಕ್ತಿಯಿಂದ ತಾಯಿ ಮತ್ತು ಗೌರಿಯ ಜವಾಬ್ದಾರಿ ಹೊಳೆಯುತ್ತಿತ್ತು. ಇದೆಲ್ಲವನ್ನೂ ಮರೆಸುವಂತಲ್ಲವೆ ತಮಾಷೆಯಾಗಿ ಕಾಲ ಕಳೆಯಲು ಗಿರಿಜೆಯ ಮದುವೆ ಬಂದುಬಿಡ್ತು. ತನ್ನ ಸ್ನೇಹಿತನ ತಂಗಿಯ ಮದುವೆ ಕೇಳಬೇಕೆ—ವೆಂಕಟೇಶನ ಸಮುಕ್ಕೂ ಓಡಾಟ, ಮುಡಿತ, ಬೀಗರನ್ನು ನೋಡಿಕೊಳ್ಳುವುದು, ವೆಂಕಟೇಶನ ಜೊತೆಗೆ ಎಲ್ಲಾ ಮೇಲ್ವಿಚಾರಣೆ. ಆ ಓಡಾಟದಲ್ಲಿ ಅವನಿಗೆ ಅನ್ನಿಸಿತು. ಮದುವೆಯ ಸಂಭ್ರಮದಂತೆಯೇ ದಿನವಹಿ ಇರಬಾರದು ಎಂದು. ಆದರೆ ಆ ತುಟ್ಟಿ ಖರ್ಚಿನಲ್ಲಲ್ಲ. ಆ ಹೊಂದಾಣಿಕೆ ಊರು ಊರಿಂದ ಬಂಧು ಬಳಗದವರು ಕೆಲವು ದಿನ ತಮಾಷೆಯಾಗಿ ಕಾಲ ಕಳೆಯುವುದಲ್ಲದೆ ತಮ್ಮ ತಮ್ಮನ್ನು ಅರ್ಥ ಮಾಡಿಕೊಳ್ಳಲು ಸುಸಮಯ. ಸಮಾಜದಲ್ಲಿ ಈ ತರಹದ ಒಂದು ಸನ್ನಿವೇಶ ಇಲ್ಲದಿದ್ದಲ್ಲಿ ನಮ್ಮವರು ತಮ್ಮ ಜವಾಬ್ದಾರಿಯನ್ನು ಮರೆತು ಸ್ವಾರ್ಥಿಗಳಾಗುತ್ತಿದ್ದರೇನೋ ?

‘ ಕಮಲಮ್ಮ ಮತ್ತು ಗೌರಿಯನ್ನು ಉರುಟಣೆ ನಡೆಯುವಾಗ ಕರೆತರ ಬೇಕೆಂದು ವೆಂಕಟೇಶ ಬಲವಂತಪಡಿಸಿದ. ನಿಮ್ಮ ಮನೆಯವರು ಏನಾದ ಅಂದುಕೊಂಡಾರು ಎಂದು ರಾಜ ಹೇಳಿದರೂ ಕೇಳದೆ ಬಲವಂತಪಡಿಸಿದ. ಗಿರಿಜೆ ರೋಹಿಣಿಯನ್ನು ಮರತಾಳೆ; ಆ ದಿನ ಸಾಯಂಕಾಲ ವೆಂಕಟೇಶ ಕಾರನ್ನು ಕಳುಹಿಸಿದ್ದ. ಹೋಗಲು ಮನಸ್ಸಿಲ್ಲದಿದ್ದರೂ ರೋಹಿಣಿ ಐದು ಗಂಟೆಗೆಲ್ಲಾ ತಮ್ಮ ಕಾರಿನಲ್ಲೇ ಗಿರಿಜೆಯ ಮನೆಗೆ ಹೋದಳು. ಗಿರಿಜೆಯ ಮನೆ ಕಾರು ಕಮಲಮ್ಮನ ಮನೆಗೆ ಬಂದಾಗ ಹೊರಡಲು ಅವರೆಲ್ಲಾ ಸಿದ್ಧ ರಾಗಿದ್ದರು. ಎಲ್ಲರೂ ಕುಳಿತಮೇಲೆ ಕಾರು ಹೊರಟು ರೋಹಿಣಿಯ ಮನೆಯ ಕಡೆ ತಿರುಗಿತು. “ ಅವಳೇನಾದ್ರೂ ಬಂದ್ರೆ ” ಎಂದು ಗೌರಿ ಕಮಲಮ್ಮನ ಮುಖ ನೋಡಿದಳು. ಕಮಲಮ್ಮ ಉತ್ತರ ಹೇಳುವ ಮುಂಚೆಯೆ ಕಾರು ರೋಹಿಣಿಯ ಮನೆಯ ಹತ್ತಿರ ನಿಂತು ಅವಳಾಗಲೇ ಹೊರಟು ಹೋದ ಳೆಂದು ಹೇಳಿದ ಮೇಲೆ ಪುನಃ ಹೊರಟಿತು. ಕಮಲಮ್ಮ ನಕ್ಕು ಗೌರಿಯ ಮುಖವನ್ನು ನೋಡಿ ಸಧ್ಯ ! ಎಂದಳು. ಗಿರಿಜೆಯ ಮನೆಗೆ ಬಂದಮೇಲೆ ಬೇಡವೆಂದರೂ ಕೇಳದೆ ಗಿರಿಜೆಯ ತಾಯಿ ಹಸೆಯ ಜಗುಲಿಯಿದ್ದ ಚಪ್ಪರ ದಲ್ಲೇ ಸುಮಂಗಲೆಯರ ಹತ್ತಿರ ಕುಳ್ಳಿರಿಸಿದರು. ಬೇಕಾದಷ್ಟು ದುಡ್ಡಿನವರು; ತಮ್ಮ ಅಂತಸ್ತಿಗೆ ತೂಗುವಷ್ಟು ಅದ್ದೂರಿಯಿಂದಲೇ ಏರ್ಪಾಡು ನಡೆದಿತ್ತು. ಉರಟಣೆಯಾದನಂತರ ‘ ಇನ್ನು ಏಳಿ ಹೊತ್ತಾಗುತ್ತೆ ’ ಎಂದು ಪುರೋಹಿತರು ನಾಲ್ಕು ಸಾರಿ ಹೇಳಿದ ಮೇಲೆ ಸಡಗರ ಮುಗಿಯಿತು. ಗಿರಿಜೆ ಹಸೆಯ ಜಗುಲಿ ಯಿಂದಲೇ ರೋಹಿಣಿಯನ್ನು ಮುಗುಳು ನಗೆಯಿಂದ ಮಾತನಾಡಿಸಿದ್ದಲ್ಲದೆ ಕಮಲಮ್ಮ ಮತ್ತು ಗೌರಿಯನ್ನು ಗೌರವಿಸಿದ್ದಳು. ಒಂದು ಕಡೆಯಿಂದ ಗಿರಿ ಜೆಯ ಚಿಕ್ಕಮ್ಮ ಅರಿಸಿನ ಕುಂಕುಮವನ್ನು ಕೊಡುತ್ತಾ ಬಂದರು. ಅವಳ ಜೊತೆಗೆ ಗಿರಿಜೆಯ ತಾಯಿ ವೀಳ್ಯವನ್ನು ಕೊಡುತ್ತಿದ್ದರು. ಗೌರಿಯ ಹತ್ತಿರ ಬಂದಾಗ ಅವಳ ಮುಂದೆ ಕೂಡ ಕುಂಕುಮದ ಬಟ್ಟಲನ್ನು ಹಿಡಿದರು. ಗೌರಿಗೆ ಏನು ಮಾಡಲೂ ತೋರದೆ ಒದ್ದಾಡಿದಳು. ಕುಂಕುಮವನ್ನು ಇಟ್ಟುಕೊಳ್ಳದೆ ತಡಮಾಡುವ ಗೌರಿಯನ್ನು ನೋಡಿ ಅರ್ಥವಾಗಿ, ಗಿರಿಜೆಯ ಚಿಕ್ಕಮ್ಮ ತುಂಬಾ ನೊಂದುಕೊಂಡರು. ಇದನ್ನು ನೋಡುತ್ತಿದ್ದ ಗಿರಿಜೆಗೂ ಅಯ್ಯೋ ! ಎನ್ನಿಸಿತು. ಕಮಲಮ್ಮ ಮತ್ತು ಗೌರಿ ರಾಜ ಬರುವುದನ್ನು ಎದುರು ನೋಡಿದರು.

ವೆಂಕಟೇಶ ಬೆಂಗಳೂರಿನಿಂದ ಬಂದಿದ್ದ ತನ್ನ ಚಿಕ್ಕಪ್ಪನಿಗೆ ರಾಜನ ಪರಿಚಯ ಮಾಡಿಕೊಟ್ಟ. ಅವನ ಚಿಕ್ಕಪ್ಪ ಡಾ. ಕೃಷ್ಣಸ್ವಾಮಿ ತಾತಾವಿಜ್ಞಾನ ಶಾಲೆಯಲ್ಲಿ ಅಧ್ಯಾಪಕನಾಗಿದ್ದ. ರಾಜ ತಾನು ಸೇರಬೇಕಾದುದು ಮತ್ತಿತರ ವಿಷಯಗಳನ್ನು ಹೇಳಿದ. ಅಲ್ಲಿ ಸಾಧ್ಯವಾದಷ್ಟು ಅನುಕೂಲ ಮಾಡಿಕೊಡುವುದಾಗಿ ಡಾ. ಕೃಷ್ಣಸ್ವಾಮಿ ಮಾತುಕೊಟ್ಟರು. ಮಾರನೆಯ ದಿನ ಪುನಃ ಬಂದು ನೋಡುವುದಾಗಿ ಹೇಳಿ ತನಗಾಗಿ ಕಾದಿದ್ದ ತಾಯಿ ಮತ್ತು ಗೌರಿಯೊಡನೆ ಕಮ್ಮಮನೆಯ ಕಡೆ ಹೊರಟ. ಗೌರಿಯು ಕಣ್ಣೀರಿಟ್ಟಿದ್ದನ್ನು ರಾಜ ನೋಡಿದ. ಆದರೆ ಏಕೆಂದು ಕೇಳಲು ಅವನಿಗೆ ಮನಸ್ಸು ಬರಲಿಲ್ಲ. ಏನನ್ನೋ ಜ್ಞಾಪಿಸಿ ಕೊಂಡು ಅತ್ತಿರಬೇಕು ಎಂದುಕೊಂಡ. " ಗೌರಿ, ತಾತಾವಿಜ್ಞಾನ ಶಾಲೆಯ ಅಧ್ಯಾಪಕರು ವೆಂಕಟೇಶನ ಚಿಕ್ಕಪ್ಪ ಅವರಿಗೆ ಹೇಳಿದ್ದೇನೆ " ಎಂದ ರಾಜ.

" ರಾಜ....ನಿನ್ನ ಓದಿಗೆ ನಾನು ದುಡ್ಡು ಕೊಡ್ತೇನೆ " ಎಂದಳು ಗೌರಿ.

" ಗೌರಿ !........ "

" ಸುಮ್ನಿರು ರಾಜ! ಮಹಾರಾಯರು ನನ್ನ ಕೈಗೆ ನಾಲ್ಕು ಕಾಸು ಬರುವಂತೆ ಮಾಡಿಹೋದರು.... "

" ಹಾಗುಂಟೆ...." ಎಂದು ಕಮಲಮ್ಮ ಹೇಳಿದಳು.

" ಅದೇಕಮ್ಮ....ಕೊನೆಯವರೆಗೂ ರಾಜನಲ್ಲದೆ ಇನ್ಯಾರು ಅನ್ನಹಾಕಬೇಕು ? ಅವನು ಸಾಲತರೋ ಬದಲು ನಾನು ಕೊಟ್ಟಿರ್ತೇನೆ.

" ಗೌರಿ.... " ಎಂದು ಆಶ್ಚರ್ಯದಿಂದ ರಾಜ ಕರೆದ.

" ಏಕೆ ರಾಜಣ್ಣ.... ಬೇಡ ಅನ್ಬೇಡ.... ನೀನು ಸಂಪಾದಿಸುವಾಗ ಸ್ವಲ್ಪ ಕೂಡಿಟ್ಟು ಇದನ್ನು ಸೀದುಬಿಟ್ಟರೆ ಸಾಕು ಎಂದು ಸರಸಳನ್ನು ರಾಜನ ಕೈಗೆ ಕೊಟ್ಟು ಕಣ್ಣೀರಿಟ್ಟಳು. ಮಾತನಾಡುವುದಕ್ಕೆ ಏನನ್ನೂ ಬಿಡದೆ ಗೌರಿ ಮಾತನಾಡಿದ್ದಳು. ಮನೆಗೆ ಬಂದು ಊಟಮಾಡಿ ಮಲಗಿದರೂ ಗೌರಿಯ ನಿರ್ಧಾರ ರಾಜನಿಗೆ ಅರ್ಥವಾಗಲಿಲ್ಲ.

## ೧೧

ಮದುವೆಯ ವಿಷಯದಲ್ಲಿ ರಾಜನ ಅನಿರೀಕ್ಷಿತ ನಿರ್ಣಯ ರೋಹಿಣಿಯ ಮೇಲೆ ತುಂಬಾ ಪರಿಣಾಮವನ್ನುಂಟುಮಾಡಿತ್ತು. ಸಂಜೆಯ ಮಂದ ಮಾರುತದ ಸೆಳತಕ್ಕೆ ಸಿಕ್ಕಿಹೊಯ್ದಾಡಿದ್ದ ಹೂವು ಆ ಆಟದಲ್ಲಿ ಆದಕ್ಕೆ ನಂಬಿಕೆ

ಬರಲಿಲ್ಲವೇನೋ ಒಮ್ಮೆಯೇ ನಿಂತಿತು. ಕೆಲವು ಹೊತ್ತು ತನ್ನ ಕಂಪನ್ನು ಪಸರಿಸಿ ಬಾಡಬೇಕು, ಅಷ್ಟೆ. ತುಂಬಾ ಚಟುವಟಿಕೆಯಿಂದಿದ್ದ ರೋಹಿಣಿ ಈಗ ಯಾವ ವಿಷಯದಲ್ಲೂ ಆಸಕ್ತಿಯನ್ನು ತೋರಿಸುತ್ತಿರಲಿಲ್ಲ. ಬೆಳಗೆದ್ದು ತಿಂಡಿ ತೀರ್ಥದ ಹೊತ್ತಿನಲ್ಲಿ ತಂದೆಯ ಹತ್ತಿರ ಮಾತನಾಡಿದರೆ ಮಾತು. ಬಿಟ್ಟರೆ ಬೇರೆಯವರೊಡನೆ ಮಾತಿಲ್ಲ. ಇದರ ಜೊತೆಗೆ ವಿಶ್ವನಾಥನ ಚೇಷ್ಟೆ ಹೆಚ್ಚಿತ್ತು. ಕೊಠಡಿಯಲ್ಲಿ ಒಬ್ಬಳೇ ಓದುತ್ತ ಕುಳಿತಿದ್ದಾಗ ಯಾವುದೋ ನೆಪ ಹಾಕಿಕೊಂಡು ಬಂದುಬಿಡುತ್ತಿದ್ದ. ತನಗೆ ಬೇಡವಾಗಿದ್ದ ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದ. ಎಲ್ಲಕ್ಕೂ ಅವಳು ಸುಮ್ಮನಿರುತ್ತಿದ್ದಳು. ಅಷ್ಟು ಮಾತನಾಡಿಸಿಕೊಂಡು ಬಂದರೂ ತಾನು ಸುಮ್ಮನಿರುವುದು ಸರಿಯಲ್ಲ ಎಂದು ತಿಳಿದು ಏನೋ ಅವಳೂ ಒಂದೆರಡು ಅರ್ಥವಿಲ್ಲದ ಉತ್ತರ ಕೊಡುತ್ತಿದ್ದಳು. ಅವಳಿಗೆ ಯಾವುದೂ ಬೇಕಿರಲಿಲ್ಲ. ನಿಜ ಸಂಗಾತಿಯನ್ನು ಕಳೆದುಕೊಂಡ ಹೂವಿಗೆ ಇನ್ನೇನು ಬೇಕು ?

ಈ ಮಧ್ಯೆ ಗಿರಿಜೆ ಒಂದು ಸಾರಿ ರೋಹಿಣಿಯ ಮನೆಗೆ ಬಂದಿದ್ದಳು. ಗೆಳತಿಯೊಡನೆ ಹೃದಯ ಬಿಚ್ಚಿ ಮಾತನಾಡಿದ್ದಳು ರೋಹಿಣಿ. ಅಬ್ಬಾ ! ಎಂತಹ ಪ್ರೇಮ ಅವಳದು. ರಾಜ ಅವಳನ್ನು ನಿರಾಕರಿಸಿದ್ದರೂ ಅವನ ಮೂರ್ತಿಯನ್ನೇ ಪೂಜೆ ಮಾಡುತ್ತಿದ್ದಳು. ಆ ಮೋಹನ ಮೂರ್ತಿಯನ್ನು ಮರೆಯಲಾರಳು. "ಹೃದಯದಲ್ಲಿದ್ದ ಪ್ರೇಮಮೂರ್ತಿ ತಾನಾಗಿಯೇ ಮಾಸುತ್ತಾ ಬರಬಹುದು ಗಿರಿಜೆ. ಆದರೆ ನನಗೆ ನಂಬಿಕೆ ಇದೆ....ಅವರು ಒಂದು ದಿನವಾದರೂ ನನ್ನನ್ನು ಜ್ಞಾಪಿಸಿಕೊಂಡು ಮರುಗುತ್ತಾರೆ" ಎಂದು ರೋಹಿಣಿ ಹೇಳಿದಾಗ ಗಿರಿಜೆಗೆ ಆಶ್ಚರ್ಯವಾಯ್ತು. ಗಿರಿಜೆ ಹೆಚ್ಚಿಗೆ ಏನು ಹೇಳಬಲ್ಲಳು. ತನಗೆ ತಿಳಿದಿದ್ದ ರೋಹಿಣಿಗೆ ಬೇಡವಾಗಿದ್ದ ಒಂದೆರಡು ಲೋಕಾರೀತಿ ಮಾತನ್ನು ಹೇಳಿದಳು.

ಕೆಲವು ದಿನ ಮದುವೆಯ ಮಾತು ಬೇಡ ಎಂದು ಸುಮ್ಮನಿದ್ದ ಸುಂದರಮ್ಮ ತನ್ನ ಮಾತುಕತೆಗಳನ್ನು ಪುನಃ ಪ್ರಾರಂಭಿಸಿದಳು. "ಅವನು ಅಯೋಗ್ಯ....ನಿನ್ನಂತಹ ಹುಡುಗಿ ಬೇಡ ಅಂದಮೇಲೆ ಅವನ ಯೋಚನೆ ಏಕೆ" ಎಂದು ಹೇಳುವಳು. "ಈಗಲೇ ಮನಸ್ಸಿಗೆ ಹಚ್ಚಿಕೊಂಡು ಕೊರಗುವುದನ್ನು ನೋಡಲಾರೆ" ಎನ್ನುವಳು. ರೋಹಿಣಿಯ ಸಂಗಾತಿಯೆಂದರೆ

ಪುಸ್ತಕಗಳು. ಯಾವಾಗಲೂ ಓದಿನಲ್ಲಿ ಮಗ್ನಳಾಗಿರುವಳು. ಮುಂಚೆಯೋ ಏರ್ಪಾಡು ಮಾಡಿಕೊಂಡಿದ್ದರೇನೋ. ಒಂಬು ಏನ ಆನಂದರಾಯರು ರೋಹಿಣಿಯ ಕೊಠಡಿಗೆ ಬಂದರು. ಓದುತ್ತಿದ್ದ ರೋಹಿಣಿ ಪುಸ್ತಕವನ್ನು ಮುಚ್ಚಿ ಕುಳಿತುಕೊಂಡಳು. "ನೀನು ಕೆಲವು ದಿನಗಳಿಂದ ಸರಿಯಾಗಿಲ್ಲ, ಇದನ್ನು ನೋಡಿಕೊಂಡು ನಾನು ಸುಮ್ಮನಿರಲೆ" ಎಂದು ಹೇಳುತ್ತಾ ಆನಂದರಾಯರು ಕುರ್ಚಿಯ ಮೇಲೆ ಕುಳಿತರು.

"ಅಣ್ಣಾ ! ಒಂದೆರಡು ದಿನ...."

"ಒಂದು ವಿಷಯ ನೋಡು, ನೀನೇನೋ ಅವನನ್ನು ಮದ್ವೆ ಆಗ್ತೀನಿ ಎಂದು ದೊಡ್ಡ ಮನಸ್ಸು ಮಾಡಿದೆ. ಅವನು ನಿರಾಕರಿಸಿದರೆ ಅವನಿಗಾಗಿ ನೀನು ಮರುಗುವದು ಸರಿಯೇ" ಎಂದರು.

ಸರಿಯೋ ತಪ್ಪೋ....ರೋಹಿಣಿ ನಿರ್ಧರಿಸುವಂತಿರಲಿಲ್ಲ. ಆದರೂ ತಾನೇ ಬೇಡ ಎಂದಿದ್ದ ರಾಜನಿಗಾಗಿ ಇಷ್ಟೊಂದು ಮರುಗುವುದು ಅವಳಿಗೇ ಸರಿಯಾಗಿ ಕಾಣಲಿಲ್ಲ.

'ನಾನೇನು ಮಾಡ್ಲಿ ಅಣ್ಣ....'

'ಈಗೇನು ಆಗಿರೋದು ಬೇರೆ ಏರ್ಪಾಡು. ಮಾಡಿದರೆ ತೀರಿತು.'

'ಅಣ್ಣ....ನಾನು ಓದುತ್ತೇನೆ....ಮದುವೆ ಬೇಡ.'

'ಹಾಗೆ ಆಗುತ್ಯೆ....ನಾಲ್ಕು ಜನ ನಡೆದಂತೆ ನಡಿಬೇಡ್ವೆ'

'ನಾಲ್ಕು ಜನದಂತೆ ನಾವಿಲ್ಲವಣ್ಣ.... ಹಣವಂತರು ಎಂದು ಒಂದು ಹೊಲಗೇರಿ ಮಾಡಿದ್ದಾರೆ.'

'ರೋಹಿಣಿ, ನೀನು ಅದನ್ನೆಲ್ಲಾ ಯೋಚಿಸಿ ತಲೆ ಕೆಡಿಸ್ಕೋ ಬೇಡ.'

'ಮಗ ಮತ್ತು ಮಗಳೆಂದು ಸಾಕುತ್ತಿದ್ದೀರಿ........'

'ಹೌದು ! ಅವನು ಒಪ್ಪಿದ್ದರೆ ನಮ್ಮ ಮನೆಯಲ್ಲೇ ಇಟ್ಟುಕೊಂಡು, ಇರೋಣ ಎಂದು.'

'ಅದಕ್ಕೇ ಅವರು ಒಪ್ಪಲಿಲ್ಲ....ತಾಯಿ ಮತ್ತು ಅಕ್ಕನ ಗತಿ ಏನು ಎಂದು.'

'ಬಿಡು, ಈಗೇಕೆ ಆ ಮಾತು....ಅವರ ಜೀವನಕ್ಕೆ ಬೇರೆ ಏರ್ಪಾಡು ಮಾಡಿದ್ದರೆ ಆಗಿತ್ತು.'

' ನನಗಾಗಿ ಎಷ್ಟು ಮರುಗುತ್ತಿ ಮಗಳು ಮನೆ ಬಿಡದಿರಲೆಂದು ಅಳಿಯ ಮನೇಲಿ ಇರಲೆನ್ನುತ್ತಿ....ಅವನೂ ಹಾಗೆ ಯೋಚಿಸಿರಬೇಕಷ್ಟೆ....! ಆನಂದರಾಯರಿಗೆ ಮಗಳು ಹೇಳಿದ್ದು ಮುಖದ ಮೇಲೆ ಹೊಡೆದಂತಿತ್ತು. ತನ್ನಿಂದ ತನ್ನ ಮಗಳು ದೂರ ಇರಬಾರದೆಂದು ಆಸೆ ಪಟ್ಟಂತೆ, ರಾಜನ ತಾಯಿ ತನ್ನ ಸರ್ವಸ್ವ ಎಂದುಕೊಂಡಿದ್ದ ರಾಜನನ್ನು ಬಿಟ್ಟು ಜೀವಿಸಬಲ್ಲಳೆ? ಆ ವೇಳೆಗೆ ಸುಂದರಮ್ಮ ಕೊಠಡಿಗೆ ಬಂದು ಗೂಡಿನಲ್ಲಿದ್ದ ಬಾಚಣಿಗೆ ಮತ್ತು ತೈಲದ ಸೀಸೆಯನ್ನು ತೆಗೆದುಕೊಂಡು ಹೋಗುವುದರಲ್ಲಿದ್ದಳು. ಆನಂದರಾಯರು ಕೂಗಿ " ಇಲ್ಲಿ ಬಾರೆ....ನೀನೂ ಒಂದು ಮಾತು ಹೇಳು " ಎಂದರು. ಆ ಮಾತಿಗಾಗಿ ಕಾದಿದ್ದ ಸುಂದರಮ್ಮ ತನ್ನ ಸಂತೋಷವನ್ನು ವ್ಯಕ್ತ ಪಡಿಸದೆ " ಸರಿ, ದಿನಾ ಇದೇ ಮಾತು ನನಗೆ ಬೇಜಾರಾಗಿದೆ " ಎಂದು ರೋಹಿಣಿಯ ಪಕ್ಕದಲ್ಲಿ ಕುಳಿತಳು.

ಆನಂದರಾಯರೇ ಮಾತನಾಡಿದರು. "ಬೇರೆ ಏರ್ಪಾಡು ಮಾಡಲು ಪ್ರಯತ್ನಿಸಿದರೆ ಪುನಃ ಹೆತ್ತವರಿಗೆ ಹೊರಗಾಗ್ತಾಳೆ."

"ಬೇರೆ ಏರ್ಪಾಡು ಮಾಡಿ ಅಂದವರ್‍ಯಾರು....ಮೊದಲಿನಂತೆ ಆಗ್ಲೀ." ರೋಹಿಣಿ ಕುತೂಹಲದಿಂದ ಸುಂದರಮ್ಮನ ಮುಖವನ್ನು ನೋಡಿದಳು.

" ಆ ಏರ್ಪಾಡು ಮುರಿದು ಬಿತ್ತಲ್ಲ. "

" ಅದಲ್ಲ–ಹೋಗ್ತೀನೆ ಎಂದು ಹೊರಟಿದ್ದ ವಿಶ್ವನಾಥನನ್ನು ನಿಲ್ಲಿಸಿದ್ದೇನೆ. "

ರೋಹಿಣಿ ಯೋಚನೆಯಿಂದ ತಲೆತಗ್ಗಿಸಿದಳು.

" ಹೌದು....ನೀನು ಹೇಳುವುದೇನೋ ಒಂದು ರೀತಿ ಸರಿಯೆ....... ವಿಶ್ವನಾಥನನ್ನು ರೋಹಿಣಿ ಮದುವೆಯಾದ್ರೆ ಅಳಿಯ ಮಗಳು ಮನೇಲಿ ನಿಲ್ತಾರೆ.... "

" ಅಲ್ಲವೆ ನೀವೇ ಹೇಳಿ.... " ಎಂದು ಸುಂದರಮ್ಮ ಒತ್ತಿ ಹೇಳಿದಳು.

" ನಿನಗೆ ಇಷ್ಟವೆ ಹೇಳು ರೋಹಿಣಿ " ಎಂದು ಆನಂದರಾಯರು ಕೇಳಿದರು.

ಬೇಡ ಬೇಡ ಎಂದು ನೂರು ಸಾರಿ ನೂರು ವಿಧದಲ್ಲಿ ಹೇಳಿದ್ದರೂ ಪುನಃ ನಿನಗೆ ಇಷ್ಟವೆ ಎಂದು ಕೇಳಿದರೆ ಅವಳೇನು ಹೇಳಬೇಕು. ಆದರೆ

ಒಂದು ಮಾತ್ರ ಗೊತ್ತಾಯ್ತು. ತಂದೆ ಮತ್ತು ಚಿಕ್ಕಮ್ಮ ಇಬ್ಬರೂ ಈ ಏರ್ಪಾಡಿಗೆ ನಿರ್ಧರಿಸಿ ಅವಳನ್ನು ಕೇಳಲು ಬಂದರು. ಅವರ ಇಷ್ಟಕ್ಕೆ ವಿರೋಧಿಸಿದರೂ ಕಷ್ಟ. ಹಾಗೆಂದು ನುಂಗಲಾರದ ತುತ್ತನ್ನು ನುಂಗಲು ಸಾಧ್ಯವೆ. ಅವಳಿಗೆ ಅನ್ನಿಸಿತ್ತು, ರಾಜ ತನ್ನ ಪ್ರೀತಿಯನ್ನು ಅಪಹರಿಸಿದ್ದಾನೆ. ಇನ್ನುಳಿದಿರುವುದು ದೇಹ. ಆತ್ಮ ರಾಜನಿಗೆ ಅರ್ಪಣೆ. ದೇಹ....? ಆತ್ಮ ಹೋದ ಜೀವ ಇದ್ದರೂ ಇಲ್ಲದಂತೆ. ಆದರೆ ಬಾಳಿ ಕರ್ಮ ಸವೆಸಬೇಕಲ್ಲ. ರೋಹಿಣಿಯ ಮುಖ ದೃಢಗೊಂಡಿತು. ತಲೆ ತಗ್ಗಿಸಿಯೆ "ನೀವಿಬ್ಬರೂ ಒಪ್ಪಿದರೆ ಸರಿ....ನನ್ದೇನು...." ಎಂದು ಹೇಳಿ ಮುಗಿಸುವ ಮುಂಚೆಯೆ ಸುಂದರಮ್ಮ ಸಂತೋಷದಿಂದ ರೋಹಿಣಿಯ ಕೈಹಿಡಿದು "ಇಷ್ಟು ದಿನದ ಮೇಲಾದರೂ ಒಪ್ಪಿದೆಯಲ್ಲ" ಎಂದು ಬಾಚಣಿಗೆ ತೈಲವನ್ನು ಅದೇ ಗೂಡಿನಲ್ಲಿಟ್ಟು ಕೊಠಡಿಯಿಂದ ಹೊರಬಿದ್ದಳು. ಸ್ವಲ್ಪಹೊತ್ತಾದ ಮೇಲೆ ಆನಂದರಾಯರೂ ಮೆಲ್ಲನೆ ನಡೆಯುತ್ತಾ ಮಹಡಿಯ ಮೆಟ್ಟಲನ್ನು ಇಳಿದರು. ನಾವು ಮಾಡಿದ ಬಲವಂತ ಹೇಗೆ ಕೊನೆಗೊಳ್ಳುತ್ತದೆಯೋ ಎಂದು ಯೋಚಿಸಿದರು. ಕೊಠಡಿಯಲ್ಲಿ ರೋಹಿಣಿ ಬಿಕ್ಕಳಿಸಿ ಅಳುವ ಶಬ್ದ ಕೇಳಿಸಿತು. ತಿರುಗಿ ಮಹಡಿಯ ಮೇಲೆ ಹೋಗೋಣ ಎಂದು ಹಿಂದಿರುಗಿದರೂ ಅವರಿಗೆ ಧೈರ್ಯ ಸಾಲದೆ ಕೆಳಗಿಳಿದು ತೋಟದ ಹತ್ತಿರ ನಡೆದರು.

ತನ್ನ ಅಕ್ಕನೇ ತನ್ನ ಪರ ವಾದಿಸಿ ಗೆದ್ದಾಗ ವಿಶ್ವನಾಥನನ್ನು ಹಿಡಿಯುವವರೆ ಇಲ್ಲದಂತಾಯ್ತು. "ರೋಹಿಣಿ ಒಪ್ಪಿದಳೆಂದು" ಕೇಳಿ ನಂಬದಿದ್ದರೂ ಅವಳ ಹತ್ತಿರ ಮಾತನಾಡಿ ತನ್ನ ಮನಸ್ಸಿನಲ್ಲಿರುವುದನ್ನು ಬಿಚ್ಚಿ ಹೇಳೋಣ ಎಂದು ಹೊಂಚು ಹಾಕುತ್ತಿದ್ದ. ಸರಿಯಾದ ಸಂದರ್ಭವೂ ಒದಗಿತು. ಸಾಯಂಕಾಲ ಗಿರಿಜೆಯ ಮನೆಗೆ ಹೋಗಿ ಮಾತನಾಡೋಣವೆಂದು ರೋಹಿಣಿ ಬಟ್ಟೆ ಬದಲಾಯಿಸಿ ಸಿದ್ಧವಾಗಿದ್ದಳು. ಹೊರಗೆ ಹೋಗಿದ್ದ ಕಾರಿನ್ನೂ ಬಂದಿರಲಿಲ್ಲವಾಗಿ ಕಾಯಬೇಕಾಯ್ತು. ಉಯ್ಯಾಲೆಯ ಮೇಲೆ ಕುಳಿತು ತೂಗಿಕೊಂಡಳು. ಮನಸ್ಸು ಉಯ್ಯಾಲೆಯ ಸಮಕ್ಕೂ ತೂರಾಡುತ್ತಿತ್ತು. ಒಂದೆರಡು ನಿಮಿಷದನಂತರ ಮನೆಯ ಕಡೆ ನೋಡಿದಾಗ ಒಳ್ಳೆಯ ಬಟ್ಟೆ ಹಾಕಿಕೊಂಡು ವಿಶ್ವನಾಥ ಕೈತೋಟದಲ್ಲಿ ಓಡಾಡುತ್ತಿದ್ದ. ತೂಗಿಕೊಳ್ಳುವುದನ್ನು ರೋಹಿಣಿ ನಿಲ್ಲಿಸಿದಳು. ವಿಶ್ವನಾಥ ಉಯ್ಯಾಲೆಯ ಹತ್ತಿರ ಬಂದು ಅವಳ ಪಕ್ಕದಲ್ಲಿ ಕುಳಿತ. ರೋಹಿಣಿ ಸುಮ್ಮನೆ ಕುಳಿತಿದ್ದಳು.

"ಎಲ್ಲೋ ಹೋಗುವಂತೆ ಕಾಣುತ್ತೆ" ಎಂದು ಕಲ್ಲುಗಿಂಡ.

"ಹೌದು.... "ಎಂದಳು ರೋಹಿಣಿ.

"ಮದುವೆಗೆ ಒಪ್ಪಿಗೆ ಕೊಟ್ಟೆ ಎಂದು ಚಿಕ್ಕ ಹೇಳಿದಳು."

"................"

"ನೀನು ಓದಬೇಕೆಂದು ಹೇಳಿದೆಯಂತೆ....ಬೇಕಾದಷ್ಟು ಓದು"

"ಯಾವ ಓದೂ ಬೇಡ...."

"ಒಂದು ತರಹ ಇದ್ದೀ....ಸಂತೋಷದಿಂದ ಇರಬಾರದೆ?"

ರೋಹಿಣಿ ಅದಕ್ಕೇನೂ ಉತ್ತರ ಕೊಡಲಿಲ್ಲ. ಹೊರಗೆ ಹೋಗಿದ್ದ ಕಾರು ಮನೆಯ ಒಳಕ್ಕೆ ಶಬ್ದ ಮಾಡುತ್ತಾ ಬಂತು. ಸುಂದರಮ್ಮ ರಾಯರ ಜೊತೆಯಲ್ಲಿ ಪೇಟೆಗೆ ಹೋಗಿದ್ದಳು. ರೋಹಿಣಿ ಮತ್ತು ವಿಶ್ವನಾಥ ಉಯ್ಯಾಲೆ ಮಣೆಯ ಮೇಲೆ ಕುಳಿತಿದ್ದನ್ನು ನೋಡಿ ಅವರಿಬ್ಬರೂ ನಕ್ಕರು. ಉಯ್ಯಾಲೆಯಿಳಿದು ಸ್ನೇಹಿತೆ ಮನೆಗೆ ಹೋಗ್ತೇನೆ ಎಂದು ವಿಶ್ವನಾಥನಿಗೆ ಹೇಳಿ ರೋಹಿಣಿ ಕಾರಿನಲ್ಲಿ ಹೋದಳು. ವಿಶ್ವನಾಥ ಏನನ್ನೋ ಯೋಚಿಸುತ್ತಾ ಉಯ್ಯಾಲೆಯನ್ನು ತೂಗಿಕೊಳ್ಳುತ್ತಿದ್ದ.

× × × ×

ರಾಜ ಬರೆದು ಹಾಕಿದ್ದ ಅರ್ಜಿಯನ್ನು ಅಂಗೀಕರಿಸಿ ಅವನನ್ನು ತಾತಾ ವಿಜ್ಞಾನ ಶಾಲೆಗೆ ಸೇರಿಸಿಕೊಳ್ಳಲು ಅನುಮತಿ ಬಂತು. ಅವನಿಗೆ ಡಾ. ಕೃಷ್ಣ ಸ್ವಾಮಿಯವರ ಶಿಫಾರ್ಸಲ್ಲದೆ ಸ್ವತಃ ರ್‍ಯಾಂಕು ಬಂದಿದ್ದ ವಿದ್ಯಾರ್ಥಿಯಾಗಿದ್ದ. ನಾಲ್ಕೈದು ದಿನಗಳಲ್ಲಿಯೇ ಬೆಂಗಳೂರಿಗೆ ಹೋಗಬೇಕಾಯ್ತು. ಆ ಸ್ವಲ್ಪ ದಿನಗಳಲ್ಲಿ ಯಾವುದು ಅಂತ ಸಿದ್ಧ ಮಾಡಿಕೊಳ್ಳುವುದು

ಕಮಲಮ್ಮನಿಗಂತೂ ಬಹಳ ಯೋಚನೆ. ಮಗನಿಂದ ಅಗಲಿ ಒಂದು ದಿನವಾದರೂ ಇದ್ದವಳಲ್ಲ. ಈಗ ಎರಡು ವರ್ಷ ರಾಜ ಬೆಂಗಳೂರಿಗೆ ಹೋಗ್ತಾನೆ. ಅಷ್ಟು ದಿನವೂ ಹೊಸ ಊರಿನಲ್ಲಿ ಹೋಟಲ ಊಟ ಮಾಡಿಕೊಂಡಿರಬೇಕು.ಎರಡು ವರ್ಷ ಕಳೆದರೆ ಎಲ್ಲಿಯಾದರೂ ದೊಡ್ಡ ಕೆಲಸ ಸಿಕ್ಕಿ ನಮ್ಮನ್ನೆಲ್ಲಾ ಕರೆದುಕೊಂಡು ಹೋಗುತ್ತಾನೆ.ಅದೊಂದೇ ಸಮಾಧಾನ.ರಾಜ ಬೆಂಗಳೂರಿಗೆ ಹೋಗುವುದೇನೋ ಗೌರಿಗೆ ಇಷ್ಟ. ಒಂದೆರಡು ದೊಡ್ಡ ಊರುಗಳನ್ನು ಸುತ್ತಿದರೆ ಪ್ರಪಂಚದ ಜ್ಞಾನ ಬರುತ್ತೆ ಎನ್ನುವಳು ಪೋಸ್ಟಾಫೀಸಿನಲ್ಲಿ

ಟ್ಟಿದ್ದ ಸಾವಿರದ ಪೈಕಿ ೩೦೦ ರೂಪಾಯಿಗಳನ್ನು ವಾಪಸು ಪಡೆದು ರಾಜನಿಗೆ ಕೊಟ್ಟಳು. ಮುಂದಿನ ತಿಂಗಳು ೨೦೦ ರೂಪಾಯಿಗಳನ್ನು ತೆಗೆದು ಕಳುಹಿಸುವುದೆಂದು ಹೇಳಿದ್ದಳು.

ಸ್ವಲ್ಪ ದುಡ್ಡು ಖರ್ಚು ಮಾಡಿ ಎರಡು ಜೊತೆ ಸೂಟನ್ನು ಹೊಲಿಸಿಕೊಂಡು ಬೇಕಾಗಿದ್ದ ಚೂರುಪಾರು ಬಟ್ಟೆಗಳನ್ನು ಕೊಂಡುಕೊಂಡ. ಎಲ್ಲವನ್ನೂ ಹಾಕಿಕೊಳ್ಳಲು ಸರಿಯಾದ ಪೆಟ್ಟಿಗೆಯಿರಲಿಲ್ಲ. ಗೌರಿಯ ಟ್ರಂಕು ಹೊಸದು. ರಾಜ ಅದಕ್ಕಾಗಿ ಯೋಚಿಸುವ ಮುಂಚೆ ಅವನ ಬಟ್ಟೆಗಳನ್ನು ಟ್ರಂಕಿನಲ್ಲಿ ಹಾಕಿದಳು. ಆ ದಿನ ಮಧ್ಯಾಹ್ನದ ಮೂರು ಗಂಟೆಯ ರೈಲಿನಲ್ಲಿ ಬೆಂಗಳೂರಿಗೆ ಹೋಗಬೇಕಾಗಿತ್ತು. ವೆಂಕಟೇಶನನ್ನು ನೋಡಿಯಾಯ್ತು. ಅವರ ಚಿಕ್ಕಪ್ಪ ಡಾ. ಕೃಷ್ಣಸ್ವಾಮಿಗೊಂದು ಕಾಗದ ಬರೆದುಕೊಟ್ಟಿದ್ದ. ತಾಯಿಗೆ ಅನೇಕ ವಿಧದಲ್ಲಿ ಸಮಾಧಾನಮಾಡಿದ. ಅಲ್ಲದೆ ಗೌರಿಗೆ ಹೇಳಿದ. ಸರಸುವನ್ನು ಎತ್ತಿ ಮುದ್ದಾಡುವದರಲ್ಲಿ ವೆಂಕಟೇಶ ಕಾರನ್ನು ತಗೆದುಕೊಂಡು ಬಂದೇಬಿಟ್ಟ. ಡ್ರೈವರ ಸಾಮಾನನ್ನೆಲ್ಲಾ ಕಾರಿನಲ್ಲಿಟ್ಟ ಮೇಲೆ, ರಾಜ ತಾಯಿಗೆ, ಗೌರಿಗೆ ನಮಸ್ಕಾರಮಾಡಿ ಕಾರಿನಲ್ಲಿ ವೆಂಕಟೇಶನೊಂದಿಗೆ ಕುಳಿತ. ಕಾರ ಸ್ಟೇಷನ್ ಕಡೆ ಹೊರಟಿತು. ರಾಜ ಸ್ಟೇಷನ್‌ಗೆ ಬಂದು ಇಂಟರ್ ಟಿಕೆಟ್ ತೆಗೆದುಕೊಂಡು ಪ್ಲಾಟ್ ಫಾರಂಗೆ ಬಂದಾಗ ಆನಂದರಾಯರು ಓಡಾಡುತ್ತಿದ್ದುದು ಕಾಣಿಸಿತು. ರೋಹಿಣಿ ಬಂದಿರುವಳೇನೋ ಅಂದುಕೊಂಡ. ವೆಂಕಟೇಶ ಮೊದಲೇ ಗಾಡಿಹತ್ತಿ ಕುಳಿತಿದ್ದ. ಕೂಲಿಯುವನು ಟ್ರಂಕು ಹಾಸಿಗೆಯುನ್ನು ರೈಲಿನಲ್ಲಿಟ್ಟ. ರೈಲು ಹೊರಡಲು ಇನ್ನೂ ಅರ್ಧಗಂಟೆಯಿತ್ತು. ಒಂದು ಕೆಲಸವನ್ನು ರಾಜ ಮರೆತಿದ್ದ. ಹೋಗುವ ಮುಂಚೆ ರೋಹಿಣಿಯುನ್ನು ನೋಡಿ ಒಂದು ಮಾತು ಹೇಳಿ ಬರಬೇಕಾಗಿತ್ತು. ಇಲ್ಲಿಗೆ ತಂದೆಯ ಜೊತೆಯುಲ್ಲಿ ಬಂದಿರುವಳೇನೋ, ಹೇಳಿಬಿಡೋಣ ಎಂದುಕೊಂಡವನು ಹಾಗೆ ಮಾಡದೆ ಒಂದು ಚೀಟಿ ಬರೆದು ವೆಂಕಟೇಶನ ಕೈಗೆ ಕೊಟ್ಟ. ಸ್ವಲ್ಪ ಹೊತ್ತಿನಲ್ಲಿ ರೋಹಿಣಿ ಮನೆಯ ಕಾರು ನಡೆಸುವವನು ಹಾಸಿಗೆಯುನ್ನು ಹಿಡಿದು ತನ್ನ ಗಾಡಿಯ ಪಕ್ಕದಲ್ಲಿದ್ದ ಎರಡನೆಯ ತರಗತಿಯ ಡಬ್ಬಿಗೆ ಹತ್ತಿದ. ಹಿಂದೆ ರೋಹಿಣಿ ಮೆಲ್ಲನೆ ಹೋಗುತ್ತಿದ್ದುದನ್ನು ನೋಡಿದ. ಆನಂದರಾಯರೊಡನೆ ರೋಹಿಣಿ ಮಾತನಾಡುತ್ತ ಪ್ಲಾಟ್ ಫಾರಂನಲ್ಲಿ ನಿಂತಿದ್ದಳು. ಮೊದಲನೆಯ ಗಂಟೆ ಹೊಡೆದ

ಹಾರವನ್ನು ಅವನ ಕೈಗೆ ಕೊಟ್ಟು ಕೈಮುಗಿದು ತನ್ನ ಭಕ್ತಿ ಕಾಣಿಕೆಯಿತ್ತ, ವಿಶ್ವೇಶ್ವರೈಯನವರೊಡನೆ ಡಾ. ಕೃಷ್ಣಸ್ವಾಮಿಯವರೂ ಹೋದುದರಿಂದ ರಾಜ ಮನೆಯ ಕಡೆ ಹೊರಟ.

ಸಂಜೆ ಮುಗಿದು ರಾತ್ರಿಯಾಗುತ್ತಾ ಬಂತು. ವಿಜ್ಞಾನ ಶಾಲೆಯ ಆವರಣವೆಲ್ಲಾ ವಿದ್ಯುಚ್ಛಕ್ತಿಯ ಬೆಳಕಿನಿಂದ ಬೆಳಗಿತು. ರಾಜ ತಮ್ಮ ಮನೆಯ ಮುಂದಿದ್ದ ಕಲ್ಲುಬೆಂಚಿನಮೇಲೆ ಕುಳಿತ. ಸುತ್ತಲೂ ನಕ್ಷತ್ರದಂತೆ ಮಿನುಗುಟ್ಟುತ್ತಿರುವ ವಿದ್ಯುದ್ದೀಪಗಳು ಆಕಾಶವೂ ಶುಭ್ರವಾಗಿದ್ದು ಅಲ್ಲಲ್ಲೇ ನಕ್ಷತ್ರಗಳು ಕಾಣಿಸಿಕೊಂಡವು. ವಿಜ್ಞಾನ ಶಾಲೆಯ ಗೋಪುರ ಚೆನ್ನಾಗಿ Flash light ಹಾಕಿದ್ದುದು, ಮಿಂಚಿನ ತುಂಡೊಂದನ್ನು ವಿಜ್ಞಾನಿಗಳು ಕಟ್ಟಿಹಾಕಿದ್ದರೇನೋ ಅನ್ನುವಂತಿತ್ತು. ವಿಶ್ವೇಶ್ವರೈಯನವರ ದಿವ್ಯವಾಣಿ ಕಿವಿಯಲ್ಲಿ ಗುಯ್‌ಗುಟ್ಟುತ್ತಿತ್ತು. ರಾಜ ಯೋಚಿಸಿದ. ಕೆಲಸ ಸಿಗಲೆಂದು ಓದಲು ಬಂದಿರುವ ತಾನೆಲ್ಲಿ! ಪುಣ್ಯಪುರುಷ ಹೇಳಿದ ಧ್ಯೇಯವೆಲ್ಲಿ! ನನ್ನಂತಹ ಅಲ್ಪ ಎಷ್ಟು ಸೇವೆ ಸಲ್ಲಿಸಬಲ್ಲೆ! ತಾನಿನ್ನೂ ಕಲಿಯಬೇಕಾದ್ದು ಬೇಕಾದಷ್ಟಿದೆ. ತಾಯಿಯ ನೆನಪಾಯ್ತು. ಅಮ್ಮ ಈಗ ಏನು ಮಾಡುತ್ತಿರಬಹುದು? ಗೌರಿ ಏನನ್ನು ಯೋಚಿಸುತ್ತಿರಬಹುದು? ಎಲ್ಲವನ್ನೂ ತನಗೆ ತಿಳಿದಂತೆ ಕಲ್ಪಿಸಿದ. ರೋಹಿಣಿಯ ನೆನಪೂ ಬಂತು. ಸಂಘಟನೆ ಎಷ್ಟು ವಿಚಿತ್ರವಾಗಿ ನಡೆದುಹೋಯ್ತು. ವೆಂಕಟೇಶನನ್ನು ನೆನೆದ. ವೆಂಕಟೇಶ ಎಂತಹ ಸ್ನೇಹಿತ ರಾಜ ಇಷ್ಟು ಸುಲಭವಾಗಿ ವಿಜ್ಞಾನಶಾಲೆಗೆ ಸೇರುವೆನೆಂದು ತಿಳಿದಿರಲಿಲ್ಲ. ಎಲ್ಲಾ ಡಾ. ಕೃಷ್ಣಸ್ವಾಮಿಯವರ ಉದಾರ ಮನಸ್ಸು. ಶಾರದಮ್ಮನ ವಾತ್ಸಲ್ಯದಿಂದ ಅಲ್ಲವೆ? ಬೆಳಗ್ಗೆ ಊಟ ಮಾಡುವಾಗ ಅಂದಿದ್ದಳು ಆಕೆ 'ಈ ಮನೆಯಲ್ಲಿ ಸಂಕೋಚ ಬೇಡಪ್ಪ ನನ್ನ ದೊಡ್ಡ ಮಗನೆಂದು ತಿಳಿದಿರು' ಎಂದು. ಎಷ್ಟು ವಿಶಾಲ ಮನಸ್ಸು ಆಕೆಯದು! ರಾಜ ಎಲ್ಲವನ್ನೂ ಯೋಚಿಸುತ್ತ ಕುಳಿತು ಬಹಳ ಹೊತ್ತಾಗಿರಬೇಕು. ಮನೆಯ ಆಳಿನ ಕೈಲಿ ರಾಜಣ್ಣ ಎಲ್ಲಿ ಬರಲಿಲ್ಲ ಎಂದು ಶಾರದಮ್ಮ ಹೇಳಿ ಕಳುಹಿಸಿದ್ದಾರು ಎನ್ನುವ ಅವನಿಗೆ ಎಚ್ಚರವಾಗಿ ಬೇಗ ಮನೆಗೆಬಂದ. ಹಠಾತ್ತಾಗಿ ಬಂದ ರಾಜನನ್ನು ನೋಡಿ ' ನಿನಗೆ ನೂರು ವರ್ಷ ಆಯುಸ್ಸಪ್ಪ.... ಈಗತಾನೆ ನೀನೆಲ್ಲಿ ಎಂದೆ " ಎಂದು ಹೇಳಿದಳು. ರಾಜ ನಕ್ಕು ಒಳಕ್ಕೆ ನಡೆದ. ಶಾರದಮ್ಮ ಬಿಸಿ ಅಡಿಗೆಯನು ಬಡಿಸಿದಳು. ಮತ್ತೆ ಕಮಲಮ್ಮನ ಜ್ಞಾಪಕ ರಾಜನಿಗೆ ಬಂತು.

## ೧೩

ರಾಜ ಬೆಂಗಳೂರಿಗೆ ಹೊರಟ ಒಂದೆರಡು ದಿನಗಳಂತೂ ಕಮಲಮ್ಮ ನಿಗೆ ಸಮಾಧಾನ ಹೇಳಲು ಗೌರಿಗೆ ಸಾಕುಸಾಕಾಗಿತ್ತು. 'ಊಟ ತಿಂಡಿಗೆ ಏನು ಮಾಡ್ತಾನೋ' ಎಂದು ಸಂಕಟಪಡುವಳು. ತಿಳಿಯುವ ಊರು, ನೀನೆ ಅನ್ನುವರು ದಿಕ್ಕಿಲ್ಲದ ಜಾಗ ಅವನು ಹೇಗೆ ಇರುತ್ತಾನೋ ಎಂದು ಹೆದರಿ ದಳು ಹಗಲಿರುಳೂ ಓದಿ ಆರೋಗ್ಯ ಎಲ್ಲಿ ಕೆಡುತ್ತೋ ಎಂದು ಸಂದೇಹಪಡು ವಳು. ಹೀಗೆ ಒಬ್ಬನನ್ನೇ ಬೆಂಗಳೂರಿನಲ್ಲಿ ಬಿಡುವುದರ ಬದಲು ಎಲ್ಲರೂ ಹೋಗಿ ಅಲ್ಲೇ ಇದ್ದು ಬಿಡುವುದು ಒಳ್ಳೆಯದು ಎಂದುಕೊಳ್ಳುವಳು. ಸುಬ್ಬಣ್ಣ ಹಳ್ಳಿಯಿಂದ ಇನ್ನೊಂದು ಸಾರಿ ಬಂದಾಗ ಮಾತನಾಡುವುದೆಂದು ಸುಮ್ಮನಾದವಳು. ಬೆಳಿಗ್ಗೆ ಆಯಿತೆಂದರೆ ಪಾಪ! ಎಲ್ಲಿ ಕಾಫಿ ಕುಡೀತಾನೋ, ಊಟದ ಹೊತ್ತಿನಲ್ಲಿ ಏನು ಏರ್ಪಾಡು ಮಾಡಿಕೊಂಡಿದ್ದಾನೋ? ಎಂದು ಒದ್ದಾಡುವಳು. ಅದಕ್ಕೆ ಸರಿಯಾಗಿ ಹೋದಾಗಿನಿಂದಲೂ ಒಂದು ಕಾಗ ದವೂ ಬಂದಿರಲಿಲ್ಲ. ಇನ್ನು ಕೇಳಬೇಕೆ ಕಮಲಮ್ಮನ ಯೋಚನೆಯನ್ನು.

ಕಮಲಮ್ಮ ಆದಿನ ಊಟಕ್ಕೆ ಕುಳಿತಾಗ ಮಧ್ಯಾಹ್ನ ಒಂದು ಗಂಟೆಯೇ ಆಯಿತು.

" ಇಷ್ಟು ಹೊತ್ತು ಮಾಡಿ ಊಟಕ್ಕೆ ಕೂತರೆ ಅನ್ನ ಹೇಗೆ ಸೇರುತ್ತೆ " ಎಂದು ಗೌರಿ ಕೇಳಿದಳು.

" ಸರಿ ಬಿಡು. ಒಂದು ಕಾಗದಾನೆ ಬರ್ಲಿಲ್ಲವಲ್ಲ. ನನಗದೇ ಯೋಚನೆ.'

" ಏನೋ ಕೆಲ್ಸ ಇರಬಹುದು. "

" ಒಳ್ಳೆಯ ಕೆಲ್ಸ ಕಣೆ.... "

" ಪುರಸತ್ತಿಲ್ಲದೆ ಬರಿಲ್ವೇನೋಮ್ಮ "

" ಒಂದು ಕಾರ್ಡು ಗೀಚಿ ಹಾಕೋದುಕ್ಕೊ.... "

ಕಮಲಮ್ಮನ ಸಂಶಯಕ್ಕೆ ಗೌರಿಗೆ ಸಮಾಧಾನ ಹೇಳಲಾಗದೆ.

" ಸರಿ, ನೀನು ಯಾವಾಗ಼್ಲೂ ಹಾಗೇನೆ...." ಎಂದಳು.

" ಮುಂಡೇದು ನೀರು ನೆರಳು ಸಿಗ್ದೆ ಅಲೀತಿದ್ದಾನೋ. ಏನೋ...."

" ................................ "

" ಹೋದ ತಕ್ಷಣ ಕಾಗ್ದಾ ಹಾಕು ಅಂತ ಹತ್ತು ಸಾರಿ ಹೇಳಿದ್ದೆ. "

ಬಂದಾಗ ರಾಜ ಬೇಡ ಎಂದ. " ಸ್ವಲ್ಪ ಒಡಿಸ್ತೇನೆ ಸಂಕೋಚವಿಲ್ಲದೆ ನಿಧಾನವಾಗಿ ಊಟಮಾಡಿ " ಎಂದಾಗ ಅವರ ಕಡೆ ನೋಡಿದ. ತುಂಬು ಮುಖದ ಮಧ್ಯವಯಸ್ಸಿನ ಹೆಂಗಸು, ಹಣೆಯಲ್ಲಿ ದೊಡ್ಡ ಕುಂಕುಮವಿಟ್ಟ ಅನ್ನ ಬಡಿಸಲು ಬಂದಾಗ ಅನ್ನಪೂರ್ಣೆಯಂತೆ ಕಂಡಳು. ರಾಜನಿಗೆ ಅನ್ನಿಸಿತು. ಈಕೆ ನನ್ನನ್ನು ಮಗನೆಂದು ವಾತ್ಸಲ್ಯದಿಂದ ಕಾಣುತ್ತಿದ್ದಾಳೆ. ಕಣ್ಣು ತುಂಬಿ ಬಂತು. ಊಟವಾದನಂತರ ಒಂದು ಸುತ್ತು ಮಾತನಾಡಿಕೊಂಡು ಬರೋಣ ಎಂದು ಕೃಷ್ಣಸ್ವಾಮಿ ಕೂಗಿದರು. ಇಬ್ಬರೂ ವಿಜ್ಞಾನಶಾಲೆಯ ಆವರಣದಲ್ಲಿ ಸುತ್ತಾಡಿದರು. ರಾಜನ ಕರುಣಾಜನಕ ಕಥೆ ಕೇಳಿ ಕೃಷ್ಣಸ್ವಾಮಿಗೆ ತುಂಬಾ ದುಃಖವಾಯ್ತು. ಎಲ್ಲಾ ಸಹಾಯವನ್ನೂ ನೀಡುವುದಾಗಿ ಭರವಸೆ ಇತ್ತರು. ತಾನು ಬೇರೆಲ್ಲೂ ಹೋಗದೆ ಅವರ ಮನೆಯಲ್ಲೇ ಊಟ ಮಾಡಿಕೊಂಡು ಇರಬೇಕೆಂದು ಸೂಚಿಸಿದರು. ಸಮಯ ದೊರೆತರೆ ತಮ್ಮ ಹುಡುಗರಿಗೆ ಪಾಠ ಹೇಳಿ ಕೊಡಬೇಕೆಂದು ಹೇಳಿದರು. ಸದ್ಯ ಅಷ್ಟು ಸಹಾಯ ಸಿಕ್ಕಿತಲ್ಲ ಎನ್ನಿಸಿ ಒಂದು ಹೊರೆ ಇಳಿಸಿದಂತಾಯ್ತು.

ಮಾರನೆಯ ದಿನ ಬೆಳಿಗ್ಗೆ ತಾತಾ ವಿಜ್ಞಾನ ಶಾಲೆಯ ಉಪಾಧ್ಯಾಯರುಗಳನ್ನೆಲ್ಲ ಕೃಷ್ಣಸ್ವಾಮಿ ಪರಿಚಯ ಮಾಡಿಕೊಟ್ಟರು. ಅದರಲ್ಲೂ ಸರ್. ಸಿ. ವಿ. ರಾಮನ್ ಅವರನ್ನು ನೋಡಿದಾಗಲಂತೂ ರಾಜನಿಗೆ ತುಂಬಾ ಸಂತೋಷವಾಯ್ತು. ಎಷ್ಟು ದೊಡ್ಡ ವಿಜ್ಞಾನಿ, ಆಡಂಬರವಿಲ್ಲದ ಉಡಿಗೆ ತೊಡಿಗೆ. ಇಂದು ಪ್ರಪಂಚದಲ್ಲೆಲ್ಲ ಅವರ ಪ್ರತಿಭೆಯುಳ್ಳ ವಿಜ್ಞಾನಿಗಳು ಬೆರಳಲ್ಲಿ ಎಣಿಸುವಷ್ಟು ಇರುವರೋ ಇಲ್ಲವೋ. ಒಂದೆರಡು ನಿಮಿಷ ಅವರ ಹತ್ತಿರ ಮಾತುಕತೆ ನಡೆಯಿತು.

ಫಿಸಿಕ್ಸ್ ಸೆಕ್ಷನ್ನಿನಲ್ಲಿ ಬರೀ ಹದಿನೈದು ಹುಡುಗರು. ಅವರಲ್ಲಿ ಇಬ್ಬರು ಹೆಣ್ಣು ಮಕ್ಕಳು. ಅವರಲ್ಲಿ ನಾಲ್ಕು ಜನ ಮೈಸೂರಿನವರು. ಮಿಕ್ಕವರೆಲ್ಲಾ ಭಾರತದ ನಾನಾ ಭಾಗದಿಂದ ಬಂದವರು. ಮೊದಲನೆಯ ದಿನ ಎಲ್ಲರೂ ಕಲೆತು ಪರಸ್ಪರ ಪರಿಚಯ ಮಾಡಿಕೊಂಡರು. ಕೆಲವರು ತಮ್ಮ ಧ್ಯೇಯವನ್ನು ತಿಳಿಸಿದರು. ಅಷ್ಟು ಧಾರಾಳ ಅಲ್ಲದವರು ಮೈಸೂರಿನ ವಿಷಯಗಳನ್ನು ರಾಜನಿಂದ ತಿಳಿದುಕೊಂಡರು. ಬೊಂಬಾಯಿನ ರೇಣುಕಾದೇವಿಯಂತೂ ಎಲ್ಲರನ್ನೂ ನಗಿಸಿಬಿಟ್ಟಳು. ರಾಜ ಎಲ್ಲರ ಮನಸ್ಸನ್ನೂ ಸೂರೆಗೊಂಡ. ಕೆಲವರು

ರಾಜನ ನಮ್ರತೆಯನ್ನು ಮೆಚ್ಚಿದರೆ ಇನ್ನು ಕೆಲವರು ಇವನ ಚುರುಕು ಬುದ್ಧಿಯನ್ನು ಕೊಂಡಾಡಿದರು. ಆ ದಿನವೆಲ್ಲಾ ತಮಾಷೆಯಲ್ಲೇ ಕಾಲ ಕಳೆದರು. ಸಾಯಂಕಾಲ ಮೈಸೂರಿನ ಮಾಣಿಕ್ಯ ವಿಶ್ವೇಶ್ವರೈಯನವರು ಆರಂಭ ಭಾಷಣ ಮಾಡುವವರಿದ್ದುದರಿಂದ ಎಲ್ಲರೂ ಬೇಗನೆ ತಮ್ಮ ತಮ್ಮ ರೂಮಿಗೆ ಹೋದರು. ರಾಜ ಮನೆಗೆ ಬಂದು ಡಾ. ಕೃಷ್ಣಸ್ವಾಮಿಯವರೊಡನೆ ಸಭೆಗೆ ಬಂದು ಅವರ ಜೊತೆಯಲ್ಲಿ ಕುಳಿತ. ವಿಜ್ಞಾನಶಾಲೆಯ ಹುಡುಗರಲ್ಲದೆ ಇತರ ಸಭಿಕರೂ ಆಗಮಿಸಿದ್ದರು. ಆರಂಭ ಭಾಷಣ ಇದ್ದುದು ೫-೩೦ಕ್ಕೆ ೫. ೨೫ ಆದರೂ ವಿಶ್ವೇಶ್ವರೈಯನವರು ಬರದೆ ಇದ್ದುದು ಎಲ್ಲರಿಗೂ ಕಳವಳವುಂಟಾಗಿ ಸಭೆಯಲ್ಲಿ ಸ್ವಲ್ಪ ಗುಜು ಗುಜು ಕೇಳಿಬಂತು. ಆ ವೇಳೆಗೆ ಕಾರಿನಿಂದಿಳಿದು ಸಭೆಯ ಹತ್ತಿರ ಬಂದು ವೇದಿಕೆಯ ಮೇಲೆ ಕುಳಿತಾಗ ಚಪ್ಪಾಳೆಯ ಶಬ್ದದಿಂದ ಆ ಜಾಗವೆಲ್ಲಾ ತುಂಬಿ ಎದುರು ಗೋಡೆಯ ಮೇಲಿದ್ದ ಗಡಿಯಾರ ೫-೩೦ ಗಂಟೆಯನ್ನು ಬಾರಿಸಿತು.

ಸಭೆಗೆ ಬಂದವರೆಲ್ಲರನ್ನೂ ಸ್ವಾಗತಿಸಿದ ಮೇಲೆ ವಿಶ್ವೇಶ್ವರೈಯನವರು ಭಾಷಣ ಮಾಡಲು ಎದ್ದು ನಿಂತರು. ಅವರ ಹೆಚ್ಚಿನ ವಯಸ್ಸನ್ನು ತೋರ್ಪಡಿಸದೆ ಇರುವ ನಿಲುವಿಕೆ. ಜ್ಯೋತಿಯಂತೆ ಬೆಳಗುತ್ತಿದ್ದ ಪುಟ್ಟ ಮುಖ ಮೇಲೆ ಜರಿಯ ಪೇಟ. ಭಾಷಣ ಮಾಡಲು ಪ್ರಾರಂಭಿಸಿದರು. ಇಂದು ವಿಜ್ಞಾನಿಗಳ ಹೊಣೆಗಾರಿಕೆ, ಜನ ಸಾಮಾನ್ಯಕ್ಕೆ ಅವರ ಸೇವೆ, ಬಡವರಿಗೆ ಸಲ್ಲಿಸಬೇಕಾದ ಕಾಣಿಕೆ, ಭವಿಷ್ಯ ಸ್ವತಂತ್ರ ಭಾರತದಲ್ಲಿ ವಿಜ್ಞಾನಿಗಳ ಸ್ಥಾನಮಾನಗಳು ಎಂಬ ಬಗ್ಗೆ ಬಹು ಸ್ವಾರಸ್ಯವಾಗಿ ಹೇಳಿ ಭಾಷಣ ಮುಗಿಸಿದರು. ಸರಿಯಾಗಿ ಅರ್ಧಗಂಟೆ ಭಾಷಣ ಮಾಡಿದ್ದರು. ಪ್ರತಿಯೊಂದು ಮಾತು ಬರೆದಿಟ್ಟುಕೊಳ್ಳುವಂತಹದು. ಡೈರೆಕ್ಟರರ ಪುಟ್ಟ ಭಾಷಣವಾದ ಮೇಲೆ ಅಧ್ಯಕ್ಷರಿಗೆ ಹಾರ ತುರಾಯಿ ಅರ್ಪಿಸಿದರು. ದೊಡ್ಡ ಮಲ್ಲಿಗೆ ದಂಡೆಯ ಹಾರವನ್ನು ಹೊತ್ತು ನಿಂತಿದ್ದ ಭವ್ಯ ಮೂರ್ತಿ ವಿಶ್ವೇಶ್ವರೈಯ ನಿಜವಾಗಿಯೂ ವಿಜ್ಞಾನ ಮತ್ತು ಕೈಗಾರಿಕೆ ಯುಗಪುರುಷನಂತೆ ರಾಜನಿಗೆ ಕಂಡುಬಂದರು. ವಿಶ್ವೇಶ್ವರೈಯನವರು ಕೊರಳಿನಿಂದ ಹಾರವನ್ನು ತೆಗೆದು, ಹತ್ತಿರ ನಿಂತಿದ್ದ ಡಾ. ಕೃಷ್ಣಸ್ವಾಮಿಯವರೊಡನೆ ಮಾತನಾಡಿದರು. ರಾಜ ಹೂವಿನ ಹಾರವನ್ನು ಅವರ ಕೈಯಿಂದ ತೆಗೆದುಕೊಂಡು ಕಾರಿನವರೆಗೂ ಅವರ ಜತೆಯಲ್ಲಿ ಹೋಗಿ

ಮೇಲೆ ರೋಹಿಣಿ ತಂದೆಯನ್ನು ಬೀಳ್ಕೊಟ್ಟಳು. ರಾಜನಿಗೇನೆನ್ನಿಸಿತೋ. ವೆಂಕಟೇಶನಿಂದ ಚೀಟಿಯನ್ನು ತೆಗೆದುಕೊಂಡು 'ರೋಹಿ!' ಎಂದು ಕೂಗಿದ. ಮೆಲ್ಲನೆ ನಡೆದು ಹೋಗುತ್ತಿದ್ದ ರೋಹಿಣಿ ತಿರುಗಿ ನೋಡಿದಾಗ. ರಾಜನನ್ನು ನೋಡಿ ಆಶ್ಚರ್ಯದಿಂದ ಕಿಟಕಿಯ ಹತ್ತಿರ ಬಂದಳು. ಚೀಟಿಯನ್ನು ಅವಳ ಕೈಗೆ ಕೊಟ್ಟು, ವೆಂಕಟೇಶನ ಕೈಲಿ ಕಳುಹಿಸೋಣವೆಂದಿದ್ದೆ. ನೀನೆ ಸಿಕ್ಕಿದೆ ಯಲ್ಲಾ ಎಂದ. ಒಂದು ನಿಮಿಷ ಎಲ್ಲರೂ ಒಂದು ರೀತಿಯಿದ್ದರು.

"ತಾತಾವಿಜ್ಞಾನ ಶಾಲೆಗೆ ಸೇರಲು ಬೆಂಗಳೂರಿಗೆ ಹೊರಟಿದ್ದೇನೆ...." ಎಂದ ರಾಜ.

"ಹಾಗಂತ ಕೇಳಿದೆ.... "ಚುರುಕಾಗಿ ನುಡಿದಳು ರೋಹಿ.

"ನನ್ನ ತಪ್ಪನ್ನು ಮರೆತು ಬಿಡು....ನಿನ್ನ ದುಃಖಕ್ಕೆಲ್ಲಾ ನಾನೇ ಕಾರಣ" ಎಂದು ಕೈ ಕುಲುಕಿದಾಗ ರೈಲು ಕೂಗಿ ಹೊರಟಿತು.

"ನಿಮಗೆ ಯಾವಾಗಲೂ ದೇವರು ಸಹಾಯ ಮಾಡಲಿ ಎಂದು ಪ್ರಾರ್ಥಿ ಸ್ಕೋತೇನೆ" ಎಂದು ನಿಂತಳು

"ಬರಿಯಪ್ಪ ಹೋಗಬಲ್ಲಿ" ಎಂದು ವೆಂಕಟೇಶ ಕೂಗಿದಾಗ ಕಣ್ಣನ್ನು ಅವನ ಕಡೆ ಹೊರಳಿಸಿ ನಕ್ಕು "ಬಹಳ ಥ್ಯಾಂಕ್ಸ್ ವೆಂಕಟೇಶ"ಎಂದ. ರೈಲು ಕಣ್ಮರೆಯಾಗುವವರೆಗೂ ನೋಡುತ್ತಿದ್ದು ವೆಂಕಟೇಶ ಹಿಂತಿರುಗಿದ.

ರೋಹಿಣಿಯು ಪಾಡಿಗೆ ಅವಳು ಕಾರಿನಲ್ಲಿ ಕುಳಿತು ಹೊರಟಳು. ರಾಜ ಬರೆದಿದ್ದ ಚೀಟಿಯನ್ನು ಬಿಚ್ಚಿ ಓದಿದಳು.

ರೋಹಿ !

ನಿಜ ಒಂದು ರೀತಿ ನಿನ್ನನ್ನು ನಿರಾಕರಿಸಿದೆ. ಏತಕ್ಕೆ? ನಿನ್ನ ಪ್ರೇಮ ಶಕ್ಯದ್ದಲ್ಲವೆಂದಲ್ಲ, ನೀನು ಗುಣವಿಲ್ಲದವಳೆಂದಲ್ಲ. ನಾನು ಹುಟ್ಟು ಬಡವ. ತಾಯಿ ಮತ್ತು ಅಕ್ಕನನ್ನು ಕಾಪಾಡುವ ಭಾರ ಇದ್ದು ಯೋಚಿಸಿ ನಿರ್ಧಾರ ಮಾಡುವ ಯಾವನಾದರೂ ಸರಿ. ನಾನು ಮಾಡಿದ್ದನ್ನು ಒಪ್ಪುವರಲ್ಲವೆ? ನೀನು ಒಂದು ವಜ್ರ. ಮನಸ್ಸನ್ನು ಆಕರ್ಷಿಸಿ ತಂಪಾದ ಬೆಳಕನ್ನು ಕೊಟ್ಟಿದ್ದೆ. ವಜ್ರವನ್ನು ಧರಿಸುವ ಯೋಗ್ಯತೆ ನನಗೆ ಇರಲಿಲ್ಲ. ನನ್ನನ್ನು ಮರೆತಲ್ಲದೆ ನಿನಗೆ ಕ್ಷೇಮವಿಲ್ಲ. ಬೇರೆ ಸಂಗಾತಿಯನ್ನು ಕೂಡಿ ಬಾಳು. ನಿನ್ನ ಸಂತೋಷ ದಲ್ಲಿ ಒಂದು ಸಾರಿ ನೆನೆದರೆ ಸಾಕು.

ನಿನ್ನ ಸಹೋದರ,
ನಾಗರಾಜ.

ಚೀಟಿಯನ್ನು ಮಡಿಸಿಟ್ಟು ಕಣ್ಣೀರನ್ನು ಒರಸಿಕೊಂಡು ಕಾರಿನ ಕಿಟಿಕಿ ಯಿಂದ ನೋಡಿದಾಗ ವೆಂಕಟೇಶ ಕಾರನ್ನು ನಡೆಸುತ್ತಾ ಹೋಗುತ್ತಿದ್ದುದು ಕಾಣಿಸಿತು.

## ೧೨

ರಾಜ ಬೆಂಗಳೂರನ್ನು ನೋಡಿದ್ದು ಮೊದಲಲ್ಲದಿದ್ದರೂ ತನ್ನ ಹನ್ನೆರಡನೆ ವಯಸ್ಸಿನಲ್ಲಿ ಒಂದುಸಾರಿ ಸುಬ್ಬಣ್ಣನ ಜೊತೆಗೆ ಬಂದಿದ್ದರಿಂದ, ಎಲ್ಲಾ ಹೊಸದಾಗಿ ಕಾಣುಬಂತು. ಜನ ಮೈಸೂರಿನವರಷ್ಟು ನಿಧಾನವಾಗಿರದೆ ಬಹಳ ಚುರುಕಾಗಿರುವಂತೆ ತೋರಿತು.

ಮೊದಲೆ ವೆಂಕಟೇಶ ತಾತಾ ವಿಜ್ಞಾನ ಶಾಲೆಯಲ್ಲಿದ್ದ ತನ್ನ ಚಿಕ್ಕಪ್ಪನಿಗೆ ಕಾಗದ ಬರೆದಿದ್ದ. ಜೊತೆಗೆ ತನ್ನ ಕೈಯಲ್ಲಿ ಬರೆದುಕೊಟ್ಟಿದ್ದ ಕಾಗದವನ್ನು ಕೃಷ್ಣಸ್ವಾಮಿಗೆ ಕೊಟ್ಟ. ವಿಜ್ಞಾನಶಾಲೆಯ ಆವರಣದಲ್ಲಿಯೇ ಅವರ ಮನೆ. ಮನೆಯ ಎಡಪಕ್ಕದಲ್ಲಿದ್ದ ಒಂದು ರೂಮನ್ನು ತೆರವು ಮಾಡಿಕೊಟ್ಟರು. ಒಂದು ಮೇಜು, ಎರಡು ಕುರ್ಚಿ ಮತ್ತಿತರ ಸಾಮಾನುಗಳನ್ನು ತಂದುಹಾಕುವಂತೆ ಜವಾನನಿಗೆ ಹೇಳಿದರು. ಇದನ್ನು ನೋಡಿದ ರಾಜನಿಗೆ ಆಶ್ಚರ್ಯವಾಯಿತು. ವೆಂಕಟೇಶ ಸ್ವಲ್ಪವೂ ಸುಳಿವನ್ನು ಕೊಡದೆ ಏನಾದರೂ ತೊಂದರೆಯಾದರೆ ನಮ್ಮ ಚಿಕ್ಕಪ್ಪ ಅವರನ್ನು ನೋಡು ಎಂದಿದ್ದ. ಎಲ್ಲವನ್ನೂ ವೆಂಕಟೇಶ ಮುಂಚೆಯೇ ಬರೆದಿರಬೇಕು.

"ನಿಮಗೆ ಸುಮ್ಮನೆ ತೊಂದರೆ....ಒಂದೆರಡು ದಿನದಲ್ಲೀ ಮಲ್ಲೇಶ್ವರದಲ್ಲಿ ರೂಮು ನೋಡ್ತೇನೆ" ಎಂದಿದ್ದಕ್ಕೆ 'ಮೊದಲು ಊಟ ಮುಗಿಸಿ ಆನಂತರ ಮಾತನಾಡೋಣ' ಎಂದು ಹೇಳಿ ಊಟಕ್ಕೆಬ್ಬಿಸಿದರು. ಊಟ ಮಾಡುವಾಗ್ಗ "ಇವರು ವೆಂಕಟೇಶನ ಸ್ನೇಹಿತರು" ಎಂದು ತಮ್ಮ ಹೆಂಡತಿಗೆ ಪರಿಚಯ ಮಾಡಿಕೊಟ್ಟರು. ಅವರಿಗೆ ಇಬ್ಬರು ಹೆಣ್ಣು ಮಕ್ಕಳು. ಮೂವರು ಗಂಡು ಮಕ್ಕಳು. ಎಲ್ಲರೂ ಎದುರು ಸಾಲಿನಲ್ಲಿ ಕುಳಿತಿದ್ದರು. ಕೃಷ್ಣಸ್ವಾಮಿಯ ಹೆಂಡತಿ ಶಾರದಮ್ಮ ಎರಡನೆಯ ಸಾರಿ ಅನ್ನ ಬಡಿಸಲು

"ಇವತ್ತೊ ನಾಳೆಯೋ ಕಾಗ್ದ ಬರಬಹುದು."

"ನೀನು ಬರಿಯೆ ಅಂದ್ರೆ ಕೇಳೋಲ್ಲ."

"ಇವತ್ತು ಬರೀತೇನಮ್ಮ" ಎಂದು ಗೌರಿ ಸಮಾಧಾನ ಮಾಡಿದಳು. ಬಾಗಿಲು ತಟ್ಟಿದ ಶಬ್ದ ಕೇಳಿಸಿತು. ಗೌರಿ ಬಾಗಿಲು ತೆಗೆದು ಅಂಚೆಯ ಜವಾನೀದ ದಪ್ಪಗಿದ್ದ ಕವರನ್ನು ತೆಗೆದುಕೊಂಡು ಅಡಿಗೆ ಮನೆಗೆ ಬಂದಳು.

"ಎಲ್ಲಿಂದ....ರಾಜ ಬರ್ದಿದ್ದಾನೆಯೆ ?"

"ಹೌದಮ್ಮ........"

'ಓದು' ಎಂದು ಕಲೆಸಿದ್ದ ಅನ್ನವನ್ನು ಎಲೆಯ ಪಕ್ಕಕ್ಕೆ ತಳ್ಳಿ ತಂಬಿಗೆಯಿಂದ ನೀರನ್ನು ಕುಡಿದು, ಕೇಳುತ್ತಾ ಕುಳಿತಳು. ಗೌರಿ ಕಾಗದವನ್ನು ಓದಿದಳು.

ಐದಾರು ಹಾಳೆ ಬರೆದಿದ್ದ ಕಾಗದವೆಲ್ಲಾ ರಾಜ ಬೆಂಗಳೂರಲ್ಲಿ ಅನುಕೂಲ ಒದಗಿ ಸುಖವಾಗಿದ್ದ ರೀತಿಯನ್ನು ತಿಳಿಸಿತು. ಎಂದೂ ನಿರೀಕ್ಷಿಸದಿದ್ದ ಸಹಾಯ ಹೇಗೆ ಒದಗಿಬಂತೆಂದು ಕಮಲಮ್ಮನಿಗೆ ತುಂಬಾ ಸಂತೋಷವಾಯ್ತು. ವೆಂಕಟೇಶನ ಚಿಕ್ಕಪ್ಪ ಮತ್ತು ಚಿಕ್ಕಮ್ಮನನ್ನು ಮನಸಾರೆ ಹೊಗಳಿದಳು. ಹೇಗೋ ದೇವರು ಕಾಪಾಡ್ತಾನೆ ಎಂದುಕೊಂಡು, ಎದ್ದು ಕೈ ತೊಳೆದುಕೊಂಡಳು. ಕಸ ಮುಸುರೆಯಾದ ಮೇಲೆ ಚಾಪೆಯ ಮೇಲೆ ಉರುಳಿಕೊಂಡಳು. ಗೌರಿ ರಾಜನಿಗೆ ಕಾಗದ ಬರೆಯುವಾಗ ನಿದ್ದೆ ಕೆಡಬೇಡ.... ಸರಿಯಾಗಿ ಆರೋಗ್ಯ ನೋಡಿಕೋ ಎಂದು ಬರಿ ಎಂದಳು ಕಮಲಮ್ಮ. ಎಲ್ಲಾ ವಿಷಯಗಳಿಗೂ ಕಾಗದ ಬರೆದು ಮುಗಿಸಿದಳು ಗೌರಿ. ಅಳುತ್ತಿದ್ದ ಸರಸುವನ್ನು ತೊಟ್ಟಿಲಲ್ಲಿ ಮಲಗಿಸಿ ತೂಗಿದಳು. ಸ್ವಲ್ಪಹೊತ್ತಿಗೆ ಸರಸು ಮಲಗಿಕೊಂಡಳು. ಮನೆಯ ಮುಂದಿನ ಬಾಗಿಲನ್ನು ಹಾಕಿಕೊಂಡು ಬರಲು ಹೋದಾಗ ದೂರದಲ್ಲಿ ಗಿರಿಜೆ ಬರುತ್ತಿದ್ದುದು ಕಾಣಿಸಿತು. ಗಿರಿಜೆ ಬಂದವಳೆ ಇವತ್ತ ರಾಜ ಒಂದು ಕಾಗ್ದ ಬರ್ದಿದ್ದಾನಂತೆ. ಹೇಳು ಅಂತ ವೆಂಕಟೇಶ ಹೇಳ್ದ ಎಂದಳು.

"ನಮಗೂ ಬರೆದಿದ್ದಾನೆ."

"ಎಲ್ಲಾ ಸರಿಯಾಗಿ ಅನುಕೂಲವಾಗಿದ್ದಾನೆ."

"ನಿಮ್ಮ ಚಿಕ್ಕಪ್ಪ ತುಂಬಾ ಸಹಾಯ ಮಾಡಿದ್ದಾರಂತೆ ಮಹರಾಯರು. ಅವರ ಹೊಟ್ಟೆ ತಣ್ಣಗಿರಲಿ" ಎಂದು ಹೇಳಿ ಗಿರಿಜೆಯೊಡನೆ ಗೌರಿ ಕನ್ನಕೋಣೆಗೆ ಹೋದಳು. ವೆಂಕಟೇಶ ಪತ್ರಿಕಾ ಕೆಲಸ ಕಲಿಯಲು ಬೊಂಬಾಯಿಗೆ ಹೋಗಿದ್ದಾನೆಂದು ಹೇಳಿದಳು. ತನ್ನ ಮನೆಯ ವಿಷಯ ಸ್ವಲ್ಪ ಹೇಳಿ ರೋಹಿಣಿಯ ವಿಷಯ ಮಾತನಾಡಿದಳು ಗಿರಿಜೆ.

"ಮದುವೆಗೆ ಒಪ್ಪಿದಳಂತ್ರಿ"

"ಹೌದೇನೆ........?"

"ಮುಂದಿನ ತಿಂಗಳು ನಡೆಯಬಹುದು ಮದ್ವೆ"

"ಅಲ್ವೆ ವಿಶ್ವನಾಥನನ್ನು ಒಪ್ಪಿದಳೇನೆ ?"

"ಅವರ ತಂದೆ ಒತ್ತಾಯ ಮಾಡಿದರೆಂದು ಕೇಳ್ದೆ...."

"ಪಾಪ ಚಿನ್ನದಂತಹ ಹುಡ್ಗಿ."

"ಅಂತವಳಿಗೆ ಆ ಕಲಿಗಂಡ್ನೇನೆ ಅಂತೀರಾ"

"......................."

"ರಾಜನೇ ಮದುವೆ ಮಾಡಿಕೊಂಡಿದ್ರೆ ಚೆನ್ನಾಗಿತ್ತೀ."

"ಹೌದಮ್ಮ ಮಾಡಿಕೊಳ್ಳಲಿಲ್ಲವಲ್ಲ."

"ಅದೇಕ್ರಿ ?"

"ಅದೇನೋ ಅಮ್ಮ.......ಅವನೇ ಬೇಡ ಅಂದ."

"ನನ್ನನ್ನು ಕಂಡರೆ ರಾಜನಿಗೆ ತುಂಬಾ ಇಷ್ಟ ಎಂದು ರೋಹಿಣಿ ಹೇಳುತ್ತಿದ್ದಳು."

"ಇರಬಹುದೆ,........ಅವರೂ ಜಂಭಮಾಡಿದ್ರು."

"ಅದಕ್ಕೋಸ್ಕರ ಮದ್ವೆ ಬೇಡ ಅನ್ನೋದೆ ?"

"ಹೋಗ್ಲಿ ಬಿಡು ಗಿರಿಜ....ಕಾಫಿ ಮಾಡಿ ತರ್ತೀನಿ ತಡಿ" ಎಂದು ಅಡಿಗೆ ಮನೆಗೆ ಬಂದು ಮರಳಲು ಇಟ್ಟಿದ್ದ ನೀರಿಗೆ ಪುಡಿ ಹಾಕಿ ಸೋಸಿದಳು. ಹಾಲು ಸಕ್ಕರೆ ಬೆರಸಿ ಗಿರಿಜೆಗೆ ಒಂದು ಲೋಟ ಕಾಫಿಯನ್ನು ಕೊಟ್ಟು ತಾನೂ ಕುಡಿದಳು. ಅಷ್ಟು ಹೊತ್ತಿಗೆ ಮಲಗಿದ್ದ ಕಮಲಮ್ಮ ಎದ್ದರು. ಗಿರಿಜೆಯನ್ನು ನೋಡಿ "ಏನಮ್ಮ ಅಪರೂಪವಾಗಿ ಬಂದು ಬಿಟ್ಟೆಯಲ್ಲ" ಎಂದಳು.

"ವೆಂಕಟೇಶನಿಗೆ ರಾಜಣ್ಣ ಕಾಗದ ಬರೆದಿದ್ದ, ಹೇಳೋಣವೆಂದು ಬಂದೆ."

"ನಮಗೂ ಬರೆದಿದ್ದಾನೆ."

"ಹಾಗಾದ್ರೆ ಸರಿ...."

"ಆಮೇಲೆ...."

"ಆಮೇಲೇನೂ ಇಲ್ಲ"

"ನಿನ್ನ ಗಂಡನೂ ಒಳ್ಳೆಯ್ನೇ...." ಎಂದು ಕಮಲಮ್ಮ ನಕ್ಕಳು.

"ಥೂ ಹೋಗ್ರಿ.... ನೀವು ಮಾತು ಮಾತಿಗೆಲ್ಲಾ ಹಾಗಂತೀರಿ" ಎಂದು ಹೇಳಿ ಗಿರಿಜೆ ತಮ್ಮ ಮನೆಗೆ ಹಿಂತಿರುಗಿದಳು. ಕಮಲಮ್ಮ ನಗುತ್ತ ಒಳ್ಳೆಯ ಹುಡ್ಗಿ ಎಂದು ಅಡಿಗೆಮನೆಗೆ ಬಂದಳು.

೧೪

ಮೇಜಿನ ಮೇಲಿದ್ದ ದೀಪ ಗೋಡೆಗೆ ತಗುಲಿ ಹಾಕಿದ್ದ ರಾಮಕೃಷ್ಣ ಪರಮಹಂಸ ಮತ್ತು ಶಾರದಾಮಣಿ ದೇವಿಯರ ಭಾವಚಿತ್ರವನ್ನು ಬೆಳಗಿತ್ತು. ಭಾವಚಿತ್ರಕ್ಕೆ ಹೊಸ ಹಾರವನ್ನು ಹಾಕಿದ್ದರಿಂದ ಕೊಠಡಿಯೆಲ್ಲಾ ಅದರ ಕಂಪಿನಿಂದ ತುಂಬಿತ್ತು. ಮೇಜಿನ ಮೇಲಿದ್ದ ರೇಡಿಯೋ ಮಾತನಾಡದೆ ಮೌನವಾಗಿತ್ತು. ಮಂಚದ ಮೇಲಿದ್ದ ವೀಣೆಗೆ ನುಡಿಯಲು ಮನಸ್ಸೇ ಇರಲಿಲ್ಲ. ಎಲ್ಲ ನಿಶ್ಶಬ್ದ. ಮಹಡಿಯ ಮೇಲಿದ್ದ ಕೊಠಡಿಗಳಲ್ಲೆಲ್ಲಾ ರೋಹಿಣಿಯ ಕೊಠಡಿಯಲ್ಲಿ ಮಾತ್ರ ದೀಪ ಉರಿಯುತ್ತಿತ್ತು. ಆರಾಮ ಕುರ್ಚಿಯ ಮೇಲೆ ರೋಹಿಣಿ ಕುಳಿತು ಕೊಠಡಿಯ ಸುತ್ತಲೂ ನೋಡಿದಳು. ತಾನು ಯಾವ ರೀತಿ ನಡೆದುಕೊಳ್ಳಬೇಕೋ ತಿಳಿಯದು. ಮುಂದಿನ ಭಾನುವಾರಕ್ಕೆ ತನ್ನ ಮದುವೆ ನಿಶ್ಚಯವಾಗಿ ಬಿಟ್ಟಿದೆ. ಇನ್ನುಳಿದಿರುವುದು ಮೂರೇ ದಿನ. ಏನೆಂದು ನಿರ್ಧರಿಸಬಹುದು. ಅವಳು ಪರ್ಯಾಲೋಚಿಸಲು ತಾನೆ ಯಾವುದನ್ನು ಬಿಟ್ಟಿದ್ದರು. ತಂದೆ ಒತ್ತಾಯಪಡಿಸಿದ್ದ. ಮಲತಾಯಿಯಂತೂ ಕೇಳಬೇಕಾದ್ದೇ ಇಲ್ಲ. ಇನ್ನು ಯಾರೊಡನೆ ಹೇಳಿಕೊಳ್ಳಬೇಕು? ಅವಳಿಗೆ ಇದ್ದುದು ಒಂದೇ ಮಾರ್ಗ. ವಿಧಿ ತಂದ ವರನನ್ನು ತನಗೆ ಬೇಕಾಗಲಿ ಬಿಡಲಿ ವರಿಸಿ ಬಾಳಬೇಕು. ಮೇಜಿನ ಮೇಲಿದ್ದ ವಸ್ತುಗಳ ಕಡೆ ನೋಡಿದಳು. ಬಿಳಿ ಹೂಗಳಿಂದ ಅಲಂಕೃತವಾದ ತಿಳಿ ನೀಲಿ ಬಟ್ಟೆ. ಅದರ ಮೇಲೆ ಚಿಕ್ಕ

ಚಿತ್ರಾವಳಿಯ ಕ್ಯಾಲೆಂಡರ. ಪಕ್ಕದಲ್ಲಿ ಗಡಿಯಾರ. ದೀಪ, ಹತ್ತಿರ ರೇಡಿಯೋ. ಮೇಜಿನ ಮೇಲಿದ್ದ ಒಪ್ಪಿ ತನಗೆ ಇಷ್ಟವಿರಲಿ ಬಿಡಲಿ ಹೂಕುಂಡದ ಜೊತೆ ಇಟ್ಟಿರಬೇಕು. ಗಡಿಯಾರದ ಟಿಕ್ ಟಿಕ್ ಶಬ್ದ ಕೇಳಬೇಕು. ದೀಪ ಹಚ್ಚಿ ಉರಿದಾಗ ಬೇಯಬೇಕು. ಅವಕ್ಕೆಲ್ಲಿಯ ಸ್ವಾತಂತ್ರ್ಯ. ಗೋಡೆಯ ಮೇಲೆ ಓಡಾಡುತ್ತಿದ್ದ ಹಲ್ಲಿ ಮತ್ತು ಒಂದೆರಡು ಜಿರಲೆಗಳನ್ನು ನೋಡಿದಳು. ತಮ್ಮ ಬದುಕು ವಿಚಿತ್ರವೆಂದು ಅವಕ್ಕೆ ತಿಳಿಯದೇನೋ. ತಮ್ಮ ತಮ್ಮ ಕೆಲಸ ಅವು ಮಾಡುತ್ತಿವೆ. ರೋಹಿಣಿ ದೃಷ್ಟಿಯನ್ನು ಹೊರಳಿಸಿ ವೀಣೆಯ ಕಡೆ ನೋಡಿದಳು. ನಿನ್ನ ದುಃಖದಲ್ಲಿ ನಾನೂ ಭಾಗಿ ಎಂದು ಅದು ಹೇಳಿರಬೇಕು. ರೋಹಿಣಿ ಎದ್ದು ಮಂಚದ ಮೇಲೆ ಕುಳಿತು ವೀಣೆಯನ್ನು ನುಡಿಸಿದಳು. ತನಗೆ ತಿಳಿಯದಂತೆ ಕೈಯಾಡುತ್ತಿತ್ತು. ಎಡಗೈ ಬೆರಳುಗಳು ಜಾಗರೂಕತೆಯಿಂದ ಒತ್ತಿ ಬೇಕಾದ ಸ್ವರ ಬರುವಂತೆ ನೋಡಿಕೊಂಡಿತ್ತು. ಒಂದೆರಡು ಹಾಡನ್ನು ಬಾರಿಸುವ ಹೊತ್ತಿಗೆ ಅದೂ ಬೇಜಾರಾಯಿತು. ಕೈಗೆ ಬಂದಂತೆ ತಂತಿಯನ್ನು ಮೀಟಿದಳು. ಬೇಕಾದ ಕಡೆ ಬೆರಳಿನಿಂದ ಒತ್ತಿ ಸ್ವರ ಚೆಲ್ಲಿದಳು. ಅದರಿಂದ ಒಂದು ನಿಯಮ ತಿಳಿದಿರಬೇಕು. ಅದೇ ವೀಣೆ ನುಡಿಸಿದಂತೆ ಸ್ವರ ನಾದ ಕೊಡುತ್ತೆ. ಅದರಲ್ಲಿ ಅನುಭವವೆ ಮುಖ್ಯ. ಹಾಗೆ ಅಲ್ಲವೆ ನಮ್ಮ ಬಾಳು-ಬಗೆದಂತೆ ಬಾಳು.

ಅಷ್ಟೇಕೆ ಶಾರದಾಮಣಿ ಸನ್ಯಾಸಿ ರಾಮಕೃಷ್ಣರನ್ನು ಕೈಹಿಡಿಯಲಿಲ್ಲವೆ. ಅವರು ಆಗ ಏನು ಯೋಚಿಸಿದ್ದರೋ. ಅಷ್ಟು ದೊಡ್ಡ ಮಹಾನುಭಾವರ ಮಾತೇಕೆ....? ಗೋಡೆಯ ಮೇಲೆ ಓಡಿದ ಜಿರಲೆಯನ್ನು ನುಂಗಲು ಒಂದು ಹಲ್ಲಿ ಹೊಂಚು ಹಾಕುತ್ತಿತ್ತು. ವೀಣೆ ನುಡಿಸುವುದು ಅಸ್ಪಷ್ಟವಾಯ್ತು. ಸ್ವಲ್ಪ ಹೊತ್ತಿನಲ್ಲಿ ಹಲ್ಲಿ ಜಿರಲೆಯನ್ನು ಹಿಡಿದೇ ಬಿಟ್ಟಿತು. ರೋಹಿಣಿಗೆ ಅಯ್ಯೋ ಎನ್ನಿಸಿ, ಬಿಡಿಸೋಣವೆಂದರೂ ಕೈಯೇ ಬರದು, ಏಳಲೇ ಆರಳು. ಮೀಟುತ್ತಿದ್ದ ಕೈಬೆರಳು ತಂತಿಯನ್ನು ಜೋರಾಗಿ ಒತ್ತಿತು. ಝಯ್ ಎಂಬ ಶಬ್ದದೊಡನೆ ಕಟಕ್ ಎಂದು ತಂತಿ ಕಿತ್ತು ಹೋಯ್ತು. ರೋಹಿಣಿ ಕಿರುಚಿ ವೀಣೆಯ ಮೇಲೆ ಬಿದ್ದುಬಿಟ್ಟಳು.

ದಿನಕ್ಕಿಂತಲೂ ಇಂದು ಸ್ವಲ್ಪ ಮುಂಚೆಯೇ ಬಂದ ವಿಶ್ವನಾಥ ಗಾಳಿಗೆ ಬಾಗಿಲು ಅರ್ಧ ತೆರೆದಿದ್ದುದರಿಂದ ರೋಹಿಣಿಯ ಕೊಠಡಿಯೊಳಗೆ

ನೋಡಿದ. ಅವನಿಗೆ ಗಾಬರಿಯಾಗಿ, ಒಳಕ್ಕೆ ಬಂದು ರೋಹಿಣಿಯ ಮುಖವನ್ನು ಎತ್ತಿ ಹಿಡಿದ. ಕಣ್ಣೀರು ಹರಿದಿದ್ದ ಕಲೆಯ ಮುಖ ನೀರಿನಲ್ಲಿ ತದ್ದಿದ ಕಮಲದಂತಿತ್ತು. ಸ್ವಲ್ಪ ಹೊತ್ತಿನನಂತರ ರೋಹಿಣಿಗೆ ಎಚ್ಚರವಾಗಿ ಏನು ನಡೆಯಿತೋ ತಿಳಿಯದೆ ಅವಾಕ್ಕಾಗಿ ನೋಡಿದಳು. ವಿಶ್ವನಾಥ ತನ್ನ ಹತ್ತಿರ ಕೂತಿದ್ದಾನೆ. ವೀಣೆ ತನ್ನ ಮುಂದೆ ಇದೆ. ವಿಶ್ವನಾಥನನ್ನು ನೋಡಿ ಮತ್ತೆ ತಲೆ ತಗ್ಗಿಸಿದಳು. ವಿಶ್ವನಾಥ " ಏಕೆ ಮೈಯಲ್ಲಿ ಚೆನ್ನಿಲ್ಲವೆ .... "ಎಂದು ಸಪ್ಪೆಯಾಗಿ ನುಡಿದ.

" ಸ್ವಲ್ಪ ತಲೆ ನೋಯುತ್ತಿದೆ .... ಅಷ್ಟೆ .... "

" ಔಷಧ ತಂದುಕೊಡಲೆ .... "

" ಬೇಡಿ .... ಎಲ್ಲಾ ಸರಿ ಹೋಗುತ್ತೆ "

ವಿಶ್ವನಾಥ ಹಿಂತಿರುಗುವುದರಲ್ಲಿದ್ದ. ಪುನಃ " ನಿನ್ನ ಹತ್ತಿರ ಕೆಲವು ಮಾತನಾಡಲೆ " ಎಂದ.

" ಹೂ ! ಕೂತುಕೊಳ್ಳಿ. "

ಹೇಗೆ ಪ್ರಾರಂಭಿಸಿ ಕೊನೆಗಾಣಿಸಬೇಕೋ ತಿಳಿಯದೆ ವಿಶ್ವನಾಥ ಯೋಚಿಸಿದ.

" ನಮ್ಮ ಮದುವೆ ಗೊತ್ತಾಗಿದೆ .... "

" .... .... .... .... .... "

" ನಿನ್ನನ್ನು ಮದುವೆಯಾಗಲು ನಾನು ಭಾಗ್ಯಶಾಲಿ .... "

" .... .... .... .... .... "

" ಏಕೆ ಇರಬೇಕಾದಹಾಗೆ ನೀನಿಲ್ಲ ರೋಹಿಣಿ. "

" .... .... .... .... .... "

" ಹಾಗಾದರೆ ಈ ಮದುವೆ ನಿನಗೆ ಇಷ್ಟ ಇಲ್ಲವೆ "

ಇದುವರೆಗೂ ಮಾತನಾಡದೆ ವಿಶ್ವನಾಥನನ್ನು ನೋಡುತ್ತಿದ್ದ ರೋಹಿಣಿ " ಹಾಗೆ ಯಾರು ಹೇಳಿದರು " ಎಂದಳು.

" ಹಾಗಾದರೆ ನಿನ್ನ ಒಪ್ಪಿಗೆ ಇದೆಯೆ .... ರೋಹಿಣಿ ! ನನ್ನನ್ನು ಪ್ರೀತಿಸುತ್ತೀಯಾ...."

"ಒಪ್ಪಿಗೆಯಿರಲಿ ಬಿಡಲಿ, ಪ್ರೀತಿಸಲಿ ಬಿಡಲಿ...ಮದುವೆಗೆ ಒಪ್ಪಿದ್ದೇನಲ್ಲಾ"

ವಿಶ್ವನಾಥನಿಗೆ ಪೂರ್ತಿ ಸಮಾಧಾನವಾಗದಿದ್ದರೂ ರೋಹಿಣಿ ತನ್ನೊಡನೆ ಮದುವೆಗೆ ಒಪ್ಪಿರುವ ಸಂಗತಿ ಕೇಳಿ ಸಂತೋಷವಾಯ್ತು. ಸ್ವಲ್ಪ ಹೊತ್ತಿನನಂತರ ಅವನೇ "ನೀನು ಹೇಳುವುದು ಅರ್ಥವಾಗುತ್ತಿಲ್ಲ...."

"ನನಗೂ ಅರ್ಥವಾಗೋದು....ಪ್ರೇಮವೇ ಎಲ್ಲಿಯೋ ಬೇರೆ....ಮದುವೆಯು ನಿಬಂಧನವಿಲ್ಲ. ಪ್ರೇಮ ಮನಸ್ಸಿನ ಸಂಸರ್ಗ—ಮದುವೆ ಬಾಹ್ಯ ಆಡಂಬರ ಎರಡೂ ಕೂಡಿ ಬಂದರೇನೋ ಚೆನ್ನ. ಆದರೆ...." ಎಂದು ಮಾತನ್ನು ಮುಗಿಸದೆ ಅತ್ತುಬಿಟ್ಟಳು.

ಮತ್ತೆ....ಬರ್ತೀನಿ ಎಂದು ಹೇಳಿ ಮಹಡಿಯನ್ನಿಳಿದು ಹೂದೋಟದ ಹತ್ತಿರಬಂದು ನಿಂತಾಗ ಜೂಲಿ ಓಡಿ ಬಾಲವನ್ನಲ್ಲಾಡಿಸುತ್ತಾ ಅವಳ ಮುಂದೆ ನಿಂತಿತು. ಅದರ ಮೈದಡವಿ ಮುಖವನ್ನು ಸವರಿದಳು. ಅದಕ್ಕೆ ಎಷ್ಟು ಸಂತೋಷವಾಯ್ತೋ. ಆದರೆ ಮೇಲೆ ನೋಡುತ್ತ ನಿಂತಿದ್ದ ವಿಶ್ವನಾಥನಿಗೆ ಮಾತ್ರ ಸಂತೋಷವಾಗಲಿಲ್ಲ. ಕೆಳಗೆ ಹೋಗಿ ಜೂಲಿಯನ್ನು ಮೈತಡವುವುದು ಬಿಟ್ಟು ಅಲ್ಲಿಯೇ ನಿಂತು ತನ್ನೊಡನೆ ಎರಡು ಮಾತನಾಡಿದ್ದರೆ ಎಷ್ಟು ಚನ್ನಾಗಿತ್ತು ಅಂದುಕೊಂಡ.

× × ×

ರೋಹಿಣಿಯ ಮದುವೆಯ ಸಿದ್ಧತೆ ನಡದೇ ಇತ್ತು. ಇನ್ನುಳಿದುದ್ದು ಮೂರೇದಿನಗಳಾದುದರಿಂದ ಸಿದ್ಧತೆ ಭರದಿಂದ ಸಾಗಿತ್ತು. ವಡವೆ ವಸ್ತ್ರಗಳು, ವಿಶ್ವನಾಥನಿಗೆ ಬಟ್ಟೆ ಬರೆ ಎಲ್ಲವನ್ನೂ ಕೊಂಡಾಯ್ತು. ವಿಶ್ವನಾಥ ಬೇಕು ಅಂದುದನ್ನು ತರಿಸಲು ಸುಂದರಮ್ಮ ಸಿದ್ಧವಾಗಿದ್ದಳು. ರೋಹಿಣಿಗೆ ತನಗೆ ಬೇಕಾದ ವಡವೆ ವಸ್ತ್ರಗಳನ್ನು ತಿಳಿಸೆಂದು ಕೇಳಿದ್ದರು. ತನಗೇನೂ ಬೇಡವೆಂದು ಅವಳು ತಿರಸ್ಕರಿಸಿದ್ದಳು. ಆನಂದರಾಯರ ಸಂಬಂಧಿಕರು ಸುಂದರಮ್ಮನ ಬಳಗ ಬಂದು ತಂಗುವ ಹೊತ್ತಿಗೆ ಮದುವೆ ಬಂದೇ ಬಿಟ್ಟಿತು. ಯಾವುದನ್ನೂ ಹೆಚ್ಚು ಆಡಂಬರವಿಲ್ಲದೆ ಮಾಡಿದರು. ಕಾರಣ ಎಲ್ಲಕ್ಕೂ ರೋಹಿಣಿ ತನಗೆ ಬೇಡ ಅನ್ನುತ್ತಿದ್ದಳು. ಸುಂದರಮ್ಮ ತನ್ನ ತಮ್ಮನ ಮದುವೆ ಅಷ್ಟು ಬೇಕಾ

ಬಿಟ್ಟಿಯಾಗಿ ಮಾಡಿದರೆ ಸುಮ್ಮನಿದ್ದಾಳೆ? ಒಂದೇ ದಿನದ ಶಾಸ್ತ್ರವಾದರೂ ಧಾರೆಯ ದಿನ ಸಾಯಂಕಾಲ ತಮ್ಮ ಸ್ನೇಹಿತರನ್ನೆಲ್ಲಾ 'ಆರತಿ ಅಕ್ಷತೆ' ಗೆ ಕರೆದಿದ್ದರು. ಆನಂದರಾಯರ ಸ್ನೇಹಿತರು ವಧೂವರರನ್ನು ಆಶೀರ್ವದಿಸಿ ಫಲ ತಾಂಬೂಲವನ್ನು ಸ್ವೀಕರಿಸಿ ಹಿಂದಿರುಗಿದರು. ಆರತಿ ಅಕ್ಷತೆಯ ನಂತರ ಮೆರವಣಿಗೆಯ ಏರ್ಪಾಟಿತ್ತು. 'ಬೇಡ' ಎಂದು ರೋಹಿಣಿ ಎಷ್ಟೋ ವಿಧದಲ್ಲಿ ಕೇಳಿಕೊಂಡಳು. ಎಲ್ಲರು ಹೇಳಿದಹಾಗೆ ಮತ್ತೆ ಕೇಳಬೇಕಾಯ್ತು. ವಿಜೃಂಭಣೆ ಏರ್ಪಡಿಸಿದ್ದ ಮೆರವಣಿಗೆ. ಹೊಸ ಕಾರನ್ನು ಹೂವಿನಿಂದ ಅಲಂಕರಿಸಿ ಅದರಲ್ಲಿ ವಿಶ್ವನಾಥ ರೋಹಿಣಿ ಕುಳಿತಿದ್ದರು. ಘನವಾದ ಓಲಗ ಅಲ್ಲದೆ ಬ್ಯಾಂಡು ಕಣ್ಣು ಕೋರೈಸುತ್ತಿದ್ದ ಗ್ಯಾಸ್‌ಲೈಟುಗಳು. ಎಲ್ಲ ಸರಿಯೆ. ಆದರೆ ವಿಶ್ವನಾಥ ರೋಹಿಣಿಗೆ ತಕ್ಕ ಜೊತೆಯಲ್ಲ ಎಂದು ಎಲ್ಲರಿಗೆ ಅನ್ನಿಸಿತು. ರೋಹಿಣಿ ತಲೆ ತಗ್ಗಿಸಿ ಕುಳಿತಿದ್ದಳು. ಅವಳಿಗೆ ರಾಜನ ಜ್ಞಾಪಕ ಬಂದು ಮನಸ್ಸೆಲ್ಲಾ ಹಿಂಡಿ ದಂತಾಗುತ್ತಿತ್ತು. ಮೆರವಣಿಗೆ ಆದರೆಷ್ಟು, ಬಿಟ್ಟರೆಷ್ಟು, ತನಗೆ ಸಿಕ್ಕ ವರ ಒಳ್ಳೆಯವನಾದರೇನು, ಕೆಟ್ಟವನಾದರೇನು, ಅಂತು ತಾನು ಪ್ರೀತಿಸಿ ವರಿಸ ಬೇಕೆಂದಿದ್ದ ರಾಜ ಮಾತ್ರ ಅವಳನ್ನು ನಿರಾಕರಿಸಿದ್ದ. ಇನ್ನು ಅವಳೇನು ಮಾಡಲಾದೀತು. ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಹೊರಟು ಮನೆಗೆ ಹಿಂತಿರುಗುವ ಹೊತ್ತಿಗೆ ರಾತ್ರಿ ಹನ್ನೊಂದು ಗಂಟೆಯಾಗಿಯ್ತು. ಶಾಸ್ತ್ರ ಮುಗಿದ ಮೇಲೆ ರೋಹಿಣಿಗೆ ಬಿಡುವು ಸಿಕ್ಕಿ ತನ್ನ ಕೋಣೆಗೆ ಭಾರವಾದ ಹೃದಯದಿಂದ ಬಂದಳು. ಬಾಗಿಲನ್ನು ಮುಚ್ಚಿ ಮೇಜಿನ ಹತ್ತಿರ ಬಂದು ರಾಮಕೃಷ್ಣಪರಮಹಂಸ ಮತ್ತು ಶಾರದಾಮಣಿಯ ಭಾವಚಿತ್ರವನ್ನು ನೋಡಿದಳು. ನಿಲ್ಲಿಸದೆ ಬಿಕ್ಕಳಿಸಿ ಅತ್ತುಬಿಟ್ಟಳು. ಇನ್ನು ಆಗಿಹೋಯ್ತು. ತನಗೆ ಇಷ್ಟವಿಲ್ಲದವನ ದಾಸ್ಯ ಸಂಕೋಲೆ ಎಂದು ಅನ್ನಿಸಿರಬೇಕು. ಒಂದೆರಡು ನಿಮಿಷದ ನಂತರ ಶಾರದಾಮಣಿಯ ಭಾವ ಮತ್ತು ದೃಢ ಮುಖವನ್ನು ನೋಡಿದಳು. ತನಗೆ ಒಂದು ಸಂದೇಶ ಸಿಕ್ಕಿತು. ತನಗೆ ಸಿಲುಕದ ಒಂದು ವಿಧಿ ತನ್ನ ಭವಿಷ್ಯವನ್ನು ಹೊಸೆಯುತ್ತಿದೆಯೆಂದು. ಎದುರು ಗೋಡೆಗೆ ಹಾಕಿದ್ದ ತಾಯಿಯ ಚಿತ್ರವನ್ನು ನೋಡಿ ಮತ್ತೆ ಕಣ್ಣೀರಿಟ್ಟಳು. "ಅಮ್ಮಾ ನೀನಿಂದು ಇದ್ದಿದ್ದರೆ" ಎಂದು ಅತ್ತಳು. ಸುಯ್ಯನೆ ಬೀಸುತ್ತಿದ್ದ ಗಾಳಿ ಕಿಟಕಿಯ ಬಾಗಿಲನ್ನು ಹೊಡೆದು ಶಬ್ದ ಮಾಡುತ್ತಿತ್ತು. ಕಿಟಕಿಯ ಬಾಗಿಲನ್ನು

ಹಾಕುವಾಗ ಆಕಾಶವನ್ನು ನೋಡಿದಳು. ಎಲ್ಲ ಕತ್ತಲಿನಿಂದ ಆವರಿಸಿತ್ತು. ಅಂತೆಯೇ ಅವಳ ಹೃದಯವೂ ಅಂಧಕಾರದಿಂದ ತುಂಬಿದ್ದು ದಿಕ್ಕೇ ತೋರ ದಂತಿತ್ತು.

## ೧೫

ಮನೆಗೆ ಹೊಸಬರ್‍ಯಾರಾದರೂ ಬಂದು ನೋಡಿದರೆ ರಾಜ ಕೃಷ್ಣಸ್ವಾಮಿಯವರ ಮನೆಯವನೆಂದು ಹೇಳುವಷ್ಟು ಹೊಂದಿಕೊಂಡು ಬಿಟ್ಟಿದ್ದ. ಇಬ್ಬರು ಹೆಣ್ಮಕ್ಕಳಿಗೆ ಮತ್ತು ಒಬ್ಬ ಹುಡುಗನಿಗೆ ಪಾಠ ಹೇಳಿಕೊಟ್ಟರೆ ಅವನ ಕೆಲಸ ತೀರಿತು. ಬೆಳಗಿನ ಹೊತ್ತು ಒಂದು ಗಂಟೆ ಸಮಯವನ್ನು ಇದಕ್ಕಾಗಿಯೇ ಮೀಸಲಾಗಿಟ್ಟಿದ್ದ.

ಶಾರದಮ್ಮ ನಾಲ್ಕೈದು ದಿನದಿಂದಲೂ ಜ್ವರವೆಂದು ಮಲಗಿದ್ದಳು. ರಾಜ ಔಷಧಿ ತಂದುಕೊಡುತ್ತಿದ್ದಲ್ಲದೆ ಪೇಟೆಯಿಂದ ಹಣ್ಣು ಹಂಪಲಗಳನ್ನು ತರುತ್ತಿದ್ದ. ಬೆಳಗಿನ ಹೊತ್ತು ಕೃಷ್ಣಸ್ವಾಮಿಯವರು ರೋಗಿಯನ್ನು ನೋಡಿಕೊಳ್ಳುತ್ತಿದ್ದರು ದೊಡ್ಡ ಮಗಳು ಲಲಿತ ತನಗೆ ಬಂದ ಹಾಗೆ ಅಡಿಗೆ ಮಾಡುತ್ತಿದ್ದಳು ಒಂದು ವಾರವಾದ ಮೇಲೆ ನಿಲ್ಲಬಹುದೆಂದಿದ್ದ ಜ್ವರ ನಿಲ್ಲಲೇ ಇಲ್ಲ. ಕೃಷ್ಣಸ್ವಾಮಿಗೆ ಅನುಮಾನ ಬಂದು ಡಾಕ್ಟರಿಗೆ ತೋರಿಸಿದರು. ವಿಷಮಶೀತ ಜ್ವರ ಎಂದು ತಿಳಿದಮೇಲೆ ಮನೆಯಲ್ಲಿ ಹೊತ್ತಿಗೆ ಗೊತ್ತಿಗೆ ನೋಡಿಕೊಳ್ಳುವರಾರೂ ಇಲ್ಲದ್ದರಿಂದ ಆಸ್ಪತ್ರೆಗೆ ಸೇರಿಸುವುದೆಂದು ನಿರ್ಧರಿಸಿ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಿದರು. ಅಂದಿನಿಂದ ರಾಜನಿಗೆ ಹೆಚ್ಚಿನ ಕೆಲಸ. ಸಾಯಂಕಾಲ ಆಸ್ಪತ್ರೆಗೆ ಹೋಗುವುದಲ್ಲದೆ ಜೊತೆಗೆ ಅವರ ಮಕ್ಕಳನ್ನು ಕರೆದುಕೊಂಡು ಹೋಗಬೇಕು. ಕೃಷ್ಣಸ್ವಾಮಿಯವರ ಕಾರಿದ್ದುದರಿಂದ ಅಷ್ಟು ತೊಂದರೆ ಆಗುತ್ತಿರಲಿಲ್ಲ.

ಈ ಮಧ್ಯೆ ರಾಜನಿಗೆ ಯಾವ ವಿಷಯವನ್ನು ಕುರಿತು ಯೋಚಿಸುವುದಕ್ಕೂ ಪುರಸತ್ತೇ ಇರುತ್ತಿರಲಿಲ್ಲ. ಒಂದೊಂದು ಸಾರಿ ರೋಹಿಣಿಯ ಜ್ಞಾಪಕ ಬಂದಾಗಲೆಲ್ಲಾ ಅಧೀರನಾಗುವನು, ವ್ಯಥೆಪಡುವನು, ಏಕೆ ಅತ್ತು ಬಿಡುವನು. ರೋಹಿಣಿಯ ಮದುವೆಗೆ ಆಹ್ವಾನ ಪತ್ರಿಕೆಯೂ ಬಂದಿತ್ತು. ಜೊತೆಗೊಂದು ಕಾಗದವನ್ನು ಬರೆದಿದ್ದಳು ಮುದ್ದಾಗಿ ಹತ್ತು ಹನ್ನೆರಡು ಪಂಕ್ತಿಗಳನ್ನು ಬರೆದಿದ್ದ ಕಾಗದ. ರಾಜ ಮೈಸೂರು ಬಿಟ್ಟು ಬಂದಾಗಲೇ ರೋಹಿಣಿಯ ಮದುವೆ

ವಿಶ್ವನಾಥನೊಡನೆ ಆಗುವುದೆಂದು ಊಹಿಸಿದ್ದ. ಆದ್ದರಿಂದ ಅವನಿಗೆ ವಿಸ್ಮಯವಾಗಲಿಲ್ಲ. ಕಾಗದ ಓದಿದ ಅವನಿಗೆ ರೋಹಿಣಿ ಎಷ್ಟು ನೊಂದು ಬರೆದಿರಬೇಕ ಅನ್ನಿಸಿತು. ಜೀವಾವಧಿ ಶಿಕ್ಷೆ ಅನುಭವಿಸಬೇಕೆಂದು ಹೇಳಿದ ಏನ ಖೈದಿಗೆ ಹೇಗಾಗಬೇಕು ? ಕೊನೆಯವರೆಗೂ ನಂಬಿದ್ದವಳಿಗೆ ಯಾವ ವಿಧದಲ್ಲಿ ನಿಮ್ಮ ಕರ್ತವ್ಯ ನೆರವೇರಿಸಿದ್ದೀರಿ........ " ? ಅವಳು ಬರೆದಿದ್ದೇನು ತನ್ನ ಮನಸ್ಸೇ ತನ್ನನ್ನು ಅಣಕಿಸುತ್ತಿತ್ತು. ಹೌದು ರೋಹಿಣಿಯ ಮದುವೆ ನಡೆದುಹೋಯ್ತು. ಇನ್ನು ತಾನು ಹೊರಗಿನವನು–ಏಕೆ ಶತ್ರು. ತನ್ನ ಕ್ಲಾಸಿನ ರೇಣುಕಾದೇವಿಯನ್ನು ನೋಡಿದಾಗಲೆಲ್ಲಾ ರೋಹಿಣಿಯ ಜ್ಞಾಪಕ ಬಂದು ಬಿಡುವುದು ಒಂದೇ ರೂಪು, ಆಕಾರ–ಏಕೆ ಅಕ್ಕ ತಂಗಿ ಎನ್ನಬಹುದಿತ್ತು. ಕಾಗದ ಬಂದ ಒಂದೆರಡು ದಿನಗಳನ್ನು ಮಂಕಾಗಿ ಕಳೆದ.

ರಾಜ ಎಂದಿನಂತೆ ಸಾಯಂಕಾಲ–ಆಸ್ಪತ್ರೆಗೆ ಹೋಗಿದ್ದ. ಶಾರದಮ್ಮ ಸ್ವಲ್ಪ ಗೆಲುವಾಗಿಯೇ ಇದ್ದಳು. ಅವರಿಗೆ ಒಂದೆರಡು ಕಿತ್ತಳೆ ಹಣ್ಣನ್ನು ಬಿಡಿಸಿ ಕೊಟ್ಟ. ಪಾಪ! ದಿನಾಗಲೂ ಮಗನಿಗಿಂತ ಹೆಚ್ಚಾಗಿ ತನ್ನ ಶುಶ್ರೂಷೆ ಮಾಡಿದ್ದ ರಾಜ. ಆ ದಿನ ಎಂದಿನಂತಿರದೆ ಇರುವುದನ್ನು ಜ್ವರದಿಂದಿದ್ದ ಶಾರದಮ್ಮನೂ ಗುರುತಿಸಿಬಿಟ್ಟರು.

"ಯಾಕೆ ರಾಜಣ್ಣ....ಒಂದು ತರಹವಾಗಿದ್ದೀಯಲ್ಲಪ್ಪ ಮೈಯಲ್ಲಿ ಚೆನ್ನಾಗಿಲ್ಲವೆ ?"

"ನನಗೇನೂ ಆಗಿಲ್ಲ ಶಾರದಮ್ಮನೋರೆ...."

"ಏನಾದರೂ ಅಂದ್ರೆ ಇವತ್ತು...."

"ಛೇ ! ....ಅವರು ನನ್ನ ಭಾಗ್ಯದ ದೇವರು ..."

"ಹಾಗಾದ್ರೆ ದುಡ್ಡೇನಾದ್ರೂ ಬೇಕಿತ್ತೆ...."

"ಇಲ್ಲ....ನೀವೇಕೆ ಮಾತನಾಡಿ ಆಯಾಸ ಮಾಡಿಕೊಳ್ತೀರಿ....ಬಿಡಿ"

"ಇನ್ನೂ ಸಂಕೋಚ ಪಟ್ಟು ಮಾತನಾಡ್ತೀಯಲ್ಲಪ್ಪ....ಬೇಕಾದ್ರೆ ಅವರನ್ನೇ ಕೇಳು ಕೊಡ್ತಾರೆ...."

ರಾಜ ಏನನ್ನೂ ಮಾತನಾಡಲಿಲ್ಲ. ಅವನಿಗೆ ದುಡ್ಡು ಬೇಕಿರಲಿಲ್ಲ, ಮನೆಯಲ್ಲಿ ಯಾರೂ ಏನೂ ಅಂದಿರಲಿಲ್ಲ. ಆದರೆ ಮನಸ್ಸಿಗೆ ಮಾತ್ರ ಶಾಂತಿಯಿರಲಿಲ್ಲ. ಕಣ್ದುಂಬಿ ಬಂದು ಎದ್ದು ನಿಂತು ಕಣ್ಣೊರಸಿಕೊಂಡುದನ್ನು ಶಾರದಮ್ಮ ನೋಡಿ ಅಧೀರಳಾದಳು.

" ಹಾಗಾದ್ರೆ ಹೇಳೋಲ್ವೆ ರಾಜಣ್ಣಾ.... "

"ಏನೂ ಇಲ್ಲ ರಾರನಮ್ಮನೋರೆ..., ಮನಸ್ಸು ಸರಿಯಿಲ್ಲ ಅಷ್ಟೆ" ಎಂದು ನಿಜ ಕಾರಣವನ್ನು ಮರೆಮಾಚಿದ. ವೆಂಕಟೇಶನ ತಾಯಿ ಮತ್ತು ಗಿರಿಜೆ ಮೈಸೂರಿನಿಂದ ಬರುವರೆಂದು ತಿಳಿಸಿದ. ಸದ್ಯ ಮನೆಯ ಕಡೆ ನೋಡಿಕೊಳ್ಳಲು ಅಕ್ಕ ಬಂದಿದ್ದು ಒಳ್ಳೆಯದೇ ಆಯ್ತು ಎಂದುಕೊಂಡಳು. ಸ್ವಲ್ಪ ಹೊತ್ತಾದ ಮೇಲೆ ಆಸ್ಪತ್ರೆಯಿಂದ ಹೊರಟು ಮನೆಗೆ ಬಂದ.

ಮನೆಗೆ ಬಂದಾಗ ವೆಂಕಟೇಶನ ತಾಯಿ ಮತ್ತು ಗಿರಿಜೆ ಬಂದಿದ್ದರು. ಗಿರಿಜೆಯ ಜೊತೆಯಲ್ಲಿ ಒಂದು ದೊಡ್ಡ ಲಕೋಟೆಯನ್ನು ರೋಹಿಣಿ ಕಳುಹಿಸಿದ್ದಳು. ತನ್ನ ಕೋಣೆಗೆ ಬಂದು ಕುತೂಹಲದಿಂದ ಒಡೆದು ನೋಡಿದ. ಒಂದು ವರ್ಷದ ಹಿಂದೆ ರೋಹಿಣಿ-ರಾಜ ತೆಗೆಸಿಕೊಂಡಿದ್ದ ಭಾವ ಚಿತ್ರ–ಅಣಿಮುತ್ತಿನ ಹೊಂದಾಣಿಕೆ. ಅದರೊಂದಿಗೆ ಒಂದು ಕಾಗದ.

" ಈ ಭಾವಚಿತ್ರ ನಿಮಗೆ ಕಳುಹಿಸಿರುವುದು ಸರಿಕಾಣದೆ ಇರಬಹುದು? ಒಂದು ಬೇಡುತ್ತೇನೆ–ಈ ಚಿತ್ರವನ್ನು ನಿಮ್ಮ ಹತ್ತಿರ ಇಟ್ಟುಕೊಳ್ಳಿ. ಎಂದಾದರೂ ನಿಮ್ಮ ನಿರ್ಣಯ ಸರಿಯಿಲ್ಲವೆಂದು ತಿಳಿದಾಗ್ಗ ನನಗಾಗಿ ಅತ್ತು ಬಿಡಿ. ನನ್ನ ಮದುವೆಗೆಂದು ಕಳುಹಿಸಿ ಕೊಟ್ಟ ಚಿನ್ನದ ಬ್ರೋಚನ್ನು ಅತ್ಯಂತ ಪ್ರೀತಿಯಿಂದ ಸ್ವೀಕರಿಸಿದ್ದೇನೆ. ಮದುವೆಯಲ್ಲಿ ಇದೊಂದೇ ಸಂತೋಷದ ಕಿಡಿ. ಈಗ ನಾನು ಬೇರೆಯವರ ಪಾಲು. ಹೆಚ್ಚಿಗೆ ಬರೆಯುವುದೂ ಚೆನ್ನಾಗಿ ಕಾಣದು.

ರೋಹಿಣಿ "

ಬರಹ ನಾಲ್ಕೇ ಸಾಲಾದರೂ ಅದರೊಳಗಿನ ಅರ್ಥ ಸಾವಿರ ಸಾಲಿನದಂತಿತ್ತು. ಊಟಮಾಡಿದ ಮೇಲೆ ರೋಹಿಣಿಯ ಮದುವೆಯ ಹೆಚ್ಚಿನ ವಿವರ ಗಿರಿಜೆಯಿಂದ ತಿಳಿಯಿತು. ಪಾಪ! ತನಗಿಷ್ಟವಿಲ್ಲದವನ ಕೈಹಿಡಿದಳು-ಹಸೆಯ ಮೇಲೂ ಅಷ್ಟೆ; ಸಂತೋಷದಿಂದ ಇದ್ದ ಹಾಗೆ ಕಾಣೆ. ಬಹಳ ಯೋಚಿಸಿದ. ಇನ್ನು ತಾನು ಹೇಗೆ ನಡೆದುಕೊಳ್ಳಬೇಕು ? ಬೇಗ ಕೆಲಸಕ್ಕೆ ಸೇರಿ ತಾಯಿ ಮತ್ತು ಗೌರಿಯನ್ನು ಕರೆಸಿಕೊಳ್ಳಬೇಕೆಂದುಕೊಂಡ. ಎಲ್ಲಾ ನಿರ್ಧಾರಗಳೇ —ಅದು ನಡೆಯುವಂತೆ ನೋಡಿಕೊಳ್ಳಬೇಕಿತ್ತು

ಡಾ ಕೃಷ್ಣಸ್ವಾಮಿಯವರ ಹತ್ತಿರ ಪುಸ್ತಕಗಳನ್ನು ತೆಗೆದುಕೊಳ್ಳಲು ರೇಣುಕಾದೇವಿ ಬಂದಿದ್ದಳು. ಕೃಷ್ಣಸ್ವಾಮಿಯವರಿನ್ನೂ ಬಂದಿರಲಿಲ್ಲ. ರಾಜ ರೇಣುಕಾ ಜೊತೆಗೆ ಡಿಪಾರ್ಟಮೆಂಟಿಗೆ ಹೋದ. ಅವಳ ಮಾತೆ ಒಂದು ತಮಾಷೆ.

ಅವಳೆ "ಯಾವುದೋ ಯೋಚನೆಯಲ್ಲಿ ಮುಳುಗಿದ್ದೀರಿ" ಎಂದು ಮಾತಿಗೆ ಆರಂಭಿಸಿದಳು.

"ಹೌದು....ಅದಕ್ಕೇನಾದರೂ ಮದ್ದು ತಿಳಿಸಿದಿರಿ."

"ಮದ್ದೇನೆಂದು ಹೇಳಬಲ್ಲೆ....ವಿಷಯ ತಿಳಿಸಿ ಬಿಡಿ...."

"ವಿಷಯ ಇದ್ದರಲ್ಲವೆ ಹೇಳಲು"

"ಕಷ್ಟವಾದ ಸಮಸ್ಯೆಯನ್ನು ತಮಗೆ ಬೇಕಾದವರ ಹತ್ತಿರ ಹೇಳಿಕೊಂಡರೆ ಮನಸ್ಸು ಹಗುರವಾಗುತ್ತೆ .... ಏನಿದ್ರೂ ಹೇಳಿ...."

"ಅಂತಹ ವಿಷಯ ಏನೂ ಇಲ್ಲ .... ಸುಮ್ಮನೆ ಗೇಲಿ ಮಾಡಬೇಡಿ."

"ಹಾಗಿರಲಾರದು .... ಪ್ರೇಮದ ಸೆಳೆತದಲ್ಲಿ ಸಿಕ್ಕಿರಬೇಕು ....ನಾನು ಈ ರೀತಿ ತಿಳಿದುಕೊಂಡಿದ್ದೇನೆ....ಪ್ರೇಮ ಬೆಂಕಿಯಂತೆ, ಅದರೊಡನೆ ಸರಸ ಅಪಾಯ. ಸರಿಯಾಗಿ ಕೂಡಿ ಬಂದರೆ ದೀಪಿಗೆಯಂತೆ ಬೆಳಗಿ ಕಾಂತಿ ಕೊಡುತ್ತೆ. ಕ್ರೂರವಾಗಿ ಪ್ರತಿಯಾಯ್ತೋ ನಮಗೆ ಕಾಣದಂತೆ ಸುಟ್ಟು ಬಿಡುತ್ತೆ...." ಎಂದಳು.

ರಾಜ ಮಾತನಾಡುವುದರ ಬದಲು ಯೋಚಿಸಿದ. ರೇಣುಕಾ ಹೇಳಿದ ಮಾತು ಸತ್ಯ. ಅದೇ ಜ್ವಾಲೆ ರೋಹಿಣಿಯನ್ನು ಸುಡುತ್ತಿರಬಹುದೆ? ಹಾಗೆ ಏನೋ ರೇಣುಕಾಳ ಸ್ಥಿತಿ ಎನ್ನಿಸಿತು.

"ಎಲ್ಲಾ ನಮ್ಮ ಕೈಲಿದೆ ನೋಡಿ ....ಸ್ವರ್ಗ ಈ ಜನ್ಮದಲ್ಲೇ ಇದೆ, ನರಕವೂ ಅದರ ಬೆನ್ನುಹತ್ತಿಕೊಂಡಿದೆ ....ಎಂತಹ ಕಷ್ಟ ಬರಲಿ ನಗುತ್ತಾ ಇದ್ದುಬಿಡುತ್ತೇನೆ. ಮನಸ್ಸು ಸಮಾಧಾನವಾಗುವವರೆಗೂ ಹಾಡಿಬಿಡ್ತೇನೆ. ಒಂದೊಂದು ದಿನ ನನ್ನ ಚರ್ಯೆಯನ್ನು ನೋಡಿ ಕೆಲವರು ಹುಚ್ಚು ಹಿಡ್ದಿದೆಯೇನೋ ಎಂದು ಸಂತಾಪ ಪಡುವರು."

ರೇಣುಕಾ ಹೇಳುತ್ತಿದ್ದುದನ್ನು ರಾಜ ಕೇಳುತ್ತಿದ್ದನೇ ವಿನಾ ಮಾತನಾಡಲಿಲ್ಲ.

"ಕಷ್ಟನೂ ಬರಲಿ ....ನನಗೆ ಒಂದು ಲಕ್ಷ ರೂಪಾಯಿ, ಲಾಟರಿಯಲ್ಲಿ ಬಂದರೆ ಸಂತೋಷದಿಂದ ತೆಗೆದುಕೊಳ್ಳುವುದಿಲ್ಲವೆ? ಹಾಗೆಯೆ.... ಬೆಟ್ಟದಂತಹ ಕಷ್ಟನೂ ಬರಲೇಳಿ ...." ಎಂದು ಒಂದೇ ಉಸುರಿನಲ್ಲಿ ಹೇಳಿದಳು. ಆ ಮಾತಿನ ಹಿಂದಿದ್ದ ದೃಢತೆ ರಾಜನಿಗೆ ಆಶ್ಚರ್ಯವನ್ನುಂಟುಮಾಡಿತು. ರೇಣುಕಾ ನುಡಿದಿದ್ದು ನಿಜವೆ. ಜೂಜಿನಲ್ಲಿ ಕುದುರೆ ಗೆಲ್ಲಬೇಕಾದರೆ, ಒಂದೇ ದಿಕ್ಕಿನಲ್ಲಿ ತನ್ನ ಮಾರ್ಗ ನೋಡಬೇಕು. ಎಲ್ಲಾ ಚಿಂತೆಯನ್ನೂ ಮರೆತು ಓಡಬೇಕು ಎಂದುಕೊಂಡ. ಆ ಹೊತ್ತಿಗೆ ಎದುರಿಗೆ ಕೃಷ್ಣಸ್ವಾಮಿಯವರೇ ಬರುತ್ತಿದ್ದುದನ್ನು ನೋಡಿ ರೇಣುಕಾ "ನೀವೇ ಸಿಕ್ಕಿದಿರಿ.... ಪುಸ್ತಕ ಪ್ರಯೋಗಶಾಲೆಯಲ್ಲೇ ಇಟ್ಟಿರಾ" ಎಂದಳು

"ಹೌದು ನಿಮಗೆ ಕಳುಹಿಸುವುದನ್ನು ಮರೆತುಬಿಟ್ಟೆ.... ನಾಳೆ ತೆಗೆದುಕೊಳ್ಳಬಹುದು" ಎಂದು ಕೃಷ್ಣಸ್ವಾಮಿ ಹೇಳಿದರು. ರೇಣುಕಾ ಇಬ್ಬರಿಗೂ ನಮಸ್ಕಾರಮಾಡಿ ಹಾಸ್ಟಲ್ ಕಡೆಗೆ ಹೋದಳು.

ಕೃಷ್ಣಸ್ವಾಮಿಯೊಡನೆ ಮನೆಗೆ ಬಂದು ಕದಡಿದ ಮನಸ್ಸಿನಿಂದ ಮಲಗುವ ಹೊತ್ತಿಗೆ ಹತ್ತುಗಂಟೆಯಾಗಿತ್ತು.

## ೧೬

ಕೊ....ಕ್ಕೋ....ಕ್ಕೋ....ಕೋ....ಕೋಳಿ ಕೂಗಿ ಬೆಳಗಾಗಿದೆ ಎಂದು ಸಾರಿತು. ಪುನಃ ಅದೇ ಕೂಗು. ಮನೆಯ ಜಗುಲಿಯ ಮೇಲೆ ಮಲಗಿದ್ದ ಕರಿಯ ತಲೆಯನ್ನೂ ಅರ್ಧ ಮೈಯನ್ನೂ ಮುಸುಕಿಹಾಕಿ ಕೊಂಡಿದ್ದ ಕೊಳಕು ದುಪುಟಿಯನ್ನು ಸರಿಸಿ ಬೀದಿಯ ಕಡೆ ನೋಡಿದ. ಎದುರಿಗೆ ಕೋಳಿ ನಿಂತು ಅವನನ್ನೇ ನೋಡುತ್ತಿತ್ತು. ಅದಕ್ಕೆಷ್ಟು ಧೈರ್ಯ ಹೀಗೆ ನಿಲ್ಲಲು! ಎಂದು ಅವನಿಗೆ ಅನ್ನಿಸಿದರೆ ಇನ್ನೆಷ್ಟು ಕಿರುಚಬೇಕು, ಈ ಸೋಮಾರಿಗೆ ಎಂದು ಕೋಳಿಗೆ ಅನ್ನಿಸಿತು. ಇನ್ನೊಂದು ಸಾರಿ "ಕೊ....ಕ್ಕೋ. ಕ್ಕೋ ಕೋ" ಎಂದು ಕೂಗಿತು. ಮಲಗಿದ್ದ ಕರಿಯನಿಗಿನ್ನು ತಡೆಯಲಾಗಲಿಲ್ಲ. 'ಬೆಳಗಾಗಾಕಿಲ್ಲ ಬಡ್ಕೊತದೆ....ಅಳಾದ್ದು' ಎಂದು ಹತ್ತಿರ ಇದ್ದ ಕೋಲನ್ನು ಬೀಸಿದ. ಕೋಲಿನ ತುದಿ ಕೋಳಿಗೆ ತಗುಲಿ "ಎಲ್ಲಾದರೂ ಹಾಳಾಗಿ ಹೋಗು" ಎಂದು ಕಿರುಚುತ್ತಾ ಓಡಿತು. ಗೊಣಗುಟ್ಟುತ್ತಾ ಕರಿಯ ಪುನಃ ದುಪುಟಿಯನ್ನು ಎಳೆದುಕೊಂಡು ಮಲಗಿದ. ಆಗಲೇ ಅಲ್ಲಲ್ಲಿ ಒಂದೊಂದು ಗಾಡಿಯ ಶಬ್ದ

ಕೇಳಿಸುತ್ತಿತ್ತು. ದನಗಳನ್ನಟ್ಟಿಕೊಂಡು ಆಗಲೇ ಕೆಲವರು ಹೊಲಗಳ ಕಡೆಗೆ ಹೊರಟಿದ್ದರು. ಸಂಪೂರ್ಣ ಬೆಳಗಾಗಿರದಿದ್ದರೂ ಆಗಲೇ ದಿನ ಪ್ರಾರಂಭ ವಾಗಿತ್ತು.

"ಲೋ ಕರಿಯಾ! ಏ ಕರಿಯಾ....ಏಳೋ. ಎತ್ತುಗಳನ್ನು ಬಿಚ್ಚಿ ಹೊಲದ ಕಡೆ ಅಟ್ಟಿ ಬಾದು ಕರು ಬಿಡೋ" ಎಂದು ಸುಬ್ಬಣ್ಣ ಕೂಗಿದರು. ಮೈ ಕೈ ಮುರಿಯುತ್ತಾ ಕರಿಯ ಎದ್ದು ನಿಂತ. ಮೊಣಕಾಲಿನ ವರೆಗೆ ಪಂಚೆ ಯನ್ನುಟ್ಟಿದ್ದ ಸುಬ್ಬಣ್ಣ ದನದ ಕೊಟ್ಟಿಗೆಗೆ ಬಂದು ಒಂದು ಸಾರಿ ಎತ್ತುಗಳ ನ್ನೆಲ್ಲಾ ನೋಡಿದ. ಒಡೆಯ ಬಂದುದು ಎಲ್ಲಿ ಎತ್ತುಗಳಿಗೂ ಸಂತೋಷವಾಗಿ ಹೆನ್ನೆಯಿಂದ ನಿಂತವು. ಎತ್ತುಗಳ ಮುಖವನ್ನು ಸವರುತ್ತಾ ಬಂದು ಹಸುವಿನ ಹತ್ತಿರ ಬರುವ ವೇಳೆಗೆ ಸುಬ್ಬಣ್ಣನ ಹೆಂಡತಿ ಎಳೆಯುತ್ತಿದ್ದ ಕರುವನ್ನು ಬಿಗಿ ಹಿಡಿದು ಬರುತ್ತಿದ್ದಳು. "ಹಾಳಾದೋನ್ನ ನಂಬಿದರೆ ಆಯ್ತು." ಎಂದು ಕರುವನ್ನು ಬಿಟ್ಟಳು. ಸುಬ್ಬಣ್ಣ ಹಾಲನ್ನು ಹಿಂಡಿ ಮುಗಿಸುವ ಹೊತ್ತಿಗೆ ಕರಿಯ ಎತ್ತುಗಳನ್ನು ಹೊಲಕ್ಕೆ ಅಟ್ಟಿ ಬಂದು ಕೊಟ್ಟಿಗೆಯ ಕಸವನ್ನು ಗುಡಿಸಲು ಪ್ರಾರಂಭಿಸಿದ. ಕರುವಿಗೆ ಕಟ್ಟಿದ್ದ ಹಗ್ಗ ಕಿತ್ತು ಹೋಗಿದ್ದರಿಂದ ಅದನ್ನು ಹೊಸೆಯುತ್ತಾ ಸುಬ್ಬಣ್ಣ ಹಜಾರದಲ್ಲಿ ಕುಳಿತ. ಶಾನುಭೋಗರ ಸವಾರಿ ಬಂತು.

"ಸುಬ್ಬಣ್ಣೋರೆ....ನಿಮ್ಮಿಂದ ಒಂದು ಉಪ್ಕಾರ ಆಗಬೇಕಲ್ಲ" ಎಂದು ಪ್ರಾರಂಭಿಸಿದರು. ಸುಬ್ಬಣ್ಣನವರಿಗೇನೂ ಇಂತಹ ಉಪಕಾರಗಳು ಹೊಸದಲ್ಲ. ಅದೂ ಶಾನಭೋಗರು ಬಂದರೆಂದರೆ ಗೊತ್ತಿತ್ತು.

"ಏನು ಶಾನುಭೋಗರೆ ವಿಷಯ.... ?"

"ಅಮಲ್ದಾರ್ರು ನಾಳೆ ಸೋಮವಾರ ಬರ್ತಾರೆ....ರವಷ್ಟು ಧಪ್ತರು ನೋಡಿ ಬಿಡಬೇಕು....ನಾನೂ ನೋಡಿನ್ನಿ...."

"ಅಷ್ಟೆ ಶಾನೆ....ಮಧ್ಯಾನ್ಹ ತಂದ್ಬಿಡು ರಂಗಪ್ಪ, ಒಂದೆರಡು ಗಂಟೆ ಕೂತುಕೊಂಡು ನೋಡೋಣ."

"ಮದ್ಯಾನಾನಾ....ಆದೆಂಗ್ಬುದ್ಧಿ....ಜಕ್ಕನ ಹಳ್ಳಿ ಪಂಚಾಯ್ತಿ ಆಯ್ತಿ ....ನಾಳೆ ಆಗ್ತದ್ರಾ...."

"ಬಾಪ್ಪ ಆಗಲಿ....ಅಂದ್ಹಾಗೆ ಮನೇಲಿ ಎಲೆ ಮಲಗಿತಾಬಂತು. ಒಂದೆರಡು ಪಿಂಡಿ ಮುತ್ತುಗದ ಎಲೆ ಬೇಕಾಗಿತ್ತು ರಂಗಪ್ಪ."

ಅದಕ್ಕೇನು ಬುಡಿ ಐನೋರೆ....ಪಿಳ್ಳಪ್ಪನಿಗೆ ಏಳಿ ಕಳಿಸ್ತೀನಿ...." ಎಂದ. ರಂಗಪ್ಪ ಹೋದನಂತರ ಜಗುಲಿಯ,ಹತ್ತಿರ ಸುಬಣ್ಣ ನಿಂತಿದ್ದ. ದೂರದಲ್ಲಿ ಸಾಲ ತೆಗೆದುಕೊಂಡಿದ್ದ ತಿಮ್ಮ ಬರುತ್ತಿರುವುದು ಕಾಣಿಸಿತು ಐನೋರು ಬಾಗಿಲಿನಲ್ಲಿ ನಿಂತಿರುವುದನ್ನು ನೋಡಿ ಹತ್ತಿರವಿದ್ದ ಸಂದಿಯಲ್ಲಿ ತಿರುಗುವ ಪ್ರಯತ್ನದಲ್ಲಿ ತಿಮ್ಮ ಸಿಕ್ಕಿಬಿದ್ದ. ಸುಬ್ಬಣ್ಣ ಚಪ್ಪಾಳೆ ತಟ್ಟಿ ಕೂಗುತ್ತಿರುವುದು ಕಾಣಿಸಿತು. ಇನ್ನು ಕಣ್ಣಿಗೆ ಬೀಳದಂತೆ ತಪ್ಪಿಸಿಕೊಂಡರೆ ನನ್ನ ಗತಿ ಮುಗಿಯಿತೆಂದು ತಿಳಿದು ತಿಮ್ಮ ಸುಬ್ಬಣ್ಣನ ಮನೆಯ ಹತ್ತಿರ ಬಂದು "ನೋಡಲಿಲ್ಲ ಬುದ್ಧಿ" ಎಂದು ನಮ್ರನಾಗಿ ನಿಂತ.

"ಲೋ ತಿಮ್ಮ....ನಿನ್ನ ಬುದ್ಧಿ ತೋರ್ಸಕ್ಕೆ ಬರ್ತಿಯಾ....ತೊಗೊಂಡ ಹಣ ವಾಪಸ್ಸು ಕೊಟ್ಟರೆ ನನಗೇನು ಉಳೀತು ಅನ್ನೋ ಭಂಡ ಆಗ್ಬಿಟ್ಯಾ...."

"ಇಲ್ಲಾ ಬುದ್ಧಿ....ಮುಂದಿನ ಬೆಳೆಗೆ ಬಡ್ಡಿ ಸಮೇತ ತಂದ್ಕೊಟ್ಟು ಬಿಡ್ತೀನಿ...."

"ಗೋಡೇ ಮೇಲೆ ಹಾಗಂತ ಬರೀಬೇಕು....ಲೋ ದುಡ್ಡು ತೊಗೊಂಡು ಎಷ್ಟು ವರ್ಷವಾಯ್ತೊ...."

"ನಾಲ್ಕು ವರ್ಷ, ಬುದ್ಧಿ...."

"ನಾಲ್ಕು ವರ್ಷದಲ್ಲಿ ನಾಲ್ಕು ಕಾಸ್ನೂಕೊಟ್ಟ್ಯೇನೋ...."

"ಇಲ್ಲ ಬುದ್ದಿ....ನಿಮ್ಮ ಹಣ ನಿಲ್ಸಾಕಿಲ್ಲ....ಈ ಸಾರಿ ತಂದೊಪ್ಪಿಸ್ತೀನಿ...."

"ಕೂಗಿದ್ರೂ ತಲೆ ಮರೆಸಿಕೊಂಡು ಒಡ್ಹೋಗ್ತೀರಿ....ನೀವು ಹ್ಯಾಗೋ ಅಭಿವೃದ್ಧಿಯಾಗೋದು...."

ತಲೆಕೆರಿಯುತ್ತಾ ತಿಮ್ಮ ನಿಂತ.

"ಏನೋ ಹಳ್ಳಿಗೆ ಬಂದಿದ್ದು...."

"ನನ್ನ ಎಂಡ್ರಿಗೆ ಜ್ವರ ಬುದ್ಧಿ....ಮದ್ದು ತರಾಕೆ ಬಂದೆ."

"ಏನಾಗಯ್ತೋ...."

"ಸಳಿ ಸಳಿ ಅಂತ ಮುದುರ್ಕೊಂಡು ಮಲ್ಗವಳೆ ಬುದ್ದಿ.... ಜಕ್ಕನಹಳ್ಳಿ ಲಗ್ನಕ್ಕೆ ಓಗಿದ್ಲು ಪಟ್ಟಾಗಿ ತಿಂದ್ಬಿಟ್ಟವಳೆ....ಅಂಗಾಗಯ್ತೆ...."

"ಜ್ವರ ಯಾವಾಗಲೂ ಬರ್ತೈಯ್ತೇನೋ...."

"ಇಲ್ಲ ಬುದ್ದಿ....ದಿನ ಬಿಟ್ಟು ಬರ್ತೈತೆ...."

"ತಡಿಯೋ....ಎಂದು ಮನೆಯ ಒಳಕ್ಕೆ ಹೋಗಿ ಹತ್ತು ಗುಳಿಗೆಗಳನ್ನು ತಂದು ತಿಮ್ಮನ ಕೈಲಿಕೊಟ್ಟು "ಹೊತ್ತಿಗೆರಡು ಗುಳಿಗೆಯಂತೆ ನುಂಗಿಸೋ...." ಎಂದರು

"ಪತ್ಯಾ ಏನು ಬುದ್ಧಿ...."

"ಎಣ್ಣೆ....ಮೆಣಸಿನಕಾಯಿ ತಿನ್ನಕೂಡ್ದು...."

"ಸರಿ ಬುದ್ದಿ....ಹೆಂಗಾರೇ ಜೊತೆಮಾಡಿ ಶ್ರಾವಣಕ್ಕೆ ಐವತ್ತು ರೂಪಾಯಿ ತಂದ್ಕೊಟ್ಟೇನಿ....ಬಾಕಿ ಅಸಲು ಬಡ್ಡಿ ಬೆಳೆಬಂದಮೇಲೆ ಬುದ್ದಿ...."

"ಹಾಗೆ ಮಾಡೋ....ಮಾತಿಗೆ ತಪ್ಪಬೇಡ...."

"ಅಂಗೆ ಉಂಟಾ ಬುದ್ಧಿ...." ಎಂದು ತಿಮ್ಮ ಬಂದ ದಾರಿ ಹಿಡಿದ. ಸುಬ್ಬಣ್ಣ ಸ್ನಾನ ಮುಗಿಸಿ ಸಂಧ್ಯಾವಂದನೆಗೆ ಕುಳಿತ ಸಾವಕಾಶವಾಗಿ ದೇವರ ಪೂಜೆಯನ್ನು ಮುಗಿಸಿ ಹೆಂಡತಿ ಕಲಸಿಕೊಟ್ಟ ಒಂದು ಮುದ್ದೆ ರಾಗಿ ಹುರಿಟ್ಟನ್ನು ತಿನ್ನುತ್ತಾ ಕುಳಿತ. ಮನೆಯ ಮುಂದೆ ಒಂದು ಗಾಡಿ ಬಂದು ನಿಂತುದನ್ನು ನೋಡಿ ಬೀದಿಯ ಬಾಗಿಲಿಗೆ ಬಂದ. ಪಟ್ಟಣದ ಈಶ್ವರೈಯ ನನ್ನು ನೋಡಿ "ಬರೋನು ಬಂದೆ. ಒಂದೆರಡು ದಿನ ಮುಂಚೆ ತಿಳಿಸ ಬಾರದಾಗಿತ್ತೆ" ಎಂದ.

"ಹಾಗೇ ಯಜಮಾನ್ರನ್ನು ನೋಡಿಕೊಂಡು ಹೋಗೋಣ ಎಂದು ಬಂದೆ."

"ಒಳಕ್ಕೆ ಬಾಪ್ಪ" ಎಂದು ಹಜಾರದಲ್ಲಿ ಹಾಸಿದ್ದ ಚಾಪೆಯ ಮೇಲೆ ಕರೆತಂದು ಕುಳ್ಳಿರಿಸಿ ಕಾಫಿ ತರ್ತೇನೆ, ಅವಳಿಗೆ ಮಾಡಕ್ಕೆ ಬರ್ದು" ಎಂದು ಒಳಕ್ಕೆ ಹೋದರು.

ಈಶ್ವರೈಯ ಶ್ರೀರಂಗಪಟ್ಟಣದಲ್ಲಿ ನೆಲಸಿ ೨೦ ವರ್ಷಗಳಾಗಿತ್ತು ಎರಡು ತಲೆಯಿಂದಲೂ ಬಂದಿದ್ದ ಆಸ್ತಿಯಲ್ಲಾ ಅದೇ ಊರಿನಲ್ಲಿತ್ತು. ದುಂಡು ಮುಖ, ಗುಂಡಾದ ಶರೀರ ಬಿಳಿಯ ಪೇಟ ಧರಿಸಿ ಕೆಂಪಗಿದ್ದ ಹಣೆಗೆ ವಿಭೂತಿ ಚೆನ್ನಾಗಿ ಒಪ್ಪುತ್ತಿತ್ತು. ಕಳೆದ ಹತ್ತು ವರ್ಷಗಳಿಂದಲೂ ಪಟ್ಟಣದ ಮಿಡಲ್ ಸ್ಕೂಲ ಹೆಡ್ಮಾಸ್ಟರ್. ಈಶ್ವರೈಯ್ಯನ ತಂದೆ ಮತ್ತು ಸುಬ್ಬಣ್ಣ ಬಾಲ್ಯ ಸ್ನೇಹಿತರು. ಅವರ ತಂದೆಯೂ ಸಂಪಿಗೆಹಳ್ಳಿಯಲ್ಲಿ ಬಹಳ ವರ್ಷ ಇದ್ದರು.

" ಕಾಫಿ ನೀರು ತುಗೋಪ್ಪ....ನನ್ನ ಕೈನ ಕಾಫಿ ಕುಡಿಯಲು ಪುಣ್ಯ ಮಾಡಿರಬೇಕು " ಎಂದು ಕಾಫಿಯ ಲೋಟವನ್ನು ಕೆಳಗಿಟ್ಟು ಕುಳಿತು ಕೊಂಡ.

" ಏಕೋ ನಿಮಗೆ ತೊಂದ್ರೆ....ಆಮೇಲೆ ಆಗ್ತಿತ್ತು...."

" ಹಾಗಲ್ಲ....ಇದೊಂದು ಪದ್ಧತಿಯಾಗಿ ಬಿಟ್ಟದೆ. ಯಾರಾದ್ರೂ ಬಂದ್ರೆ ಕಾಫಿ ನೀರಿಲ್ಲದೆ ಕಳುಹಿಸಿದರೆ ನರಕ ಪ್ರಾಪ್ತಿ ಖಂಡಿತ " ಎಂದು ಸುಬ್ಬಣ್ಣ ನಕ್ಕ.

" ಎಲ್ಲಾ ಆರೋಗ್ಯವೆ...."

" ನೋಡಪ್ಪ ಹೀಗಿದ್ದೇವೆ....ನಾಳೆ ಚೌತಿಗೆ ೭೯ ವರ್ಷ ಆಯ್ತು. ನಮ್ಮ ಕತೆ ಬಿಡು "

" ಹಾಗುಂಟೆ....ನಿಮ್ಮ ವಯಸ್ಸಿನ ಹೊತ್ತಿಗೆ ನಿಮ್ಮ ಹಾಗಿರುವುದಿರಲಿ ಅಷ್ಟು ವರ್ಷ ಬದುಕುತ್ತೇವೋ ಇಲ್ಲವೋ...."

ನೀನೇನೇ ಹೇಳಪ್ಪ....ನಮ್ಮ ಕಾಲ ಹಾಗಿತ್ತು....ಈಗ ಬಿಡು ೨೫ ವರ್ಷಕ್ಕೆಲ್ಲಾ ಬಗ್ಗಿ ನಡೆಯುತ್ತಾರೆ. "

" ಹೌದು...."

" ಬೆಳಗೆದ್ದರೆ ವೈಲಿಗಟ್ಟಲೆ ನಡೆದು ಆರಂಬ ಮಾಡಿದರೆ ರೋಗವೆಲ್ಲಿ ರುಜಿನವೆಲ್ಲಿ...."?

" ಅದು ನಿಜ ಅನ್ನಿ.... "

" ಸರಿ....ಏನು ಅಪರೂಪವಾಗಿ ಬಂದ್ಯೆಲ್ಲಾ...."

" ಅದೆ !....ಇನ್ನೊಂದು ಸಾರಿ ತಿಳಿಸೋಣ ಎಂದು ಬಂದೆ....ನೀವು ದೊಡ್ಡ ಮನಸು ಮಾಡಿ ರತ್ನಳಿಗೆ ಮದುವೆ ಮಾಡಿಬಿಡಬೇಕು. "

" ಓ ! ನಾಗರತ್ನಳ ವಿಷಯಾನೆ....ಚಿನ್ನದಂತಹ ಹುಡುಗಿ. ಯಾವನಾದರೂ ಕೈಮುಗಿದು ತಾಳಿ ಕಟ್ತಾನೆ....ನಿನಗೇಕೆ ಯೋಚನೆ...."

" ಹಾಗಲ್ಲ, ವಯಸ್ಸಿಗೆ ಬಂದ ಹುಡುಗಿ....ನಿಮ್ಮ ರಾಜನಿಗೆ ತಂದು ಕೊಳ್ಳಬೇಕು. "

ಸುಬ್ಬಣ್ಣ ಯೋಚಿಸುತ್ತಾ ಕುಳಿತ.

" ಅಷ್ಟು ಅನುಕೂಲಸ್ಥರಲ್ಲದಿದ್ದರೂ ಏನೋ ನಿಮ್ಮಂತಹ ಹಿರಿಯರ

ಆಶೀರ್ವಾದದಿಂದ ಮಾನವಾಗಿ ಮದುವೆಮಾಡಿ ಕೊಡುತ್ತೀವೆ. ಬೇಕಾದ್ರೆ ಹುಡುಗ ಓದಲು ಸಹಾಯ ಮಾಡೋಣ, ನಾಲ್ಕು ಜನ ಕೊಟ್ಟಂತೆ ಕೊಡೋಣ. ಮುಖ್ಯ ನೀವು ದೊಡ್ಡ ಮನಸ್ಸು ಮಾಡಬೇಕು ನೋಡಿ.... "

" ನಂದೇನಿದೆ ಬಿಡಪ್ಪ....ನಾನೂ ಹೋದಸಾರಿ ಮೈಸೂರಿಗೆ ಹೋಗಿ ದ್ದಾಗ ಹೇಳ್ದೆ ಈ ವಿಷಯ.... "

" ನಿಮ್ಮ ತಂಗಿ ಒಪ್ಪಿರಬೇಕು.... "

" ಹೂಂ! ....ಅವನು ಮಾತ್ರ ಕಿವಿಮೇಲೆ ಹಾಕಿ ಕೊಳ್ಳಲಿಲ್ಲ. "

" ನಾನೂ ಬಂದಿದ್ರೆ ಚೆನ್ನಾಗಿತ್ತೇನೋ....ಬೇಡ ಅಂದನೇನು ?"

" ಹಾಗಲ್ಲ. ಈಗಿನ ಕಾಲದ ಹುಡುಗರನ್ನು ಬಿಡಿ, ಮದುವೆ ಎಂದರೆ ಹೆಣ್ಣುಮಕ್ಕಳಿಗಿಂತ ನಾಚಿಕೊಳ್ಳುತ್ತಾರೆ. ಮದುವೆಗೆ ಮೊದಲು ಬೇಡ ಎಂದ ವನ ಮನಸ್ಸಿನಲ್ಲಿ ಆಗಲಿ ಎಂದಿರುತ್ತೆ. "

ಸುಬ್ಬಣ್ಣನ ಜೊತೆಗೆ ಈಶ್ವರಯ್ಯನೂ ನಕ್ಕ.

" ಬಹುಶಃ ಆನಂದರಾಯರ ಸಂಬಂಧಕ್ಕೆ ಒಪ್ತಿದ್ದಾನೇನು ?"

" ಇಲ್ಲ, ಅದೊಂದು ವಿಚಿತ್ರ ಕೇಳಪ್ಪ. ನಾವೆಲ್ಲರೂ–ಆನಂದರಾಯರ ಮಗಳನ್ನು ಮದ್ವೆ ಆಗ್ತಾನೆ ಅಂತಿದ್ವಿ. "

" ಹೂಂ ! "

" ದೊಡ್ಡಮನುಷ್ಯರ ಮನೇ ಹುಡ್ಗಿ ಬಡವರ ಮನೇಲಿ ಸರಿಯಾಗಿ ರೋಲ್ಲ ಎಂದು ಬೇಡ ಅಂದ್ಬಿಟ್ಟ. "

" ಏನು ಹಾಂಗಂದು ಬಿಟ್ಟನೇ ? "

" ಆನರ್ಸ್ ಪರೀಕ್ಷೇಲಿ ರ್‍ಯಾಂಕು ಬಂದಿದೆ....ಈಗ ತಾತಾಸ್ಕೂಲಲ್ಲಿ ಓದ್ತಿದ್ದಾನೆ.... "

" ಬಹಳ ಸಂತೋಷ....ಕಷ್ಟಪಟ್ಟು ಓದಿದ ಹುಡುಗ. "

" ಇನ್ನೂ ನನ್ನವರು ತಮ್ಮವರು ಎನ್ನುವ ಅಭಿಮಾನ ಇಟ್ಟು ಕೊಂಡಿದ್ದಾನೆ. "

" ಅಲ್ಲವೆ....ಈಗ ನನಗೊಂದು ಮನಸ್ಸಿಗೆ ಹೊಳೆಯುತ್ತೆ.... "

" ಏನು.... "

" ನೀವು ಬೆಂಗಳೂರಿಗೆ ದಯಮಾಡಿಸಿ ಒಂದು ಮಾತು ಹೇಳಿದ್ರೆ "

" ಯಾಕೇಂದ್ರೇ.... ದುಡ್ಡಂಡ .... ರಜಕ್ಕೆ ಬರ್ತ್ತಾನಲ್ಲ ಆಗ ಮಾತ ನಾಡೋಣ. "

" ದಂಡ ಎಂತಹದು.... ನಿಮಗೇನೂ ತೊಂದರೆಯಿಲ್ಲ ಅಂದ್ರೆ ನಾಳೆ ಬೆಳಿಗ್ಗೆ ರೈಲಿಗೆ ಹೊರಟುಬಿಡಬಹುದು. "

" ನನಗೇನು ಕೋರ್ಟ್ಕು ಕಛೇರಿನೆ....ಆಗಬಹುದು. ಆದ್ರೆ.... "

" ನಿಮ್ಮ ತಂಗಿಗೆ ಒಂದು ಮಾತು ಹೇಳಿದ ಮೇಲೆ ಅಂತಲೇನು?"

" ಪಾಪ ! ನಾನೇನು ಹೇಳಲಿ, ಎಲ್ಲಕ್ಕೂ ಒಪ್ಪುತ್ತಾಳೆ....ಆದ್ರೂ ಆಳಿನ ಕೈಲಿ ಹೇಳಿ ಕಳುಹಿಸುತ್ತೇನೆ.... "

"ಸರಿ! ನೀವು ದೊಡ್ಡಮನಸ್ಸು ಮಾಡಿದ್ರಿ....ಪುನಃ ಬಂದು ಕಾಣ್ತೇನೆ."

" ಇಲ್ಲೇ ಊಟಕ್ಕೆ ಏರ್ಪಾಡಾಗಿದೆ....ನೀನೆಲ್ಲೂ ಹೋಗಬೇಕಾಗಿಲ್ಲ."

"ಉಂಟೆ ! ಗಂಗಾಧರನನ್ನು ನೋಡಿಕೊಂಡೇ ಬಂದಿಲ್ಲ....ಅಲ್ಲಿ ಎಲ್ಲಾ ಆಗುತ್ತೆ....ಎಂದು ಈಶ್ವರೈಯ ಗಾಡಿಯನ್ನು ಹತ್ತಿದ. ಅವರ ತಮ್ಮ ಗಂಗಾ ಧರನ ಮನೆ, ಮುಂದಿನ ಬೀದಿಯಲ್ಲೇ. ಮನೆಗೆ ಬಂದು ವಿಶ್ರಮಿಸಿಕೊಂಡು ಮುಂದಿನ ಆಲೋಚನೆಗೆ ಪ್ರಾರಂಭಿಸಿದ. ಹಾಗೂ ಹೀಗೂ ರಾಜ ಮದುವೆಗೆ ಒಪ್ಪಿದರೆ ಒಬ್ಬಳ ಮದುವೆ ಆದಂತೆಯೆ. ಗಂಗಾಧರ ತೋಟದಿಂದ ಬಂದ ನಂತರ ಇಬ್ಬರೂ ಮದುವೆಯ ವಿಷಯ ಮಾತನಾಡಿದರು.

\+ \+ \+

ಎಂಟು ಗಂಟೆಗೆ ರೈಲು ಪಶ್ಚಿಮವಾಹಿನಿಗೆ ಬರುವುದು. ಆರು ಗಂಟೆ ಗೆಲ್ಲಾ ಕೈಚೀಲದೊಡನೆ ಸುಬ್ಬಣ್ಣ ಮನೆಯ ಹತ್ತಿರ ಬಂದು ಕೂಗುವಾಗ್ಗೆ ಈಶ್ವರೈಯ ಇನ್ನೂ ಸ್ನಾನ ಮಾಡುತ್ತಿದ್ದ. " ಸ್ನಾನ ತಿಂಡಿ ತೀರ್ಥ ಎಂದು ಇಷ್ಟು ಹೊತ್ತು ಮಾಡಿದ್ರೆ ಮಧ್ಯಾಹ್ನದ ರೈಲೇ ಖಾಯಂ " ಎಂದ.

"ಮುಗಿಸಿಬಿಟ್ಟೆ....ಎಂದು ನಾಲ್ಕೈದು ಚೆಂಬು ನೀರನ್ನು ಬುಡುಬುಡು ಎಂದು ತುಂಬಿ ಸುರಿದುಕೊಂಡು, ಸ್ನಾನಮುಗಿಸಿ ವಿಭೂತಿ ಧರಿಸಿ ಈಶ್ವರೈಯ ಬಂದು ಸುಬ್ಬಣ್ಣನನ್ನು ನೋಡಿದ. ಬೇಗ ಬೇಗ ತಿಂಡಿ ತಿಂದು ಮುಗಿಸಿ ಗಾಡಿ ಯಲ್ಲಿ ಹೊರಟರು. ಎರಡು ಮೈಲಿ ಬಂದರೆ ಪಶ್ಚಿಮವಾಹಿನಿ. ಗಾಡಿಯಲ್ಲಿ ಆ ಮಾತು ಈ ಮಾತು ಆಡಿ ರೈಲ್ವೆನಿಲ್ದಾಣಕ್ಕೆ ಬಂದಾಗ ಏಳೂಕಾಲಾಗಿತ್ತು. ಟಿಕೆಟ್ಟು ತೆಗೆದುಕೊಂಡು ಕಾಲುಗಂಟೆ ಕಾದ ಮೇರೆ ರೈಲು ಬಂತು. ಅವತ್ತು

ಬಹಳ ಗಲಾಟೆ ಇದ್ದುದರಿಂದ. ನುಗ್ಗಿ ಇಬ್ಬರೂ ಗಾಡಿ ಹತ್ತಿದರು. ಸುಬ್ಬಣ್ಣ ನಿಗೆ ಮಾತ್ರ ಕುಳಿತುಕೊಳ್ಳಲು ಜಾಗ ಸಿಕ್ಕಿತು. ಈಶ್ವರೈಯ ಚೆನ್ನಪಟ್ಟಣದ ವರೆಗೂ ನಿಂತೇ ಬಂದ. ಚೆನ್ನಪಟ್ಟಣದಲ್ಲಿ ಕೆಲವು ಆಟದ ಸಾಮಾನುಗಳನ್ನೂ ಹೂವನ್ನೂ ಕೊಂಡುಕೊಂಡ. ಮಲ್ಲೇಶ್ವರದಲ್ಲಿದ್ದ ತನ್ನ ಭಾವಮೈದನ ಮನೆಗೆ ಹೋಗುವುದೆಂದು ಈಶ್ವರೈಯ ತೀರ್ಮಾನ ಮಾಡಿದ್ದ.

ರೈಲು ಬೆಂಗಳೂರು ಸೇರಿದಾಗ ಒಂದು ಗಂಟೆಯಾಗಿತ್ತು. ಜಟಕಾ ಗಾಡಿ ಮಾಡಿಕೊಂಡು ಅವರ ಮನೆಗೆ ಬಂದರು.

"ಇವರೂ ನಮ್ಮ ಜನವೇ.... ಸಂಪಿಗೆಹಳ್ಳೀಲಿ ಕಪನೀಪತಯ್ಯ ನೋರೂಂತ ಇರಲಿಲ್ಲವೆ? ಅವರಿಗೆ ಇವರ ತಂಗೀನೆ ಕೊಟ್ಟದ್ದು...." ಎಂದು ತನ್ನ ತಂಗೀಗೆ ಈಶ್ವರೈಯ ಸುಬ್ಬಣ್ಣನನ್ನು ಪರಿಚಯ ಮಾಡಿಕೊಟ್ಟ.

"ಕಾಗ್ದಾ ಬರೀದಲೇ ಬಂದ್ಬಿಟ್ಯಲ್ಲ, ಈಶ"?

"ಹೌದು....ರತ್ನಳಿಗೆ ವರ ಹುಡುಕಲು ಬಂದೆ. ಅದೇ ಕಪನೀಪತೈ ನೋರ ಮಗ, ತಾತಾಸ್ಕೂಲಿನಲ್ಲಿ ಓದುತ್ತಿದ್ದಾನೆ...."

"ಸಂತೋಷ....ಸದ್ಯ ಬೇಗ ಗೊತ್ತಾಗ್ಲಿ ಬಿಡು....ಅಡ್ಗೆ ಎಲ್ಲಾ ಇದೆ. ಕೈಕಾಲು ತೊಳೆದುಕೊಳ್ಳಿ" ಎಂದು ಅಡಿಗೆ ಮನೆಗೆ ಹೋದಳು. ಇಬ್ಬರೂ ಕೈಕಾಲು ತೊಳೆದು ಊಟ ಮಾಡಿದರು. ಈಶ್ವರೈಯನ ಭಾವಮೈದನ ತಮ್ಮ ಹೈಸ್ಕೂಲಿನಲ್ಲಿ ಓದುತ್ತಿದ್ದ. ಮಧ್ಯಾಹ್ನ ಬಂದಾಗ ರಾಜನ ವಿಳಾಸ ಕೊಟ್ಟು ಕರೆತರುವಂತೆ ಹೇಳಿ ಇಬ್ಬರೂ ಮಲಗಿದರು.

ಸುಬ್ಬಣ್ಣ ಬೆಂಗಳೂರಿಗೆ ಬಂದುದರ ಅರ್ಥ ರಾಜನಿಗೆ ಗೊತ್ತಾಗಲಿಲ್ಲ. ಅಮ್ಮನಿಗೇನಾದರೂ ಖಾಯಿಲೆಯೆ? ಎಂದುಕೊಂಡು ಆ ಹುಡುಗನ ಜೊತೆ ಯಲ್ಲಿ ಅವರ ಮನೆಗೆ ಬಂದ. ಸುಬ್ಬಣ್ಣ ಈಶ್ವರೈಯನ ಜೊತೆಯಲ್ಲಿ ಮಾತ ನಾಡುತ್ತಾ ಕುಳಿತಿದ್ದ. ರಾಜ ಬಂದುದನ್ನು ನೋಡಿ

"ಬಾ ರಾಜಣ್ಣ" ಎಂದ.

"ಊರಲ್ಲಿ ಎಲ್ಲಾ ಚೆನ್ನಾಗಿದ್ದಾರೆಯೆ ಮಾವ ?"

"ಎಲ್ಲ ಕ್ಷೇಮ. ಇವರೇ ಈಶ್ವರೈಯನವರು, ಹಿಂದೆ ಹೇಳಿದ್ದೆ." ರಾಜ ಅವರಿಗೆ ಕೈಮುಗಿದು ಕುಳಿತುಕೊಂಡ. ಈಶ್ವರೈಯನಾಗಲೆ ರಾಜನ ರೂಪನ್ನು ಒಪ್ಪಿ ಮನಸ್ಸಿನಲ್ಲೇ ರತ್ನಳ ಜೊತೆಗೆ ನಿಲ್ಲಿಸಿ ವಾರಗೆ ಮತ್ತು ಹೊಂದಾಣಿಕೆಯನ್ನು ನೋಡುತ್ತಿದ್ದ.

"ಇವರಿಗೆ ಒಬ್ಬಳು ಮಗಳಿದ್ದಾಳೆ" ಎಂದು ಸುಬ್ಬಣ್ಣ ಪ್ರಾರಂಭಿಸಿದ.

"ಹೂಂ" ಎಂದು ರಾಜ ನಕ್ಕ....

ಮೊದಲು ಕಾಫಿಯಾಗಲಿ ಎಂದು ಬೆಳ್ಳಿಯ ತಟ್ಟೆಯಲ್ಲಿ ಮೂರು ಲೋಟದಲ್ಲಿ ಕಾಫಿ ತಂದರು. ಸುಬ್ಬಣ್ಣ ಕುಡಿಯಲಿಲ್ಲ. ಇಬ್ಬರೂ ಕುಡಿದ ಮೇಲೆ ಲೋಕಾಭಿರಾಮವಾಗಿ ಮಾತನಾಡಿ ಮದುವೆಯ ಮಾತಿಗೆ ಬಂದರು. ಎಲ್ಲ ವಿಷಯವನ್ನು ಈಶ್ವರೈಯ ಮುಚ್ಚುಮರೆಯಿಲ್ಲದೆ ಹೇಳಿದರು. ಸುಬ್ಬಣ್ಣ ತನಗೆ ಖಂಡಿತ ಒಪ್ಪಿಗೆ ಎಂದು ಬೇರೆ ಹೇಳಿದ. ಇಷ್ಟುಹೊತ್ತು ಅವರಿಬ್ಬರು ಆಡಿದ ಮಾತನ್ನು ಕೇಳುತ್ತಿದ್ದ ರಾಜ ಮೌನವನ್ನೊಡೆದು "ಎಲ್ಲ ಸರಿಯೆ....ಈಗ್ಲೇ ಏಕೆ ಎಂದು. ಓದು ಬೇರೆ ನಿಂತಿದೆ...." ಎಂದ.

"ನಿಮ್ಮ ಪಾಡಿಗೆ ನೀವು ಓದಿಕೊಳ್ಳಿ....ಎಲ್ಲಾ ಎರಡು ವರ್ಷ ಅಲ್ಲವೆ?"

"ಹೌದು...." ಎಂದು ಸುಬ್ಬಣ್ಣ ನುಡಿದ.

"ನಮ್ಮ ತಾಯಿಯ ಹತ್ತಿರ ಮಾತನಾಡಿ ಹುಡಿಗೆಯನ್ನು ನೋಡಿ ಮುಂದಿನ ಮಾತು ಮಾವನಾಗಲೇ ಒಪ್ಪಿದ್ದಾರಲ್ಲ...."

"ಸಂತೋಷ...." ಎಂದು ಈಶ್ವರೈಯ ಹರ್ಷಗೊಂಡ. ರಾಜ ಕ್ರಿಸ್ ಮಸ್ ರಜಕ್ಕೆ ಬಂದಾಗ ರತ್ನಳನ್ನು ನೋಡಿ ಮದುವೆ ನಿಶ್ಚಯಮಾಡೋದು ಎಂದು ಏರ್ಪಾಡಾಯ್ತು. ಸುಬ್ಬಣ್ಣನನ್ನು ಕೃಷ್ಣಸ್ವಾಮಿ ಅವರ ಮನೆಗೆ ರಾಜ ಕರೆದುಕೊಂಡು ಹೋದ. ಅಲ್ಲಿ ಸಾಯಂಕಾಲದವರೆಗೂ ಇದ್ದು, ರಾತ್ರಿ ರೈಲಿಗೆ ಈಶ್ವರೈಯನ ಜೊತೆಯಲ್ಲಿ ಮೈಸೂರಿಗೆ ಹೊರಟ. ಅವರೇನೋ ತಮ್ಮ ಕೆಲಸವಾಯ್ತೆಂದು ಹೊರಟರು. ರಾಜ ಮಾತ್ರ ಇನ್ನೊಂದು ಸಮಸ್ಯೆಯಲ್ಲಿ ಸಿಕ್ಕಿಬಿದ್ದಿದ್ದ.

## ೧೭

ಕ್ರಿಸ್ ಮಸ್ ರಜ ಬಂದೇಬಿಟ್ಟಿತು. ವಿಜ್ಞಾನಶಾಲೆಯ ಹುಡುಗರೆಲ್ಲಾ ತಮ್ಮ ತಮ್ಮ ಊರಿಗೆ ಹೊರಡಲು ಸಿದ್ಧವಾದರು. ದಸರ ರಜಕ್ಕೆ ಹೋಗದಿದ್ದವರು ಈಸಾರಿ ಖಂಡಿತ ಹೋಗುವರು. ರಜ ಬಂದುದು ರಾಜನಿಗೆ ಇಷ್ಟವೇಇಲ್ಲ. ರಜಕ್ಕೆ ಊರಿಗೆ ಹೋಗಲೇಬೇಕು. ಹೋದರೆ ಪುನಃ ಪ್ರಾರಂಭ. ಒಂದು ಕಡೆ ರೋಹಿಣಿಯ ವಿಷಯ. ಮತ್ತೊಂದು ಕಡೆ ತನ್ನನ್ನು ಗೃಹಸ್ಥನನ್ನಾಗಿ ಮಾಡಬೇಕೆಂದಿದ್ದ ಸುಬ್ಬಣ್ಣನ ಪ್ರಯತ್ನ. ಮದುವೆಯ ಹೊಸ ಏರ್ಪಾಡಿಗೆ ತಾಯಿ

ಒಪ್ಪಿದರೆ ಏನು ಮಾಡುವುದು ಎಂದು ಯೋಚಿಸಿದ. ತಾನಿನ್ನೂ ಊರಿಗೆ ಹೋಗಲು ಎರಡು ದಿನವಿತ್ತು. ತನ್ನ ಹತ್ತಿರ ಉಳಿದಿದ್ದ ದುಡ್ಡಿನಲ್ಲಿ ಅಮ್ಮನಿಗೊಂದು ಸೀರೆ, ಗೌರಿಗೆ ಒಂದು ಬಿಳೀ ಖದ್ದರ್ ಸೀರೆ, ಅಲ್ಲದೆ ಸರಸುವಿಗೆ ಕೆಲವು ಆಟದ ಸಾಮಾನನ್ನು ತರಲು ಮರೆಯಲಿಲ್ಲ. ಎಲ್ಲವನ್ನೂ ಟ್ರಂಕಿನಲ್ಲಿಡುತ್ತಿದ್ದಾಗ ರೇಣುಕಾದೇವಿ ಬಂದಳು. ಅವಳು ಮಾರನೆಯದಿನ ಬೊಂಬಾಯಿಗೆ ಹೋಗುತ್ತೇನೆಂದು ಹೇಳಿದ್ದಳು. ರಾಜ ಸಾಮಾನು ಕಟ್ಟುವುದನ್ನು ನೋಡಿ

"ಒಂದು ಸಾರಿ ಬೊಂಬಾಯಿಗೆ ಬರ್ತೀನೆ ಅಂದ್ರಲ್ಲ ....ಅಲ್ಲಿಗೇ ಹೊರಟಿದ್ದೀರೇನು ?" ಎಂದಳು.

"ಬೊಂಬಾಯಲ್ಲ.... ಮೈಸೂರಿಗೆ"

"ರಜವೇತಕ್ಕೆ ಬರುತ್ತದೆಯೊ ಅನ್ನಿಸುತ್ತೆ ನನಗೆ, ಬೇಜಾರು."

"ಚೆನ್ನಾಯ್ತು.... ರಜ ಬಂದರೆ ಸಾಕು ಎಂದು ಕಾದು ಕೆಲವರು ಇರ್ತಾರೆ."

"ಕೆಲಸ ಮಾಡುವ ಕಾಲ ಬಿಟ್ಟರೆ ಎಲ್ಲ ರಜವೇ ನನಗೆ.... ಕ್ರಿಸ್‌ಮಸ್ ರಜವೇನೋ ಬಂತು...."

"ಅದಕ್ಕೆ...."

"ಮಿಸಸ್. ರಾಜಣ್ಣನನ್ನು ನೋಡುವ ಏರ್ಪಾಡೋ ?"

"ಓ ! ಚೆನ್ನಾಗಿದೆ....ನೀವು ವಿವಾಹದ ವಿಷಯ ಚೆನ್ನಾಗಿ ಮಾತನಾಡ್ತೀರಿ."

"ಹೌದು ನನಗೆ ತಿಳಿದಿರುವ ಹಾಗೆ ಹೇಳ್ದೆ."

"ನೀವು ಮಾತ್ರ ಮದುವೆ ಬೇಡ ಅನ್ನಿ....ಇತರರಿಗೆ ಪ್ರಚಾರಮಾಡಿ."

"ಹಾಗಲ್ಲ ರಾಜಣ್ಣ. ನಾನು ಮದುವೆ ಆಗಲ್ಲ ಅಂದ್ನೇನು?....ಸರಿಯಾದ ಸಂಗಾತಿ ಸಿಕ್ಕಾಗ...."

"ಹಾಗಂದರೆ....ಸಂಗಾತಿ ಹೇಗಿರಬೇಕೆಂದು ನಿಮ್ಮ ಅಭಿಪ್ರಾಯ ?"

"ನನ್ನ ವಿಷಯದಲ್ಲಿ ಆಸಕ್ತಿ ತೋರಿಸುವ ನಿಮ್ಮ ಹಾಗೆ ಎಂದಿಟ್ಟುಕೊಂಡರೆ" ಎಂದು ನಕ್ಕುಬಿಟ್ಟಳು.

ರಾಜನಿಗೆ ತುಂಬಾ ನಗು ಬಂದುಬಿಡ್ತು. ನಗುತ್ತಾ....

"ನಿಮ್ಮ ಮದುವೆ ಯಾವಾಗ ರೇಣುಕಾ...." ಎಂದ.

"ನನ್ನ ಮದುವೇನೆ ? ಆಂಜನೇಯನ ಮದುವೆಯ ದಿನವೆ" ಎಂದಳು. ಸ್ವಲ್ಪ ಹೊತ್ತು ಇಬ್ಬರೂ ಮೌನವಾಗಿದ್ದರು. ರೇಣುಕಾದೇವಿಯೇ ಮಾತ ನಾಡಿಸಿದಳು.

"ಮೈಸೂರಿನ ವಿಷಯ ಹೇಳಬಾರದೇನು...."

"ಮೈಸೂರೆ....ಸೊಗಸಾದ ಊರು...."

"ಅದನ್ನು ಅಂದೇ ಹೇಳಿದ್ದೀರಲ್ಲ.... "

"ಹಾಗಾದ್ರೆ ಇನ್ನೇನು ಕೇಳಿದ್ದು.... "

"ನಿಮ್ಮ ಮದುವೆಯ ವಿಷಯ.... "

"ಓ ! ನಾಳೆ ಊರಿಗೆ ಹೋದ್ರೆ ಅಲ್ಲಿ ಗೊತ್ತಾಗಬೇಕು....'

"ಪುನಃ ಬರುವ ಹೊತ್ತಿಗೆ.... "

"ನಿಮ್ಮ ಸಂತೋಷ" ಎಂದು ರಾಜ ನುಡಿದ.

"ನಾನು ಬರ್‍ತೀನೆ. ಸಾಯಂಕಾಲದ ರೈಲಿಗೆ ಹೋಗುವವಳು. ಬಟ್ಟೆ ಗಳನ್ನು ಕಟ್ಟಬೇಕು." ಎಂದು ಹೊರಟಳು. ರೇಣುಕಾ ನುಡಿದ ಮಾತು ಗಳನ್ನು ರಾಜ ಜ್ಞಾಪಿಸಿಕೊಂಡ. ನಿಷ್ಕಲ್ಮಷ ಮನಸ್ಸಿನವಳು. ಆಡಬೇಕು ಅನ್ನುವ ಮಾತನ್ನು ಆಡಿಬಿಡುವಳು. ಎಲ್ಲವೂ ತನ್ನ ಮನಸ್ಸಿನಂತೆ ನಡೆ ಯುತ್ತೆ ಎಂದು ತಿಳಿದಿರುವ ಅವಳ ಧೈರ್ಯವೇ ಧೈರ್ಯ. ಅಥವ ಹೇಗೆ ನಡೆಯಬೇಕೋ ಹಾಗೆ ನಡೆಯುತ್ತೆ ಎನ್ನುವ ಧೈರ್ಯವೋ! ಆ ಧೈರ್ಯ ನನಗೆ ಬಂದುಬಿಟ್ಟರೆ ಬೇಕಾದ್ದು ಮಾಡಬಲ್ಲೆ, ಎಂದುಕೊಂಡ.

ರಾಜ ಮಾರನೆಯ ದಿನ ಮೈಸೂರಿಗೆ ಹೊರಟ. ಊರು ಸಮೀಪ ವಾದಂತೆಲ್ಲ ಒಂದು ತರಹದ ಅನುಭವವಾಯಿತು. ವೆಂಕಟೇಶನಿಗೆ ಕಾಗದ ಬರೆದಿದ್ದ. ಅವನೂ ಬೊಂಬಾಯಿಯಿಂದ ಬಂದು ಒಂದೆರಡು ದಿನಗಳಾಗಿತ್ತು. ರೈಲು ಮೈಸೂರು ನಿಲ್ದಾಣಕ್ಕೆ ಬಂದಾಗ ರಾಜ ಕಿಟಕಿಯಿಂದ ನೋಡಿದ. ವೆಂಕಟೇಶ ಕಾಣಲಿಲ್ಲ. ಸಾಮಾನುಗಳನ್ನು ತೆಗೆಸಿಕೊಂಡು ಹೊರಡುವ ಹೊತ್ತಿಗೆ ವೆಂಕಟೇಶ ಬರುತ್ತಿದ್ದ.

"ರೈಲು ಕಾಲುಗಂಟೆ ಮುಂಚೆನೇ ಬಂದಿದೆ ಅಲ್ಲವೆ ರಾಜ ?"

"ಹೌದು. ಕಾಗ್ದ ಬಂತೇನಯ್ಯಾ, ಬರೆದಿದ್ದೆ...."

" ನೋಡ್ದೆ....ಮುಂಚೆಯೇ ಗೊತ್ತಿತ್ತು.... "

" ಅದು ಹೇಗೊ ...."

" ನನ್ನ ತಂಗಿ ತಿಳಿಸಿದಳು....ನಿಮ್ಮ ಮನೆಗೆ ಬರೆದಿದ್ದೆಯಂತೆ. "

ವೆಂಕಟೇಶ ಸಾಮಾನುಗಳನ್ನು ಜಟಕಾದಲ್ಲಿಡುತ್ತಾ " ನಮ್ಮ ಕಾರು ರಿಪೇರಿಗೆ ಕೊಟ್ಟಿದ್ದೇನೆ. " ಎಂದ. ಇಬ್ಬರೂ ಗಾಡಿಯಲ್ಲಿ ಕುಳಿತು ಎಲ್ಲಾ ವಿಷಯಗಳನ್ನು ಮಾತನಾಡಿದರು. ದಾರಿಯಲ್ಲಿ ವೆಂಕಟೇಶನ ಸ್ನೇಹಿತ ಸಿಕ್ಕಿದ. ಅಲ್ಲಿ ಒಂದು ನಿಮಿಷ ಗಾಡಿ ನಿಂತು ಸ್ವಲ್ಪ ಹೊತ್ತಿನ ನಂತರ ಗಾಡಿ ಹೊರಟಿತು. ದಾರಿಯಲ್ಲಿ ರೋಹಿಣಿಯ ಮನೆ ದಾಟಿದಾಗ ರಾಜ ಗೇಟಿನಿಂದ ಮಹಡಿಯ ತುದಿಯವರೆಗೂ ನೋಡಿ ದೃಷ್ಟಿಯನ್ನು ಬದಲಾಯಿಸಿದ. ಸಾಯಂಕಾಲ ಇಬ್ಬರೂ ಸಿನಿಮಕ್ಕೆ ಹೋಗುವುದೆಂದು ಮಾತನಾಡಿ ವೆಂಕಟೇಶ ತನ್ನ ಮನೆಗೆ ಹೋದ. ರಾಜ ಮನೆಗೆ ಬಂದು ಊಟ ಮಾಡಿ ಮಾತನಾಡುತ್ತಾ ಕುಳಿತ. ಕಮಲಮ್ಮನಿಗೆ ಅವನ ವಿಷಯ ಎಷ್ಟು ಕೇಳಿದರೂ ತೃಪ್ತಿಯಿಲ್ಲ. ಗೌರಿಗೆ ತುಂಬಾ ಸಂತೋಷ. ಸರುಸುವಿಗಂತೂ ಆಟದ ಬೊಂಬೆಗಳನ್ನು ನೋಡಿ ತುಂಬಾ ಸಂತೋಷ. ರಾಜನಿಗೆ ಸುಬ್ಬಣ್ಣ ಬಂದಿರುವುದು ತಿಳಿಯಿತು. ನಾನು ಬರುವುದನ್ನೇ ಕಾದಿದ್ದಾರೆ ಅನ್ನಿಸಿತು. ರೈಲು ಪ್ರಯಾಣದ ಆಯಾಸದಿಂದ ರಾಜ ಮಲಗಿದ. ಎಷ್ಟೋ ಮಾತನಾಡಬೇಕೆಂದಿದ್ದ ಕಮಲಮ್ಮ ಆ ಮೇಲೆ ಆಗಲಿ ಎಂದು ಅಡಿಗೆ ಮನೆಗೆ ಹೊರಟುಹೋದಳು.

ಗೌರಿ ರಾಜನ ಬಟ್ಟೆಗಳನ್ನು ಒಗೆದು ಒಣಗಲು ಹಾಕುತ್ತಿದ್ದಾಗ ರಾಜನಿಗೆ ಎಚ್ಚರವಾಯ್ತು.

" ಗಂಟೆಯೆಷ್ಟು....ಗೌರಿ ?"

" ನಾಲ್ಕಾಯ್ತು ರಾಜ.... "

" ಅಬ್ಬ ! ಎರಡು ಗಂಟೆ ಹೊತ್ತು ಮಲಗಿಬಿಟ್ಟೆ " ಎಂದು ಎದ್ದು ಮುಖ ತೊಳೆದುಕೊಂಡು ಬಂದು ಹಜಾರದಲ್ಲಿ ಕುಳಿತ. ಹಜಾರದಲ್ಲೇ ತಿಂಡಿಯನ್ನು ತಿನ್ನುತ್ತಿದ್ದ ಸುಬ್ಬಣ್ಣ " ಬೆಳಿಗ್ಗೆ ರೈಲಿಗೆ ಬಂದ್ಯಾ ರಾಜ " ಎಂದ.

" ಹೌದು.... "

ರಾಜನಿಗೂ ಒಂದು ತಟ್ಟೆಯಲ್ಲಿ ತಿಂಡಿ ಬಂತು. ಜೊತೆಗೆ ಒಂದು ಲೋಟ ಬಿಸಿ ಬಿಸಿ ಕಾಫಿ.

" ಈಶ್ವರೈಯ ಮತ್ತೊಂದು ಸಾರಿ ಬಂದಿದ್ದ. ನೀನು ಬರುವುದೆ ಗೊತ್ತಿತ್ತು. ನಿಶ್ಚಯವಾಗಿಬಿಡಲಿ....ಎಂದು ಬಂದೆ. "

" ಈಗ್ಲೇ ಏನು ಅವಸರ ಮಾವ ?"

" ಚೆನ್ನಾಯ್ತು....ಕ್ರಿಸ್‌ಮಸ್ ರಜಕ್ಕೆ ಬಂದಾಗ ಎಂದು ಮಾತು ಕೊಟ್ಟಿದ್ದೆ."

" ಈಗ ಬೇಡ....ಇನ್ನೊಂದು ವರ್ಷನೂ ಆಗ್ಲಿ...."

" ಈಗ್ಲೇ ಏನು ಹುಡುಗಿ ಮನೆಗೆ ಬರುವುದಿಲ್ಲವಲ್ಲ...."

" ಯಾಕೆ, ಹುಡುಗಿಯನ್ನು ನೋಡಿ ಒಂದ್ಮಾತು ಹೇಳಿಬಿಡುವುದು ಒಳ್ಳೆಯದಲ್ಲವೆ ? " ಎಂದಳು ಕಮಲಮ್ಮ.

" ನಾನು ಹೇಳುವುದೂ ಅದೇ....ನಾಳೆಯೋ ನಾಡಿದ್ದೋ ಪಟ್ಟಣಕ್ಕೆ ಹೋಗೋಣ. ಮಾತುಕತೆ ಆಗ್ಲಿ. ಕೂಡಿ ಬಂದರೆ ಸರಿ. ಇಲ್ಲದಿದ್ದರೆ ಗೊತ್ತೇ ಇದೆ.– " ಸುಬ್ಬಣ್ಣನ ಮಾತಿಗೆ ಎಲ್ಲರೂ ಒಪ್ಪಿದರು. ರಾಜ ಮಾತ್ರ " ನೀವೆಲ್ಲಾ ಹೇಗೆ ಹೇಳಿದರೆ ಹಾಗೆ " ಎಂದು ತನ್ನ ಕೋಣೆಗೆ ಬಂದ. ಕೋಣೆಯ ಕಸಗುಡಿಸುತ್ತಿದ್ದ ಗೌರಿಯನ್ನು ರಾಜ ಕರೆದ.

" ಏನಪ್ಪ ? "

" ನೀನೇನಂತಿ ಗೌರಿ....?"

" ಎಷ್ಟು ದಿನ ಅಂತ ಇರೋದು....ಎವತ್ತಿದ್ರೂ ಮದ್ವೆ ಆಗ್ಲೇಬೇಕು. ಒಪ್ಪಿಬಿಡಪ್ಪ.... "

" ಸರಿಹೋಯ್ತು....ನೀನೂ ಹಾಗೆ ಹೇಳ್ತೀಯಾ.... "

" ಹಾಗೆ ಬಹಳ ದಿನ ಇರಬಾರದು. "

" ಮದುವೆಯಾಗಿ ಪುನಃ ಮನೆಯಲ್ಲಿ ರಂಪವೇಕೆ "

" ಹೋಗೋ....ನಿನಗೆ ಅರ್ಥವಿಲ್ಲದ ಯೋಚನೇನೇ ಬರುವುದು."

" ಹಾಗಲ್ಲ ಗೌರಿ.... "

" ಬೇಗ ಮದುವೆ ಮಾಡಿಕೊಂಡು ಬಿಡು ರಾಜ....ರತ್ನನೂ ಮನೆಗೆ ಬರಲಿ " ನಗುತ್ತಾ ಹೇಳಿದಳು.

ರಾಜ ಗೌರಿಯ ಮುಖವನ್ನೇ ನೋಡುತ್ತಾ ಕುಳಿತ. " ನನಗಿನ್ನೂ ಕೆಲಸವಿದೆಯಪ್ಪ " ಎಂದು ಹೇಳಿ ಕಸವನ್ನು ಬಳಿದು ಗೌರಿ ಹಜಾರಕ್ಕೆ

ಹೊರಟುಹೋದಳು. ರಾಜ ಬೇಗ ಬೇಗನೆ ಬಟ್ಟೆ ಹಾಕಿಕೊಂಡು ವೆಂಕಟೇಶನ ಮನೆಗೆ ಬಂದ. ಇಬ್ಬರೂ ಕೂಡಿ ರಣಜಿತ್ ಟಾಕೀಸ್‌ಗೆ ಬಂದರು. 'ಅಪನಾ ಘರ್' ಎನ್ನುವ ಚಿತ್ರ ನಡೆಯುತ್ತಿತ್ತು. ೬–೩೦ಕ್ಕೆ ಸರಿಯಾಗಿ ಚಿತ್ರ ಪ್ರಾರಂಭವಾಯ್ತು. ಮೊದಲು ಯಾವುದೋ ಸಮಾಚಾರಗಳ ಚಿತ್ರ ತೋರಿಸುತ್ತಿದ್ದುದರಿಂದ ಇಬ್ಬರೂ ಮಧ್ಯೆ ಮಾತನಾಡುತ್ತಿದ್ದರು. ಮುಖ್ಯ ಚಿತ್ರವೂ ಪ್ರಾರಂಭವಾಯ್ತು. ಆ ವೇಳೆಗೆ ಯಾರೋ ದಂಪತಿಗಳು ಬಂದು ತಮ್ಮ ಮುಂದಿನ ಸೀಟಿನಲ್ಲಿ ಕುಳಿತರು. ವಿರಾಮ ಕಾಲದಲ್ಲಿ ರಾಜ ಎದ್ದು ಹೊರಗೆ ಬಂದು ಮುಂಬರಲಿರುವ ಚಿತ್ರಗಳನ್ನು ನೋಡಿದ. ಚಿತ್ರ ಪ್ರಾರಂಭವಾಗುವ ಸೂಚನೆ ಕೇಳಿ ವಾಪಸು ಬಂದು ಕೂತ. ಇನ್ನೇನು ದೀಪ ಆರಬೇಕು. ಆಗ ತನ್ನ ಮುಂದೆ ಕುಳಿತಿದ್ದ ದಂಪತಿಗಳ್ಯಾರೆಂದು ತಿಳಿಯಿತು. ಆ ಹೆಂಗಸು ಹಿಂತಿರುಗಿ ನೋಡಿದಾಗ ಅವಳ ಕಣ್ಣಿಗೆ ರಾಜನ ಮುಖ ಬಿತ್ತು. ಆಶ್ಚರ್ಯದಿಂದ ಇನ್ನೊಮ್ಮೆ ದಿಟ್ಟಿಸಿ ನೋಡಿದಳು. ರಾಜನೂ ವಿಸ್ಮಯದಿಂದ ನೋಡಿದ. ಅವರಿಬ್ಬರೂ ಮಾತನಾಡಲು ನಿರ್ಧರಿಸುವ ಮುಂಚೆಯೇ ದೀಪ ಆರಿ ಚಿತ್ರ ಮುಂದುವರಿಯಿತು. ಬಂದ ದಿನವೇ ಈ ರೀತಿ ಆಗುತ್ತೆ ಎಂದು ರಾಜ ತಿಳಿದಿರಲಿಲ್ಲ. ಪೂರ್ತಿ ಚಿತ್ರ ನೋಡಲು ಅವನಿಗೆ ಮನಸ್ಸೇ ಇಲ್ಲ. ರೋಹಿಣಿಯು ಕರವಸ್ತ್ರದಿಂದ ಮುಖವನ್ನು ಒರಸಿಕೊಂಡದ್ದನ್ನು ಅನೇಕ ಸಾರಿ ಕಂಡ. ಚಿತ್ರದ ಮಧ್ಯೆ ಶಾಂತಾ ಆಪ್ಟೆಯ ಮಧುರಗಾನ ಮಾತ್ರ ಹಿಡಿಸಿತ್ತು. ಅದೂ ದುಃಖಮಯವಾದ ಜೀವನ ಗೀತೆ. ರೋಹಿಣಿಗೂ ಹಾಗೇ ಅನ್ನಿಸಿರಬೇಕು. ಚಿತ್ರವು ಪೂರ್ತಿಯಾಗಿ ಎಲ್ಲರೂ ಹೊರಡುವಾಗ್ಗೆ ರೋಹಿಣಿಯು ಮಾತನಾಡಿಸಲು ಪಡುತ್ತಿದ್ದ ಕಷ್ಟವನ್ನು ನೋಡಿ ರಾಜನೇ ಮಾತನಾಡಿಸಿದ.

"ನಮಸ್ಕಾರ...."

"ನಮಸ್ಕಾರ....ಯಾವಾಗ ಬಂದಿರಿ...." ಎನ್ನುವ ಮಾತಿನಲ್ಲಿ ತಾನು ಹೇಳಬೇಕೆಂದಿದ್ದ ವಿಷಯವೆಲ್ಲವನ್ನೂ ತಿಳಿಸಿದಳು. ವಿಶ್ವನಾಥನಿಗೆ ರೋಹಿಣಿ ಈ ತರಹ ಅವನೊಂದಿಗೆ ಮಾತನಾಡುವುದು ಸರಿಯಲ್ಲವೆಂದು ಕಂಡುಬಂದರೂ ತೆಪ್ಪಗಿದ್ದ.

"ಇನ್ನೂ ಕೆಲವು ದಿನ ಇರುವುದಾದರೆ ಒಂದು ದಿನ ಬನ್ನಿ" ಎಂದು ಹೇಳಿ ಮತ್ತೊಮ್ಮೆ ನಮಸ್ಕಾರ ಮಾಡಿ ಕಾರಿನಲ್ಲಿ ಕುಳಿತಳು.

'ಆಗಲಿ' ಎಂದಿಷ್ಟೇ ಹೇಳಿ ರಾಜ ವೆಂಕಟೇಶನೊಂದಿಗೆ ಹೊರಟು ಬಂದ. ವೆಂಕಟೇಶ, "ಅವಳು ತುಂಬಾ ಮನಸ್ಸಿಗೆ ಹಚ್ಚಿಕೊಂಡಿರಬೇಕು" ಎಂದಾಗ ರಾಜ "ಆ ವಿಷಯ ಬೇಡ ವೆಂಕಟೇಶ....ಅವಳೊಂದು ಅಪೂರ್ವ ರತ್ನ...." ಎಂದು ಸುಮ್ಮನಾದ. ರಾಜ ವೆಂಕಟೇಶನನ್ನು ಬೀಳ್ಕೊಟ್ಟು ಮನೆಗೆ ಬಂದಾಗ ನಾಳೆ ಮಧ್ಯಾಹ್ನ ಪಟ್ಟಣಕ್ಕೆ ಹೋಗುವುದೆಂದು ಸುಬ್ಬಣ್ಣ ತಿಳಿಸಿದ.

ಆ ರಾತ್ರಿ ರಾಜನಿಗೆ ಕಾಲಕಳೆಯುವುದು ಕಷ್ಟವಾಯ್ತು. ಜೊತೆಗೆ ಮಧ್ಯಾಹ್ನ ಬೇರೆ ನಿದ್ದೆ ಮಾಡಿದ್ದ. ಎರಡು ಗಂಟೆಯ ವೇಳೆಗೆ ಅವನಿಗೆ ನಿದ್ದೆ ಬಂದಿರಬೇಕು. ಬೆಳಗ್ಗೆ ಅವನು ಎದ್ದಾಗ ಆರು ಗಂಟೆಯ ಸಮಯ. ಮುಖ ತೊಳೆದುಕೊಂಡು ದಿನವಹಿ ಹೋಗುತ್ತಿದ್ದಂತೆ ಸುತ್ತಾಡಿ ಬರಲು ಹೊರಟ. ಸುಮಾರು ಒಂದು ಮೈಲಿ ಸುತ್ತಾಡಿದ. ಎಷ್ಟಾದರೂ ಮೈಸೂರಿನ ಹವೆ ಚೆನ್ನ. ಶೋಭಿಸಲು ಹಸ್ರು ಮನೋಹರವಾಗಿತ್ತು. ಮಧ್ಯಾಹ್ನ ಪಟ್ಟಣಕ್ಕೆ ಹೋಗಬೇಕಾಗಿದ್ದುದರಿಂದ ಬೇಗನೆ ಮನೆಯ ಕಡೆ ಹಿಂತಿರುಗಿದ. ಬರುವಾಗ ರೋಹಿಣಿ ನಿಂತಿದ್ದಳು. ಮಲ್ಲಿಗೆ ಹೂ ನೆಲದ ಮೇಲೆ ಉದುರಿ ಅದರ ಮೇಲೆ ರೋಹಿಣಿ ಮೇಲಿನಿಂದ ಬೀಳುತ್ತಿದ್ದ ಪಾದರಿ ಹೂವಿನ ಕಡೆ ನೋಡುತ್ತಿದ್ದಳು. ರೋಹಿಣಿಯ ಮನೆಯ ಹತ್ತಿರ ಬರುವ ಹೊತ್ತಿಗೆ ಪಾದರಿ ಹೂವಿನ ವಾಸನೆ ಬಂತು. ಅವಳು ಒಂದು ಭಾವನಾ ಪ್ರಪಂಚದಲ್ಲಿರಬೇಕು. ದೃಷ್ಟಿಯನ್ನು ಚಲಿಸಿ ಬೀದಿಯ ಕಡೆ ಹರಿಸಿದಾಗ ಅವಳ ನೋಟದಿಂದ ತಪ್ಪಿಸಿಕೊಳ್ಳಬೇಕೆಂದಿದ್ದ ರಾಜ ಸಿಕ್ಕಿಬಿದ್ದ,

ಮುಂದೆ ಬಂದು "ಬನ್ನಿ ಕಾಫಿ ತೆಗೆದುಕೊಂಡು ಹೋಗುಬಹುದಲ್ಲ" ಎಂದಳು.

"ಬೇಡ ರೋಹಿಣೀ....ಇದು ಚೆನ್ನಾಗಿ ಕಾಣದು."

"ಬನ್ನಿ ಎಂದು ಬೇಡಿಕೊಳ್ಳುತ್ತಿದ್ದೇನೆ....ಬರಬಾರದೆ.... ?"

"ನಿಮ್ಮ ಯಜಮಾನರು ಇರಬಹುದು; ಬೇಡ."

"ಇಲ್ಲ ತಂದೆಯ ಜೊತೆಗೆ ಹೋಗಿದ್ದಾರೆ.... ಇದ್ದರೂ ನನಗೆ ಸರಿಯೆಂದು ಕಂಡದ್ದನ್ನು ಮಾಡೇಬಿಡ್ತೇನೆ. ನನಗೋಸ್ಕರ ಬನ್ನಿ ಎನ್ನುತ್ತಿದ್ದೇನೆ.

ಯಾರೂ ಏನನ್ನೂ ಅನ್ನದಹಾಗೆ ನೋಡಿಕೊಳ್ಳುವ ಭಾರ ನನ್ನದು." ಎಂದು ಬೇಡಿದಳು. ಬೇರೆ ದಾರಿ ಕಾಣದ ರಾಜ ರೋಹಿಣಿಯ ಜೊತೆಗೆ ಮಹಡಿಯ ಮೇಲೆ ಬಂದು ಹಜಾರದ ಮಧ್ಯದಲ್ಲಿ ಹಾಕಿದ್ದ ದುಂಡಾದ ಮೇಜಿನ ಹತ್ತಿರ ಕುಳಿತ. ಕಾಫಿಯಾಯ್ತು. ಅವಳ ಕೋಣೆಯಲ್ಲಿ ಹಾಕಿದ್ದ ರೇಡಿಯೋದಿಂದ ಸಂಗೀತ ಕೇಳಿಬರುತ್ತಿತ್ತು. ಕೇಳಿಬರುತ್ತಿದ್ದ ವೀಣಾನಾದಕ್ಕೂ ರೋಹಿಣಿಯ ಹೃದಯ ಹೊಡೆದುಕೊಳ್ಳಲಾರಂಭಿಸಿತು. ರಾಜನಿಗೂ ಅಷ್ಟೆ. ಸಹಜವಾಗಿಯೇ ತನ್ನೊಡನೆ ಮಾತನಾಡ ಬೇಕೆನ್ನಿಸಿದ್ದ ಅವಳು ಯೋಚಿಸುತ್ತಿದ್ದಳು. ರಾಜನೆ,

"ನೀನೊಂದು ತಪ್ಪು ಮಾಡುತ್ತಿದ್ದೀ ರೋಹಿ!" ಎಂದ.

ರೋಹಿ! ಪ್ರೇಮದಿಂದ ರಾಜ ಕರೆಯುತ್ತಿದ್ದ. ಮೈಮೇಲೆ ನವಿರೇಳಿತು.

"ಹೌದು; ಒಂದು ತಪ್ಪಲ್ಲ, ನೂರು ತಪ್ಪು ಮಾಡಿದ್ದೇನೆ."

"ಕೈಹಿಡಿದ ಗಂಡನೊಡನೆ ಸುಖವಾಗಿ ಬಾಳುವುದು ಸರಿಯಲ್ಲವೆ?"

"ಎಲ್ಲರೂ ಇದೇರೀತಿ ಬೋಧನೆ ಮಾಡ್ತಾರೆ....ಆದರ ಅರ್ಥ ನನಗೆ ಗೊತ್ತಾಗಿಲ್ಲ. ಕೈಹಿಡಿದ ಗಂಡನನ್ನು ಪ್ರೀತಿಸಬೇಕು. ಸರಿ....ಆದರೆ ಕೈಹಿಡಿದ ಗಂಡ...."

"ಅವನ ವಿಚಾರದಲ್ಲಿ ತಪ್ಪು ಮಾತನಾಡುವುದು ನನಗೆ ಸರಿಕಾಣದು."

"ಅವರ ರೂಪ, ಬಣ್ಣ ಹೇಳುತ್ತಿಲ್ಲ...."

"ಆದರೂ ನಿನ್ನ ಮನಸ್ಸು ಬದಲಾಯಿಸುವುದು ಒಳ್ಳೆಯದು."

"ಪುನಃ ಅದೇ ಹೇಳ್ತೀರಿ.... ಒಂದು ಕೇಳ್ತೇನೆ....ನನ್ನನ್ನು ಮರೆತು ಬಿಡಲು ನಿಮ್ಮಿಂದ ಆಗಿದೆಯೆ?....ಒಂದು ವೇಳೆ ನಿಮ್ಮ ಕೈಲಿ ಸಾಧ್ಯವಿದ್ದರೂ ನನಗೆ ಆಗದು" ಎಂದು ಕಣ್ಣೀರಿಟ್ಟಳು. ಈ ಪ್ರಶ್ನೆಗೆ ರಾಜನಿಂದ ಉತ್ತರ ಕೊಡಲಾಗಲಿಲ್ಲ.

"ತಪ್ಪು ನನ್ನದು....ಆದರೆ ಯೋಚಿಸು. ಹೀಗಾಯ್ತೆಂದು ದುಃಖ ಪಡುವುದು ಸರಿಯೆ?"

ಸುಮ್ಮನೆ ದುಃಖಪಡಲು ಹುಚ್ಚಿಯಲ್ಲ. ಯೋಚಿಸಿದೆ-ಬಗೆಹರಿಯ ಲಿಲ್ಲ....ಬಾಳೆಲ್ಲಾ ಗೋಳಿನ ಹಳ್ಳದಲ್ಲೇ ಈಜಬೇಕು...."

ನನಗೆ ಅರ್ಥವಾಗುತ್ತಿಲ್ಲ ಎನ್ನುವಂತೆ ರಾಜ ರೋಹಿಣಿಯ ಕಡೆ ನೋಡಿದ.

"ಹೂವು ಅರಳಿ ಅದನ್ನು ಮುಡಿಯೋಣ ಅನ್ನುವುದು ಚೆನ್ನ. ಹೂವನ್ನು ಕೈಲಿ ಹಿಡಿದಿಟ್ಟಿರುತ್ತೇನೆ ಎಂದು ಹಿಸುಕಿ ಹಾಳು ಮಾಡುವುದು ನನಗೆ ಒಪ್ಪಿಗೆಯಿಲ್ಲ. ನನ್ನ ಬಾಳು ಹೀಗಾಗಿದೆ" ಎಂದಳು. ರಾಜನಿಗೆ ಸೂಕ್ಷ್ಮವಾಗಿ ತಿಳಿಯಿತು: ಬಹುಶಃ ರೋಹಿಣಿಯ ಸರಳ ಸ್ವಭಾವವನ್ನು ವಿಶ್ವನಾಥ ವಿಪರೀತ ಅರ್ಥಮಾಡಿಕೊಂಡು ಕಾಡಿಸುತ್ತಿರಬೇಕೆಂದು. ಆದರೆ ತಾನೇನು ಮಾಡಬಲ್ಲ!

"ಒಂದು ವಿಷಯ ರೋಹಿಣಿ....ನೀನು ಹೇಳುವುದೆಲ್ಲಾ ಸರಿ. ಆದರೆ ಅವನಿಗೆ ಹಾಗೆ ಕಾಣಬೇಕಲ್ಲ...."

"ಅವರ ವಿಪರೀತಕ್ಕೆ ನಾನು ಬಲಿಯಾಗಬೇಕೆ?"

"ನಾನೇನೂ ಹೇಳುವಂತಿಲ್ಲ. ಒಂದು ಮಾತು ಇದೆಲ್ಲಾ ಸರಿಪಡಿಸಿಕೊಳ್ಳಬೇಕು. ಉಪಾಯದಿಂದ ಅನೇಕ ಮಹತ್ತರ ಪ್ರಯಾಸಗಳನ್ನು ಸುಲಭಪಡಿಸಬಹುದು."

"ಮಾರ್ಪಡಿಸುವ ಸ್ಥಿತಿಯಲ್ಲಿಲ್ಲ.... ಈ ರೀತಿ ಆಡಿಕೊಳ್ಳುತ್ತಿದ್ದೇನೆ ಎಂದು ಅಸಹ್ಯಪಡಬೇಡಿ...."

ನನ್ನನ್ನು ಮರೆಯುವುದು ಕ್ಷೇಮ....ಅದು ಬಹುಕಷ್ಟ–ಗೊತ್ತು. ಮನಸ್ಸನ್ನು ಕಠಿಣಮಾಡಿ ಬಿಡು."

"ನನ್ನಿಂದಾಗದು....ಹೂವು ಒಂದು ಸಾರಿ ಅರಳಿ ಬಾಡುವುದು ನನ್ನ ಮನಸ್ಸಿನಲ್ಲಿ ನಿಮ್ಮ ಪ್ರೇಮ ತಾಂಡವವಾಡಿದೆ. ನಾನು ಮರೆಯಲಾರೆ. ನೀವು ಮರೆತರೆ ನಿಮ್ಮ...." ಬಿಕ್ಕಳಿಸಿ ಅತ್ತಳು.

"ಬಾಳು ಬರೀ ಪ್ರೇಮ ಪ್ರೀತಿಯ ಹಾಸಿಗೆಯಲ್ಲ....ಮುಳ್ಳಿನ ಹಾದಿಯೂ ಹೌದು. ಆ ನೋವಿನಲ್ಲಿ ಸುಖವನ್ನು ಕಾಣುವುದು ಕಷ್ಟವಾದರೂ ಕ್ಷೇಮ. ನನ್ನಲ್ಲಿಟ್ಟಿರುವ ವಾತ್ಸಲ್ಯಕ್ಕೆ ನಾನು ಅರ್ಹನಲ್ಲ, ನಾನು ಇನ್ನು ಹೊರಡುತ್ತೇನೆ, ಕ್ಷಮಿಸು" ಎಂದು ಹೊರಡಲು ಎದ್ದುನಿಂತ.

'ರಾಜ!' ಎಂದು ಮುಂದುವರಿಸಲು ಆಗದೆ ರೋಹಿಣಿ ಅತ್ತಳು. ರಾಜನಾಗಲೇ ಮಹಡಿಯ ಮೆಟ್ಟಲನ್ನಿಳಿಯುತ್ತಿದ್ದ. ವಿಶ್ವನಾಥ ಮಹಡಿಯನ್ನು ಹತ್ತಿ ಮೇಲಕ್ಕೆ ಬರುವಾಗ್ಗೆ ರಾಜನನ್ನು ದುರುಗುಟ್ಟಿ ನೋಡಿದ. ಅವನನ್ನು ಗಮನಿಸದೆ ರಾಜ ತಮ್ಮ ಮನೆಯ ಕಡೆ ಹೊರಟ.

ಚಿಕ್ಕ ಚಿತ್ರವಾಗಲೇ ವಿಶ್ವನಾಥನ ಮನಸ್ಸಿಗೆ ಕಟ್ಟಿತು. ಹಿಂದಿನ ರಾತ್ರಿ ಸಿನಿಮಾದಲ್ಲೇ ಆವಳ ನಡವಳಿಕೆ ಅವನಿಗೆ ಸಹಿಸಲಿಲ್ಲ. ಈಗಿನ್ನು ಕೇಳಬೇಕೆ? ಮೇಲೆ ಬಂದವನೆ....

"ಇದು ನನಗೆ ಸರಿಬೀಳದು ರೋಹಿಣಿ....ನಿನ್ನ ಆಟ ದಿನದಿನಕ್ಕೆ ಹೆಚ್ಚುತ್ತಿದೆ" ಎಂದ.

ಇವನ ಮಾತನ್ನೇ ಕಿವಿಯಮೇಲೆ ಹಾಕಿಕೊಳ್ಳದೆ ನಿಂತಿದ್ದ ರೋಹಿಣಿ ಯನ್ನು ನೋಡಿ ಅವನಿಗಿನ್ನೂ ಕೋಪ ಹೆಚ್ಚಾಗಿ

"ಆ ನಾಯಿ ಜೊತೆಯಲ್ಲಿ ನಾಚಿಗ್ಗೆಯಿಲ್ಲದೆ...." ಎನ್ನುವ ಮುಂಚೆಯೆ

"ಬಾಯಿಗೆ ಬಂದಂತೆ ಹರಟಬೇಡಿ....ನನಗೆ ಸಾಕಷ್ಟು ಮಾನ ಇದೆ" ಎಂದು ಬಿರುಸಾಗಿ ರೋಹಿಣಿ ನುಡಿದಳು.

"ನೀನು ಇನ್ನು ಮೇಲೆ ಯಾರೊಡನೆಯೂ ಮಾತನಾಡಕೂಡದು."

"ಇಂತಹ ಲಜ್ಜೆಗಳೆಷ್ಟೋ ಆಗಿಲ್ಲವೆ....?"

"ಇನ್ನೊಂದು ಸಾರಿ ನನ್ನ ಮಾತನ್ನು ಅಲಕ್ಷಿಸಿದರೆ...."

'ಅಲಕ್ಷಿಸಿದರೇನು ಮಾಡುತ್ತೀರಿ' ಎನ್ನುವಂತೆ ರೋಹಿಣಿ ಹುಬ್ಬುಗಂಟು ಹಾಕಿದಳು. ತಾಳ್ಮೆ ತಪ್ಪಿದ ವಿಶ್ವನಾಥ ರೋಹಿಣಿಯ ಕೆನ್ನೆಗೆ ಫಳೀರನೆ ಒಂದು ಏಟು ಕೊಟ್ಟು ತನ್ನ ಕೋಣೆಗೆ ನಡೆದ. ರೋಹಿಣಿ ಕುರ್ಚಿಯ ಮೇಲೆ ಕುಸಿದುಬಿದ್ದು ಅತ್ತಳು.

## ೧೮

ಈಶ್ವರೈಯನ ಮನೆಯಲ್ಲಿ ಇಂದು ಹೆಚ್ಚಿನ ಸಂಭ್ರಮ. ಸಂಪಿಗೆಹಳ್ಳಿ ಯಿಂದ ಅವರ ತಮ್ಮ ಗಂಗಾಧರೈಯ ಹೆಂಡತಿ ಮಕ್ಕಳೊಂದಿಗೆ ಬಂದಿದ್ದ. ಪಟ್ಟಣದಲ್ಲೇ ಇದ್ದ ಅವರ ತಂಗಿಯೂ ಬಂದಳು. ಮೂರು ಮನೆಯ ಜನ ಸೇರಿದಕಡೆ ಕೇಳಬೇಕೆ. ಕೆಲಸ ಭರದಿಂದ ಸಾಗಿತ್ತು. ಅವರ ತಂಗಿ ಮತ್ತು ಗಂಗಾಧರೈಯನ ಹೆಂಡತಿ ಆ ದಿನ ಮಾಡಬೇಕಾದ ಅಡಿಗೆ ಏರ್ಪಾಡು ಮಾಡುತ್ತಿದ್ದರು. ಈಶ್ವರೈಯನ ಹೆಂಡತಿ ರಾಜಲಕ್ಷ್ಮಮ್ಮ ರತ್ನಳಿಗೆ ಅಲಂ ಕಾರ ಮಾಡುತ್ತಿದ್ದಳು. ಈಶ್ವರೈಯನಿಗೆ ನಾಲ್ಕು ಹೆಣ್ಮಕ್ಕಳು, ಒಬ್ಬ ಗಂಡು ಹುಡುಗ. ಎಲ್ಲರಿಗಿಂತ ಹಿರಿಯವಳಾದ ರತ್ನಳಿಗೆ ರಾಜನೊಡನೆ ಮದುವೆ ಎಂದು ಮಾತುಕತೆಯಾಗಿತ್ತು. ಆ ದಿನ ವಧುವನ್ನು ನೋಡಲು ರಾಜ ಮತ್ತು

ಅವರ ಮನೆಯವರೆಲ್ಲರೂ ಮಧ್ಯಾಹ್ನದ ರೈಲಿಗೆ ಬರುವುದನ್ನು ನಿರೀಕ್ಷಿಸು ತ್ತಿದ್ದರು. ಬೀಗರಿಗೆ ಇಳಿದುಕೊಳ್ಳಲು ಮನೆಯ ಒಂದು ಭಾಗವನ್ನು ತೆರವು ಮಾಡಿಕೊಟ್ಟರು. ಸ್ಕೂಲಿನಿಂದ ಜಮಖಾನ, ಪೇಟೆಯಿಂದ ಅದೂ ಇದೂ ತರಿಸುವ ಹೊತ್ತಿಗೆ ಮೂರು ಗಂಟೆಯಾಯ್ತು. ಇನ್ನು ಹೊತ್ತಾಯ್ತೆಂದು ಈಶ್ವರೈಯ ಬೇರೆ ಬಟ್ಟೆಗಳನ್ನು ಹಾಕಿಕೊಂಡು ಭಾವೀ ಬೀಗರನ್ನು ಎದುರು ಗೊಳ್ಳಲು ಸಿದ್ಧವಾದರು. ಗಂಗಾಧರನಾಗಲೆ ಒಂದು ಗಾಡಿಯನ್ನು ಮಾಡಿ ಕೊಂಡು ರೈಲ್ವೆ ನಿಲ್ದಾಣಕ್ಕೆ ಹೋಗಿದ್ದ.

ಒಳಗೆ ರತ್ನಳನ್ನು ಹೆಣ್ಣುಮಕ್ಕಳು ಹಾಸ್ಯ ಮಾಡುತ್ತಿದ್ದರು. ಅವಳ ಅಲಂಕಾರವನ್ನು ಒಬ್ಬಳು ಹಾಸ್ಯ ಮಾಡಿದರೆ, ಇಷ್ಟುದ್ದ ಇದ್ದಾಳೆ ಗಂಡ ಗುಜ್ಜಾನೆ ಮರಿಯಾಗಿರಬೇಕು; ಎಂದು ಇನ್ನೊಬ್ಬಳು ನಗುವಳು. "ಹಾಗೇ ನಿರುವುದಿಲ್ಲ" ಎನ್ನುವಂತೆ ಮೆಲ್ಲನೆ ನಕ್ಕು ರತ್ನ ತನ್ನ ಆಸೆಯನ್ನು ತೋರ್ಪ ಡಿಸಿದಳು. ವಯಸ್ಸು ಹದಿನಾಲ್ಕು ತುಂಬಿದ್ದರೂ, ದೊಡ್ಡ ಬೆಳವಣಿಗೆಯನ್ನು ನೋಡಿದರೆ ೧೭ ವಯಸ್ಸು ಎನ್ನುವಂತಿದ್ದಳು. ಜೊತೆಗೆ ಅವಳ ತಾಯಿಯ ಪೀತಾಂಬರ ಉಟ್ಟು ರೊಟ್ಟೆ ಅಂಚಿನ ಕುಪ್ಪುಸ ತೊಟ್ಟರೆ ದೊಡ್ಡ ಹೆಂಗಸಿ ನಂತೆ ಕಾಣುತ್ತಿದ್ದಳು. ಅಗಲವಾದ ದುಂಡು ಮುಖ. ಬಿಳುಪಾದ ಮುಖ ದಲ್ಲಿ ಎದ್ದು ಕಾಣುವಂತಿದ್ದುದು ದುಂಡು ಕುಂಕುಮ. ಅಧರವು ಕೆಂಪಲ್ಲ ದಿದ್ದರೂ ಅದರಂತೆ ಕೆಂದುಟಿ. ಇನ್ನು ಮಾಟವಾದ ಮೂಗು, ಅಗಲವಾದ ಕಣ್ಣು. ಎಂದೂ ಇಲ್ಲದ ನಾಚಿಕೆ ಅಂದು ಆವರಿಸಿತ್ತು. ಇದೇ ಸಮಯವೆಂದು ಎಲ್ಲರೂ ರತ್ನಳನ್ನು ಹಾಸ್ಯ ಮಾಡುವುದೆ ?

ಬಂದರು ! ಬಂದರು ! ಎನ್ನುತ್ತಾ ರತ್ನಳ ಚಿಕ್ಕ ತಮ್ಮ ಚಪ್ಪಾಳೆ ತಟ್ಟೆ 'ಅವರು' ಬಂದ ಸುದ್ದಿಯನ್ನು ತಿಳಿಸಿದ.

"ಇನ್ನೂ ಮುಗಿದಿಲ್ಲವೆ ನಿಮ್ಮ ಕೆಲಸಗಳು" ಎನ್ನುತ್ತಾ ಈಶ್ವರೈಯ ಅಡಿಗೆ ಮನೆಗೆ ಬಂದು "ಹೆಂಗಸರಿಗೆ ಕೈಕಾಲಿಗೆ ನೀರು ಕೊಡು" ಎಂದು ಹೆಂಡತಿಗೆ ಹೇಳಿ ಪುನಃ ಸುಬ್ಬಣ್ಣನವರ ಹತ್ತಿರ ಮಾತನಾಡಿದರು. ಕಮಲಮ್ಮ ಒಳಕ್ಕೆ ಹೋಗಿ ಕೈಕಾಲು ತೊಳೆದುಕೊಂಡು ಬರುವ ಹೊತ್ತಿಗೆ ಗೌರಿ ರಾಜನ ಹತ್ತಿರ ಮಾತನಾಡುತ್ತಿದ್ದಳು. ಸುಬ್ಬಣ್ಣನಾಗಲೆ ಅವರ ಮನೆ ಒಳಗೆ ಹೊರಗೆ ಓಡಾಡಿ ಎರಡು ಮನೆಯವರಿಗೂ ಬೇಕಾದವನಾಗಿದ್ದ.

" ನೋಡಿದರೇನೋ ಒಳ್ಳೆಯ ಜನಾಂತ ಕಾಣಿಸುತ್ತೆ ರಾಜ " ಎಂದು ಗೌರಿ ಮಾತನಾಡಲು ಪ್ರಾರಂಭಿಸಿದಳು.

ರಾಜ ಮೆಲ್ಲನೆ ನಕ್ಕ.

" ಹುಡುಗಿಯನ್ನೊಪ್ಪಿ ಬಿಡು ರಾಜ....ಬೇಗ ಮದುವೆಯಾಗಿಬಿಡಲಿ."

" ನೋಡಿದ ಮೇಲೆ ಮಾತು.... "

" ನಿನ್ನ ಓದಿಗೂ ಸಹಾಯ ಮಾಡುವ ಸ್ಥಿತಿಯಲ್ಲಿದ್ದಾರೆ .... "

" ಅವರಿಗೆ ಆಗಲೆ ಸುಬ್ಬಣ್ಣ ಹೇಳಿರಬೇಕು. "

ಮಾತನಾಡುವಾಗ್ಗೆ ಮನೆಯ ಒಳಗಿನಿಂದ ವೀಣೆ ಬಾರಿಸಿದ ಶಬ್ದ ಕೇಳಿ ಬಂತು. ಗೌರಿ ರಾಜನ ಮುಖವನ್ನು ನೋಡಿ

" ರತ್ನಳೇ ಇರಬೇಕು. "

" ಹೇಗೆ ಗೊತ್ತು.... "

" ಇಲ್ಲ ಪಕ್ಕದ ಮನೆ ಹುಡಿಗೀನೋ.... "

" ....ವೀಣೆ ಹೇಳಿಸ್ತಿದ್ದೇವೆ ಎಂದಿದ್ರು.... "

" ನಿನ್ನ ಹೆಂಡತೀನೆ ಇರಬೇಕು....ಚೆನ್ನಾಗಿ ನುಡಿಸುತ್ತಾಳೆ. "

ರಾಜ ವೀಣಾನಾದವನ್ನು ಕೇಳುತ್ತಿದ್ದ. ನಾದದಿಂದ ರತ್ನ ಹೇಗಿರ ಬಹುದು ಎಂದು ಊಹಿಸುತ್ತಿದ್ದನೇನೋ–ಅದರಲ್ಲೇ ತಲ್ಲೀನನಾಗಿದ್ದ.

ಆಗ ಕಮಲಮ್ಮ " ಅವಳೇ ನುಡಿಸುತ್ತಿರುವುದು " ಎಂದು ಗೌರಿಯ ಕಿವಿಯಲ್ಲಿ ಹೇಳಿದಳು.

" ಅದೇನಮ್ಮ ಗುಟ್ಟಿನ ಮಾತು.... " ಎಂದ ರಾಜ.

" ರತ್ನಳನ್ನು ನೋಡಿದ ಮೇಲೆ ಗೊತ್ತಾಗುತ್ತೆ " ಎಂದಳು ಕಮ ಲಮ್ಮ. ಅವಳೊಡನೆ ಗೌರಿಯೂ ನಕ್ಕಳು. ಸುಬ್ಬಣ್ಣ ಬಂದು ಹಜಾರದಲ್ಲಿ ಬಂದು ಕೂತುಕೊಳ್ಳುವಂತೆ ರಾಜನನ್ನು ಕರೆದ. ಗೌರಿ ಮತ್ತು ಕಮಲಮ್ಮ ಹೆಂಗಸರ ಹತ್ತಿರ ಕುಳಿತರು. ರಾಜ ನೋಡಿದ. ತನ್ನನ್ನೇ ಎಲ್ಲರೂ ನೋಡು ತ್ತಿದ್ದರು. ತನ್ನ ಜೊತೆಯಲ್ಲಿ ಸುಬ್ಬಣ್ಣನಿಲ್ಲದೆ ಇದ್ದರೆ ಸ್ವಲ್ಪ ತೊಂದರೆಯೇ ಆಗುತ್ತಿತ್ತು. ಸುತ್ತಲೂ ಒಂದು ಸಾರಿ ನೋಡಿದ. ಮದುವೆಯ ವಯಸ್ಸಿನ ಇಬ್ಬರು ಮೂವರು ಹೆಣ್ಮಕ್ಕಳು ಇದ್ದರು. ಅವರಲ್ಲಿ ಯಾವ 'ರತ್ನ' ತನ್ನ

ಮಡದಿಯಾಗುವವಳು ! ಛೀ ! ರತ್ನ ಅಲ್ಲೇಕೆ ಈಗಲೆ ಬಂದಾಳು. ರಾಜ-ಲಕ್ಷ್ಮಮ್ಮನಾಗಲೆ ರಾಜನನ್ನು ನೋಡಿ ಒಪ್ಪಿಬಿಟ್ಟಳು. ತಿಂಡಿ ತೀರ್ಥವಾದ ನಂತರ—

"ಏನೋ ಹಳ್ಳಿಯ ಜನ ಸ್ವಾಮಿ. ತಕ್ಕಮಟ್ಟಿಗೆ....ಓದಿ ಬರೆಯುತ್ತಾಳೆ. ವೀಣೆ ಹೇಳಿಸಿದ್ದೇವೆ....ದೊಡ್ಡಮನಸುಮಾಡಿ" ಎಂದು ಈಶ್ವರೈಯ ಹೇಳಿ ಮುಗಿಸುವ ಮುಂಚೆ ಸುಬ್ಬಣ್ಣ "ವೀಣೆ ಸೊಗಸಾಗಿ ಬಾರಿಸುತ್ತಾಳೆ" ಎಂದು ನುಡಿದ. ಗಂಡನ ಸೂಚನೆಯಂತೆ ರಾಜಲಕ್ಷ್ಮಮ್ಮ ರತ್ನಳನ್ನು ಕರೆ ತಂದಳು. ರತ್ನ ಬಂದವಳೆ ಸುಬ್ಬಣ್ಣನಿಗೂ ಕಮಲಮ್ಮನಿಗೂ ನಮಸ್ಕಾರ ಮಾಡಿ ತಾಯಿಯ ಹತ್ತಿರ ಕುಳಿತಳು ಎಲ್ಲರೂ ತನ್ನನ್ನೇ ನೋಡುವಂತೆ ಅವಳಿಗೆ ಭಾಸವಾಗಿ ಕತ್ತೆತ್ತಿ ನೋಡಲು ನಾಚಿಕೆಯಾಯ್ತು. ರಾಜ ರತ್ನಳನ್ನು ನೋಡಿದ. ಗೌರಿಯ ಹತ್ತಿರ ಮಾತನಾಡುತ್ತಿದ್ದಾಗ ಕೇಳಿಸಿದ್ದ ವೀಣಾ ನಾದದಿಂದ ಒಂದು ರೂಪನ್ನು ಕಂಡಿದ್ದ. ಆ ರೂಪಿಗಿಂತ ರತ್ನ ಸುಂದರಳಾಗಿದ್ದಳು. "ಒಂದೆರಡು ಹಾಡನ್ನು ನುಡಿಸು ಅಮ್ಮಯ್ಯ" ಎಂದು ಸುಬ್ಬಣ್ಣ ಹೇಳಿದ. ಈಶ್ವರೈಯನ ತಂಗಿಯ ಮಗಳು ಲೀಲ ರತ್ನಳ ಜೊತೆಗೆ ವೀಣೆ ಕಲಿಯುತ್ತಿದ್ದಳು. ಅವಳು ವೀಣೆಯನ್ನು ತಂದು ರತ್ನಳ ಹತ್ತಿರ ಇಟ್ಟು ಕುಳಿತಳು. ರತ್ನ ವೀಣೆಯನ್ನು ತೆಗೆದುಕೊಂಡು ಒಂದೆರಡು ಸಾರಿ ತಂತಿಯಮೇಲೆ ಬೆರಳಾಡಿಸಿ ಲೀಲಳ ಕಡೆಗೆ ನೋಡಿದಳು. ಯಾವ ಹಾಡನ್ನು ಬಾರಿಸಬೇಕೆಂದು ಲೀಲ ಸೂಚಿಸಿರಬೇಕು. ರತ್ನ ಒಂದು ಹಾಡನ್ನು ಬಾರಿಸಲು ಪ್ರಾರಂಭಿಸಿದಳು. ವೀಣಾನಾದವೇನೋ ಮಧುರವಾಗಿತ್ತು. ಅದೊಂದನ್ನೂ ಗಮನಿಸದೆ ರಾಜ ರತ್ನಳನ್ನು ನೋಡಿದ. ವೀಣೆ ನುಡಿಸುವ ಸುಂದರಿ ರತ್ನ. ಪಕ್ಕದಲ್ಲಿ ಸ್ವಲ್ಪ ಉದ್ದಮುಖದ ಲೀಲ. ಅವಳನ್ನು ನೋಡಿದಾಗ ರೋಹಿಣಿಯ ಜ್ಞಾಪಕ ಬಂದುಬಿಟ್ಟಿತು. ಒಂದು ಕಡೆ ರತ್ನ—ಇನ್ನೊಂದು ಕಡೆ ರೋಹಿಣಿ. ದುಂಡುಮಲ್ಲಿಗೆ ಮೊಗ್ಗು ನೋಡಲೂ ಚೆನ್ನ. ಮುಡಿಯಲೂ ಯೋಗ್ಯ. ಅಂತೆಯೇ ಜಾಜಿ—ಮಲ್ಲಿಗೆಯಷ್ಟು ಸುಂದರಾಕೃತಿ ಇಲ್ಲದಿದ್ದರೂ ಸುವಾಸನೆ ಜಾಸ್ತಿ. ರಾಜ ದಿಟ್ಟಿಸಿ ನೋಡಿದ. ಅವನಿಗೆ ಕಾಣಿಸುತ್ತಿದ್ದುದು ರತ್ನ ಲೀಲಳಲ್ಲ—ರತ್ನ ರೋಹಿಣಿ.—ವೀಣೆ ಬಾರಿಸುವಾಗ್ಗೆ ರತ್ನ ಒಂದು ಸಾರಿ ರಾಜನನ್ನು ನೋಡಿಯೇ ಬಿಟ್ಟಳು. ಅಬ್ಬಾ ! ತುಂಬಾ

ನಾಚಿಕೆಯಾಗಿ ತಲೆ ತಗ್ಗಿಸಿದಳು. ರತ್ನಳ ಮುಗ್ಧ ನೋಟ ರಾಜನನ್ನು ಸ್ಥಬ್ಧನನ್ನಾಗಿ ಮಾಡಿತು. ರೋಹಿಣಿಯ ರೂಪು ಅಸ್ಪಷ್ಟವಾಗಿ ಕಾಣಿಸಿ ಕೊನೆಗೆ ಅವನಿಗೆ ಕಾಣಿಸುತ್ತಿದ್ದುದು ರತ್ನಳ ರೂಪ ಒಂದೆ.

"ವೀಣೆ ಜೊತೇಲಿ ಹಾಡಮ್ಮಯ್ಯ" ಎಂದು ಸುಬ್ಬಣ್ಣ ಕೇಳಿದಾಗಲೆ ರಾಜ ತನ್ನ ಪರೀಕ್ಷೆಯನ್ನು ಮುಗಿಸಿ ಒಪ್ಪಿಗೆಯನ್ನಿತ್ತಿದ್ದ. ಮೊದಲು ನಾಚಿದರೂ ಅನಂತರ ಗಂಭೀರವಾಗಿ ಹಾಡಿದಳು. ಅವಳ ಮಂಜುಳ ನಾದದಿಂದ ರಾಜನಿಗಿನ್ನೂ ಸಂತೋಷವಾಯ್ತು. ಹಾಡಿದ್ದು ಮುಗಿದ ನಂತರ ವಧು ಪರೀಕ್ಷೆ ಮುಗಿಯಿತು. ಸುಬ್ಬಣ್ಣ, ರಾಜನನ್ನೂ ಈಶ್ವರಯ್ಯನನ್ನೂ ಮುಂದಿನ ಕೋಣೆಗೆ ಕರೆತಂದು ವಿಷಯವನ್ನು ಕುರಿತು ಮಾತನಾಡಿದರು. ರಾಜ ಹುಡುಗಿಯನ್ನೊಪ್ಪಿದ್ದನ್ನು ಕೇಳಿ ಈಶ್ವರೈಯನಿಗೆ ಒಂದು ಭಾರ ಇಳಿಸಿ ದಂತಾಯ್ತು. ಸುಬ್ಬಣ್ಣ ಮೊದಲೇ ಕೊಡುವುದು ಎಲ್ಲವನ್ನೂ ಈಶ್ವರೈಯ ನಿಗೆ ತಿಳಿಸಿದ್ದ. ರಾಜನ ಓದಿಗೆ ತಿಂಗಳಿಗೆ ೫೦ ರೂಪಾಯಿ ಕಳುಹಿಸುವು ದಾಗಿ ಮಾತಾಯ್ತು. ಅಂತು ರತ್ನಳಿಗೆ ಕಂಕಣ ಕೂಡಿ ಬಂತು.

"ಈ ಬೇಸಿಗೆಯಲ್ಲೇ ಮದುವೆ ಮಾಡೋಣವೆಂದು" ಈಶ್ವರೈಯ ತಿಳಿಸಿದ.

"ಅಷ್ಟು ಬೇಗ ಹೇಗೆ ಸಾಧ್ಯ ?"

"ಅವರ ಅನುಕೂಲಾನೂ ನೋಡಬೇಡವೆ ರಾಜ....ನಿಮ್ಮ ತಾಯಿಯ ಹತ್ತಿರ ಆಲೋಚಿಸಿ ಹೇಳು" ಎಂದು ಸುಬ್ಬಣ್ಣ ಹೇಳಿದ.

"ಮದುವೆಯಾದರೆ ಒಂದು ವರ್ಷವಲ್ಲ ಎರಡು ವರ್ಷ ನಮ್ಮ ಮನೆಯಲ್ಲೇ ಇರ್‍ತಾಳೆ."

"ನೀನು ಮುಂದಿನ ವಾರ ಮೈಸೂರಿಗೆ ಬಂದರೆ ಅವನ್ನು ವಿಚಾರಿಸಿ ತಿಳಿಸ್ತೀನಿ, ಮದುವೆ ಸಿದ್ಧತೆ ನಡೆಯಬಹುದು." ಎಂದು ಸುಬ್ಬಣ್ಣ ಹೇಳಿದ ಮೇಲೆ ಈಶ್ವರೈಯನಿಗೆ ಸಮಾಧಾನವಾಯ್ತು. ಸಂತೋಷ ಸುದ್ದಿಯನ್ನು ಹೆಂಗಸರಿಗೆ ತಿಳಿಸಿ ಬಂದರು.

ಶ್ರೀರಂಗಪಟ್ಟಣದಿಂದ ಆ ರಾತ್ರಿಯೇ ಸಂಪಿಗೆಹಳ್ಳಿಗೆ ಬಂದು ಬಿಡ ಬೇಕೆಂದು ಸುಬ್ಬಣ್ಣ ಯೋಚಿಸಿದ್ದ. ರಾತ್ರಿಯೇಕೆ–ಬೆಳಿಗ್ಗೆ ಪ್ರಯಾಣ ಕ್ಷೇಮ ವಲ್ಲವೆ" ಎಂದು ಈಶ್ವರೈಯ ಹೇಳಿದ. "ಯಾಕೆ ಸಾಯಂಕಾಲ ಆರಕ್ಕೆಲ್ಲಾ

ಗಾಡಿ ಹೂಡಿದರೆ ಎಂಟು ಗಂಟೆಯ ಹೊತ್ತಿಗೆ ಅಲ್ಲಿರ್ತೀವೆ, ಅಲ್ಲದೆ ಮನೇಲಿ ಒಬ್ಬಳೇ, ಊರು ಬಿಟ್ಟು ಎರಡು ದಿನ ಆಗಿದೆ." ಎಂದು ಸುಬ್ಬಣ್ಣ ಹೇಳದ ಮೇಲೆ ಈಶ್ವರೈಯ ಸುಮ್ಮನಾದ. ಬೇಗನೆ ಊಟ ಮಾಡಿಕೊಂಡು ಹೋಗುವುದೆಂದು ಗೊತ್ತಾಯ್ತು.

ಈ ಮಧ್ಯೆ ರಾಜ, ಗೌರಿಗೊಂದು ವಿಚಿತ್ರ ಸಮಸ್ಯೆಯನ್ನು ಒಡ್ಡಿದ್ದ: ತನ್ನೊಡನೆ ಮದುವೆಯಾಗಲು ರತ್ನಳಿಗೆ ಇಷ್ಟವೋ ಇಲ್ಲವೋ ತಿಳಿಯಬೇಕೆಂದು. ಗೌರಿಯೊಂದು ಉಪಾಯ ಹೂಡಿದಳು. ರತ್ನಳನ್ನು ಕರೆದು ಮಾತನಾಡಿಸುತ್ತಿದ್ದಾಗ ಮಧ್ಯೆ "ನನ್ನ ತಮ್ಮನನ್ನು ನೋಡಿದೆಯಾ ರತ್ನ" ಎಂದಳು. ರತ್ನ ಏನು ಉತ್ತರ ಕೊಟ್ಟಾಳು!

"ಅವನನ್ನು ಮದುವೆಯಾಗಲು ನಿನಗೆ ಇಷ್ಟವೆ ?"

"............" ಏನೂ ಹೇಳಲು ತೋಚದೆ ರತ್ನ ಸುಮ್ಮನಿದ್ದಳು.

"ರಾಜನೇ ಕೇಳಿದ...." ಎಂದಾಗ ಒಪ್ಪಿದ್ದೇನೆಂದು ತಲೆ ಬಗ್ಗಿಸಿದಳು. ಸ್ವಲ್ಪ ಹೊತ್ತು ಗೌರಿ, ರತ್ನಳನ್ನು ಮಾತನಾಡಿಸುತ್ತಿದ್ದಳು. ರಾಜ ಬಂದುದರಿಂದ ರತ್ನ ಮನೆಯ ಒಳಕ್ಕೆ ಓಡಿದಳು. 'ಅವಳು' ಒಪ್ಪಿದ್ದಾಳೆಂದು ರಾಜನಿಗೆ ತಿಳಿದಾಗ ತುಂಬಾ ಸಂತೋಷವಾಯ್ತು.

ಎಷ್ಟು ಬೇಗ ಎಂದರೂ ಊಟಮಾಡಿ ಗಾಡಿ ಕಟ್ಟುವುದಕ್ಕೆ ಏಳು ಗಂಟೆಯಾಯ್ತು. ಒಳ್ಳೆಯ ಎತ್ತು ಮತ್ತು ಹೊಸ ಗಾಡಿಯಾದ್ದರಿಂದ ಬೇಗನೆ ಸಂಪಿಗೆಹಳ್ಳಿಯನ್ನು ಸೇರುವ ಭರವಸೆಯಿತ್ತು. ಗಾಡಿಯೊಡನೆ ನಡೆಯುತ್ತಾ ಈಶ್ವರೈಯ ಸುಂಕದ ಕಟ್ಟೆವರೆಗೂ ಬಂದು ಹಿಂತಿರುಗಿದ.

ಬೆಳದಿಂಗಳು ಆಗಲೇ ಬರುವ ಸೂಚನೆ ಕಂಡು ಬರುತ್ತಿತ್ತು. ಸಾಲಾಗಿ ಹೋಗುತ್ತಿದ್ದ ನಾಲ್ಕೈದು ಗಾಡಿಗಳ ಹಿಂದೆ ಬೇಗ ಬೇಗನೆ ಗಾಡಿ ಆಳು ಎತ್ತುಗಳನ್ನು ಓಡಿಸಿದ. ಗಾಡಿಯ ಹಿಂಭಾಗದಲ್ಲಿ ರಾಜ ಕುಳಿತಿದ್ದ. ಮುಂದೆ ಕಮಲಮ್ಮ, ಗೌರಿ ಮದುವೆಯ ವಿಷಯ ಮಾತನಾಡುತ್ತಿದ್ದರು. ರಸ್ತೆಯ ಪಕ್ಕದಲ್ಲಿದ್ದ ಮರಗಳ ನೆರಳು ಚೆನ್ನಾಗಿ ಕಾಣುತ್ತಿತ್ತು. ಗಾಡಿ ಮುಂದಕ್ಕೆ ಹೋದಂತೆಲ್ಲಾ, ನೋಡಿದ ವಸ್ತುಗಳು ಹಿಂದಕ್ಕೆ ಓಡುತ್ತಿದ್ದವು. ರಾಜ ಹೆಚ್ಚಾಗಿ ರತ್ನಳನ್ನೇ ಕುರಿತು ಯೋಚಿಸುತ್ತಿದ್ದ. ಹೋಗಲಿ! ರೋಹಿಣಿಗಿಂತಲೂ ರತ್ನ ಸುಂದರಿ. ರತ್ನ ತನಗೆ ತಕ್ಕ ಹೆಂಡತಿ. ಆ ಪುಟ್ಟ ಮುಖದಲ್ಲಿ

ಎಷ್ಟು ಬೆಳಕನ್ನು ತುಂಬಿಬಿಟ್ಟು ಕೊಂಡಿದ್ದಾಳೆ ರತ್ನ ! ಅವಳನ್ನು ನೋಡಿದ ತಕ್ಷಣ ಅನ್ನಿಸಿಬಿಡುವುದು-ಆಡಂಬರವಿಲ್ಲದ ಸರಳಜೀವನ ಬಯಸುವಳೆಂದು. ತಾನು ರೋಹಿಣಿಗೆ ಒಂದು ಸಾರಿ ಹೇಳಿದ್ದ ಮಾತುಗಳು ಜ್ಞಾಪಕಕ್ಕೆ ಬಂತು. ರೋಹಿಣಿ ತನ್ನನ್ನು ಮರೆತು ಬಿಡುವುದು ಕ್ಷೇಮವೆಂದು–ಈಗ ರತ್ನಳನ್ನು ಮದುವೆ ಆದರೆ ರೋಹಿಣಿಯನ್ನು ತಾನು ಮರೆತಂತೆ. ಆದರೆ !

ಗಾಡಿ ಆಗಲೆ ಮೂರು ಮೈಲಿ ದೂರ ಬಂದಿತ್ತು. ಸುಬ್ಬಣ್ಣ ಗಾಡಿ ಹೊಡೆಯುವ ಆಳಿನೊಡನೆ ಮಳೆ ಬೆಳೆಯ ವಿಚಾರ ಮಾತನಾಡುತ್ತಿದ್ದ. ಗೌರಿ ಸರಸಳನ್ನು ರಾಜನ ಹತ್ತಿರ ಬಿಟ್ಟಳು. ರಾಜ ಅವಳನ್ನು ತೊಡೆಯ ಮೇಲೆ ಕೂರಿಸಿಕೊಂಡು ನಗಿಸುತ್ತಿದ್ದ.

"ಆ ಕೈಮರದ ತಾವು ತಿರುಗಿಸಿಕೊಂಡು ಬಿಡು" ಎಂದು ಸುಬ್ಬಣ್ಣ ಹೇಳಿದ ಮೇಲೆ ಗಾಡಿ ಬಲಕ್ಕೆ ತಿರುಗಿತು. ಸಣ್ಣ ದಾರಿಯಾದ್ದರಿಂದ ಗಾಡಿ ತುಂಬಾ ಕುಲುಕಿತು. ಅರ್ಧ ಮೈಲಿ ಬಂದಮೇಲೆ ಗಾಡಿ ಸುಬ್ಬಣ್ಣನ ಮನೆಯ ಮುಂದೆ ಬಂದು ನಿಂತಿತು. ಕರಿಯ ಗಾಡಿಯ ಹತ್ತಿರ ಓಡಿ ಬಂದು ಸಾಮಾನು ತೆಗೆದುಕೊಂಡು ಮನೆಯ ಒಳಗಿಟ್ಟ. ಎಲ್ಲರೂ ಬೆಳದಿಂಗಳಲ್ಲಿ ಸ್ವಲ್ಪ ಹೊತ್ತು ಮಾತನಾಡುತ್ತಾ ಕುಳಿತಿದ್ದು ಮಲಗಿಬಿಟ್ಟರು.

ಮಾರನೆಯ ದಿನ ಕಮಲಮ್ಮ ಸಂಪಿಗೆಹಳ್ಳಿಯಲ್ಲಿದ್ದ ತನ್ನ ಗುರುತಿನವರ ಮನೆಗೆಲ್ಲಾ ಹೋಗಿ ಬಂದಳು. ರಾಜನ ಮದುವೆ ಗೊತ್ತಾಗಿರುವುದನ್ನು ಎಲ್ಲರಿಗೂ ತಿಳಿಸಿದಳು. ಗೌರಿ ಮಾತ್ರ ಯಾರ ಮನೆಗೂ ಹೋಗಲಿಲ್ಲ. ರಾಜನನ್ನು ಕರೆದುಕೊಂಡು ಸುಬ್ಬಣ್ಣ ತಮ್ಮ ಗದ್ದೆ ತೋಟದಕಡೆ ಹೋಗಿದ್ದ. ತೋಟದಲ್ಲಿ ಬೇಕಾದಷ್ಟು ಎಳನೀರು ಕುಡಿದಿದ್ದಾಯ್ತು. ಸ್ವಲ್ಪ ಬಾಳೆ ಎಲೆ ಕೊಯ್ದು ಸುಬ್ಬಣ್ಣ ಮನೆಗೆ ಬಂದ. ಒಂದೆರಡು ದಿನ ಸಂಪಿಗೆಹಳ್ಳಿಯಲ್ಲಿದ್ದು ಅನಂತರ ಮೈಸೂರಿಗೆ ಹೋಗುವುದು ಎಂದುಕೊಂಡರು.

## ೧೯

ಇಂದು ಪಟ್ಟಣದ ಈಶ್ವರೈಯನ ಮಗಳು ರತ್ನಳ ಮದುವೆ. ಮಂಗಲ ವಾದ್ಯಗಳು ಮೊಳಗುತ್ತಿವೆ. ಬಂಧು-ಬಳಗದವರ ಸಡಗರ ಹೇಳತೀರದು. ಸಣ್ಣ ಹುಡುಗರು ಮನೆಯ ಮುಂದಿನ ಜಗುಲಿಯಮೇಲೆ ಕುಳಿತು ಆಟ

ಆಡುತ್ತಿದ್ದರು. ಕೆಲವರು ಬಾಳೆಎಲೆಯಿಂದ ಪೀಪಿಮಾಡಿ ಪಾಲಗದವರನ್ನು ಸೋಲಿಸಲು ಪ್ರಯತ್ನ ಪಡುತ್ತಿದ್ದರು.

ಮನೆಯೊಳಗೆ ಎರಡು ತಂಡ. ಒಂದು ಅಡಿಗೆಯ ಏರ್ಪಾಟು; ಮತ್ತೊಂದು ಕಡೆ ಹಸೆ ಜಗುಲಿಯ ಗಜಗುಜು. ಕಮಲಮ್ಮ ನಡುಮನೆಯಲ್ಲಿ ಕುಳಿತು ವಿಧಿಯ ವೈಚಿತ್ರವನ್ನು ನೆನೆಯುತ್ತಿದ್ದಳು. ಮೊದಲಿನಿಂದಲೂ ಆಗುತ್ತೆ ಎಂದು ತಿಳಿದಿದ್ದ ಸಂಬಂಧ ನಿಮಿಷದಲ್ಲಿ ತಪ್ಪಿ, ತಮಗೆ ಅನುಕೂಲವಾಗಿ ಈ ಸಂಬಂಧ ಕೂಡಿಬಂದು ಮಾತಾದ ಎರಡು ತಿಂಗಳಲ್ಲೇ ಮದುವೆ ನೆರವೇರುವುದು ಆಶ್ಚರ್ಯದ ಸಂಗತಿಯೇ ಆಗಿತ್ತು. ಅಂತೂ ರಾಜನಿಗೂ ರತ್ನಳಿಗೂ ಕಂಕಣ ಕೂಡಿ ಬಂತು. ಧಾರೆಯ ಮಧ್ಯಾನ್ಹ ಗಂಡಿನ ಮತ್ತು ಹೆಣ್ಣಿನ ಕಡೆಯವರ ಸಂಭ್ರಮ ಹೇಳತೀರದು. ಅಲ್ಲಲ್ಲೇ ಸಣ್ಣ ಗುಂಪಾಗಿ ಕುಳಿತು ಮಾತನಾಡುತ್ತಿದ್ದರು. ಎಲ್ಲರಿಗಿಂತಲೂ ಹಿರಿಯನಾದ ಸುಬ್ಬಣ್ಣನೇ ಎರಡು ಕಡೆಯವರ ಕೆಲಸಗಳನ್ನು ವಹಿಸಿಕೊಂಡಿದ್ದ. ಸುಬ್ಬಣ್ಣ ಕೇಳಿದಾಗಲೆಲ್ಲ ನೀರಿನಂತೆ ಖರ್ಚು ಮಾಡುವುದು ಈಶ್ವರೈಯನ ಕೆಲಸ-ಅಷ್ಟೆ. ಹೆಂಗಸರು ಧಾರೆಗೆ ಕರೆತಂದ ರತ್ನಳನ್ನು ಟೀಕೆ ಮಾಡುತ್ತಿದ್ದರು. ಗಂಡಸರಲ್ಲಿ ಕೆಲವರಿಗೆ ಹೊತ್ತಾದ್ದರಿಂದ ಊಟದ ಕಡೆ ಗಮನವಿದ್ದಂತೆ ಕಾಣುತ್ತೆ-ಬೇಗ ತಾಳಿಕಟ್ಟಿದ ಶಾಸ್ತ್ರ ಮುಗಿದರೆ ಊಟ ಗಿಟ್ಟಿಸಬಹುದೆಂದು ಎದುರುನೋಡುತ್ತಿದ್ದರು. ಹಸೆಯ ಜಗುಲಿಯ ಹತ್ತಿರ ಇದ್ದವರಲ್ಲದೆ ಇತರರು ತಮಾಷೆಯಾಗಿ ಮಾತನಾಡುತ್ತಿದ್ದರು. ಪುರೋಹಿತರು ಘಂಟಾನಾದವನ್ನು ಮಾಡುತ್ತಾ ಜೋರಾಗಿ ಹೇಳುತ್ತಿದ್ದ ಮಂತ್ರಪಠನದಿಂದ ಇನ್ನೇನು ವಧೂವರರು ಹಸೆಯಮೇಲೆ ಪಕ್ಕಪಕ್ಕದಲ್ಲಿ ನಿಲ್ಲುವರೆಂದು ತಿಳಿದು ಕಮಲಮ್ಮ ಕತ್ತೆತ್ತಿ ನೋಡಿದಳು. ರಾಜ-ರತ್ನ, ನೂತನ ದಂಪತಿಗಳು ಅಚ್ಚುಮೆಚ್ಚಾಗಿ ನಿಂತಿದ್ದಾರೆ. ಹಾಕಿಕೊಂಡಿದ್ದ ಜರಿಯಪೇಟ ರಾಜನಿಗೆ ಒಪ್ಪುತ್ತಿತ್ತು. ಇಬ್ಬರಿಗೂ ಏನು ಪಾರಿಗೆ! ರಾಜ ತನ್ನ ತೋಳನ್ನು ರತ್ನಳ ಸುತ್ತಾ ಬಳಸಿ ಕಮಲದ ದಂಟಿನಂತಿದ್ದ ರತ್ನಳ ಕೊರಳಿಗೆ ತಾಳಿ ಕಟ್ಟಿದ. ಮಂಗಳವಾದ್ಯ ಘೋಷಿಸುತ್ತಿತ್ತಲ್ಲದೆ ಹೆಣ್ಮಕ್ಕಳು ಹಾಡುತ್ತಿದ್ದರು. ಮಾಂಗಲ್ಯಧಾರಣೆ ಶಾಸ್ತ್ರವಾಯಿತ್ತು. ರಾಜನ ಮದುವೆ ಆದಂತೆಯೆ-ಇನ್ನು ಅವನು ಗೃಹಸ್ಥನಾದ. ಕಮಲಮ್ಮನಿಗೆ ಕಣ್ತುಂಬಿ ಬಂತು. ಅವಳಿಗೆ ಇನ್ನೊಂದು ವಿಷಯ ಜ್ಞಾಪಕಕ್ಕೆ ಬಂತು. ಕಪನಿಪತಯ್ಯನೊಡನೆ ತನ್ನ

ಮನೆ ಮಾಡುವುದು ಕಣ್ಮುಂದೆ ಹಾದು ಹೋಯ್ತು. ಆಗಿನ್ನೂ ಚಿಕ್ಕ ವಯಸ್ಸು, ಏನೋ ಹುಡುಗಾಟ. ಪುರೋಹಿತರು ಹೇಳಿದಂತೆ ನಡೆದುಕೊಳ್ಳು ವುದು, ಅಷ್ಟೆ. ರಾಜನನ್ನು ನೋಡಿದಾಗ ತನ್ನ ಪತಿಯ ಜ್ಞಾಪಕ ಬಂತು. ಅದೇ ತುಂಬಿದ ಮುಖ....ಕೆರಿಹೋದ ಮುಂಚೆ ಕಸಸಿಪತಯ್ಯ ಅವಳಿಗೆ ಒಂದು ಮಾತು ಹೇಳಿದ್ರು; ಜ್ಞಾಪಿಸಿಕೊಂಡಳು. "ಅವನಿಗೊಂದು ಮದುವೆ ಮಾಡಿ ಸೊಸೆ ಮನೆಗೆ ಬಂದರೆ ತೀರಿತು. ನಿನ್ನ ಜೀವಮಾನವೆಲ್ಲಾ ಕಾಪಾ ಡ್ತಾನೆ" ಎಂದು. ನೂತನ ದಂಪತಿಗಳು ಹಿರಿಯರಿಗೆಲ್ಲಾ ನಮಸ್ಕಾರ ಮಾಡಿ ಕಮಲಮ್ಮನ ಹತ್ತಿರ ಬಂದಾಗ ಅವಳಿಗೆ ಎಚ್ಚರವಾಯ್ತು. ಇಬ್ಬರೂ ಕಮ ಲಮ್ಮನ ಎರಡು ಕಾಲನ್ನೂ ಮುಟ್ಟಿ ನಮಸ್ಕಾರ ಮಾಡಿದರು. ರತ್ನ ನಮ ಸ್ಕಾರ ಮಾಡಿ ಏಳುವಾಗ್ಗೆ ಅವಳ ಕೈಮೇಲೆ ಒಂದು ತೊಟ್ಟು ಬಿಸಿಕಣ್ಣೀರು ಬಿತ್ತು. ಕಮಲಮ್ಮ ರತ್ನಳ ಬೆನ್ನು ಸವರಿದ್ದಲ್ಲದೆ ಮಾತನಾಡಲು ಅವಳಿಗೆ ಬಾಯೇ ಬರಲಿಲ್ಲ. ಬೆಳಗಿನ ಶಾಸ್ತ್ರ ಇನ್ನೂ ಮುಗಿಯದಿದ್ದರೂ ರಾಜನಿಗೆ ಸದ್ಯಕ್ಕೆ ಹಸೆಯ ಜಗುಲಿಯಿಂದ ಬಿಡುಗಡೆಯಾಯ್ತು.

ತನ್ನ ಸ್ನೇಹಿತ ವೆಂಕಟೇಶ ಬಂದಿದ್ದಾನೆಂದು ಈಶ್ವರೈಯ ತಿಳಿಸಿದರು. ರಾಜ ಮುಂದಿನ ಕೋಣೆಗೆ ಬಂದಾಗ ವೆಂಕಟೇಶ ಕೋಟನ್ನು ಬಿಚ್ಚುತ್ತಿದ್ದ. ರಾಜನನ್ನು ನೋಡಿ "ಓ! ಯಜಮಾನ್ರಿಗೆ ನಮಸ್ಕಾರ" ಎಂದ.

"ಏಕೆ ಲೇಟಾಗಿ ಬಂದೆ ವೆಂಕಟೇಶ?"

"ಬೆಳಿಗ್ಗೆ ಹೊರಟದ್ದೇ ಹೊತ್ತಾಯಿತು. ಕ್ಯಾಮರಾಕ್ಕೆ ಫಿಲ್ಮು ಸಿಗ ಬೇಕಾದರೆ ೯ ಘಂಟೆಯಾಯ್ತು.

"ಸರಿ! ಸ್ವಲ್ಪ ಕಾಫಿ ಕಳಿಸ್ತೀನಿ ಮೊದ್ಲು...."

"ನಿನ್ನ ಉಪಚಾರ ಇರ್‍ಲಿ ತಡಿಯಮ್ಮ...."

ಆಗಲೆ ಉಪ್ಪಿಟ್ಟು ಕಾಫಿ ತೆಗೆಸಿಕೊಂಡು ಈಶ್ವರೈಯ ಬಂದರು. ರಾಜ ವೆಂಕಟೇಶನನ್ನು ಪರಿಚಯ ಮಾಡಿಕೊಟ್ಟ. ಸ್ವಲ್ಪ ಹೊತ್ತಿನನಂತರ ಹಸೆಯ ಮೇಲೆ ಬರಬೇಕೆಂದು ಪುರೋಹಿತರ ಕರೆ ಬಂತು.

ರಾಜ, ರತ್ನ ಹಸೆಯಮೇಲೆ ಕುಳಿತರು. ಆಶೀರ್ವಾದವಾಗಿ ಓದಿಸು ವುದಾಯ್ತು. ನೆಂಟರಿಷ್ಟರು ವಧೂವರರಿಗೆ ಉಡುಗರೆ ಓದಿಸಿದರು. ವೆಂಕ ಟೇಶನಾಗಲೆ ಶಲ್ಯವನ್ನು ಹೊದ್ದು ಬಂದು ಕುಳಿತಿದ್ದ. ಒಂದು ಸೀರೆಯನ್ನು

ಒಂದು ಪೆಟ್ಟಿಗೆಯನ್ನೂ ಪುರೋಹಿತರ ಕೈಲಿಕೊಟ್ಟು ಏನನ್ನೋ ಹೇಳಿದ. ಪುರೋಹಿತರು ಸೀರೆಯನ್ನು ವಧುವಿಗೂ ಕೈಗಡಿಯಾರವನ್ನು ರಾಜನಿಗೂ ಕೊಟ್ಟು ಆನಂದರಾಯರು 'ಓದಿಸಿ'ರುವರೆಂದು ತಿಳಿಸಿದರು. ರಾಜ ವೆಂಕಟೇಶನನ್ನು ಆಶ್ಚರ್ಯದಿಂದ ನೋಡಿದ. ಆ ಮೇಲೆ ತಿಳಿಸುವೆನೆಂದು ವೆಂಕಟೇಶ ಸನ್ನೆ ಮಾಡಿದ. ಆಗ ರಾಜನಿಗೆ ರೋಹಿಣಿಯ ಜ್ಞಾಪಕಬಂತು. ಅವಳ ಹಣೆಗೆ ಭಾಷಿಂಗ ಮತ್ತು ಕೊರಳಿಗೆ ಮಂಗಳಸೂತ್ರವನ್ನೂ ಕಟ್ಟಿದ್ದಂತೆ ಕಲ್ಪಿಸಿಕೊಂಡು ರತ್ನಳ ಕಡೆ ನೋಡಿದ. ರತ್ನಕೂಡ ರಾಜನನ್ನು ನೋಡಲು ಪ್ರಯತ್ನಿಸಿ ಅವನ ನೋಟಕ್ಕೆ ಸಿಕ್ಕಿಬಿದ್ದಳು. ಆಗ ಅವನಿಗೆ ಅನ್ನಿಸಿತು.–ರೋಹಿಣಿ ರತ್ನಳಷ್ಟು ಚೆನ್ನಾಗಿಲ್ಲವೆಂದು. ಹೆಂಗಸರು ಮಧ್ಯೆ ನಕ್ಕಾಗ ರಾಜ ಪುರೋಹಿತರ ಕಡೆಗೆ ತಿರುಗಿದ. ಅವನಿಗೆ ವೆಂಕಟೇಶ ಓದಿಸಿದ Pen Setನ್ನು ಕೊಟ್ಟರು. ವಧುವಿಗೆ ಗಿರಿಜೆ ಒಂದು ಬೆಳ್ಳಿಯ ಪಂಚವಾಳ ಓದಿಸಿದ್ದಳು. ಅಲ್ಲಿಗೆ ಬೆಳಗಿನ ಶಾಸ್ತ್ರ ಮುಗಿದು ಊಟಕ್ಕೆ ಎಲೆ ಹಾಕಲು ಪ್ರಾರಂಭಿಸಿದರು.

ರಾಜನಿಗೆ ರೋಹಿಣಿ ಕಳುಹಿಸಿದ ಉಡುಗರೆಯ ಇಂಗಿತ ಅರ್ಥವಾಗಲಿಲ್ಲ. ಮುಂದಿನ ಕೋಣೆಯಲ್ಲಿ ವೆಂಕಟೇಶನೊಡನೆ ಮಾತನಾಡುತ್ತಿದ್ದ.

" ಗಿರಿಜೆ ಕೈಲಿ ಕಳುಹಿಸಿದಳು....ಪಾಪ ! "

" ನನಗೆ ಆಶ್ಚರ್ಯ.... "

" ಅವಳಿಗೇನೂ ಸುಖವಿದ್ದಂತೆ ಕಾಣುವುದಿಲ್ಲ ರಾಜ........ಗಿರಿಜೆ ಹೇಳ್ತಾಳಲ್ಲ. "

" ........ನಾವು ಏನು ಮಾಡುವುಕ್ಕಾಗುತ್ತೆ.... "

" ನೀವು ಎದ್ದು ಬಿಡಿ ಊಟಕ್ಕೆ" ಎಂದು ಈಶ್ವರೈಯ ವೆಂಕಟೇಶನಿಗೆ ಹೇಳಿದರು. ಅವನು ಎಲ್ಲರ ಜೊತೆಯಲ್ಲಿ ಊಟಕ್ಕೆ ಕುಳಿತ. ಒಂದು ಲೋಟ ಪಾನಕ ಕುಡಿದು ರಾಜ ಮುಂದಿನ ಕೋಣೆಯಲ್ಲಿ ಮಲಗಿಕೊಂಡ. ತುಂಬಾ ಆಯಾಸವಾಗಿದ್ದುದರಿಂದ ಜೊಂಪು ಹತ್ತಿತು. ಅವನ ಮನಸ್ಸಿನಲ್ಲಿ ಎರಡು ಚಿತ್ರ ನಿಂತಿತು––ರತ್ನ, ರೋಹಿಣಿ !

ನಾಲ್ಕುದಿನದ ಮದುವೆ ಸಾಂಗವಾಗಿ ಜರುಗಿತು. ನಾಗವಲ್ಲಿಯದಿನ ಅಳಿಯನಿಗೆ ಕೊಟ್ಟ ಉಡುಗರೆ ಕಮಲಮ್ಮನಿಗೆ ಮಾತನಾಡದಂತೆ

ಮಾಡಿತ್ತು. ಅವರು ಮಾತಾಡಿದ್ದಕಿಂತ ಹೆಚ್ಚಾಗಿಯೇ ಕೊಟ್ಟರು. ನಾಗವಲ್ಲಿಯಾದಮೇಲೆ ವೆಂಕಟೇಶ ನೂತನ ದಂಪತಿಗಳ ಫೋಟೋ ತೆಗೆದ. ಸಾಯಂಕಾಲ ಮೆರವಣಿಗೆ. ನಾಲ್ಕೈದು ಗ್ಯಾಸ್‌ಲೈಟು ವಧೂವರರ ಮುಖಗಳನ್ನು ಎಲ್ಲರಿಗೂ ಕಾಣಿಸುವಂತೆ ಬೆಳಗುತ್ತಿದ್ದವು. ಏಳು ಗಂಟೆಗೆಲ್ಲಾ ಮೆರವಣಿಗೆ ಹೊರಟಿತು. ನಾಲ್ಕೈದು ಬೀದಿ ಸುತ್ತಿದಮೇಲೆ ರಾಮದೇವರ ಗುಡಿಗೆ ಬಂದು ಮಂಗಳಾರತಿ ಮಾಡಿಸಿಕೊಂಡು ಮನೆಗೆ ಹಿಂತಿರುಗುವ ಹೊತ್ತಿಗೆ ಒಂಭತ್ತು ಗಂಟೆಯಾಯ್ತು. ರಾತ್ರಿ ಆರತಿ – ಆ ದಿನ ಸರಸುವಿನ ಗಲಾಟೆ ತುಂಬಾ. ರತ್ನಳ ತೊಡೆಯಮೇಲೆ ಕುಳಿತುಕೊಳ್ಳುವಳು. ಅವಳಿಗೆ ಕುಂಕುಮ ಇಟ್ಟು ಆರತಿ ಮಾಡುತ್ತೇನೆಂದು ಬರಿ ತಟ್ಟೆಯನ್ನು ತೂಗುವಳು. ಒಳ್ಳೆಯ ಹುಡುಗಿ!

ಮಾರನೆಯದಿನ ಬೀಗರಿಗೆ ಔತಣ. ಜಿಲೇಬಿ, ಶಾವಿಗೆಖೀರು, ಆಂಬೊಡೆ ಮಾಡಿದ್ದರು. ಊಟ ಮುಗಿಯುವ ಹೊತ್ತಿಗೆ ಎರಡು ಗಂಟೆಯಾಯ್ತು. ಬೀಗರಿಗೆ ವೀಳ್ಯಕೊಡುವ ಹೊತ್ತಿಗೆ ಜಮಖಾನ ಹಾಸಿದ್ದ ಗಾಡಿ ಮನೆಯ ಮುಂದೆ ಬಂದು ನಿಂತಿತು. ಬೀಗರ ಸಾಮಾನೆಲ್ಲ ಗಾಡಿಯಲ್ಲಿಟ್ಟಾದ ಮೇಲೆ ಕಮಲಮ್ಮ, ಸರಸು, ಗೌರಿ ಗಾಡಿಯನ್ನು ಹತ್ತಿದರು. ರಾಜ ಒಂದೆರಡು ನಿಮಿಷ ಈಶ್ವರೈಯ್ಯನ ಹತ್ತಿರ ಮಾತನಾಡಿ ಅನಂತರ ಗಾಡಿಯನ್ನು ಹತ್ತಿದ. ಗಾಡಿಯು ಮುಂದಕ್ಕೆ ಹೊರಟಿತು. "ನಾಲ್ಕು ದಿನಕ್ಕೆ ಮೈಸೂರಿಗೆ ಬರ್ತೇನೆ" ಎಂದು ಸುಬ್ಬಣ್ಣ ತನ್ನ ಮನೆಯ ಕಡೆ ಹೊರಟ. ಗಾಡಿ ನಿಧಾನವಾಗಿ ಹೋಗುತ್ತಿದ್ದುದನ್ನು ಕಾಣಬಹುದಿತ್ತು.

ಮುಂದಿನ ಕೋಣೆಯ ಕಿಟಕಿಯಲ್ಲಿ ರತ್ನ ಗಾಡಿಯನ್ನೇ ನೋಡುತ್ತಿದ್ದಳು. ಗಾಡಿ ಮರೆಯಾಗುವ ವರೆಗೂ ಅದನ್ನೇ ನೋಡುತ್ತಿದ್ದು ನಿಟ್ಟುಸುರು ಬಿಟ್ಟು ಹಿಂತಿರುಗುವಾಗ್ಗೆ ಲೀಲ ಮತ್ತು ರತ್ನಳ ತಂಗಿ ಅವಳ ಕೈಹಿಡಿದು ನಕ್ಕುಬಿಟ್ಟರು. ಅವರಿಗೆ ತಿಳಿದುಬಿಟ್ಟಿತಲ್ಲ ಎಂದು ತುಂಬಾ ನಾಚಿಕೆಯಾಗಿ ರತ್ನಳ ಮುಖ ಕೆಂಪೇರಿತು. ಲೀಲ ಆಗಲೇ ಮನೆಯವರಿಗೆಲ್ಲಾ ಈ ಸುದ್ದಿಯನ್ನು ಹಬ್ಬಿಸಿದ್ದಳು. ಕೆಲವರು ಅವಳನ್ನು ಹಾಸ್ಯಮಾಡುತ್ತಿದ್ದರು. ರತ್ನ ಳೇಕೋ ಅಂದು ಸಪ್ಪಗಿದ್ದಳು. ರತ್ನಳ ತಾಯಿ ಕೋಣೆಗೆ ಬಂದು "ಅವಳನ್ನು

ಏನು ಗೋಳುಹುಯ್ದು ಕೊಳ್ತೀರಿ ನಡೀರಿ" ಎಂದಮೇಲೆ ಎಲ್ಲಾ ಹೊರಟು ಹೋದರು. ರತ್ನ 'ಅವರನ್ನೇ' ನೆನೆಯುತ್ತಾ ಕುಳಿತುಬಿಟ್ಟಳು.

\+ \+ \+

ಬೇಸಿಗೆರಜದಲ್ಲಿ ಇನ್ನು ಒಂದು ವಾರ ಮಾತ್ರ ಉಳಿದಿತ್ತು. ಎರಡನೆಯ ವರ್ಷವೂ ರಾಜ ಕೃಷ್ಣಸ್ವಾಮಿಯವರ ಮನೆಯಲ್ಲಿ ಇರುವುದು ಸರಿಯಾಗಿ ಕಾಣಲಿಲ್ಲ. ಒಂದು ರೂಮು ಗೊತ್ತುಮಾಡಿಕೊಂಡು ಹೋಟಲಿನಲ್ಲಿ ಊಟ ಮಾಡುವುದೆಂದು ನಿರ್ಧರಿಸಿದ. ಕಮಲಮ್ಮ ಬೀಗರು ಕೊಟ್ಟ ಬೆಳ್ಳಿಯ ಸಾಮಾನು ಮತ್ತು ಬಟ್ಟೆಗಳನ್ನು ಟ್ರಂಕಿನಲ್ಲಿಡುತ್ತಿದ್ದರು. ರಾಜ ಮದುವೆಯ ಸೂಟನ್ನು ಬಿಟ್ಟು ಮಿಕ್ಕ ಬಟ್ಟೆಗಳನ್ನು ಒಳಗಿಡಲು ಕೊಟ್ಟ.

ಕಮಲಮ್ಮ "ಈಗ್ಲೇ ಏಕೆ ಒಳಗಿಡಬೇಕು....ನಾಲ್ಕು ದಿನ ಹಾಕಿ ಕೊಳ್ಳಬಾರದೆ" ಎಂದಳು.

"ಬೇಡಮ್ಮ....ಎಂದಾದರೂ ಹಾಕಿಕೊಳ್ಳೋಣ ಎಂದು ಈ ಸೂಟ್ ಇಟ್ಟುಕೊಂಡಿದ್ದೇನೆ" ಎಂದ ರಾಜ. ಕಮಲಮ್ಮ ಎಲ್ಲಾ ಬಟ್ಟೆಗಳನ್ನು ಟ್ರಂಕಿನಲ್ಲಿಟ್ಟಳು.

ರಾಜ ಬೆಂಗಳೂರಿಗೆ ಹೊರಡುವ ದಿನ ಬಂತು. ಇನ್ನೊಂದು ವರ್ಷ ವಲ್ಲೇನಮ್ಮ ಎಂದು ರಾಜ ತಾಯಿಗೆ ಸಮಾಧಾನ ಮಾಡಿ ಗೌರಿಗೆ ಬೇಕಾದಷ್ಟು ಹೇಳಿ ಬೆಂಗಳೂರಿಗೆ ಹೊರಟ. ಬೆಂಗಳೂರನ್ನು ಸೇರಿದಮೇಲೆ ರೈಲ್ವೆ ನಿಲ್ದಾಣದಿಂದ ಗಾಡಿ ಮಾಡಿಕೊಂಡು ವಿಜ್ಞಾನ ಶಾಲೆಯ ಆವರಣವನ್ನು ಸೇರಿ ಡಾ|| ಕೃಷ್ಣಸ್ವಾಮಿಯವರ ಮನೆಗೆ ಬಂದಾಗ ಮನೆಯಲ್ಲಿ ಶಾರದಮ್ಮ ಮಾತ್ರ ಇದ್ದಳು. ಸಾಮಾನುಗಳನ್ನು ರೂಮಿನಲ್ಲಿಟ್ಟವನೆ ಹಜಾರಕ್ಕೆ ಬಂದು ಶಾರದಮ್ಮನ ಎರಡೂ ಕಾಲನ್ನು ಹಿಡಿದುಕೊಂಡು ನಮಸ್ಕಾರ ಮಾಡಿದ. ರಾಜನಿಗೆ ಒಳ್ಳೆಯದಾಗಲೆಂದು ಶಾರದಮ್ಮ ಹೃದಯಾರ ಹರಸಿದಳು.

"ಕಡೆಗೂ ನೀವು ಬರಲೇಇಲ್ಲ....ಕೊನೆಯ ಪಕ್ಷ ಧಾರೆ ದಿನವಾದರೂ ಬರ್ತೀರಿ ಎಂದಿದ್ದೆ."

"ಹೇಗೆ ಬರುವುದಪ್ಪ....ಖಾಯಿಲೆಯಿಂದ ಎದ್ದವಳು....ಅವರಿಗೂ ಪುರಸತ್ತೇ ಇಲ್ಲ"

"ನನ್ನ ಅಭಿವೃದ್ಧಿಗೆ ನಿಮ್ಮ ಮನಸ್ಸು ಕಾರಣ.... ತಾಯಿಗಿಂತ ಹೆಚ್ಚಾಗಿ ಸಾಕುತ್ತಿದ್ದೀರಿ...."

"ನೀನು ಬುದ್ಧಿವಂತ, ಅಷ್ಟೆ....ಏಳು ಊಟ ಮಾಡುವಾತ ಮೊದಲು" ಎಂದರು. ರಾಜನಿಗೆ ಊಟ ಬೇಡವಾಗಿದ್ದರೂ ಶಾರದಮ್ಮ ಮದುವೆಯ ವಿಷಯ ಕೇಳಲು ಇಷ್ಟಪಟ್ಟಿರುವುದನ್ನು ತಿಳಿದು 'ಆಗಲಿ' ಎಂದು ಊಟಕ್ಕೆದ್ದ. ಬೀಗರ ಪರಿಚಯ, ಉಡುಗೊರೆ, ತನಗೆ ಮಾವ ಕೊಟ್ಟಿದ್ದು....ಏಕೆ-ಸಂಕ್ಷೇಪ ವಾಗಿ ಮದುವೆಯ ವಿವರವನ್ನೆಲ್ಲಾ ಅವನಿಂದ ಬಿಚ್ಚಿಸಿದ್ದರು.

" ಏನಂದುಕೊಂಡೆಯೋ....ಅಡಿಗೆಯಲ್ಲ ಆರಿದೆ.... ಹೊಸ ಅಳಿಯ ನಿಗೆ ಹೀಗೆ ಬಡಿಸಿದೆ."

" ಮಾವನ ಮನೆಯಲ್ಲಿ ಅಳಿಯನಷ್ಟೆ....ನಿಮ್ಮ ಮನೆಯಲ್ಲಿ ನಿಮ್ಮ ಮಗ. " ಎಂದು ರಾಜ ಕೈ ತೊಳೆದುಕೊಂಡು ಬಟ್ಟೆ ಹಾಕಿಕೊಳ್ಳಲು ತನ್ನ ಕೋಣೆಗೆ ಹೋದ. ಶಾರದಮ್ಮ ಕೋಣೆಗೆ ಬಂದು ' ಹುಡುಗಿ ಹೇಗಿದ್ದಾಳೆ ಹೇಳಲೇ ಇಲ್ಲವಲ್ಲಪ್ಪ " ಎಂದಳು.

" ಫೋಟೋ ತೋರಿಸುತ್ತೇನೆ. " ಎಂದು ವೆಂಕಟೇಶ ತೆಗೆದಿದ್ದ ಭಾವ ಚಿತ್ರವನ್ನು ಶಾರದಮ್ಮನ ಕೈಲಿಕೊಟ್ಟ. ಅವಳು ರಾಜ-ರತ್ನರ ಭಾವಚಿತ್ರ ವನ್ನು ನೋಡಿ " ನೀನು ಅದೃಷ್ಟವಂತನಪ್ಪ....ರತ್ನದಂತಹ ಹುಡಿಗಿಯನ್ನು ಮದುವೆ ಮಾಡಿಕೊಂಡೆ " ಎಂದು ನಕ್ಕರು. ಅಷ್ಟುಹೊತ್ತಿಗೆ ಕೃಷ್ಣಸ್ವಾಮಿ ಯವರು ಹುಡುಗರೊಂದಿಗೆ ಬಂದರು. ಶಾರದಮ್ಮ ತನ್ನ ಕೈಯಲ್ಲಿದ್ದ ಭಾವ ಚಿತ್ರವನ್ನು ಗಂಡನ ಕೈಗೆ ಕೊಟ್ಟು " ನೋಡಿದ್ರಾ....ರಾಜಣ್ಣನ ಮದುವೆ ಯಲ್ಲಿ ತೆಗೆಸಿದ ಫೊಟೋ. "

"ಈಗ ಬಂದ್ಯೇನಪ್ಪ....Good....ಒಳ್ಳೆ ವಾರಿಗೆ!" ಎಂದರು. ತಂದೆಯ ಕೈಯಿಂದ ಫೋಟೋವನ್ನು ತೆಗೆದುಕೊಂಡು ಹುಡುಗರು ನೋಡಿದರು.

ಕೃಷ್ಣಸ್ವಾಮಿಯ ಮಗಳು " ರಾಜಣ್ಣನಿಗೆ ಪೇಟ! ಥೂ, ಚೆನ್ನಾಗಿಲ್ಲ " ಎಂದಳು.

" ಅವನ ಹೆಂಡತಿ ನಿನ್ನ ಹಾಗೆ ಇದ್ದಾಳೆ. " ಎಂದಳು ಅವಳ ತಂಗಿ.

" ಸಾಕು ಸುಮ್ನಿರ್ರಿ....ರಾಜಣ್ಣ ಕೋಪಮಾಡಿ ಕೊಂಡಾನು" ಎಂದು ಶಾರದಮ್ಮ ಗದರಿಸಿದ ಮೇಲೆ ಹುಡುಗರು ಸುಮ್ಮನಾದರು. ರಾಜ ತನ್ನ ಕೋಣೆಗೆ ಬಂದು ಯೋಚಿಸಿದ. ಎಷ್ಟು ಒಳ್ಳೆಯಜನ. ಆಕೆಯಂತು ತನ್ನನ್ನು

ಮಗನೆಂದು ಭಾವಿಸಿದ್ದಾಳೆ. ನಾನು ಬೇರೆ ಇರುತ್ತೇನೆಂದು ಹೇಗೆ ತಿಳಿಸು ವುದು ? ಆದರೆ ಈಗ ತಾನು ನಾಲ್ಕು ಜನಕ್ಕೆ ಸರಿಯಾಗಿ ಕಾಣುವಂತೆ ಬಾಳ ಬೇಕು. ಈಗಲೂ ಇಲ್ಲೇ ಇದ್ದರೆ ಐಶ್ವರ್ಯಕ್ಕಾಗಿ ತಾನೇ ಎನೆಂದುಕೊಂಡಾರು? ಬೆಳಿಗ್ಗೆ ಶಾರದಮ್ಮನ ಹತ್ತಿರ ಹೇಳುವುದೆಂದು ಮನಸ್ಸು ಮಾಡಿ ಮಲಗಿಬಿಟ್ಟ.

ಬೆಳಿಗ್ಗೆ ಕಾಫಿಯನ್ನು ಕುಡಿಯುವಾಗ ಮೆಲ್ಲನೆ ಶಾರದಮ್ಮನಿಗೆ ಹೇಳಿದ. ಆಕೆ ತುಂಬಾ ಮರುಗಿದರು. ಏಕಪ್ಪ ಹೋಗಬೇಕು. ಇನ್ನೊಂದು ವರ್ಷವಲ್ಲವೆ ಎಂದು ಹಲುಬಿದರು. ಲೋಕರೀತಿಯನ್ನು ಸೂಕ್ಷ್ಮವಾಗಿ ತಿಳಿಸಿದ ರಾಜನ ಮಾತಿಗೆ ಶಾರದಮ್ಮ ಒಪ್ಪಿ ಕೃಷ್ಣಸ್ವಾಮಿಗೆ ತಿಳಿಸುವು ದಾಗಿ ಹೇಳಿದಳು. ಬೇರೆ ಇದ್ದರೂ ತಮ್ಮ ಮನೆಗೆ ಖಂಡಿತ ಬಂದು ಹೋಗು ತ್ತಿರುವಂತೆ ಭಾಷೆ ತೆಗೆದುಕೊಂಡಳು.

ರಾಜ ಕ್ಲಾಸಿಗೆ ಹೋದಾಗ ಸಹಜವಾಗಿ ರೇಣುಕಾದೇವಿಯಂತೂ ತುಂಬಾ ಗೇಲಿಮಾಡಿದಳು. ಕೆಲವು ಸ್ನೇಹಿತರು ಕಾಫಿ ತಿಂಡಿಯನ್ನು ಕೊಡಿಸ ಬೇಕೆಂದು ಒತ್ತಾಯಪಡಿಸಿದರು. ಎಲ್ಲರಿಗೂ ಅಚ್ಚು ಮೆಚ್ಚಾಗಿ ನಡೆದು ಕೊಳ್ಳಲು ರಾಜನಿಗೇನೂ ಹೊಸದಾಗಿರಲಿಲ್ಲ. ರಾಜ ಮನೆಗೆ ಬಂದಾಗ ಕೃಷ್ಣಸ್ವಾಮಿಯೊಡನೆ ಶಾರದಮ್ಮ ಮಾತನಾಡುತ್ತಿದ್ದಳು.

"ಅದೇಕೆ ಹಾಗೆ ಹೇಳಿದ....ಅವನನ್ನು ಸರಿಯಾಗಿ ವಿಚಾರಿಸುತ್ತಿರ ಲಿಲ್ಲವೆ ?"

"ಇಲ್ಲ ಅಂದ್ರೆ....ಮದುವೆಯಾದ ಮೇಲೂ ಏಕೆ ಇದ್ದ...."

"ಅದೇ ಕಾರಣ ಇರಲಾರದು.... ನೀನೇನಾದರೂ ಅಂದ್ಯೇನು.... ?"

ಶಾರದಮ್ಮನಿಗೆ ದುಃಖ ಬಂತು. ಪಾಪ ! ರಾಜನ ವಿಷಯದಲ್ಲಿ ಹಾಗೆ ನಡೆದು ಕೊಂಡಿದ್ದಳೆ ? ಈ ಸಂಕಷ್ಟ ನೋಡಿ ರಾಜನೇ ಅವರ ಮಾತಿನ ಮಧ್ಯೆ ಬಂದು ನಿಜ ಕಾರಣವನ್ನು ತಿಳಿಸಿದ. ಕೃಷ್ಣಸ್ವಾಮಿಯವರು ಮೊದಲು ಒಪ್ಪದಿದ್ದರೂ ರಾಜ ಹೇಳಿದ್ದು 'ಸರಿ' ಎಂದು ತೋರಿತು. ಮದುವೆಯಾದ ಮೇಲೆ ನಾಲ್ಕು ಜನಕ್ಕೆ ಸರಿಯಾಗಿ ಕಂಡು ಬರುವಾತಿರಬೇಕಾದರೆ ಬೇರೆ ಇರುವುದು ಒಳ್ಳೆಯದಲ್ಲವೆ, ಅಲ್ಲದೆ ಮಾವ ತಾನೆ ಏನೆಂದು ಕೊಂಡಾರು?"

"ಸರಿಯಪ್ಪ, ನಿನ್ನಿಷ್ಟ....ಬೇರೆ ರೂಮಿನ ಬದಲು ಹಾಸ್ಟೆಲಲ್ಲೇ ಇದ್ದು ಬಿಡು"ಎಂದರು. ರಾಜನಿಗೆ ಅದೇ ಸರಿಯೆಂದು ತೋರಿತು. ಹೌದು. ಹಾಸ್ಟ ಲಿರುವಾಗ ರೂಮಿನಲ್ಲಿ ಏಕೆ ಒದ್ದಾಡಬೇಕು ?

## ೨೦

" ಆ ಕಾಗದಗಳನ್ನೇಕೆ ತೆಗೆದುಕೊಂಡ್ರಿ ? ಬೇಡಿ, ಕೊಟ್ಟುಬಿಡಿ ! " ವಿಶ್ವನಾಥನ ಕೈಲಿದ್ದ ನಾಲ್ಕೈದು ಕಾಗದಗಳನ್ನು ರೋಹಿಣಿ ಕಿತ್ತುಕೊಳ್ಳಲು ಪ್ರಯತ್ನಪಟ್ಟಳು.

" ಈಗ ಗುಟ್ಟು ರಟ್ಟಾಗುತ್ತದೆ ; ಅಲ್ಲವೆ.... " ?

" ಖಂಡಿತ ಬೇಡಿ.... ಇಲ್ಲಿ ಕೊಡಿ "

" ಅದೇಕೆ ನೋಡಕೂಡದು.... ? "

" ಅವು ನನಗೆ ಬರೆದಿರುವುದರಿಂದ. "

" ನಿನಗೆ ಬರೆದವೇನು.... ಓ ! "

" ಗೊತ್ತಿದ್ದೂ ತಿರುಗಿ ತೆಗೆದುಕೊಂಡಿದ್ದೀರಲ್ಲ "

" ಹೌದು.... "

" ಬೇರೆಯವರಿಗೆ ಬರೆದ ಕಾಗದಗಳನ್ನು ಓದುವುದು ಸಭ್ಯತನವೆನೋ ! "

" ಸಭ್ಯತನ ! ಸಭ್ಯತನವಲ್ಲವೆ....? " ಎಂದು ಕಾಗದಕಿತ್ತುಕೊಳ್ಳಲು ಬಂದ ರೋಹಿಣಿಯನ್ನು ವಿಶ್ವನಾಥ ತಳ್ಳಿದ. ಒಂದು ಕಾಗದದ ಚೂರು ಮಾತ್ರ ಹರಿದು ತನ್ನ ಕೈಗೆ ಬಂತು. ರೋಹಿಣಿ ನಿಸ್ಸಹಾಯಕಳಾಗಿ ಮುಖವನ್ನು ಕೈಯಿಂದ ಮುಚ್ಚಿಕೊಂಡು ಅತ್ತಳು. ವಿಶ್ವನಾಥ ಕೋಪದಿಂದ ಕಾಗದಗಳನ್ನು ಓದಿಕೊಂಡ. ರಾಜನ ಪ್ರೇಮವನ್ನು ಯಾಚಿಸಿ ಬರೆದುದಲ್ಲದೆ ವಿಶ್ವನಾಥನನ್ನು ಟೀಕಿಸಿ ಬರೆದ ಕಾಗದವನ್ನೋದಿದ ವಿಶ್ವನಾಥ ಕೆಂಡದಂತಾದ

" ನೋಡಿದ್ಯ.... ನಿನ್ನ ಸಭ್ಯತನವನ್ನು.... ? "

" .... .... " ರೋಹಿಣಿ ಅಳುತ್ತಿದ್ದಳು.

" ಇದಕ್ಕೆ ಏನು ಉತ್ತರ ಕೊಡುತ್ತೀ.... " ವಿಶ್ವನಾಥ ಕಾಗದಗಳನ್ನು ಮುದುರಿ ರೊಹಿಣಿಯ ಹತ್ತಿರ ಎಸೆದ.

" ನನಗೆ ಸರಿಯೆಂದ ತೋರಿತು.... ಹಾಗೇ ಬರೆದೆ.... "

" ನಾಲ್ಕು ಜನರ ಸೂಳೆಯಾಗಿರುವುದು ಸರಿಯೆಂದು ಕಂಡಿತೋ ? "

" ಸಾಕು .... ಬಾಯಿಗೆ ಬಂದಂತೆ ಮಾತನಾಡಬೇಡಿ.... "

" ನನಗೆ ಅರ್ಥವಾಗುತ್ತಿತ್ತಿ.... ನನ್ನನ್ನು ಕಂಡರೆ ಏಕೆ ಅಷ್ಟು ಅಲಕ್ಷ್ಯ ವೆಂದು."

" ನಾನು ಅಲಕ್ಷಿಸುತ್ತಿಲ್ಲ.... ಜೀವಮಾನವೆಲ್ಲಾ ನಿಮ್ಮೊಡನೆ ಬಾಳ ಬೇಕು.... ಹೇಗೆ ಅಲಕ್ಷಿಸಲಿ... "

" ಎಲ್ಲಾ ಮೋಸ ....ಮಗಳು ಮಾತ ವಂತೆ ಮಾತನಾಡುತ್ತೀ. "

".... .... ...."

" ಪ್ರೇಮವಿರಲಿ ಬಿಡಲಿ.... ಪ್ರೀತಿಸಲಿ ಬಿಡಲಿ ನನ್ನನ್ನು ಮದುವೆ ಯಾದೆ ಅಲ್ಲವೆ ? "

ವಿಶ್ವನಾಥನ ಚುಚ್ಚು ಮಾತು ರೋಹಿಣಿಯ ದುಃಖವನ್ನು ಹೆಚ್ಚಿಸಿತು. ಅವಳು ಬಿಕ್ಕಳಿಸಿ ಅತ್ತಳು.

" ಒಂದೇ ಮಾತಿನಲ್ಲಿ ಹೇಳಲೆ ರೋಹಿಣಿ ? "

ಕುತೂಹಲದಿಂದ ಅಳುವುದನ್ನು ನಿಲ್ಲಿಸಿ ಅವನ ಕಡೆ ರೋಹಿಣಿ ನೋಡಿ ದಳು.

" ಸಮಾಜದ ಕಣ್ಣಿಗೆ ನಾನು ಗಂಡ....ಒಳಗೆ ಆ ಮನೆಹಾಳನನ್ನು ಮೋಹಿಸಿದ್ದೀ. "

" ........ಹಾಗೆ ಬೈದು ಕೊಲ್ಲಬೇಡಿ....ನಾನೂ ಹೆಂಗಸು ನನಗೂ ಮಾನವಿದೆ. "

" ಮಾನವಂತಳು ! ....ಮಾನವನ್ನು ಮರೆತು ಅವನನ್ನು ಮೋಹಿಸಿ ದ್ದೇಕೆ, ಅಲ್ಲದೆ ಈ ಪ್ರಣಯಪತ್ರಗಳನ್ನೇಕೆ ಬರೆದೆ.... ?"

" ನೀವು ಏನಾದರೂ ಬೈಯಿರಿ....ಅವುಗಳಿಗೆ ನಾನು ಅರ್ಹಳಲ್ಲ.... "

" ಇನ್ಯಾರು....ನಾನೆ.... ! "

" ಹೌದು....ಹೇಳಿಬಿಡ್ತೇನೆ.... ಕುಲಗೇಡಿಗಳ ಜೊತೆಗೆ ಸುತ್ತುವ ನೀವು ! "

" ಮೈಮೇಲೆ ಜ್ಞಾನವಿದ್ದು ಮಾತನಾಡು "

" ನಿಜ ಹೇಳ್ತಿದ್ದೇನೆ.... ಆ ಹಾಳು ನರ್ಸಿನ ಹಿಂದೇ ತಿರುಗುತ್ತೀರಿ.... ಜೊತೆಗೆ ಕುಡಿತ ಬೇರೆ....ಹಾಳಾಗಲು ಇಷ್ಟೇ ಸಾಲದೆ.... ? "

" ರೋಹಿಣಿ....ಹೆಚ್ಚು ಮಾತಾಡುತ್ತಿದ್ದೀ.... "

" ನೀವು ಸಲ್ಲದ ಆರೋಪ ಮಾಡಿದರೆ ಇರುವ ವಿಷಯ ತಿಳಿಸುವುದು ತಪ್ಪೆ ? "

ವಿಶ್ವನಾಥನಿಗೆ ' ಅಂತಹ ' ಮಾತುಗಳನ್ನು ಕೇಳಿಕೊಂಡು ಸುಮ್ಮನಿರಲಾಗಲಿಲ್ಲ. ಮತ್ತೆ ರೋಹಿಣಿಯು ಪಾಲಾಗಿದ್ದ ಎರಡು ಏಟು ಬಿದ್ದವು. ಬೊಂಬೆಯಂತೆ ಕುಳಿತಳು. ಕೆನ್ನೆಗೆ ಇನ್ನೊಂದು ಬಿತ್ತು. ಅಬ್ಬಾ ಎಂತಹ ನೀಚ.... ಕೋಮಲೆಯ ಮುಖ ಕೋಪದಿಂದ ಕೆಂಪೇರಿ ಅವನನ್ನೇ ನೋಡುತ್ತಿದ್ದಳು. ಮಾತನಾಡಲು ಹೋಗಿ ಅದುರುತ್ತಿದ್ದ ತುಟಿಗಳಿಂದ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದಳೇ ವಿನಾ ಮಾತನಾಡಲಿಲ್ಲ. ವಿಶ್ವನಾಥನ ಕೈಯಿಂದ ಇನ್ನೊಂದು ಹೊಡೆತ ಬೀಳುವುದರ ಮೊದಲೇ ರೋಹಿಣಿ ಕೋಣೆಯಿಂದ ಓಡಿದಳು. ಅವಳನ್ನು ಹಿಂಬಾಲಿಸಲು ವಿಶ್ವನಾಥ ಪ್ರಯತ್ನಿಸಿದ. ತುಂಬಾ ಕುಡಿದಿದ್ದುದರಿಂದ ಜೋಲಿ ಬಂದು ಬಿದ್ದುಬಿಟ್ಟ. ವಿಶ್ವನಾಥನ ನಡತೆ. ರೋಹಿಣಿಗೆ ಅಸಹ್ಯವನ್ನುಂಟು ಮಾಡಿದರೂ, ಅವನ ಅಸಹಾಯತೆಗೆ ಮರುಗಿ ಅವನನ್ನು ಮಂಚದ ಮೇಲೆ ಮಲಗಿಸಿದಳು. ತಲೆಗೆ ಸ್ವಲ್ಪ ಪೆಟ್ಟು ಬಿದ್ದುದರಿಂದ ಜ್ಞಾನ ತಪ್ಪಿತ್ತು. ತಲೆಗೆ ನೀರು ತಟ್ಟಿ ಒಂದು ಲೋಟ ಮಜ್ಜಿಗೆಯನ್ನು ಕುಡಿಸಿ ಅವನು ಎಚ್ಚರ ಗೊಳ್ಳುವುದನ್ನೇ ಎದುರು ನೋಡುತ್ತಾ ಕುಳಿತಳು.

ಪಾಪ ! ಇದು ರೋಹಿಣಿಯ ಪಾಲಿಗೆ ಬಂದ ಪಂಚಾಮೃತ. ರಾಜನ ನಿರಾಕರಣೆಯಿಂದ ಪ್ರಾರಂಭವಾಗಿ ವಿಶ್ವನಾಥನೊಡನೆ ಸಂಸಾರ ಮಾಡಬೇಕಾಯ್ತು. ಅದರಲ್ಲೇ ತನ್ನ ಪಾಲಿನ ಸುಖ ಅನುಭವಿಸುವುದೆಂದರೆ ಅದೂ ಹೀಗಾಗುವುದೆ. ಮೊದಮೊದಲು ವಿಶ್ವನಾಥ ತನ್ನನ್ನು ಗೌರವದಿಂದ ಕಾಣುತ್ತಿದ್ದ. ಮದುವೆಯಾದಮೇಲೂ ಸ್ವಲ್ಪ ದಿನ ಹಾಗೆಯೇ ಇದ್ದ. ತನ್ನ ಮನಸ್ಸು ರಾಜನಿಗೆಂದೋ ಅರ್ಪಿಸಿದ್ದಳು. ಅವಳ ದೇಹದ ಮೇಲಿನ ಅಧಿಕಾರ ಮಾತ್ರ ಮದುವೆಯಿಂದ ವಿಶ್ವನಾಥನಿಗೆ ಸೇರಿತು. ರಾಜನನ್ನು ಮರೆತು ಬಿಡಲು ಪಟ್ಟ ಪ್ರಯತ್ನದಲ್ಲಿ ವಿಫಲವಾದಳು. ವಿಶ್ವನಾಥನೊಡನೆ ಹೊಂದಿಕೊಂಡು ಬಾಳಲು ಮನಸ್ಸನ್ನು ಪ್ರೇರೇಪಿಸಿಕೊಂಡಳು.

ಆದರೆ ವಿಶ್ವನಾಥ ಸರ್ಕಾರಿ ಆಸ್ಪತ್ರೆಯಲ್ಲಿ ಡಾಕ್ಟರಾಗಿ ಸೇರಿ ಗುಟ್ಟಾಗಿ ಒಬ್ಬ ನರ್ಸ್ ಜೊತೆಗೆ ಸಂಬಂಧ ಬೆಳಸಿದ್ದ .... ಹಾಳುವಿದ್ಯೆ ಹೆಚ್ಚಿದ್ದಲ್ಲದೆ ಕುಡಿತವನ್ನೂ ಕಲಿತಿದ್ದ. ಈ ಕುಡುಕನ ಜೊತೆಗೆ ಬಾಳುವುದು ಹೇಗೆಂದು

ಬಹಳ ಭಯವಾಗುವುದು. ದನದಂತೆ ಬಡಿದು ಬಿಡುವ. ಮಗಳ ದುರಾದೃಷ್ಟ ವನ್ನು ನೆನೆದು ಆನಂದರಾಯರಿಗೆ ಯಾವುದರಲ್ಲಿಯೂ ಉತ್ಸಾಹವೇ ಇಲ್ಲ. ಅವನಿಗೆ ಬುದ್ಧಿ ಹೇಳುವುದಿರಲಿ ಮಾತನಾಡಲೂ ಆನಂದರಾಯರಿಗೆ ಇಷ್ಟ ವಿರಲಿಲ್ಲ. ಅಲ್ಲದೆ ಸುಂದರಮ್ಮನ ಬಾಯಿಗೆ ಅರ್ಧ ಹೆದರಿದ್ದರು. ಸುಂದರಮ್ಮ ನಿಗೂ ವಿಶ್ವನಾಥನ ಚಾಳಿ ಕಂಡು ಬೇಸರವಾಗಿ ಒಂದೊಂದು ದಿನ ಅವನಿಗೆ ಹೇಳುತ್ತಿದ್ದಳು. ಆದರೆ ನಾಯಿಬಾಲ ಡೊಂಕೆ .... ಅಂತೆಯೇ ರೋಹಿಣಿಯ ಅದೃಷ್ಟವೂ ಡೊಂಕೆ. ಏನಾದರೂ ನೆಪದಿಂದ ದಿನಾಗಲೂ ಜಗಳ, ಹೊಡಿ ತವೇ ಆಗಿತ್ತು. ಆ ದಿನ ತಾನು ಹಿಂದೆ ರಾಜನಿಗೆ ಬರೆದಿದ್ದ ಕಾಗದಗಳೇ ಕಾರಣ. ಎಲ್ಲವನ್ನೂ ರೋಹಿಣಿ ಯೋಚಿಸಿದಳು. ಮತ್ತು ಇಳಿದಿದ್ದ ವಿಶ್ವನಾಥ ಒಂದು ಪಕ್ಕಕ್ಕೆ ಹೊರಳಿದ. ತಾನು ರೋಹಿಣಿಯ ತೊಡೆಯ ಮೇಲೆ ತಲೆ ಇಟ್ಟುಕೊಂಡು ಮಲಗಿದ್ದಾನೆ. ತಲೆ ದಿಮ್ ಎನ್ನುತ್ತಿದೆ. ರೋಹಿಣಿ ಅತ್ತು ಕಣ್ಣೀರಿಟ್ಟಿದ್ದಾಳೆ. ರೋಹಿಣಿಯನ್ನು ಹೊಡೆದುದು ತನಗೆ ಜ್ಞಾಪಕ. ಅಷ್ಟಾ ದರೂ ಅವಳು ತನ್ನ ದುಡುಕುತನವನ್ನು ಮರೆತು ತನ್ನನ್ನು ಉಪಚರಿಸಿದ್ದಳು. ಅವನ ಕಠಿಣ ಹೃದಯವೂ ಹೆಣ್ಣಿನ ಕಣ್ಣೀರಿಂದ ಮೆತ್ತಗಾಯಿತು. ವಿಶ್ವ ನಾಥ ಕೈಯಿಂದ ರೋಹಿಣಿಯ ಮುಖವನ್ನು ಸವರಿದ. ರೋಹಿಣಿಗೆ ದುಃಖ ಪುನಃ ಒತ್ತರಿಸಿ ಬಂದು ಬಿಕ್ಕಿಬಿಕ್ಕಿ ಅತ್ತುಬಿಟ್ಟಳು. ವಿಶ್ವನಾಥ ಎದ್ದು ಕುಳಿತು ಅವಳನ್ನೇ ನೋಡಿದ. ತಲೆಯಿನ್ನೂ ತೂರಾಡುತ್ತಲೇ ಇತ್ತು.

“ ನಿಮ್ಮನ್ನು ದುಡ್ಡು ಕೇಳಲಿಲ್ಲ .... ಒಡವೆ ವಸ್ತ್ರಗಳನ್ನು ಕೇಳಲಿಲ್ಲ.... ನಾನು ಈ ಹೊಡೆತಗಳನ್ನು ತಡೆಯಬಲ್ಲೆನೆ ಹೇಳಿ ” ಎಂದು ಅತ್ತಳು.

ತಾನು ಹಾಗೆ ಹೊಡೆದಿದ್ದು ತಪ್ಪೆಂದು ತಿಳಿಯಿತು. ಅವಳ ತಲೆಯನ್ನು ಸವರುತ್ತಾ ವಿಶ್ವನಾಥ “ ಇಲ್ಲ ರೋಹಿಣಿ....ನನಗೆ ರೇಗಿದಾಗ ಹೆಚ್ಚು ಮಾತ ನಾಡಿದೆ....ಅದು ವಿಪರೀತಕ್ಕೆ ಇಟ್ಟುಕೊಂಡಿತು. ”

“ ಆ ಕಾಗದಗಳನ್ನು ನೋಡಿ ರೇಗಿದಿರಿ....ನೋಡಬೇಡಿರೆಂದು ಬೇಡಿ ಕೊಂಡೆ. ”

“ ರೋಹಿ ! ನೀನೇ ಯೋಚಿಸು, ನನ್ನ ವಿಷಯ ಅವನಿಗೆ ಹಾಗೆ ಬರ ದುದು ಸರಿಯೆ ?”

“ ಅಯ್ಯೋ ! ನೀವಿನ್ನೂ ಅರ್ಥ ಮಾಡಿಕೊಂಡಿಲ್ಲ.... ಅವನಿಗೆ ಬರೆದ ಕಾಗದ ನನ್ನಲ್ಲಿ ಹೇಗಿರಬೇಕು....ನೀವೇ ಯೋಚಿಸಿ. ”

" ಹಾಗಾದರೆ ಹೇಗೆ ಬಂತು.... ? "

" ನೋಡಿ " ಎಂದು ಇನ್ನೊಂದು ಕಾಗದವನ್ನು ಪೆಟ್ಟಿಗೆಯಿಂದ ತೆಗೆದು ಕೊಟ್ಟಳು. ವಿಶ್ವನಾಥ ಓದಿಕೊಂಡ.

" ತಂಗಿ—ನಿನ್ನ ಪತಿಯ ವಿಷಯ ಹೀಗೆ ಬರೆಯುವುದು ನಿನಗೆ ಸರಿಯಾದ್ದಲ್ಲ. ಅವನಲ್ಲಿ ವಿಶ್ವಾಸವಿರದೆ ಇರಬಹುದು. ಉಪಾಯದಿಂದ ಅವನ ಮನಸ್ಸನ್ನು ಬದಲಾಯಿಸಬೇಕು. ಇನ್ನು ಮೇಲೆ ನನ್ನನ್ನು ಮರೆತು ಬಿಡು. ನೀನು ಬರೆದ ಕಾಗದ ಹಿಂದಕ್ಕೆ ಕಳುಹಿಸಿದ್ದೇನೆ.—ರಾಜ "

ವಿಶ್ವನಾಥನಿಗಾಗಲೆ ನಿಜವಾದ ವಿಷಯವು ತಿಳಿಯಿತು. ಆ ಕಾಗದಗಳು ಬಹಳ ಹಿಂದೆ ಬರೆದಿದ್ದವು. ರೋಹಿಣಿ ಅವನ್ನು ಹರಿದು ಬಿಸಾಡದೆ ಮುಚ್ಚಿಟ್ಟಿದ್ದೇ ಪ್ರಾಣಕ್ಕೆ ಬಂತು.

" ನಾವೇನಾಗಿದ್ದೇವೆ....ಕೊಡಲು ನನಲ್ಲಿ ಬೇಕಾದಷ್ಟು ಪ್ರೇಮವಿದೆ-ಇನ್ನೂ ಸತಿಪತಿಗಳಾಗಿ ಬಾಳಬಹುದು....ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳೋಣ. "

" .... .... .... " ತಲೆತಗ್ಗಿಸಿ ವಿಶ್ವನಾಥ ಯೋಚಿಸುತ್ತಿದ್ದ.

" ನಾನೂ ತಪ್ಪು ಮಾಡಿರಬಹುದು....ನೀವು ತಿದ್ದಿ....ಪಶುವಾಗಿ ಬಾಳದೆ ಮನುಷ್ಯರಾಗಿ ಬಾಳೋಣ.... "

" ರೋಹಿ ! .... "

" ಸ್ವಾಮಿ.... "

" ಬಲವಾಗಿ ಹೊಡೆದುಬಿಟ್ಟೆ....ಎಂತಹ ಏಟು ಬಿತ್ತಲ್ಲವೆ.... " ಎಂದು ರೋಹಿಣಿಯ ಕೆನ್ನೆಯನ್ನು ಸವರಿದ ವಿಶ್ವನಾಥ. ಐದು ಬೆರಳೂ ಊರಿದ್ದ ಕೆನ್ನೆ ಕೆಂಪೇರಿತ್ತು....

" ಒಂದುಮಾತು ಕೊಡಿ....ಇನ್ನುಮೇಲೆ.... "

" ಸಾಕು ರೋಹಿ ! ....ಹೇಳಬೇಡ ! ಎಲ್ಲವನ್ನೂ ಬಿಟ್ಟು ಬಿಡುತ್ತೇನೆ.... "

" ಹಾಗೆ ಮಾಡಿದರೆ ನನ್ನ ಪುಣ್ಯ.... "

" ರೋಹಿಣಿ ! ನೀನು ಖಂಡಿತ ದೇವತೆ.... " ವಿಶ್ವನಾಥ ರೋಹಿಣಿಯ ತಲೆಯನ್ನು ಸವರಿದ. ಇಷ್ಟು ದಿನದಮೇಲೆ ಅವನಿಗೆ ಕರುಣೆ ಬಂದಿತ್ತು.

ಬಹಳ ಹೊತ್ತು ಅವರಿಬ್ಬರೂ ಸಮಾಧಾನ ಮಾಡಿಕೊಂಡರು. ರಾಜನನ್ನು ಸಂಪೂರ್ಣ ಮರೆತು ವಿಶ್ವನಾಥನನ್ನು ಒಳ್ಳೆಯ ಮಾರ್ಗಕ್ಕೆ ತರುವುದೆಂದು ರೋಹಿಣಿ ನಿರ್ಧರಿಸಿದಳು. ಎಲ್ಲ ಸರಿಯೆ. ತಾನೂ ಹಾಗೆ ನಡೆದುಕೊಳ್ಳಬಹುದು. ಆದರೆ ವಿಶ್ವನಾಥ ದಾರಿಗೆ ಬರುವನೆ ? ಎನ್ನುವ ಸಂಶಯ ರೋಹಿಣಿಗೆ ಇದ್ದೇ ಇತ್ತು. ಅವಳ ಜೀವನದಲ್ಲಿ ಅಂದು ಬಹು ಮುಖ್ಯದಿನ.

## ೨೧

ಗೌರಿ ಗಟ್ಟಿ ಮನಸ್ಸು ಮಾಡಿದರೂ ಒಂದೊಂದು ಸಾರಿ ಚಂದ್ರಶೇಖರನನ್ನು ನೆನೆದು ಅತ್ತುಬಿಡುವಳು. ಚಿಕ್ಕ ವಯಸ್ಸಿನಲ್ಲೇ ಗಂಡನನ್ನು ಕಳೆದುಕೊಂಡ ಗೌರಿ ಓದಿ ಯಾವುದಾದರೂ ಸ್ಕೂಲಿನಲ್ಲಿ ಕೆಲಸಕ್ಕೆ ಸೇರಬಹುದಲ್ಲ ಎಂದು ಅನೇಕರು ಸೂಚನೆ ಕೊಟ್ಟಿದ್ದರು. ರಾಜನಿಗೂ ಅದೇ ಸರಿಯೆಂದು ಕಂಡುಬಂತು. ಆದರೂ ಗೌರಿ ಒಪ್ಪಲಿಲ್ಲ....ಏನು ಕಲಿತುಕೋಬೇಕು ಅಂತ ಸ್ಕೂಲಿಗೆ ಹೋಗಬೇಕು ರಾಜ....ನಾನು ಸ್ಕೂಲಿನಲ್ಲಿ ಕಲಿತುಕೊಳ್ಳುವುದೇನೂ ಇಲ್ಲ....ನನ್ನ ಆಸೆಯೆಲ್ಲಾ ಈ ಮಗುವಿನಲ್ಲಿದೆ. ನೀನಿದ್ದೀ....ಕೊನೆಯವರೆಗೂ ಅನ್ನಹಾಕಿಬಿಡ್ತಿ. ಅದು ಆಗದಿದ್ದರೆ....ಗೊತ್ತೇ ಇದೆ....ದೇವರು ಗಟ್ಟಿಯಾದ ರಟ್ಟೆ ಕೊಟ್ಟಿದ್ದಾನೆ. ಯಾರ ಮನೆಯಲ್ಲಾದರೂ ಅಡಿಗೆಮಾಡಿ ಹೊಟ್ಟೆ ಹೊರೆಯುತ್ತೇನೆ" ಅಂದಿದ್ದಳು. ಅದನ್ನು ಕೇಳಿ ರಾಜ.... ಸುಮ್ಮನಿದ್ದ.

ಗೌರಿ ಗಂಡನನ್ನು ಕಳೆದುಕೊಂಡು ನಾಲ್ಕು ವರ್ಷಗಳಾಗಿದ್ದುವು. ಆ ನಾಲ್ಕು ವರ್ಷಗಳನ್ನು ಹೇಗೆ ಕಳೆದಿದ್ದಳೋ....ಎಲ್ಲವೂ ' ನಿನ್ನೆ ' ಯಂತಿದೆ. ಸರಸು ಆಗಲೇ ನಡೆಯುತ್ತಾಳೆ–ಮುದ್ದುಮುದ್ದಾಗಿ ಮಾತನಾಡುತ್ತಾಳೆ. ಗೌರಿಯ ಕೈಗೊಂಬೆಯಾಗಿದ್ದಾಳೆ. ಗೌರಿ ಪತಿಯನ್ನು ನೆನೆಸಿಕೊಂಡಾಗಲೆಲ್ಲಾ ಸರಸುವೇ ಸಮಾಧಾನ ಮಾಡಬೇಕು, ನಗಿಸಬೇಕು, ಪುಟ್ಟ ಕೈಗಳಿಂದ ಅವಳ ಕಣ್ಣೀರನ್ನು ಸವರಿ ಕತ್ತಿಗೆ ಜೋತುಬೀಳಬೇಕು. ಅವಳ ಮನಸ್ಸೆಷ್ಟು ಕಲಕಿರಲಿ, ಎಷ್ಟು ಆಯಾಸವಾಗಿರಲಿ ಒಂದೇ ನಿಮಿಷದಲ್ಲಿ ಗೌರಿಗೆ ಸಮಾಧಾನ ಮಾಡುವವಳು ಸರಸ–ಪುಟ್ಟ ಹುಡುಗಿ.

ಅವಳು ಯೋಚಿಸಿದಳು—

ರಾಜ ಇನ್ನೇನು ಸಂಸಾರ ಹೂಡುತ್ತಾನೆ. ಅವನ ಮನೆ ಕೆಲಸಮಾಡಿ ಕಾಲ ತಳ್ತೀನಿ. ಹೆಂಡತಿಯೊಡನೆ ಸಂಸಾರ ಮಾಡುವುದನ್ನು ನೋಡಿ ಕೊಂಡು ನನ್ನ ದುಃಖವನ್ನು ಮರೆಯುತ್ತೇನೆ. ಸರಸು ವಯಸ್ಸಿಗೆ ಬಂದಾಗ ಚೂರುಪಾರು ಆಸ್ತಿಯನ್ನು ಮಾರಿಸಿ ಅವಳ ಮದುವೆ ಮಾಡಿಬಿಡವುದು. ಅಯ್ಯೋ ಹುಚ್ಚಿ ! ಇನ್ನೂ ಸರಸುಗೆ ನಾಲ್ಕುವಯಸ್ಸು—ಆಗಲೇ ಅವಳ ಮದು ವೆಯ ಯೋಚನೆ. ಅಲ್ಲವೆ ? ಹೆಣ್ಣು ಹುಟ್ಟಿದಾಗಲೇ ಆ ಯೋಚನೆ ಮೊಳೆತು ಹುಡುಗಿ ಬೆಳೆಯುತ್ತಾ ಚಿಂತೆ ಬೆಳೆದು ಸಮಸ್ಯೆಯಾಗಿ ಬಿಡುವುದಿಲ್ಲವೇ.... ಹೌದು ರಾಜನನ್ನು ಅನುಸರಿಸಬೇಕು. ರತ್ನಳಿಗೆ ಹುಳಿಯಾಗದಂತೆ ನಡೆದು ಕೊಳ್ಳಬೇಕು. ಒಂದು ವೇಳೆ ರತ್ನ ಎದುರು ಬಿದ್ದರೆ ತೀರಿತು. ತನ್ನ ಆಸೆ ಮಣ್ಣಾದಂತೆಯೆ....ಛೀ ! ರಾಜ ಎಂದಿಗೂ ಹಾಗೆ ಮಾಡುವುದಿಲ್ಲ....ಸರಿ ! ಆದಂತಾಗಲಿ...." ಗೌರಿ ಸುತ್ತಲೂ ನೋಡಿದಳು. ಯಾವ ಮಾಯೆಯಲ್ಲೊ ತನ್ನ ತೊಡೆಯ ಮೇಲೆ ಕುಳಿತಿದ್ದ ಸರಸು ಕಾಣಲಿಲ್ಲ. ಎದ್ದು ನೋಡಿದಳು. ಪಕ್ಕದ ಮನೆಯ ಜಗುಲಿಯ ಮೇಲೆ ಇತರ ಹುಡುಗಡರೊಡನೆ ಜಗಳ ಆಡು ತ್ತಿದ್ದಳು. ಲಂಗದ ತುದಿ ಹರಿದಿದ್ದಲ್ಲದೆ ಅಳುತ್ತಿದ್ದಳು. ಮಿಕ್ಕ ಹುಡುಗರು ನಮ್ಮ ಅಪ್ಪನಿಗೆ ಹೇಳಿ ಹೊಡೆಸ್ತೀನಿ' ಅಂದಿದ್ದಕ್ಕೆ ಸರಸು ಅಳುವನ್ನು ನಿಲ್ಲಿಸಿ " ನಾನೂ ನಮ್ಮ ಅಪ್ಪನಿಗೆ ಹೇಳಿ ಹೊಡೆಸ್ತೀನಿ " ಎಂದು ಹೇಳಿದಳು.

ಇನ್ನು ಗೌರಿಯ ಕೈಲಿ ನೋಡಿ ಸುಮ್ಮನಿರಲಾಗಲಿಲ್ಲ. ಸರಸುವನ್ನೆತ್ತಿ ಕೊಂಡು ಕೋಣೆಯೊಳಕ್ಕೆ ಬಂದು ಬಿಟ್ಟಳು. ಮಗುವನ್ನು ಸಮಾಧಾನ ಮಾಡುತ್ತಾ....

" ಅವರ ತಂಟೆಗೆ ಹೋಗಬೇಡ ಅಂದ್ರೆ ನೀನು ಕೇಳೋಲ್ಲ.... "

" ಅವನೇ ಮೊದಲು ಹೊಡ್ದ.... "

" ಇನ್ನು ಅವರ ಹತ್ತಿರ ಆಡಬೇಡ.... "

" ಮಗು ಸ್ವಲ್ಪ ಹೊತ್ತು ಸುಮ್ಮನಿದ್ದು " ಅಮ್ಮ " ಎಂದಿತು.

" ಏನಮ್ಮ ಸರಸು "

" ಅಪ್ಪ ಯಾವಾಗಮ್ಮ ಬರ್ತಾನೆ.... "

" ಬರ್ತಾರಮ್ಮ....ಇನ್ನೂ ಸ್ವಲ್ಪ ದಿನ ಹೋಗಬೇಕು.... "

" ಹೋಗಮ್ಮ ....ನೋಡೋಣ ಅಂದ್ರೆ ಬೇಗ ಬರೋದೇ ಇಲ್ಲ.... "

"….     ….     ….     …."

" ಅಮ್ಮ…. "

" ನನ್ನನ್ನು ಕಂಡರೆ ಅಪ್ಪನಿಗೆ ಇಷ್ಟ ಏನಮ್ಮ…. "

" ಹೂಂ ! ಸರಸು ….ಅವರು ಎಷ್ಟು ಒಳ್ಳೆಯವರು ಗೊತ್ತೆ ನಿನಗೆ ? ಬೇಕಾದಷ್ಟು ಒಡವೆ ತಂದು ಕೊಡ್ತಾರೆ….ಬೇಕಾದಷ್ಟು ತರಹದ ಹೊಸ ಲಂಗ ತರ್ತಾರೆ….ಥಂಡಿಯಾಗಿ ಆಟದ ಸಾಮಾನು ತರ್ತಾರೆ….ಸ್ವಲ್ಪದಿನ ತಡಿ."

" ಹಾಗಾದರೆ ಅಪ್ಪ ಒಳ್ಳೇನಮ್ಮ….ಕರ್ಪೂರದ ಬೊಂಬೇನೂ ಬೇಕಮ್ಮ…."

" ಆಗ್ಲಿ ಸರಸೂ ಬರೀತೀನಿ ಅವರಿಗೆ…. "

" ಬೇಗ ಬಾ ಅಂತ ಬರೀಮ್ಮ ಕಾಗ್ದ…. "

" ಆಗ್ಲಿ ಸರಸು " ಎಂದು ಅವಳನ್ನು ಕೆಳಗಿಳಿಸಿ ಒಂದು ಚಕ್ಕಲಿಯನ್ನು ಕೊಟ್ಟಳು. ಸರಸು ನಡುಮನೆಗೆ ಓಡಿದಳು.

ಗೌರಿಗೆ ಹೇಗೋ ಆಯ್ತು. ಅಪ್ಪ ! ಅಪ್ಪ ! ಎಂದು ಸರಸು ಕೇಳುತ್ತಿದ್ದಾಳೆ. ಸರಸುವನ್ನು ನೋಡಲು ಅವರು ಈ ದಿನ ಇಲ್ಲ—ಗೌರಿ ಕಣ್ಣೀರಿಟ್ಟಳು. ಅಷ್ಟು ಹೊತ್ತಿಗೆ ಅಂಚೆಯಾಳು ತಂದುಕೊಟ್ಟ ಕಾಗದವನ್ನು ಕಮಲಮ್ಮ ತಂದಳು. ಗೌರಿ ಕಾಗದವನ್ನು ಒಡೆದು ತಾಯಿಗೆ ಓದಿ ಹೇಳಿದಳು ರಾಜನಿಗೆ ಮೊದಲನೆಯ ದೀಪಾವಳಿಗೆ ಮಾವನಿಂದ ಆಹ್ವಾನ ಬಂದಿದೆಯೆಂದೂ ಸಾಧ್ಯವಾದರೆ ಒಂದೆರಡು ದಿನದ ಮಟ್ಟಿಗೆ ಬರುತ್ತೇನೆಂದೂ ಆ ಬಗ್ಗೆ ತಾಯಿ ಮತ್ತು ಗೌರಿಯ ಅಭಿಪ್ರಾಯ ಕೇಳಿದ್ದ.

" ಮೊದಲನೆಯ ದೀಪಾವಳಿ….ಚೆನ್ನಾಯ್ತಲ್ಲ…. ಬಂದುಬಿಡು ಎಂದು ಬರೀ, ಗೌರಿ. "

" ಆಗ್ಲಿ….ಮಧ್ಯಾನ್ಹ ಬರೆದುಹಾಕ್ತೇನೆ…. "

" ಎಷ್ಟು ಒಳ್ಳೆಯ ಹುಡುಗನೆ….ದೊಡ್ಡೋರು ಅನ್ನೋದನ್ನು ಮರೆತಿಲ್ಲ. "

" ಹೌದು…. "

" ಅಲ್ಲಿ ಅವನೊಬ್ಬ….ಇಲ್ಲಿ ಅವನನ್ನು ಬಿಟ್ಟು ನಾವು…. "

"ಇನ್ನೆಷ್ಟು ದಿನ ಅಮ್ಮ....ಅಬ್ಬಬ್ಬಾ ಎಂದರೆ ಮೂರು ತಿಂಗಳು ಅಲ್ಲವೆ? ಅವನ ಪರೀಕ್ಷೆ ಮುಗಿದಮೇಲೆ ಎಲ್ಲಾ ಒಟ್ಟಿಗೆ ಇರೋದು."

ಕಮಲಮ್ಮನಿಗೆ 'ಆ ದಿನ' ಬೇಗ ಬರಲಿ ಎನ್ನಿಸಿತು.—ಮಗ ಸೊಸೆಯೊಡನೆ ಸಂಸಾರ ಮಾಡುವ ದಿನಗಳು.

"ದೀಪಾವಳಿಗೆ ಇನ್ನು ನಾಲ್ಕೇ ದಿನ....ಇಲ್ಲಿಗೆ ಬಂದು ಪಟ್ಟಣಕ್ಕೆ ಹೋಗಬೇಕಾದರೆ...."

"ನಾಳೆ ನಮ್ಮ ಕಾಗದ ತಲ್ಪಿ ನಾಡಿದ್ದು ಬೆಳಗ್ಗೆ ಇಲ್ಲಿರ್ತಾನೆ....ಇಲ್ಲಿಂದ ನಾಡಿದ್ದು ಸಾಯಂಕಾಲ ಅಲ್ಲಿಗೆ ಹೊರಟರೆ ಆಗುವುದಿಲ್ಲವೇನಮ್ಮ" ಎಂದಳು ಗೌರಿ.

'ಸರಿ' ಎಂದು ಕಮಲಮ್ಮ ತನ್ನ ಕೆಲಸದ ಮೇಲೆ ಹೋದಳು.

× × ×

ಎರಡು ದಿನಗಳಾದ ಮೇಲೆ ರಾಜ ಮೈಸೂರಿಗೆ ಬಂದ. ಮೊದಲನೆಯ ಸಲ ಹಬ್ಬಕ್ಕೆ ಹೋಗಲು ಒಳ್ಳೆಯ ಬಟ್ಟೆಗಳನ್ನು ತೆಗೆದಿಟ್ಟುಕೊಂಡಿದ್ದ. ಸರಸುವಿಗೆ ತಂದಿದ್ದ ಲಂಗವನ್ನು ಗೌರಿಯ ಕೈಲಿ ಕೊಟ್ಟ. ಕಮಲಮ್ಮ ಮಗನೊಡನೆ ಬೇಕಾದಷ್ಟು ಮಾತನಾಡಿದಳು. ಒಟ್ಟಿನಲ್ಲಿ ರಾಜ ಒಂದೇ ಮಾತು ಹೇಳಿದ—'ಇನ್ನೆಲ್ಲಿ ಮೂರುತಿಂಗಳಲ್ಲವೆ' ಎಂದು. ಮಾರನೆಯ ದಿನ ಮಧ್ಯಾಹ್ನದ ರೈಲಿಗೆ ಬರುವುದಾಗಿ' ಈಶ್ವರೈಯನಿಗೆ ತಂತಿಯನ್ನೂ ಕಳುಹಿಸಿದ.

ತಂತಿಯಾಳು ಬಂದಾಗ ಮನೆಯಲ್ಲಿ ರತ್ನ ಒಬ್ಬಳೇ ಇದ್ದಳು. ಹಬ್ಬಕ್ಕೆ 'ಅವರು' ಬರುತ್ತಾರೆಂದು ನಂಬಿದ್ದಳು. ಆದರೆ ಆ ದಿನ ಕೂಡ ಕಾಗದ ಬಂದಿರಲಿಲ್ಲ: ಬಹುಶಃ ಬರುವುದಿಲ್ಲವೇನೋ ಎಂದು ಎಲ್ಲರಿಗೂ ಅಸಮಾಧಾನವಾಗಿತ್ತು. ಏಕೆ—ರತ್ನಳಿಗೆ ಕೋಪವೇ ಬಂದುಬಿಟ್ಟಿತ್ತು. ಎಷ್ಟು ಬೇಡಿ ಬರೆದಿದ್ದೆ..ಬರ್ತೀನೆ ಅಂದವರು ಬರಲೇ ಇಲ್ಲ..." ಎಂದು ಯೋಚಿಸುತ್ತಿದ್ದವಳು 'ತಂತಿ'ಯನ್ನೊಡೆದು ಓದಿಕೊಂಡು ರಾಜ ಮಧ್ಯಾಹ್ನ ಬರ್ತಾನೆ ಎಂದು ತಿಳಿದ ಮೇಲೆ 'ಅವರು' ನಿಜವಾಗಿಯೂ ಒಳ್ಳೆಯವರೇ ಅನ್ನಿಸಿತು.

ಸ್ಕೂಲಿನಿಂದ ಈಶ್ವರೈಯ ಮಧ್ಯಾಹ್ನ ಬಂದಾಗ ತಂತಿಯನ್ನು ನೋಡಿ ಸಂತೋಷಪಟ್ಟ. ಪಕ್ಕದಮನೆಗೆ ಹೋಗಿದ್ದ ರಾಜಲಕ್ಷ್ಮಮ್ಮನೂ ಅಳಿಯ ಬರುವುದನ್ನು ತಿಳಿದು ತಿಂಡಿಮಾಡಲು ಹೋದಳು. "ರೈಲು ಮೂರೂವರೇಗೆ

ಬರೋದು....ಬಂದ್ಬಿಡ್ತೀನಿ." ಎಂದು ಈಶ್ವರಯ್ಯ ಪುನಃ ಪೇಟವನ್ನು ಧರಿಸಿ ಸ್ಕೂಲಿಗೆ ಹೋದರು. ರತ್ನ ತನ್ನ ಕೋಣೆಗೆ ಓಡಿ, ಒಳ್ಳೆಯ ಸೀರೆಯುಟ್ಟು ತಲೆ ಬಾಚಿಕೊಂಡು ನಾಜೋಕಾಗಿ ಕುಂಕುಮ ಇಟ್ಟುಕೊಂಡಳು. ಆಗಲೇ ಮೂರಾಗುತ್ತಾ ಬಂತು, ಇನ್ನೇನು ಬರ್ತಾರಲ್ಲ ಎನ್ನಿಸಿತು. ರತ್ನ ಮುಂದಿನ ಕೋಣೆಯ ಕಿಟಕಿಯಿಂದ ಅವರನ್ನೇ ಎದುರು ನೋಡುತ್ತಾ ನಿಂತಳು. ಇನ್ನೂ ಮೂರು ಗಂಟೆಯಲ್ಲ! ಅನ್ನಿಸಿತು ಅವಳಿಗೆ. ಮೂರುವರೆಯ ಹೊತ್ತಿಗೆ ರಾಜ ರತ್ನಳ ತಮ್ಮನ ಜೊತೆಗೆ ಬರುತ್ತಿದ್ದ. ತಂದೆಯೇಕೆ ಬರಲಿಲ್ಲ ಎನ್ನಿಸಿತು. 'ಅವರು' ಬಂದೇ ಬಿಟ್ಟರು. ರತ್ನಳಿಗೆ ತುಂಬಾ ಆನಂದವಾಯ್ತು. ಮದುವೆಯಲ್ಲಿ ನಾಚಿಕೆಯಿಂದಲ್ಲದೆ ಎಲ್ಲರೂ ಹಾಸ್ಯ ಮಾಡುತ್ತಿದ್ದುದರಿಂದ ರಾಜನನ್ನು ಮನಃಪೂರ್ತಿ ನೋಡಲು ಆಗಿರಲಿಲ್ಲ.

ಇಂದು ಯಾರ ಆತಂಕವೂ ಇಲ್ಲದೆ ಕಣ್ತುಂಬ ನೋಡಿದಳು. ಅಯ್ಯೋ! ತಮ್ಮನ ಜೊತೆಯಲ್ಲಿ ಕೋಣೆಗೆ ಹೋಗಿಬಿಟ್ಟರು. ರತ್ನ ಬೇಗ ಅಡಿಗೆ ಮನೆಯನ್ನು ಸೇರಿದಳು. 'ಅವರು' ತನ್ನ ತಮ್ಮನೊಡನೆ ಮಾತನಾಡುತ್ತಿದ್ದುದು ಕೇಳಿಸುತ್ತಿತ್ತು. ಎರಡು ಮೂರು ನಿಮಿಷದ ನಂತರ ತಂದೆ ಅವರೊಡನೆ ಮಾತನಾಡುತ್ತಿದ್ದರು.

ಅಳಿಯ ಮೊದಲನೆಯ ದೀಪಾವಳಿಗೆ ಬಂದುದು. ಈಶ್ವರಯ್ಯ ಅದ್ದೂರಿಯಿಂದಲೇ ಏರ್ಪಡಿಸಿದ್ದ. ಒಂದು ಜೊತೆ ಕಲಾಪತ್ತಿನ ಪಂಚೆ, ರೇಷ್ಮೆ ಮುಗುಟ ಅಲ್ಲದೆ ಕೈಗಡಿಯಾರಕ್ಕೆ ಚಿನ್ನದ ಸರಪಳಿ. ಮದುವೆಯಾದ ಮೇಲೆ ತಮ್ಮ ಕೆಲಸ ಮುಗಿಯಿತೆನ್ನುವ ಸಾಲಿಗೆ ತನ್ನ ಮಾವ ಸೇರಿಲ್ಲವಲ್ಲ ಎಂದು ರಾಜನಿಗೆ ಸಮಾಧಾನವಾಯ್ತು. ಮನೆ ಕಡೆಯ ಯೋಗಕ್ಷೇಮ, ಸುಬ್ಬಣ್ಣನವರ ವಿಚಾರ ವಿಚಾರಿಸಿದರು—ಎಷ್ಟಾದರೂ ಸಂಪ್ರದಾಯಸ್ಥರು.

ಹಬ್ಬದ ಬೆಳಗ್ಗೆ ರಾಜ–ರತ್ನರನ್ನು ಹಸೆಯ ಮೇಲೆ ಕೂರಿಸಿ, ಎಣ್ಣೆ ಒತ್ತಿದ ಶಾಸ್ತ್ರವಾಗಿ, ನೀರು ಹಾಕಿಕೊಳ್ಳುವ ಹೊತ್ತಿಗೆ ಏಳು ಗಂಟೆಯಾಗಿತ್ತು. ರತ್ನ ನೀರು ಹಾಕಿಕೊಂಡು ಅಳ್ಳಕವಾಗಿ ಮೂರು ಕಾಲು ಜಡೆ ಹೆಣೆದುಕೊಂಡಳು. ಅಳಿಯನಿಗೆ ತಿಂಡಿ ತೀರ್ಥವಾದಮೇಲೆ ಮುಂದೇನು ಮಾಡಬೇಕೆಂದಿರುವನೆಂದು ಈಶ್ವರಯ್ಯ ತಿಳಿದುಕೊಂಡ.

“ ಹೌದು ! ವಿಜ್ಞಾನದಲ್ಲಿ ಹೆಚ್ಚಿನ ಪರಿಶ್ರಮ ಇದ್ದರೆ ಒಳ್ಳೆಯದೆ.... ”

" ಇಲ್ಲಿ ಕಾಲೇಜುಗಳಲ್ಲಿ 'ಲೆಕ್ಚರರ್ ಕೆಲಸ ಸಿಗುತ್ತೆ. "

" ಇನ್ನೂ ಒಂದೆರಡು ವರ್ಷ ಓದಿ ಡಾಕ್ಟರೇಟ್ ತೆಗೆದುಕೊಂಡರೆ ಒಳ್ಳೆಯದಲ್ಲವೆ ?"

" ಓದಿಗೇನು ಹೇಳಿ....ಆಗರೆ ಇನ್ನು ಓದಲು ಸಾಧ್ಯವಾಗಲಾರದು. " ಎಂದ ರಾಜ. ಆ ಮಾತು ಈ ಮಾತು ಆಡುತ್ತಿದ್ದರು. ಮನೆಯತುಂಬ ಮಕ್ಕಳ ಓಡಾಟ. ರತ್ನಳ ತನ್ನ ಅನಂತನಂತೂ ಭಾವನನ್ನು ನಗಿಸುವುಗಲ್ಲದೆ ರತ್ನಳನ್ನು ಗೋಳು ಹುಯ್ದುಕೊಳ್ಳುತ್ತಿದ್ದ.

ಹನ್ನೆರಡರ ವೇಳೆಗೆ ಊಟವಾಯ್ತು. ಗಂಡಸರ ಪಂಕ್ತಿಯಲ್ಲಿ ಮಣೆಯನ್ನು ಹಾಕಿ ಬೆಳ್ಳಿಯ ತಟ್ಟೆಯ ಮುಂದೆ ರಂಗವಲ್ಲಿ ಇಟ್ಟಿದ್ದರು. ರಾಜ ಅಲ್ಲಿ ಕುಳಿತ. ಅದರ ಎದುರಿನ ಪಂಕ್ತಿಯಲ್ಲಿ ರತ್ನಳಿಗೆ ಎಲೆಹಾಕಿದ್ದರು. ಹಬ್ಬದ ಅಡಿಗೆ—ನಳ ಪಾಕ ಇಳಿಸಿದ್ದರು ರತ್ನಳ ತಾಯಿ. ರತ್ನಳಿಗೆ ಊಟಕ್ಕಿಂತಲೂ ರಾಜನನ್ನು ಕದ್ದು ನೋಡುವುದೇ ಕೆಲಸವಾಯ್ತು. ಇದನ್ನು ನೋಡುತ್ತಿದ್ದ ಅನಂತು ಸುಮ್ಮನೆ ಇರುವನೆ ? ಅವನ ಪಕ್ಕದಲ್ಲಿ ಕುಳಿತಿದ್ದ ರತ್ನಳ ತಂಗಿಯರಿಗೆ ಕಿವಿಯಲ್ಲಿ ಪಿಸುಗುಟ್ಟಿ ವಿಷಯ ಎಲ್ಲರಿಗೂ ತಿಳಿದು ನಗುವಂತೆ ಮಾಡುತ್ತಿದ್ದ. ರತ್ನಳಿಗೆ ತುಂಬಾ ನಾಚಿಕೆ. ಮದುವೆಯ ಮುಂಚಿನ ಹುಡುಗಾಟದ ರತ್ನ ಈಗ ಗಂಭೀರವಾಗಿ ಬಿಟ್ಟಿದ್ದಾಳೆ. ಆದರ್ಶ ಬಾಳನ್ನು ನೆನೆಯುತ್ತಿದ್ದ ರತ್ನ ಸಹಜವಾದ ಸೌಂದರ್ಯದೊಡನೆ ಮುಖದಲ್ಲಿ ಕಾಂತಿಹೊಂದಿದ್ದಾಳೆ. ಊಟ ಮುಗಿದಮೇಲೆ ರಾಜ ಸ್ವಲ್ಪಹೊತ್ತು ಮುಂದಿನ ಕೋಣೆಯಲ್ಲಿ ಮಲಗಿಕೊಂಡ. ಹೊತ್ತಾಗಿ ಹಬ್ಬದ ಊಟ; ನಿದ್ದೆ ಚೆನ್ನಾಗಿ ಬಂದು ಬಿಡ್ತು. ಎದ್ದಾಗ ಮೂರು ಗಂಟೆ. ಇವನೇಳುವುದನ್ನೇ ಕಾದಿದ್ದ ಅನಂತು—

" ಭಾವ, ರತ್ನ ಪೌಡರ್ ಹಾಕಿಕೊಳ್ಳುತ್ತಿದ್ದಾಳೆ " ಎಂದು ನಕ್ಕ.

ರಾಜನೂ ನಕ್ಕ.

" ಹೇರ್ ಆಯಿಲ್ ಬಾಟಲು ಒಡೆದುಬಿಟ್ಟಳು ಭಾವ ! "

" ಹೋಗ್ಲಿ ಬಿಡು...."

" ಭಾವ ನನಗೊಂದು ಬಾಟ್ಲು ತಂದು ಕೊಡಿ...."

" ನೀನು ದೊಡ್ಡವನಾಗಿ ಕ್ರಾಪು ಬಿಡಿಸಿಕೋ ಆಗ...."

"ಕ್ರಾಪು ಬಿಡಿಸ್ತೀನಿ ಅಂದ್ರೆ ಬೆಳೆಯೋದಿಕ್ಕಿಲ್ಲ ಆಗ್ಲೆ, ಬೇಡ ಅಂತಾನೆ ಅಪ್ಪ."

"ದೊಡ್ಡವನಾಗಬೇಕೋ ಬೇಡವೋ ಅನಂತು...."

"ಪಕ್ಕದಮನೆ ಮೂರ್ತಿ ನನಗಿಂತ ಚಿಕ್ಕೋನು....ಅವನು ಕ್ರಾಪು ಬಿಟ್ಟಿದ್ದಾನೆ...."

"ನೀನೂ ಕ್ರಾಪು ಬಿಡೂವಂತೆ ಬಿಡು...."

"ಭಾವ ಈಗ್ಲೆ ಹೇರಾಯಿಲ್ ಹಾಕಿಕೊಂಡ್ರೇನು"?

"ಬಹಳ ಚೆನ್ನಾಗಿರುತ್ತೆ" ಎಂದು ಅರ್ಧಚಂದ್ರಾಕೃತಿಯ ತಲೆ ಗೂದಲನ್ನು ಸವರಿದ.

"ಅಪ್ಪನಿಗೆ ಹೇಳಿ ಭಾವ ನನಗೆ ಕ್ರಾಪು ಮಾಡಿಸಿ ಎಂದು."

"ಹೀಗೇ ಚೆನ್ನಾಗಿ ಕಾಣುತ್ತೆ ಅನಂತು."

"ಹೋಗಿ ಭಾವ ನೀವು ಮಾತ್ರ ಬೈತಲೆ ತೆಗೆದುಕೊಳ್ಳೋದು, ನನಗೆ ಮಾತ್ರ ಬೋಡತಲೆ ಚೆನ್ನೆಂದು ತಮಾಷೆಮಾಡುವುದು" ಎಂದು ಅನಂತ ಓಡಿದ. ರಾಜ ಮುಖತೊಳೆದುಕೊಂಡು ಬಂದು ಕ್ರಾಪುಬಾಚಿಕೊಂಡ. ಆ ಹೊತ್ತಿಗೆ ರೂಮಿನ ಬಾಗಿಲಿನಲ್ಲಿ ಕೈಯಲ್ಲಿ ತಿಂಡಿಯ ತಟ್ಟೆ ಹಿಡಿದು ರತ್ನ ನಿಂತಿದ್ದಳು. ನೀನು ಮೊದಲು ಹೋಗೆಂದು ಅವಳ ತಂಗಿಗೆ ರತ್ನ ಹೇಳಿದರೆ ಅವಳು ರತ್ನಳನ್ನೇ ಮೊದಲು ಹೋಗು ಎಂದಳು....ಧೈರ್ಯ ಮಾಡಿ ರತ್ನ ರೂಮಿಗೆ ಬಂದು ನಿಂತಳು. ಅವಳ ತಂಗಿ ತನ್ನ ಕೆಲಸ ಮುಗಿಯಿತೆಂದು ಓಡಿದಳು. ರಾಜನೇ—

"ಮಾತನಾಡೋಲ್ಲವೆ ರತ್ನ....ಬಾ ಇಲ್ಲಿ" ಎಂದ.

ತುಂಬಾ ನಾಚಿಕೆಯಿಂದ ಮೈಯನ್ನು ಒಂದು ಹಿಡಿಯಷ್ಟು ಮಾಡಿ ಕೊಂಡು ಮುಂದೆ ಬಂದಳು.

"ಇದೇನು ಹೀಗಾಡ್ತೀ....

"................"

"ಪೌಡರ್ ಹಾಕಿಕೊಂಡೆಯಾ ರತ್ನ"

"ಹೂಂ !...."

"ಹೇರ್ ಆಯಿಲ್ ಉಪಯೋಗಿಸಿದೆಯಾ ?"

"ಹೌದು....ತಿಂಡಿ ತೆಗೆದುಕೊಳ್ಳಿ" ಎಂದು ರತ್ನ ಕುರ್ಚಿಯ ಹತ್ತಿರ ಬಂದು ನಿಂತಳು.

ರಾಜ ರತ್ನಳನ್ನೇ ನೋಡಿದ. ಮೊದಲೇ ಕೇದಿಗೆಯಂತಹ ಮೈಬಣ್ಣ. ಮುಖದಮೇಲೆ ಪೌಡರ್ ಹಾಕಿಕೊಂಡಿದ್ದು ಮಂಕಾಗಿ ಕಾಣುತ್ತಿತು. ರಾಜ ತಿಂಡಿಯನ್ನು ತಿಂದ. ಬಲವಂತದಿಂದ ರತ್ನ ಸ್ವಲ್ಪ ತಿಂದಳು. ಬೆಳ್ಳಿಯ ಲೋಟದಲ್ಲಿದ್ದ ಕಾಫಿಯನ್ನು ಕೈಗೆ ಕೊಟ್ಟಳು. ಕಾಫಿ ಕುಡಿದು ಮೇಜಿನ ಹತ್ತಿರ ನಿಂತ ರತ್ನಳನ್ನು ನೋಡಿ ರಾಜ—

"ರತ್ನ" ಎಂದ

"ಏನು...."

"ತುಂಬಾ ನಾಚಿಗೆನೇ...."

'ಏಕೆ' ಎನ್ನುವಂತೆ ರಾಜನನ್ನು ನೋಡಿದಳು. ಬಿಳಿಯ ವಜ್ರದ ಮೂಗುಬಟ್ಟಿನ ಹರಳು ಮಿಂಚಿತು. ಅಥವಾ ಅವಳ ಕುಡಿನೋಟ ಅವನಿಗು ಹಾಗೆ ಕಂಡಿತೋ?– ಅಂತೂ ರಾಜ ಸ್ತಬ್ಧನಾದ. ಅವಳ ಕೈಯನ್ನು ಹಿಡಿದು ಮೆಲ್ಲನೆ ಅದುಮಿದ. ರತ್ನಳ ಮುಖವೆಲ್ಲಾ ಕೆಂಪೇರಿ ಮತ್ತೆ ನಾಚಿಕೆಯ ಮುಸುಕು ಬಿತ್ತು. ಸಧ್ಯ ಅನಂತು ಭಾವ–ಭಾವ ಎಂದು ಬಾಗಿಲನ್ನು ತೆಗೆದು ಬಂದರೇನು ಗತಿ ಎಂದು ಅವಳಿಗೆ ಅನ್ನಿಸಿತು. ಆಗಲೆ ಅನಂತು ಬಂದ ಅಕ್ಕ-ಭಾವ ಥೂ ಥೂ! ಎಂದು ಕುಣಿದಾಡಿದ. ರತ್ನ ತಟ್ಟೆ ಬಟ್ಟಲನ್ನು ತೆಗೆದುಕೊಂಡು ಕೋಣೆಯಿಂದ ಹೋದಳು. ಆ ವೇಳೆಗಾಗಲೆ ಅನಂತು ರಾಜನಿಂದ ಲಂಚವನ್ನು ಕಿತ್ತಿದ್ದ.

## ೨೨

ಗಿರಿಜೆ ಕಸೂತಿ ಹಾಕಲು ಕಲಿತುಕೊಳ್ಳುವುದಕ್ಕೆ ಗೌರಿಯ ಮನೆಗೆ ಬರುತ್ತಿದ್ದಳು ಸ್ವಲ್ಪ ಹೊತ್ತು ಕೆಲಸಕ್ಕೆ ಬಾರದ ಹರಟೆಯಾದಮೇಲೆ ಒಂದು ಗಂಟೆಯ ಹೊತ್ತು ಕಸೂತಿಹಾಕುವುದನ್ನು ಹೇಳಿಸಿಕೊಳ್ಳುವಳು. ಕಾಲಕಳೆಯುಲು ಗೌರಿಗೂ ಗೆಳತಿ ಬೇಕಾಗಿತ್ತು. ಗಿರಿಜೆ ಜಂಭದವಳಾದರೂ ಗೌರಿಯ ಹತ್ತಿರ ನಡೆಯುವದಿಲ್ಲವೆಂದು ಅವಳಿಗೆ ಮನದಟ್ಟಾಗಿತ್ತು.

ಶನಿವಾರ ದಿನ ನಾಲ್ಕು ಗಂಟೆಗೆ ಬರಬೇಕಾಗಿದ್ದ ಗಿರಿಜ ಎರಡು ಗಂಟೆಗೆಲ್ಲಾ ಬಂದಳು. ಬರುತ್ತಲೇ ಹರಟೆಗೆ ಪ್ರಾರಂಭ

"ರಾಜಣ್ಣ ಬೆಂಗಳೂರಿಗೆ ಹೋದನಂತೆ—ಹೌದೇನ್ರಿ ?"

"ಗಿರಿಜ—ನಿನಗೆಲ್ಲೀ ಸುದ್ದಿ ಬರುತ್ತೆ ?...."

"ನನಗೆಲ್ಲೋ ಗೊತ್ತಾಗುತ್ತೆ.... ಮೊದಲ ದೀಪಾವಳಿಗೆ ಏನು ಕೊಟ್ಟರು ಅವನ ಮಾವ ?"

"ಚಿನ್ನದ ಗಡಿಯಾರದ ಸರಪಳಿ, ಮುಗುಟ...."

"ಪರ್ವಾಗಿಲ್ರೀ"

"ನಿಮ್ಮನೇಲಿ ಏನು ಕೊಟ್ಟರೆ...."

"ಉಂಗುರ....ಒಂದು ಉಲ್ಲಿನ ಸೂಟು."

"ಏನು—ಹೇಳಿದ್ರೆ....ನಿನ್ನ ಗಂಡ...."

"ಏನು ಹೇಳ್ತಾರ್ರೀ...."

"ಗಂಡುಬೀರಿ ಅಂದು ಕೊಂಡ್ರೇನೆ....ನೀನು ಮಾತನಾಡಿಸುವುದನ್ನು ನೋಡಿ"

"ಅದೇಕ್ರಿ....ಮಾತನಾಡಿಸಬೇಕು ಎನ್ನಿಸಿತು....ಮಾತನಾಡಿದೆ. ಅದರಲ್ಲಿ ನಾಚಿಕೆ ಏನು"

"ಏನು ಕೇಳಿದೆ...."

"ನನಗೆ ಮರ್ತುಹೋಗಿದೆ. ಗೌರಕ್ಕ...."

"ಇರ್ಲಿ ಹೇಳೆ...."

"ಅದೂ....ಇದೂ"

"ಅದಕ್ಕೆ ಅವರು ಏನು ಹೇಳಿದ್ರು...."

"ಮರ್ತೆಹೋಯ್ತು....ಹೋಗ್ರಿ ಅದೇ ಮಾತು...."

ಸದ್ಯ ಗಿರಿಜೆ ಮಾತನ್ನು ಮುಗಿಸಿ ಕಸೂತಿ ಹಾಕಲು ಬಟ್ಟೆಯನ್ನು ತೆಗೆದುಕೊಂಡಳು. "ಇವತ್ತು ಸ್ಪ್ರೇವರ್ಕ್ ಹಾಕೋಣ್ರಿ....ಬಾಲಕೃಷ್ಣನ ಸ್ಟೆನ್ಸಿಲ್ ತಂದಿದ್ದೇನೆ...."

"ಅದಕ್ಕೆ ತುಂಬಾ ಬಟ್ಟೆಬೇಕು...."

"ತಂದಿದ್ದೇನ್ರಿ"

'ಪಿನ್ನು ಒಹಳ ಬೇಕು. ಹೋದ ಸಾರಿ ಮಾಡಿದ ಹಾಗೆ ಆದ್ರೆ ಆಗೊಲ್ಲ'

"ಒಂದು ಡಬ್ಬಿ ತುಂಬಾ ತಂದಿದ್ದೇನೆ...."

"ಹಾಗಾದ್ರೆ ಮಸಿಯನ್ನು ಸಿದ್ಧಮಾಡು.... ನಾನು ಬಟ್ಟೆಯನ್ನು ಸರಿಯಾಗಿ ಹಾಸುತ್ತೇನೆ" ಎಂದು ಗೌರಿ ಬಟ್ಟೆಯನ್ನು ಸರಿಯಾಗಿ ಹಾಸಿ ಕಾಗದದ 'ಸ್ಟೆನ್ಸಿಲ್'ನ್ನು ಬಟ್ಟೆಯ ಮೇಲಿಟ್ಟು ಪಿನ್ನು ಚುಚ್ಚಿ ಅಚ್ಚಿಗೆ ಸಿದ್ಧ ಮಾಡಿದಳು. ಗಿರಿಜೆ ಮಸಿಯನ್ನು ಸಿದ್ಧಮಾಡಿ ಬ್ರಷ್ಷನ್ನು ಗೌರಿಗೆ ಕೊಟ್ಟಳು. ಬೇಕಾದ ಕಡೆಗೆಲ್ಲಾ ಬಟ್ಟೆಯ ಮೇಲೆ ಮಸಿಯನ್ನು ಚಿಮುಕಿಸಿದ್ದಾಯ್ತು.

"ಥೂ ಕೈಯೆಲ್ಲ ಮಸಿ ಆಯ್ತು"

"ಸುಮ್ಮನಿರೆ, ತೆಗೀಬೇಡ....ಎಲ್ಲಾ ಕಲಸಿಕೊಂಡು ಬಿಡುತ್ತೆ" ಎಂದು ಮೆಲ್ಲನೆ ಗೌರಿ ಮಸಿಯಿಂದ ತುಂಬಿದ್ದ ಕಾಗದವನ್ನು ತೆಗೆದಳು. ಕರೀಮಸಿಯ ಬಾಲಕೃಷ್ಣ ಬಟ್ಟೆಯ ಮೇಲೆ ಚೆನ್ನಾಗಿ ಇಳಿದಿದ್ದ.

"ಬಾಗಿಲಿನ ಪರದೆಗೆ ಈ ಡಿಸೈನ್ ಚೆನ್ನಾಗಿರಲ್ವೆ .... ಕೋದಂಡ ರಾಮನ ಚಿತ್ರ ಚೆನ್ನು.... "

"ಅವರು ಇದನ್ನೇ ಹಾಕು ಎಂದ್ರು"

"ಸರಿಯಮ್ಮ; ಅವರಿಗೆ ಬಾಲಕೃಷ್ಣನಂತಹ ಮಗುವಾಗಲಿ...."

"ನೀವು ಯಾವಾಗಲೂ ಹಾಗೇ .... ಮದುವೆ .... ಗಂಡ .... ಇಲ್ಲವೆ ಮಕ್ಕಳು!"

"ಅಷ್ಟಲ್ಲದೆ ಹೆಂಗಸಿಗೆ ಇನ್ಯಾವ ವಿಚಾರ ಬೇಕು ಹೇಳು."

"ಹೋಗ್ಲಿ ಬಿಡಿ ಗೌರಕ್ಕ" ಎಂದು ಗಿರಿಜೆ ಮುನಿದು ಕೂತಳು.

"ಒಂದು ಮಾತು ಹೀಗಂದ್ರೆ ಮೂತಿ ಸೊಟ್ಟ ಮಾಡುವುದೇನೆ.... ನಾನು ತಾನೆ ಏನಂದೆ? ನಿಮ್ಮ ಯಜಮಾನ್ರಿಗೆ ಗಂಡು ಮಗುವಾಗಲಿ ಎಂದ್ರೆ ನಿನಗೇನಾಯ್ತು?"

ಗಿರಿಜೆಯ ಮುಖವೆಲ್ಲಾ ತುಂಟ ನಗುವಿನಿಂದ ತುಂಬಿತು. ಗೌರಿ ಸ್ವಲ್ಪ ಹೊತ್ತು ಸುಮ್ಮನಿದ್ದಳು.

"ರೋಹಿಣಿಯ ಮನೆಗೆ ಮತ್ತೆ ಹೋಗಿದ್ಯಾ"

"ಮೊನ್ನೆ ಹೋಗಿದ್ದೆ....ಪಾಪ ಅವಳ ಗೋಳು ಹೇಳತೀರದು."

"ಮತ್ತೆ ಏನೋ ಜಗಳವಾಯ್ತಂತೆ.... "

"ದಿನಾಗಲೂ ಜಗಳವೆ....ಅವಳ ಗಂಡ ಕುಡೀತಾನಂತ್ರಿ"

"ಹೂ........"

'ಅಷ್ಟೇ ಅಲ್ಲ....ಯಾರೋ ಫರಂಗಿ ಹುಡ್ಗಿಯ ಹಿಂದೆ ತಿರುಗುತ್ತಾನಂತೆ

" ಎಲ್ಲೋ ಚಂಡಾಲ ಕಣೆ.... "

" ಅವಳನ್ನ ಹೋದ ಭಾನುವಾರ ಮನೆಗೆ ಕರೆದುಕೊಂಡು ಬಂದಿದ್ದ ನಂತೆ ! "

" ರೋಹಿಣಿ ಸುಮ್ಮನಿದ್ದಳೆ....? "

" ದೊಡ್ಡ ರಂಪವಾಗಿ....ಆನಂದರಾಯರನ್ನೂ ಬೈದು ಬಿಟ್ಟನಂತೆ. "

" ಪಾಪ ! ಅವರಿದನ್ನೆಲ್ಲಾ ನೋಡಬೇಕಾಯ್ತು "

" ಸುಂದರಮ್ಮನ್ನ ಕೂಡ ಬಾಯಿಮುಚ್ಚಿಸ್ತಾನಂತ್ರಿ...."

" ಅವಳೇ ಈ ಮದುವೆಗೆ ಕುಣೀತಿದ್ಲು. ರೋಹಿಣಿಯ ಕತ್ತಿಗೆ ಕಲ್ಲನ್ನ ಕಟ್ಟಿದಳು.... "

" ಆನಂದರಾಯರು....ಜವಳಿ ಅಂಗಡಿಯನ್ನ ಮಾರಿ ಬಿಡ್ತಾರಂತೆ."

" ಮದುವೆ ಮಾಡಿದ ಮೇಲೆ ಅಳಿಯನನ್ನ ಮನೇಲಿ ಇಟ್ಕೊಂಡು ಸುಖ ಪಡ್ತೇನೆ ಅಂತಿದ್ರು."

" ಗಿಳಿಯ ಹೀಗಾಗ್ತಾನೆ ಅಂತ ಹೇಗೆ ಗೊತ್ತು....?"

" ರೋಹಿಣಿಗೆ ಮುಖ್ಯ ಬಂತು ನೋಡು ಕಷ್ಟ.... "

" ಅವಳನ್ನೂ ರಾಜನನ್ನ ನೆನೆಸಿಕೊಂಡು ಬಹಳ ಅಳ್ತಾಳೆ.... "

" ಹಣೇಲಿ ಈ ರೀತಿ ಬರೆದಿದ್ರೆ ಏನು ಮಾಡೋಕಾಗುತ್ತೆ ಹೇಳು ಗಿರಿಜ. "

" ಏನೋ....ನೀವೇ ಈ ಸಂಬಂಧ ಬೇಡ ಅಂದರೆಂದು ಹೇಳ್ತಾಳೆ...."

" ರೋಹಿಣೀನೆ "

" ಹೌದು.... "

" ರಾಮ ರಾಮ ! ನಾನೆ ಮಾಡ್ಕೋ ಎಂದು ಹೇಳಿದವಳು. ಅವನು ಯೋಚಿಸಿ ಅವರ ಅಂತಸ್ತಿಗೆ ನಮ್ಮ ಸಂಬಂಧ ಸರಿಹೋಗದು....ಸರಿ ಸಮಾನ ವಾಗಿರದಿದ್ದರೆ ಅವರ ಹಂಗಿಗೆ ಬೀಳಬೇಕಾಗುತ್ತೆ....ಬೇಡ—ಎಂದ್ಬಿಟ್ಟ...."

" ಹೋಗ್ಲಿ ಬಿಡ್ರಿ....ಅವಳಿಗೆ ನಿಜ ಸ್ಥಿತಿ ತಿಳಿಯದು.... "

" .... .... .... .... "

" ಅವಳ ಗಂಡ ಏನೇನೋ ಹೆದರಿಸುತ್ತಾನಂತೆ. "

“ ಅದೇನೆ.... ”

“ ಮಿಲ್ಟ್ರಿಗೆ ಸೇರಿ ಬಿಡ್ತೇನೆ ಎಂದು. ”

“ ಹೋಗ್ಲೀಳು.... ಹೆಂಡತಿಯನ್ನು ಸುಖವಾಗಿಟ್ಟುಕೊಂಡು ಮನೆಯಲ್ಲಿ ಸುಖವನ್ನು ಕಾಣದೆ ಬೀದಿಯ ನೆರಳ ಹಿಂದೆ ಬೀಳ್ತಾನೆ.... ”

“ ಇನ್ನೂ ಅನುಕೂಲವೇ ಆಗುತ್ತೆ.... ಅಲ್ಲಿ ಹೇಳೋರಿಲ್ಲ ಕೇಳೋರಿಲ್ಲ.... ”

“ಎಷ್ಟು ದಿನ ನಾಯಿ ಹಾಗೆ ಅಲ್ದಾನು.... ಬೇಜಾರಾದ ಮೇಲೆ ‘ಅದೇ ಉಂಡೇನು ಕದಾ ತೆಗಿ’ ಅಂತ ಬರ್ತಾನೆ.... ”

“ ಏನು ಬರ್ತಾನೋ.... ಇದೆಲ್ಲ ನೋಡಿದ್ರೆ.... ”

“ ಏನು ಗಿರಿಜೆ.... ”

“ನನಗೇಕೋ ಭಯವಾಗುತ್ತೆ ನಮ್ಮತ್ತೆ ವಿಷಯ ನಿಮಗೆ ಗೊತ್ತಲ್ಲ!”

“ ಭಯವೆ ! ಹುಚ್ಚಿ.... ಎಂತೆಂತಹ ಕಷ್ಟಗಳನ್ನು ನೋಡಬೇಕೋ.... ಬರುವುದನ್ನು ಬೇಡ ಅನ್ನುವದಕ್ಕಾಗತ್ಯೆ ? ”

“ ನಮ್ಮತ್ತೆ ತುಂಬಾ ಕಾಡಿಸುತ್ತಾರಂತೆ.... ”

“ ಗಿರಿಜೆ.... ಇವತ್ತು ಒಂದು ಮಾತು ಹೇಳಿರ್ತೀನೆ.... ಎಲ್ಲಾ ಅತ್ತೆಯರೂ ತಾವು ಸೊಸೆಯರಾಗಿದ್ವಿ ಎನ್ನುವುದನ್ನು ಮರೆತಿರುವುದಿಲ್ಲ. ಅವರಿಗೆ ಬೇಕಾದ ಹಾಗೆ ನಡೆದುಕೊಂಡ್ರೆ ಸರಿ.... ಅವರನ್ನು ಎಂದೂ ಎದುರುಹಾಕಿಕೊಳ್ಳಬೇಡ.... ”

“ ನನಗೇಕೋ ಅದೇ ಭಯವಾಗಿದೆ. ”

“ ನಿನ್ನ ಯಜಮಾನರಿಗೂ ಅವರ ಮನೆಯವರಿಗೂ ಒಂದು ಸೇತುವೆಯಾಗಿರಬೇಕು.... ಸರಿಯಾಗಿ ಅರ್ಥ ಮಾಡಿಕೊಳ್ಳದೆ ನೀನು ಹಳ್ಳದ ಆ ಕಡೆ ಬೇರೆ ಮನೆಯಾಗಬಾರದು.... ”

“ ಸರಿ ಗೌರಕ್ಕ.... ”

“ ಕೇಳೆ.... ಎಲ್ಲ ನಿನ್ನ ಕೈಲಿದೆ.... ನೀನು ನಡೆದಹಾಗೆ ನಿನ್ನ ಕಷ್ಟಗಳು ಬಾಲ ಮುದ್ರಿಕೊಳ್ಳುತ್ವೆ.... ಅವರು ಹೇಗೆ? ”

“ ಬಹಳ ಒಳ್ಳೆಯವರಿ.... ಮೊನ್ನೆ ಬಂದಾಗ ತುಂಬಾ ಹೇಳಿದ್ರು.... ಅವರ ಮನೆಯ ಭಯ ಕಾಡಿಸುತ್ತಿದ್ದಾಗ ಅವರು ಮಾತನಾಡಿಸಿದ್ರೆ ಸಾಕು.... ಒಂದು ಸಮಾಧಾನ.... ”

" ತಾಯಿ ಹೆಂಡತಿಯನ್ನು ಹಿಂಸಿಸುತ್ತಿದ್ದರೆ ನೋಡುತ್ತಾ ಕುಳಿತಿರಲು ಅವನೇನು ಮುತ್ತಾಳನಲ್ಲ.... "

" .... .... .... "

" ಇನ್ನೊಂದು ಮಾತು ಗಿರಿಜ.... "

" ಏನು.... "

" ಇವತ್ತಿಗೆ ಆಯ್ತು....ನಿನ್ನ ಗಂಡನ ವಿಷಯವಾಗಲಿ, ಅತ್ತೆಯ ವಿಷಯವಾಗಲಿ ಯಾರೊಡನೆಯೂ ಚರ್ಚಿಸಬಾರದು. "

ಗಿರಿಜೆ ತಲೆ ತಗ್ಗಿಸಿದಳು.

" ನಮ್ಮ ಕಷ್ಟವನ್ನು ನುಂಗಿಕೊಂಡು ನಾವೇ ಅನುಭವಿಸಬೇಕು.... "

" ಹೌದು....ಗೌರಕ್ಕ "

ಗಿರಿಜೆಗೆ ಒಂದು ಸಮಾಧಾನ ಸಿಕ್ಕಿತು. ಗೌರಿಗೆ ರೋಹಿಣಿಯ ವಿಷಯ ಹೆಚ್ಚಾಗಿ ತಿಳಿಯಿತು.

" ಅಯ್ಯೋ ನೀವು ಮಾಡಿದ ಕೆಲಸವನ್ನೆಲ್ಲ ಹಾಳುಮಾಡಿಬಿಟ್ಟಳಲ್ಲೆ ಸರಸು, ಮಾತನಾಡುತ್ತಾ ಕುಳಿತರೆ ನಿಮಗೆ ಮೈಮೇಲೆ ಎಚ್ಚರವೇ ಇರೊಲ್ಲ" ಎಂದು ಕಮಲಮ್ಮ ಅವರು ಕುಳಿತಿದ್ದ ಕೋಣೆಗೆ ಬಂದಳು. ಸರಸು ಮಸಿಯನ್ನೆಲ್ಲ ಬಟ್ಟೆಯಮೇಲೆ ಚೆಲ್ಲಿ ಮೈ ಕೈಯೆಲ್ಲಾ ಮಸಿಮಾಡಿಕೊಂಡಿದ್ದಳು. ಸರಸುಗೊಂದು ಏಟು ಕೊಟ್ಟು " ಎಲ್ಲಾ ಹಾಳು ಮಾಡಿದಳು, ಒಂದ್ನಿಮಿಷದಲ್ಲಿ ! " ಎಂದಳು ಗೌರಿ.

" ಬಾಲಕೃಷ್ಣನನ್ನು ನೋಡಿ ಸಮ್ಮನಿರ್ತಾಳೆಯೆ ಈ ರಾಧೆ" ಎಂದು ಸರಸಳ ಗಲ್ಲವನ್ನು ಅಲುಗಿಸಿ ಗಿರಿಜ ತಮ್ಮ ಮನೆಗೆ ಹಿಂದಿರುಗಿದಳು. ಸರಸಳ ಮುಖ ಮೈ ಕೈಗಳನ್ನು ತೊಳೆದು ಬೇರೆ ಬಟ್ಟೆ ಹಾಕಿದಮೇಲೆ ಗೌರಿ, ಗಿರಿಜೆ ಹೇಳಿದ್ದನ್ನೆಲ್ಲಾ ಸೂಕ್ಷ್ಮವಾಗಿ ಕಮಲಮ್ಮನಿಗೆ ತಿಳಿಸಿದಳು. ರೋಹಿಣಿಯ ವಿಷಯವಂತೂ ತುಂಬಾ ದುಃಖದ ಸಂಗತಿ. ಪಾಪ ! ಹೆಣ್ಮಗಳೆಷ್ಟು ನೊಂದುಕೊಂಡಳೋ– ಆದರೆ ರಾಜನೊಡನೆ ತನ್ನ ಮದುವೆಗೆ ನಾವು ಕಲ್ಲು ಹಾಕಿದೆವೆಂದು ಕೊಂಡಳಲ್ಲಾ– ಗಿರಿಜೆಯ ಮುಗ್ಧ ಮನಸ್ಸನ್ನು ನೆನೆದಳು. ಪಾಪ ಬಾಳಿನ ಕಷ್ಟಸುಖಗಳನ್ನು ಕಂಡರಿಯದ ಹುಡುಗಿ....ತಾನಾಗೇ ಎಲ್ಲಾ ಅನುಭವವಾಗುತ್ತೆ. ಎಂದುಕೊಂಡಳು.

"ಒಂದು ಮಾತು ಅವಳಿಗೆ ಹೇಳಿ ಕಳುಹಿಸೋಣವೆ…."

"ರೋಹಿಣೀಗೆ ?"

"ಹೂಂ !"

"ಒಳ್ಳೆಯವಳು….ಕರೆಸಿ ಅವಳಿಂದ ಒಂದು ಮಾತು ಅನ್ನಿಸಿಕೊಳ್ಳಬೇಕೆನೊ."

"ಅಲ್ಲಿ ಗೌರಿ….ಕರೆದು ನಿಜ ವಿಷಯ ತಿಳಿಸೋಣ…."

"ಏನಾದ್ರೂ ಅವಳನ್ನು ಕರೆಯುವುದು ಸರಿಯಲ್ಲಮ್ಮ…."

"ಹಾಗಾದ್ರೆ ಅವಳಿಗೆ ವಿಷಯ ಗೊತ್ತಾಗೋದು…. ?"

"ಗಿರಿಜೆಹತ್ರ ಹೇಳಿಕಳುಹಿಸಿದ್ದೇನೆ…."

"ಸರಿ" ಎಂದು ಕಮಲಮ್ಮ ನಿಟ್ಟುಸಿರು ಬಿಟ್ಟಳು.

೨೩

ರಾಜ ದೀಪಾವಳಿಯಿಂದ ಬಂದ ಒಂದು ವಾರದೊಳಗೆ ಪಟ್ಟಣದಿಂದ ಶುಭ ಸಮಾಚಾರ ಬಂದಿತ್ತು. ರತ್ನ ದೊಡ್ಡವಳಾದಳೆಂದು ಅರಸಿನ ಹಚ್ಚಿದ ಕಾಗದ ಪಟ್ಟಣದಿಂದ ಬಂತು. ಬೇಗನೆ ಮುಹೂರ್ತ ಏರ್ಪಡಿಸಿಬಿಡುವುದು ಸರಿಯೆಂದು ಬರೆದಿದ್ದ ಈಶ್ವರೈಯನ ಕಾಗದಕ್ಕೆ "ಪರೀಕ್ಷೆ ಮೂರು ತಿಂಗಳಿವೆ; ಆಮೇಲೆ ಯೋಚಿಸೋಣ" ಎಂದು ಬರೆದಿದ್ದ ರಾಜ. ಆದರೆ ಮೂರು ತಿಂಗಳು ಮೂರು ದಿನದಂತೆ ಕಳೆಯಿತು. ಪರೀಕ್ಷೆ ಮುಗಿದಿದ್ದರೂ ಒಂದೆರಡು ದಿನಗಳಲ್ಲಿ ಫಲಿತಾಂಶ ತಿಳಿಯುತ್ತಿದ್ದುದರಿಂದ ಬೆಂಗಳೂರಿನಲ್ಲೇ ಇದ್ದ. ಪುಸ್ತಕಗಳನ್ನು ಕಟ್ಟಿಟ್ಟು ತನ್ನ ಮುಂದಿನ ಜೀವನದ ಹಾದಿಯನ್ನು ಯೋಚಿಸುತ್ತಿದ್ದ. ಕೃಷ್ಣಸ್ವಾಮಿಯವರು, ರಾಜನಿಗೆ ರ್ಯಾಂಕ ಬರಬಹುದೆಂದು ಕಾಲೇಜಿನಲ್ಲಿ ಅಧ್ಯಾಪಕರ ಜಾಗಕ್ಕೆ ಶಿಫಾರಸ್ ಮಾಡುವುದಾಗಿ ಹೇಳಿದ್ದರು. ಎಲ್ಲವೂ ಒಂದು ವಾರದಲ್ಲಿ ತೀರ್ಮಾನವಾಗುತ್ತಿದ್ದುದರಿಂದ ಮನಸ್ಸಿನಲ್ಲೂ ಕಾತುರದಿಂದಿತ್ತು.

ರಾಜನ ಸ್ನೇಹಿತರೆಲ್ಲಾ ತಮ್ಮ ತಮ್ಮ ಊರಿಗೆ ಹೋದರು. ಕೆಲವರು ಮಾತ್ರ ನೋಡಬೇಕಾದ ಅನೇಕ ಜಾಗಗಳಿಗೆ ಹೋದರು. ಹಾಸ್ಟಲಿಗೆ ರಜವಿದ್ದುದರಿಂದ ಕೃಷ್ಣಸ್ವಾಮಿಯವರ ಮನೆಯಲ್ಲೇ ಬಂದಿದ್ದ ರಾಜ. ಸ್ವಲ್ಪದಿನದಲ್ಲೇ ತಮ್ಮನ್ನು ಬಿಟ್ಟು ಮೈಸೂರಿಗೆ ಹೋಗುವನಲ್ಲಾ ಎಂದು ಮಕ್ಕಳೆಲ್ಲಾ ಒದ್ದಾ

ಡಿದರು. ಶಾರದಮ್ಮನಂತೂ ಮನಸ್ಸಿಗೆ ತುಂಬಾ ಹಚ್ಚಿಕೊಂಡಿದ್ದಳು. ರತ್ನ ದೊಡ್ಡವಳಾದ್ದು ಮತ್ತಿ ಊರಿನ ಎಲ್ಲಾ ವಿಷಯವನ್ನೂ ಆಕೆ ತಿಳಿದು ಕೊಂಡಳು.

" ನೀನು ಊರು ಬಿಟ್ಟರೆ ಏಕೋ ಬಿಕೋ ಅನ್ನುತ್ತೆ ರಾಜ " ಎಂದು ಶಾರದಮ್ಮ ಹೇಳಿದಾಗ " ಹಾಗನ್ನೋಬೇಡಿ....ಎಲ್ಲಿದ್ದರೂ ನಿಮ್ಮನ್ನು ಮರೆ ಯಲು ಸಾಧ್ಯವೆ " ಎಂದು ರಾಜ ಹೇಳಿದ್ದ.

ನಿರೀಕ್ಷಿಸಿದಂತೆ ರಾಜನಿಗೆ ರ್‍ಯಾಂಕು ಬಂದಿದ್ದಲ್ಲದೆ ಶಾತಾ ಚಿನ್ನದ ಮೆಡಲು ಬಂದಿತ್ತು. ಕೃಷ್ಣಸ್ವಾಮಿಯವರ ಸಂತೋಷವಂತೂ ಹೇಳ ತೀರದು—ತನ್ನ ಶಿಷ್ಯ ಅಪೂರ್ವ ಖ್ಯಾತಿಹೊಂದಿದನೆಂದು....ತನಗೆ ಪರಿಚಯ ವಿದ್ದ ವಿಶ್ವವಿದ್ಯಾನಿಲಯದ ಅಧಿಕಾರಿಗಳನ್ನು ನೋಡಿದಮೇಲೆ ರಾಜನಿಗೆ ಅಧ್ಯಾಪಕರ ಕೆಲಸ ಸಿಗುವುದು ಕಷ್ಟವೆಂದು ಕಾಣಲಿಲ್ಲ. ಆದರೂ " ಈ ಕಾಲ ದಲ್ಲಿ ಕೆಲಸದ ಹುಕುಂ ಬರುವವರೆಗೂ ನೆಚ್ಚಿಗೆಯಿಲ್ಲ" ಎಂದು ರಾಜ ಯೋಚಿಸಿದ.

ವಿಜ್ಞಾನಶಾಲೆಯ ಆಫೀಸಿಗೆ ಹೋಗಿ ಪದಕವನ್ನು ಮತ್ತಿತರ ಸರ್ಟಿ ಫಿಕೇಟುಗಳನ್ನೂ ತೆಗೆದುಕೊಂಡು ಬರುವಾಗ್ಗೆ ಸಿ. ವಿ. ರಾಮನ್ ಅವರನ್ನು ನೋಡಿ ಅವರ ಆಶೀರ್ವಾದವನ್ನು ಪಡೆದ. ದೇಶದ ಬೆಳಕಾಗಿ ಬಾಳೆಂದು ಹರಸಿದ್ದರು. ಮನೆಗೆ ಬಂದವನೆ ಶಾರದಮ್ಮನವರ ಕೈಲಿ ಪದಕವನ್ನು ಕೊಟ್ಟ. ಅಂಗೈ ಅಗಲದಷ್ಟು ದೊಡ್ಡದಾದ ಪದಕ !

" ಎಷ್ಟು ಕಷ್ಟಪಟ್ಟು ಓದಿದೆಯೋಪ್ಪ. "

" ಎಲ್ಲಾ ನಿಮ್ಮ ಆಶೀರ್ವಾದ....ಮಗನಿಗಿಂತಲೂ ಹೆಚ್ಚಾಗಿ ಕಾಪಾ ಡಿದ್ರಿ....ಈ ಋಣವನ್ನು ಹೇಗೆ ತೀರಿಸಬೇಕೋ ತಿಳಿಯದು. "

"ಎಲ್ಲಿಯಾದರೂ ಹಾಯಾಗಿ ಬಾಳಪ್ಪ....ಯಾವಾಗಲಾದರೂ ಜ್ಞಾಪಿ ಸಿಕೊಂಡರೆ ನಿನ್ನ ದೊಡ್ಡ ಗುಣ.... "

ರಾಜನಿಗೆ ಮಾತು ಹೊರಡದಾಯಿತು. ಕೃಷ್ಣಸ್ವಾಮಿಯವರಿಂದ ಒಂದು ಶಿಫಾರ್ಸಿನ ಕಾಗದ ತೆಗೆದುಕೊಂಡು, ಅವರ ಮಕ್ಕಳೊಡನೆ ಮಾತ ನಾಡಿ ರಾಜ ಸ್ಟೇಶನ್ನಿಗೆ ಹೊರಟ. ಅಲ್ಲಿಗೆ ರಾಜನ ವಿದ್ಯಾಭ್ಯಾಸದ ಮೆಟ್ಟಲು ದಾಟಿತು. ಇನ್ನು ಸಂಸಾರವಂದಿಗನಾಗುವುದಷ್ಟೆ ಬಾಕಿ.

ರಾಜ ಮೈಸೂರಿಗೆ ಬಂದ ಒಂದೆರಡು ದಿನಗಳಲ್ಲಿಯೇ ಸುಬ್ಬಣ್ಣ ಹಳ್ಳಿ ಯಿಂದ ಬಂದ. ಈಶ್ವರೈಯನ ಕಾಗದವೂ ಬಂದಿತ್ತು.

" ಬೆಳದ ಹುಡುಗಿಯನ್ನು ತವರಲ್ಲಿ ಬಿಟ್ಟಿರುವುದು ಸರಿಯಲ್ಲ. ಕಮಲು" ಎಂದು ಸುಬ್ಬಣ್ಣ ಹೇಳಿದ.

" ನಾನಾಗ್ಲೆ ಹೇಳ್ದೆ.... ಈಗ್ಲೇ ಏಕೆ ಜವಾಬ್ದಾರಿ ಅಂತಾನೆ. "

" ಸರಿ ಸರಿ ಹಾಗೆ ಹೇಳೋದಿಕ್ಕೇನು.... ಅವನ ಹೆಂಡತಿಯೊಬ್ಬಳು ನಮಗೆ ಭಾರವೆ.... "

" ನೀನೇ ಒಂದು ಮಾತು ಹೇಳಪ್ಪ ಕಳುಹಿಸುತ್ತೇನೆ. " ಎಂದು ಹೇಳಿ ರಾಜನನ್ನು ಕಳುಹಿಸಿದಳು. ರಾಜ ಸುಬ್ಬಣ್ಣನವರ ಹತ್ತಿರ ಬೇಕಾದಷ್ಟು ವಾದಿಸಿದ. ಆದರೂ ಹಿರಿಯರು ಹೇಳುವ ಮಾತು ಸರಿಯೆಂದು ರಾಜನಿಗೆ ಕಂಡುಬಂತು. ಅಲ್ಲದೆ ದೊಡ್ಡವಳಾದ ರತ್ನಳ ಜಾಗ ತಮ್ಮ ಮನೆಯಲ್ಲಿ.... ರಾಜನ ಒಪ್ಪಿಗೆಯನ್ನು ಸುಬ್ಬಣ್ಣ ಪಟ್ಟಣಕ್ಕೆ ಬರೆದು ತಿಳಿಸಿದ. ಈಶ್ವರೈಯ ಗೊತ್ತುಮಾಡಿ ಬರೆಸಿದ್ದ ಮುಹೂರ್ತ ಗಟ್ಟಿಯಾಗದಿದ್ದರೂ ಅದಾದನಂತರ ನಾಲ್ಕು ದಿನಕ್ಕೆ ಗೊತ್ತಾಯ್ತು.

ರಾಜ ಎಲ್ಲರೊಡನೆ ಪಟ್ಟಣಕ್ಕೆ ಬಂದ. ಈಶ್ವರೈಯ ಅಳಿಯನಿಗೆ ಹೊಸ ಪಂಚೆ, ಮಗುಟವನ್ನು ತಂದಿದ್ದಲ್ಲದೆ ರತ್ನಳಿಗೆ ಬನಾರಸ್ ಸೀರೆಯೊಂದು ತಂದಿದ್ದರು. ಎರಡು ದಿನದ ಶಾಸ್ತ್ರ ಮುಗಿದು ರತ್ನ ಹೆತ್ತವರ ಮನೆಗೆ ಹೊರಗಾದಳು. ಚಿಕ್ಕಂದಿನ ದಿನಗಳನ್ನು ಕಳೆದಿದ್ದ ಮನೆಯನ್ನು ಬಿಟ್ಟು ಬರುವುದು ಸುಮ್ಮನೆ ಆಯ್ತೆ? ರತ್ನಳ ಜೊತೆಗೆ ಲಕ್ಷ್ಮಮ್ಮ ಮೈಸೂರಿಗೆ ಹೋಗುವುದೆಂದು ಗೊತ್ತಾಯ್ತು. ಮನೆಯನ್ನು ಬಿಡುವಾಗ ಅನಂತನಂತೂ ರತ್ನಳ ಕೈಹಿಡಿದು ಅತ್ತುಬಿಟ್ಟ. ಅವನ ತಲೆಯನ್ನು ಸವರಿ ಕೈಗೆ ಒಂದು ರೂಪಾಯನ್ನು ಕೊಟ್ಟು ಎಲ್ಲರೊಡನೆ ಗಾಡಿಯನ್ನು ಹತ್ತಿದಳು. ರಾಜ ಮಾವನ ಜೊತೆಗೆ ನಡೆದು ಸ್ಟೇಷನ್ ಸೇರಿದ. ರೈಲು ಬಂದಮೇಲೆ ಎಲ್ಲರೂ ಕುಳಿತರು. ರೈಲು ಪಟ್ಟಣ ಬಿಟ್ಟು ಕಾವೇರಿ ನದಿಯ ಸೇತುವೆಯ ಮೇಲೆ ಹೋಗುವಾಗ ರತ್ನಳಿಗೆ ತುಂಬಾ ದುಃಖವಾಯ್ತು. ತನ್ನ ಗೆಳತಿಯರನ್ನು ನೆನೆದಳೋ—ತಂಗಿಯರನ್ನು ಜ್ಞಾಪಿಸಿಕೊಂಡು ಅತ್ತಳೋ. ಪಾಪ! ನಾಲ್ಕೈದು ದಿನ ಮೈಸೂರಲ್ಲಿದ್ದು ಲಕ್ಷ್ಮಮ್ಮ ಹಿಂದಿರುಗುವಾಗ ರತ್ನಳಿಗೆ ಹೇಳಬೇಕಾದ ಬುದ್ಧಿವಾದವನ್ನೆಲ್ಲಾ ಹೇಳಿದರು. ಹೆಣ್ಮಕ್ಕಳೇ ಹಾಗೆ. ಬೇರೆಯವರ ಮನೆಯ ನಂದಾದೀಪವಾಗುವರು. ರತ್ನ ಅತ್ತೆಯ ಮನೆಗೆ ಬಂದ

ಒಂದೆರಡು ದಿನಗಳಲ್ಲೇ ಎಲ್ಲರಿಗೂ ಹೊಂದಿಕೊಂಡು ಬಿಟ್ಟಳು. ಕಮಲಮ್ಮನ ವಾತ್ಸಲ್ಯ, ಗೌರಿಯ ಆದರ, ಸರಸುವಿನ ಹುಡುಗಾಟ ಎಲ್ಲಕ್ಕಿಂತಲೂ ರಾಜನ ಪ್ರೇಮ. ಇನ್ನೂ ಹೊಸದು. ಹೇಗೆ ಹೇಗೆ ನಡೆದುಕೊಳ್ಳಬೇಕೆಂದು ಗೌರಿ ಹೇಳಿಕೊಡುತ್ತಿದ್ದಳು. ಒಂದೊಂದು ಸಾರಿ ಯಾವುದಾದರೂ ಕೆಲಸ ಮಾಡುತ್ತಿದ್ದರೆ, ಹಾಗೆಯೇ ಕುಳಿತುಬಿಡುತ್ತಿದ್ದಳು. ಗೌರಿಗೆ ತಿಳಿದಿತ್ತು–ತವರು ಬಿಟ್ಟು ಬಂದ ಹೊಸದರಲ್ಲಿ ಹಾಗೆಯೇ ಎಂದು. ರತ್ನಳಿಗೆ ಹೆಚ್ಚಿನ ಕೆಲಸ ಮಾಡಲು ಬಿಡದೆ ತಾನೇ ಎಲ್ಲವನ್ನೂ ಮಾಡಿಬಿಡುವಳು. ಕಮಲಮ್ಮನೂ ಹಾಗೇ....ಈಗ್ಲೇ ಏಕೆ....ನಾಲ್ಕು ದಿನ ಅವಳು ಹಾಯಾಗಿರ್ಲಿ ಎಂದು ಯಾವ ಕೆಲಸವನ್ನೂ ಹೇಳುತ್ತಿರಲಿಲ್ಲ. ಬೆಳಗಿನ ತಿಂಡಿ ತೀರ್ಥ ಮೊದಲುಗೊಂಡು ಮಾಡಿಡುತ್ತಿದ್ದಳು. ಎಲ್ಲಿ ಹೋಗಲಿ ರಾಜನಿಗೆ ತಿಂಡಿ ತೀರ್ಥ ಕೊಡುವುದೊಂದು ರತ್ನಳ ಕೆಲಸ. ಕಮಲಮ್ಮನಿಗೂ ಗೌರಿಗೂ ಸದ್ಯ ಸೊಸೆ ಒಳ್ಳೆಯವಳೇ ಅನ್ನಿಸಿತು.

ರಾಜ ಬೆಳಗಿನ ಒಂದೆರಡು ಗಂಟೆಗಳನ್ನೆಲ್ಲಾ ಬಿಟ್ಟು ಮಿಕ್ಕ ಹೊತ್ತನ್ನೆಲ್ಲಾ ಮನೆಯಲ್ಲೇ ಕಳೆಯುತ್ತಿದ್ದ. ತನ್ನ ದೇಹವೆಲ್ಲಾ ಪ್ರೇಮದ ಮುದ್ದೆಯೋ ಎನ್ನುವಂತೆ ಮನೆಗೆ ಬಂದಿದ್ದ ಹೆಂಡತಿ. ಎದ್ದರೆ ಉಪಚಾರ, ಕೂತರೆ ಸೇವೆ. ಅವನಿಗೆ ಒಂದೇ ಯೋಚನೆ– ಬೇಗ ಕೆಲಸ ಸಿಕ್ಕಿಬಿಟ್ಟರೆ ಸಾಕೆಂದು.

ರಾಜ ವಿಶ್ವವಿದ್ಯಾನಿಲಯದ ಆಫೀಸಿನಿಂದ ಮನೆಗೆ ಬಂದಾಗ ಗೌರಿ ಗಿರಿಜೆಯೊಂದಿಗೆ ಮಾತನಾಡುತ್ತಾ ಕುಳಿತಿದ್ದಳು. ತನ್ನ ಕೋಣೆಯಲ್ಲಿ ರತ್ನ ಪೆಟ್ಟಿಗೆಯಲ್ಲಿದ್ದ ಬಟ್ಟೆಗಳನ್ನು ಮಡಿಸಿಡುತ್ತಿದ್ದಳು. ಅವಳಿಗೆ ಕಾಣಬಾರದೆಂದು ಮುಚ್ಚಿಟ್ಟಿದ್ದ ಲಕೋಟೆ ಅವಳ ಕಣ್ಣಿಗೆ ಬಿತ್ತು. ನೋಡಬಾರದೆಂದಿದ್ದರೂ ನೋಡಿ ಬಿಟ್ಟಳು. ರಾಜ–ರೋಹಿಣಿ ಇಬ್ಬರೂ ಒಟ್ಟಿಗೆ ನಿಂತು ತೆಗೆಸಿಕೊಂಡ ಭಾವ ಚಿತ್ರ. ಜೊತೆಗೆ ರಾಜನ ಒಂದೆರಡು ಕಾಗದಗಳು. ರೋಹಿಣಿಯೊಡನೆ ಮದುವೆಯಾಗಬೇಕಿದ್ದ ತನ್ನ ರಾಜ ಬೇಡವೆಂದು ಹೇಳಿದ್ದೂ, ರೋಹಿಣಿಯ ವಿಷಯವೂ ಅವಳಿಗೆ ಸ್ವಲ್ಪ ತಿಳಿದಿತ್ತು. ಇಂದು ರೋಹಿಣಿಯನ್ನು ಭಾವ ಚಿತ್ರದ ಮೂಲಕ ಕಂಡಳು. ರೋಹಿಣಿಯ ವಿಷಯದಲ್ಲಿ ಅವಳಿಗೆ ಕೂಡ ಪಾಪ ! ಎನ್ನಿಸಿತ್ತು. ತಾನು ನೋಡಿದ್ದು ಗೊತ್ತಾಗದಿರಲೆಂದು ಮುಂಚೆ ಇದ್ದ

ಲ್ಲಿಯೋ ಇಡುವಾಗ್ಗೆ ಹೊರಗಿನಿಂದ ರಾಜ ಕೋಣೆಯೊಳಕ್ಕೆ ಬಂದಿದ್ದ. ರತ್ನ ಬೆಚ್ಚಿ ನಿಂತಳು. ರಾಜನಿಗೆ ಸ್ವಲ್ಪ ಅರ್ಥವಾಯ್ತು. ಆದರೆ ಆ ವಿಷಯವನ್ನು ಹೇಗೆ ಬಿಡಿಸಿಹೇಳಬೇಕು? ಸುಮ್ಮನಿದ್ದ ರತ್ನ ತಿಂಡಿಯನ್ನು ತಂದುಕೊಟ್ಟಳು. ರಾಜ ಮಾತಾಡದೆ ತಿಂದು ಕಾಫಿಯನ್ನು ಕುಡಿದ. ಬಂದು ಅಷ್ಟು ಹೊತ್ತಾದರೂ ರತ್ನ ಮಾತಾಡಿಸದಿರುವುದನ್ನು ಕಂಡು ಅವನೇ–

"ಏಕೆ ರತ್ನ ಹೀಗಿದ್ದೀ.... "

".... .... .... ...."

"ಇದೇ ಬೇಜಾರು ಅನ್ನೋದು. ಮಾತನಾಡಬಾರದೆ ?"

ರತ್ನ ಉತ್ತರ ಕೊಡದೆ ಸುಮ್ಮನಿದ್ದಳು. ರಾಜ ಸುತ್ತಿ ಸುತ್ತಿ ಬಂದಿದ್ದ. ಕೆಲಸ ಸಿಗುವುದು ಬಿಡುವುದು ಮೂರನೆಯ ದಿನ ಗೊತ್ತಾಗುತ್ತಿತ್ತು. ಮನೆಗೆ ಬಂದರೆ ಈ ರೀತಿ. ಬೇರೆ ಯಾವ ವಿಷಯವಾಗಿದ್ದರೂ ರಾಜ ಒಂದಲ್ಲ ಒಂದು ರೀತಿ ಹೇಳಿ ಸಮಾಧಾನಮಾಡುತ್ತಿದ್ದ. ಆದರೆ ಈ ವಿಷಯ ಅವಳೊಡನೆ ಚರ್ಚಿಸುವಂತಿರಲಿಲ್ಲ. ಬೇಜಾರಾಗಿ ಪುನಃ ಸುತ್ತಾಡಿಬರಲು ಹೊರಟೇಬಿಟ್ಟ. ರತ್ನ ಅಳುತ್ತಿದ್ದುದು ಕೇಳಿಸಿದರೂ ನಡೆದುಬಿಟ್ಟ. ರತ್ನ ಅಳುತ್ತಾ ಕುಳಿತುಬಿಟ್ಟಳು.

ರಾತ್ರಿ ಒಂಭತ್ತು ಗಂಟೆಯಾದರೂ ಮನೆಗೆ ರಾಜನಿನ್ನೂ ಬಂದಿರಲಿಲ್ಲ. ಆ ದಿನ ರತ್ನ ಒಂದು ಬಗೆಯಾಗಿರುವುದನ್ನು ಗೌರಿ ಕಂಡು ಏನು ಹೇಳೆಂದು ಕೇಳಿದರೂ ಅವಳು ಹೇಳುತ್ತಿರಲಿಲ್ಲ. ಕಮಲಮ್ಮ ಒಂಭತ್ತರಿಂದ ಹತ್ತು ಗಂಟೆಯ ವರೆಗೂ ಕಾದುಕೂತಳು. ರಾಜ ಬರಲಿಲ್ಲ. ರತ್ನಳಿಗೆ ತುಂಬಾ ಭಯವಾಯ್ತು. ಗೌರಿ "ಎಲ್ಲೋ ಸಿನಿಮಾಕ್ಕೆ ಹೋಗಿದ್ದಾನೆ, ಬರ್ತಾನೆ" ಎಂದು ಧೈರ್ಯ ಹೇಳಿದಳು. ಸ್ವಲ್ಪ ಹೊತ್ತಾದಮೇಲೆ ರಾಜ ಬಂದ. ಕಮಲಮ್ಮ ಊಟಕ್ಕೆ ಬಡಿಸುವಾಗ ಏಕೆ ಹೊತ್ತಾಯ್ತೆಂದು ಕೇಳಿದಳು. ಕೆಲಸದ ವಿಷಯದಲ್ಲಿ ಯಾರನ್ನೋ ನೋಡಲು ಹೋಗಿದ್ದನೆಂದು ಹೇಳಿದ.

ರತ್ನ ಕೋಣೆಯಲ್ಲಿ ಹಾಸಿಗೆಯನ್ನು ಹಾಸುತ್ತಿದ್ದಾಗ ಊಟ ಮುಗಿಸಿ ರಾಜ ಬಂದ. ರತ್ನಳೂ ಊಟಮಾಡಿಕೊಂಡು, ಬೆಳ್ಳಿಯ ಲೋಟದಲ್ಲಿ ಹಾಲನ್ನೂ ವೀಳ್ಯವನ್ನೂ ತೆಗೆದುಕೊಂಡು ಕೋಣೆಗೆ ಬಂದಳು. ರಾಜ ಹಾಸಿಗೆಯಲ್ಲಿ ಮಲಗಿಕೊಂಡು ಯಾವುದೋ ಪುಸ್ತಕವನ್ನು ಓದುತ್ತಿದ್ದ. ರತ್ನ

ಕೋಣೆಯ ಬಾಗಿಲನ್ನು ಹಾಕಿ ದೀಪವನ್ನು ಮಡಿಸಿಕೊಟ್ಟಳು. ಹೇಗೆ ಮಾತನಾಡಿಸಬೇಕೆಂದು ರತ್ನ ಯೋಚಿಸುತ್ತಿದ್ದಂತೆ ತಾನು ಯಾವ ರೀತಿ ಅವಳನ್ನು ಸಮಾಧಾನಮಾಡಬೇಕೆಂದು ರಾಜ ಚಿಂತಿಸುತ್ತಿದ್ದ. ಇದ್ದಕ್ಕಿದ್ದಂತೆಯೇ 'ಸಾಯಂಕಾಲ' ಎಂದು ಇಬ್ಬರೂ ಹೇಳಿದರು. ರಾಜನ ಧ್ವನಿಗೆ ರತ್ನಳ ಮಂಜುಳ ಧ್ವನಿ ಕೂಡಿತು.

"ಏನು ಸಾಯಂಕಾಲ, ರತ್ನ"

"ನೀವು ಕೋಪಿಸಿಕೊಂಡಿದ್ದೀರಿ"

"ಇಲ್ಲ ರತ್ನ....ಏನು ಹೇಳು"

"ಆ ಫೋಟೋ ನೋಡಿದೆನೆಲ್ಲಾ ಎಂದು ಕೋಪಿಸಿಕೊಂಡಿದ್ದೀರಿ"

"ಕೋಪಿಸಿಕೊಂಡಿಲ್ಲ...."

"ಮತ್ತೆ"

"ಪೂರ್ತಿ ವಿಷಯ ತಿಳಿಯದೆ ನೀನು ತಪ್ಪು ಅರ್ಥಮಾಡಿಕೊಂಡೀಯ ಎಂದು...."

".... .... ...."

"ರೋಹಿಣಿಯ ವಿಷಯ ಗೊತ್ತೆ"

"ಹೂ! ಸ್ವಲ್ಪ ಗೊತ್ತಿದೆ"

"ಏನೆಂದು.... ...."

".... .... .... ...."

"ಹೇಳು ರತ್ನ ಪರ್ವಾಗಿಲ್ಲ...."

"ಹೋಗ್ಲಿ ಬಿಡೀ ಅಂದ್ರೆ, ಯಾವಳ ವಿಷಯವನ್ನು ತೆಗೆದುಕೊಂಡು ಜಗಳವಾಯ್ತು."

"ರತ್ನ ಒಂದು ಪಕ್ಷ ಹಾಗೇ ನಡೆದಿದ್ದರೆ...."

"ಏನಾಗುತ್ತಿತ್ತು....ನಿಮಗೆ ಇಷ್ಟವಿದ್ದರೆ ನಾವಿಬ್ಬರೂ ಇರಬೇಕಾಗಿತ್ತು"

"ಹುಚ್ಚಿ....ಹಾಗೆ ಎಲ್ಲಾದರೂ ಸಾಧ್ಯವೇನೆ"

"ನನ್ನನ್ನು ಎಷ್ಟು ಪ್ರೀತಿಸುತ್ತೀರಿ...."

"ಹೂಂ...."

" ನಿಮಗೆ ಸಂತೋಷವಾಗುವ ಹಾಗೆ ನಡೆದುಕೊಳ್ಳಬೇಡವೆ.... "

" ಹೂಂ! .... .... "

" ನಿಮಗೆ ಅವಳು ಇಷ್ಟವಾದರೆ ನಾವಿಬ್ಬರೂ ಅಕ್ಕ ತಂಗಿಯರಂತೆ ಇರುತ್ತೇವೆ.... "

" ಇಬ್ಬರು ಹೆಂಡಿರೇನೇ.... "

" ಹಾಗಾದ್ರೆ ಅವಳೇ ಇರ್ಲಿ....ನನ್ನನ್ನು ಊರಿಗೆ ಕಳುಹಿಸಿ ಬಿಡಿ.... "

" ಹುಚ್ಚಿ !" ಎಂದು ಅವಳು ಆಡುತ್ತಿದ್ದ ಮಾತನ್ನೂ ಪೂರ್ತಿ ಮಾಡಗಂತೆ ತಾನು ಆಡಬೇಕೆಂದಿರುವುದನ್ನೂ ನುಡಿಯದೆ ಒಂದು ಕ್ಷಣ....ತನ್ನಿತ್ತ. ರತ್ನ ಕೈಬಿಡಿಸಿಕೊಂಡು ದೀಪ ಆರಿಸಿ ಮಲಗಿದಳು. ಇಬ್ಬರಿಗೂ ಮನಸ್ಸಿನಿಂದ ಭಾರ ಇಳಿಸಿದಂತಾಯ್ತು.

ಮಾರನೆಯ ದಿನ ಬೆಳಗ್ಗೆ ವಿಶ್ವವಿದ್ಯಾನಿಲಯದ ಆಫೀಸಿನಿಂದ ರಾಜ ಗೆಲು ಮುಖದಿಂದಲೇ ಬಂದ. ದಾರಿಯಲ್ಲಿ ಇಂಗ್ಲಿಷ ಅಧ್ಯಾಪಕ ವೆಂಕಟ ರಾಮಯ್ಯ ಸಿಕ್ಕಿ ತನ್ನ ಸಂತೋಷವನ್ನು ವ್ಯಕ್ತಪಡಿಸಿದ. ಮನೆಗೆ ಬರುವ ಹೊತ್ತಿಗೆ ಕಮಲಮ್ಮ ಇನ್ನೂ ಅಡಿಗೆ ಮಾಡುತ್ತಿದ್ದಳು. ರಾಜನಿಗೆ ಕೆಲಸ ಸಿಕ್ಕಿದುದನ್ನು ಕೇಳಿ ದೇವರನ್ನು ಮನಸ್ಸಿನಲ್ಲಿಯೇ ಕೊಂಡಾಡಿದಳು. ತುಳಸಿ ಪೂಜೆ ಮಾಡುತ್ತಿದ್ದ ರತ್ನ ಬೇಗ ಕೋಣೆಗೆ ಬಂದು " ಹಣ್ಣೊ " ಎಂದಳು

" ಹೌದು ಹಣ್ಣೆ....ಕೆಲಸವೇನೋ ಸಿಕ್ತು....ಸಂಬಳ ಮಾತ್ರ ೮೦ ರೂಪಾಯಿ. ರತ್ನಳಿಗೆ ಅನ್ನಿಸಿತು: ತನ್ನ ತಂದೆಗೂ ೮೦ ರೂಪಾಯಿ, ಸಂಬಳ ಪರ್ವಾಗಿಲ್ಲ ಎಂದು. ತುಳಸಿ ಪೂಜೆಯನ್ನು ಪೂರೈಸಲು ಹೋದಳು. ಕಿಟಕಿಯಿಂದ ರಾಜ ನೋಡಿದ. ತುಳಸಿಕಟ್ಟೆಗೆ ಆರತಿ ಬೆಳಗುತ್ತಿದ್ದ ರತ್ನಳ ಮುಖ ಕಾಂತಿಯಿಂದ ಬೆಳಗಿತ್ತು.

## ೨೪

ವಿಶ್ವನಾಥ ತನ್ನ ತಪ್ಪನ್ನು ಬೇಗ ತಿದ್ದಿಕೊಂಡು ನಾಲ್ಕು ಜನರಂತೆ ತಾನೂ ಅವನೊಂದಿಗೆ ಸಂಸಾರಮಾಡಬಹುದೆಂದಿದ್ದ ರೋಹಿಣಿಗೆ ಆಶಾಭಂಗ ವಾಯ್ತು. ಅವನ ಹೊಲಸು ಸಹವಾಸ, ಕುಡಿತ ಕಡಮೆಯಾಗುವ ಸೂಚನೆಯೇ ಕಂಡುಬರಲಿಲ್ಲ. ಬೆಳಗಿನ ಹೊತ್ತು ಮಾತ್ರ ಮನೆಯಲ್ಲಿರುವನು. ಅನಂತರ ಆಸ್ಪತ್ರೆಗೆ ಹೋದರೆ ತೀರಿತು. ಸಾಯಂಕಾಲ ಬಂದರೆ ಬಂದ,

ಇಲ್ಲದಿದ್ದರೆ ಬಹಳ ಹೊತ್ತು ಮಾಡಿಕೊಂಡು ರಾತ್ರಿ ಬರುವನು. ಬರುತ್ತಾನೆಂದು ಕಾದು ಕೂತಿರುತ್ತಿದ್ದ ರೋಹಿಣಿಗೆ ನಿರಾಶೆಯಲ್ಲದೆ ಕ್ರಮೇಣ ಬೇಜಾರಾಗುತ್ತ ಬಂತು. ಅವನು ಬರುವವರೆಗೂ ಕಾದಿರುವಳು. ಬಂದನಂತರ ಅಸ್ವಾಸ್ಥ್ಯಾವಸ್ಥೆಯಲ್ಲಿರುವ ಅವನ ಉಪಚಾರ. ಅದಕ್ಕೆ ಪ್ರತಿಯಾಗಿ ವಿಶ್ವನಾಥನ ಹೊಲಸು ಮಾತೇ ಅವನ ಆದರ. ಅವಳಿಗೆ ಒಂದೊಂದು ಸಾರಿ ಮನಸ್ಸು ರೋಸಿ ಹೋಗಿಬಿಡುತ್ತಿತ್ತು. ಈ ರೀತಿ ಅವನೊಡನೆ ಎಷ್ಟು ದಿನ ಬಾಳಬಹುದೆಂದು ಹೆದರಿಕೆಯಾಗುವುದು.

ಆನಂದರಾಯರಂತೂ ಬಹಳ ಬದಲಾಯಿಸಿದ್ದರು. ಆ ವರ್ಷ ವ್ಯಾಪಾರದಲ್ಲಿ ತುಂಬಾ ನಷ್ಟವಾಗಿದ್ದರಿಂದ ಅಂಗಡಿಯನ್ನು ಮಾರಿದರು. ಅಲ್ಲದೆ ಅವರಿಗೆ ಹೃದಯರೋಗವಿದ್ದು ಒಂದೆರಡು ತಿಂಗಳು ಮಲಗಿ ಬಿಡುತ್ತಿದ್ದರು. ಆ ಕಾಲದಲ್ಲಿ ವ್ಯಾಪಾರವೆಲ್ಲಾ ಗುಮಾಸ್ತರೇ ನೋಡಿಕೊಳ್ಳುತ್ತಿದ್ದರು. ಅದರಿಂದ ವ್ಯಾಪಾರ ಕೆಟ್ಟದ್ದಲ್ಲದೆ ವ್ಯಾಪಾರದ ಹಿಡಿತವೇ ಹೋಗಿತ್ತು. ಸಹಾಯಕ್ಕೆ ಯಾರೂ ಇಲ್ಲದ ಆನಂದರಾಯರು ಅಂಗಡಿಯನ್ನು ಮಾರಿದ್ದು ಆಶ್ಚರ್ಯವೇನೂ ಅಲ್ಲ. ಸುಂದರಮ್ಮನಂತೂ ತೀರಾ ಬದಲಾಯಿಸಿದ್ದಳು. ಅವಳ ಮೇಲಿನ ಪ್ರೀತಿ ಆದರಗಳು ವಿಶ್ವನಾಥನ ನಡತೆಯಿಂದ ಆನಂದರಾಯರಿಗೆ ಇಲ್ಲದಾಯಿತು. ಏನೋ ಇದ್ದಾಳೆ, ಸಾಯುವವರೆಗೆ ಅನ್ನ ಹಾಕಿಬಿಡ್ತೇನೆ ಎನ್ನುತ್ತಿದ್ದರು. ವಿಶ್ವನಾಥನ ನಡತೆ, ಸುಂದರಮ್ಮನಿಗೇ ಸರಿಯಾಗಿ ಕಂಡುಬರದಿದ್ದರೂ ಅವಳು ಅವನಿಗೆ ಬುದ್ಧಿ ಹೇಳುವ ಸ್ಥಿತಿಯಲ್ಲಿರಲಿಲ್ಲ. ಇನ್ನು ಆನಂದರಾಯರಿಗೆ ಕೊರಗಿಕೊಂಡು ದುಃಖಿತಳಾದ ರೋಹಿಣಿಗೆ ಸಮಾಧಾನ ಹೇಳುವ ಸ್ಥಿತಿಯಲ್ಲಿ ಇರಲಿಲ್ಲ. ತವರಿಗೆಂದು ಹೋದರೆ ತಿಂಗಳುಗಟ್ಟಲೆ ಇದ್ದುಬಿಡುವಳು. ತನಗೆ ಬೇಕೆಂದು ತೋರಿದಷ್ಟು ಹಣವನ್ನು ತವರಿಗೆ ಕಳುಹಿಸುತ್ತಿದ್ದಳು. ದಿನವಹಿ ಒಂದಿಲ್ಲೊಂದು ಕಾರಣದಿಂದ ರೋಹಿಣಿಯ ಮೇಲೆ ಚಾಡಿ ಹೇಳುತ್ತಿದ್ದಳು. ಒಮ್ಮೆ ತಪ್ಪು ಮಾಡಿದ್ದ ಆನಂದರಾಯರು ರೋಹಿಣಿಯ ಬಗ್ಗೆ ಏನು ಹೇಳಿದರೂ ಸುಮ್ಮನಿರುವುದನ್ನು ನೋಡಿ ಸುಂದರಮ್ಮ ಅವಳನ್ನು ತಾನೆ ಆಡಿಕೊಳ್ಳುತ್ತಿದ್ದಳು. ಇನ್ನು ವಿಶ್ವನಾಥನನ್ನು ಬದಲಾಯಿಸುವ ಕೆಲಸ ಎಲ್ಲರನ್ನೂ ಮೀರಿತ್ತು. ಆನಂದರಾಯರು ರೋಹಿಣಿಯನ್ನು ಹತ್ತಿರ ಕೂರಿಸಿಕೊಂಡು ಅತ್ತುಬಿಡುವರು. ರೋಹಿಣಿಗೆ

ದುಃಖ ತುಂಬಿಬಂದರೂ ತಂದೆಗೆ ಸಮಾಧಾನಮಾಡಿ ಈ ವಯಸ್ಸಿನಲ್ಲಿ ಆದಷ್ಟು ಶಾಂತರಾಗಿರುವಂತೆ ನೋಡಿಕೊಳ್ಳುತ್ತಿದ್ದಳು.

ಕಾಲ ಕಳೆಯುವುದಕ್ಕಲ್ಲದೆ ತನ್ನ ದುಃಖವನ್ನು ಹೇಳಿಕೊಳ್ಳಲು ತನ್ನ ಸ್ನೇಹಿತೆ ಗಿರಿಜೆಯಿದ್ದಳು. ಅವಳ ಹತ್ತಿರ ತನ್ನ ದುಃಖವನ್ನು ಹೇಳಿಕೊಂಡರೆ ಹೃದಯ ಹಗುರು ಆಗುತ್ತಿತ್ತು. ಅವಳಿಲ್ಲದಿದ್ದರೆ ಜೂಲಿಯೊಡನೆ ಕಾಲ ಕಳೆಯುವಳು. ಆದೂ ಕೂಡ ರೋಹಿಣಿಯ ದುಃಖ ಅರ್ಥಮಾಡಿಕೊಂಡಿತ್ತೇನೋ. ಯಾವಾಗಲೂ ಅವಳ ಹತ್ತಿರವೇ ಇರುತ್ತಿತ್ತು. ವಿಶ್ವನಾಥ ರೋಹಿಣಿಯನ್ನು ಹೊಡೆದರೆ ಜೂಲಿ ಗಟ್ಟಿಯಾಗಿ ಬಗುಳಿ ತನ್ನ ಅಸಮಾಧಾನವನ್ನು ಸೂಚಿಸುತ್ತಿತ್ತು. ಕೆಲವು ಸಾರಿ ಜೂಲಿಯನ್ನು ವಿಶ್ವನಾಥ ಒದ್ದುಬಿಡುವನು.

ಇಷ್ಟೇ ಅಲ್ಲದೆ ವಿಶ್ವನಾಥ ಮಿಲ್ಟ್ರಿ ಡಾಕ್ಟರಾಗಲು ಅರ್ಜಿಕೊಟ್ಟಿದ್ದ. ರೋಹಿಣಿ ಬೇಡವೆಂದು ಎಷ್ಟು ಬೇಡಿದರೂ ಅವನು ಕೇಳಲಿಲ್ಲ. 'ಸಂಪಾದಿಸಿ ತಿನ್ನುವ ಅವಶ್ಯಕತೆ ಎಲ್ಲಿದೆ ? ಪರದೇಶಕ್ಕೆ ಹೋಗಿ ನಮ್ಮನ್ನೆಲ್ಲಾ ಬಿಟ್ಟಿರುವುದೇ' ಎಂದು ಕೇಳಿದರೆ ಪುನಃ ತನಗೆ ತೋರಿದಂತೆ ಮಾತು, ನಾಲಿಗೆ ತಿರುಗಿದಂತೆ ಬೈಗಳು. ಏತಕ್ಕೆ ಆ ರೀತಿ ನಿರ್ಧರಿಸಿದ್ದನೋ, ವಿಶ್ವನಾಥನಂತೂ ಅವನ ನಿರ್ಧಾರವನ್ನು ಬದಲಾಯಿಸಿರಲಿಲ್ಲ. ಅಂದು ಭಾನುವಾರವಾದ್ದರಿಂದ ವಿಶ್ವನಾಥ ಮನೆಯಲ್ಲೇ ಇದ್ದ. "ಎಲ್ಲಾ ವಿಷಯಗಳನ್ನೂ ಮಾತನಾಡಿ ನಿರ್ಧರಿಸಿ ಬಿಡುವುದೆಂದು ರೋಹಿಣಿ ಬೆಳಗಿನ ಉಪಹಾರವನ್ನು ತೆಗೆದುಕೊಂಡು ಅವನ ಕೋಣೆಗೆ ಬಂದಳು. ವಿಶ್ವನಾಥ ಆಗತಾನೆ ಎದ್ದಿದ್ದ. ಮುಖವೆಲ್ಲಾ ಕಪ್ಪಿಟ್ಟು ಕಣ್ಣುಗಳು ಕೆಂಡದಂತಾಗಿದ್ದುವು. ತಿಂಡಿಯನ್ನು ತಿನ್ನದೆ ಕಾಫಿಯನ್ನು ಮಾತ್ರ ಕುಡಿದ. ರೋಹಿಣಿ ಅವನನ್ನು ನೋಡಿದಳು. ಎಷ್ಟು ಹೊಲಸಾಗಿತ್ತು ಅವನ ಮುಖ—ಛೇ ! ಅಳು ಬಂದು ಬಿಡ್ತು.

"ಎಷ್ಟು ಸಾರಿ ಬೇಡಿಕೊಳ್ಳಬೇಕು...." ಎಂದಳು.

"ರೋಹಿಣಿ .... ನನ್ನ ತಂಟೆಗೇ ಬರಬೇಡ .... ನನ್ನಿಷ್ಟ ಬಂದಹಾಗೆ ಮಾಡ್ತೇನೆ."

"ಆದೆಷ್ಟು ಸುಲಭ....ನಾನೇನು ಮಾಡಬೇಕು."

"ಇಷ್ಟವಿದ್ದರೆ ಇರು....ಬೇಡವಾದರೆ...."

"ಬೇಡವಾದರೆ....ಎಷ್ಟು ಸುಲಭವಾಗಿ ಹೇಳ್ತೀರಿ."

" ಹೌದು.... "

" ಹಾಗಾದರೆ ನಾನು ನಿಮಗೆ ಬೇಡವೆ? "

" ಅದನ್ನು ಕೇಳಬೇಡ....ಬೆಳಗ್ಗೆ ಎದ್ದು ಜಗಳ ತೆಗಿಬೇಡ.... "

" ನನ್ನಿಂದಾಗದು .... ಹೀಗೆ ಎಷ್ಟು ದಿನಗಳನ್ನು ಅಸಮಾಧಾನದಲ್ಲಿ ತಳ್ಳುವುದು. "

" ಹೀಗೇ ತಳ್ಳಬೇಕು.... "

" ನಿಮಗೆ ಸಾಧ್ಯವಿರಬಹುದು.... "

" ನಿನಗೆ ಬೇಡವಾಗಿದ್ದರೆ ಬಿಟ್ಟುಬಿಡು "

" ನಿಮ್ಮ ರೀತಿ ನೀವು–ನನ್ನ ಪಾಡಿಗೆ ನಾನು....ಎಷ್ಟು ಚೆನ್ನಾಗಿದ್ದೋ"

" ನಿನಗೆ ಇಷ್ಟ ಬಂದಂತೆ ಇರು.... "

" ನಿಮಗೆ ಇಷ್ಟುಬಂದಂತೆ ಇರ್ತೀರಿ. "

" ಹೌದು.... "

" ಇದ್ದುಬಿಡಿ....ನನ್ನ ಬಾಳನ್ನೇಕೆ ಹಾಳುಮಾಡಿದ್ರಿ ?" ರೋಹಿಣಿ ಅತ್ತಳು.

" ಅಳು....ಅಳು ನಾನು ಸತ್ತನೆಂದು ಅತ್ತುಬಿಡು "

ರೋಹಿಣಿ ಅಳುವುದನ್ನು ಜಾಸ್ತಿ ಮಾಡಿದಳು.

" ಸತ್ತರೆ ಹೋಗಲಿ ಅಳ್ತೀಯಲ್ಲ "

" ಸಾಕು ಸುಮ್ಮನಿರಿ....ಮಾತೆತ್ತಿದ್ರೆ ಅವಲಕ್ಷಣವೇ ನುಡೀತೀರಿ "

" ಹೌದು ! ನಿನ್ನ ಭಾಗಕ್ಕೆ ನಾನು ಇಲ್ಲದಂತೆ ಅಲ್ಲವೆ "

" ಇಲ್ಲದ್ದನ್ನೆಲ್ಲಾ ಊಹಿಸಿ ಹಾಗೆ ಭಾವಿಸಿದ್ದೀರಿ "

" ಅದಕ್ಕೆ ಒಂದೇ ಮಾರ್ಗ "

" ಏನು.... " ಕುತೂಹಲದಿಂದ ಅಳುವನ್ನು ನಿಲ್ಲಿಸಿ ಅವನ ಕಡೆ ನೋಡಿದಳು.

" ಹೂಂ ! ಆಗಿಬಿಡ್ಲಿ ಅದೂ....ಹೇಗಿದ್ದರೂ ಸೈನ್ಯಕ್ಕೆ ಸೇರುತ್ತೇನೆ.... ಹೇಗಾಗಬೇಕೋ ಹಾಗಾಗ್ಲಿ. "

" ಹೇಡಿಗಳಂತೆ ನಿರ್ಧರಿಸಿದಿರೇನೋ.... "

" ನೀನು ಮಾತಿನಲ್ಲಿ ಕಮ್ಮಿಯಲ್ಲ....ಹೆಚ್ಚು ಹರಟುತ್ತೀ "

" ಹೌದೋ ಅಲ್ಲವೋ ನೀವೇ ಹೇಳಿ–ಕೈಹಿಡಿದ ಮೇಲೆ ನನ್ನ ಸುಖ ವನ್ನೂ ನೋಡಬೇಡವೆ ? "

" ನೋಡಬೇಕು....ಆದರೆ ನೀನೋ ? "

" ನಾನು ಇದ್ದಂತೇ ಇದ್ದೇನೆ....ದನದಂತೆ ಹೊಡೆದರೂ, ಬಾಯಿಗೆ ಬಂದಂತೆ ಬೈದರೂ ಎಷ್ಟಾದರೂ ನನ್ನಗಂಡ ಅಲ್ಲವೆ ಎಂದು ಸುಮ್ಮನಿದ್ದೇನೆ"

" ಪಾಪ ! ಉದಾರ ಮನಸ್ಸಿನವಳು ! "

" ನೀವೇ ಯೋಚಿಸಿ....ನನ್ನ ತಪ್ಪನ್ನು ತಿಳಿಸಿ, ತಿದ್ದುಕೊಳ್ತೇನೆ.... "

" ಆಯ್ತಲ್ಲ....ನನ್ನ ಚಂಡಾಲ ಮನಸ್ಸನ್ನು ತಿಳಿದುಕೊಂಡೆಯಲ್ಲ ನಡೀ "

ರೋಹಿಣಿಗೆ ಮುಂದೆ ಮಾತನಾಡಲಾಗಲಿಲ್ಲ. ಅವನ ಹತ್ತಿರ ಇನ್ನೇನು ಮಾತನಾಡುವುದೆಂದಿದ್ದರೂ " ನೀವು ಆ ರೀತಿ ಹೇಗೆ ಮಾಡ್ತೀರೋ ನೋಡ ತೀನಿ " ಎಂದು ಹೇಳಿದಾಗ ವಿಶ್ವನಾಥನಿಗೆ ತಡೆಯುದಷ್ಟು ಕೋಪಬಂದು ರೋಹಿಣಿಯನ್ನು ತಳ್ಳಿಬಿಟ್ಟ. ಹತ್ತಿರವಿದ್ದ ಜೂಲಿ ವಿಶ್ವನಾಥನ ಮೇಲೆ ಬಿದ್ದು ಶರಟನ್ನು ಹರಿಯಿತು. ವಿಶ್ವನಾಥ ಮಂಚದಿಂದೆದ್ದು ಮೇಜಿನ ಮೇಲಿದ್ದ ಟೆನ್ನಿಸ್ ಬ್ಯಾಟನ್ನು ತೆಗೆದುಕೊಂಡು ಜೂಲಿಯ ತಲೆಗೆ ಬಲವಾದ ಏಟನ್ನು ಕೊಟ್ಟ. ಚಿಕ್ಕನಾಯಿ, ಅವನ ಏಟು ತಡೆದುಕೊಳ್ಳಲಾರದೆ ಕೊಯ್ ಕೊಯ್ ಎಂದು ಒದ್ದಾಡಿತು. ರೋಹಿಣಿ ಕಿರುಚಿಕೊಂಡು ಜೂಲಿಯ ಹತ್ತಿರ ಬಂದು ನೋಡಿದಳು. ಜೂಲಿ ಮಿಲಮಿಲ ಒದ್ದಾಡಿ ರೋಹಿಣಿಯ ಕಾಲಿನ ಹತ್ತಿರ ಉರುಳಿ ಯಾತನೆಯ ಮುಖದಿಂದ ಅವಳನ್ನು ನೋಡಿತು. ತಲೆ ಒಡೆದು ರಕ್ತ ಸುರಿಯುತ್ತಿತ್ತು. ಅವಳಿಗೆ ತಡೆಯಲಾಗ ಲಿಲ್ಲ. ಅದರ ಬೆನ್ನು ಸವರಿದಳು. ನಾಯಿಗೆ ಸಮಾಧಾನವಾಗಿ ಕಿರುಚುವು ದನ್ನು ನಿಲ್ಲಿಸಿ ಒಂದೆರಡು ಸಾರಿ ಒದ್ದಾಡಿ ಪ್ರಾಣಬಿಟ್ಟಿತು. ರೋಹಿಣಿಗೆ ತುಂಬಾ ರೋಷ ಉಂಟಾಯ್ತು. ಕೈಯೆಲ್ಲಾ ರಕ್ತ....ಸೀರೆಯ ನೆರಿಗೆ ನೆತ್ತರದಿಂದ ನೆನೆದಿತ್ತು. ಕೋಣೆಯಿಂದ ಹೊರಬಿದ್ದಾಗ ಕೊಲೆಗಾರ ನನ್ನು ದುರಿಗುಟ್ಟಿ ನೋಡಿ ಬಚ್ಚಲ ಮನೆಗೆ ಹೋದಳು. ಜೂಲಿ ಸಾಯುವ ಮುನ್ನ ಕಿರುಚಿದ್ದ ಕೂಗು ಅವಳ ಕಿವಿಯಲ್ಲಿ ಗುಯ್ ಗುಟ್ಟುತ್ತಿತ್ತು. ಜೂಲಿ ತನ್ನ ಒಡತಿಗೆ ತಾನೂ ಆ ರೀತಿ ಬಲಿಯಾಗಬೇಕೆಂದು ಸಂದೇಶ

ಕೊಟ್ಟಿತ್ತೋ ಏನೋ ಅಂತು ರೋಹಿಣಿಗೆ ಅರ್ಥವಾಗಲಿಲ್ಲ. ಮತ್ತೆ ಯಾವ ಕೆಲಸ ಮಾಡಲು ಅವಳಿಗೆ ಬೇಕಾಗಿರಲಿಲ್ಲ. ಒಂದೇ ಯೋಚನೆ-ವಿಶ್ವನಾಥ ನೊಂದಿಗೆ ಇನ್ನು ಬಾಳಬಹುದೆ ಎಂದು. ಇಂದು ಜೂಲಿಯ ಆಹುತಿಯಾಯ್ತು. ನಾಳೆ ಆವನ ಸ್ವೇಚ್ಛಾವಿಹಾರಕ್ಕೆ ಅಡ್ಡಿಯಾದ ನನಗೂ ಆ ಗತಿಯಾದರೆ ? ನೆನೆಸಿಕೊಂಡಾಗ ಮೈ ಜುಂ ಎನ್ನಿಸಿತು. ತಂದೆಗೆ ಈ ವಿಷಯ ತಿಳಿಸುವು ದೆಂದು ಅವರ ಕೋಣೆಯವರೆಗೆ ಹೋದರೂ ಅವರಿಗೆ ಮತ್ತಷ್ಟು ದುಃಖ ವನ್ನುಂಟುಮಾಡಲು ಇಷ್ಟಪಡದೆ ತನ್ನ ಕೋಣೆಗೆ ಬಂದಳು. ತಟ್ಟನೆ ರಾಜನ ನೆನಪು ಬಂದಿತು. ರಾಜ-ರತ್ನಳೊಂದಿಗೆ ಸಂಸಾರ ಹೂಡಿದುದು ಗಿರಿಜೆಯಿಂದ ತಿಳಿದಿತ್ತು. ಪುಟ್ಟ ಆದರ್ಶಸಂಸಾರ. ತಾನು ರಾಜನನ್ನು ಮದುವೆಯಾಗಿದ್ದರೆ ಎಷ್ಟು ಸುಖಪಡಬಹುದಿತ್ತು ಎನ್ನಿಸಿತು. ಆದರೆ ಈಗ .... ಆ ದಿನದ ತನ್ನ ನಡವಳಿಕೆ ಎಂದು ಯೋಚಿಸಿದಳು. ತನಗೆ ಬೇಕಾಗಿದ್ದ ವರ ಕೈಲಿ ಹೇಳಿಕೊಂಡು ವಿಮರ್ಶಿಸಬೇಕೆನ್ನಿಸಿತು. ಪುನಃ ರಾಜನನ್ನು ಕರೆ ಸುವುದೆ? ಪುನಃ ದೊಡ್ಡ ರಂಪವಾಗುವುದು. ಅಲ್ಲದೆ ಅವರ ಮನೆಯಲ್ಲಿ ಅವನ ಹೆಂಡತಿ ಏನೆಂದುಕೊಂಡಾಳು. ಯೋಚಿಸಿದಳು ಅವಳ ಮನಸು ಗಡಿ ಯಾರದ ತೂಗು ಗುಂಡಿನಂತೆ ಓಲಾಡುತ್ತಿತ್ತು. ಒಂದು ಸಾರಿ ರಾಜನೊಡನೆ ಮಾತನಾಡಿ ನಿರ್ಧಾರಕ್ಕೆ ಬರದಿದ್ದರೆ ಸಾಧ್ಯವೇ ಇಲ್ಲ-ರೋಹಿಣಿ ಒಂದು ಚೀಟಿಯನ್ನು ಬರೆದು ಆಳಿನ ಕೈಲಿ ಅವನ ಮನೆಗೆ ಕೊಡುವಂತೆ ಹೇಳಿದಳು. ಆಳು ರಾಜನ ಮನೆಗೆ ಬಂದಾಗ ಅವನು ಮನೆಯಲ್ಲಿರಲಿಲ್ಲ. ರತ್ನಳೇ ತೆಗೆದು ಕೊಂಡಳು. ಆಳು ರೋಹಿಣಿಯ ಮನೆಯವನಾಗಿದ್ದುದರಿಂದ ಮತ್ತೆ ಏನೋ ವಿಷಯ ಇರಬೇಕೆನ್ನಿಸಿದರೂ ಅದನ್ನು ಒಡೆದು ಓದುವ ಸಾಹಸ ಮಾಡ ಲಿಲ್ಲ. ಸ್ವಲ್ಪ ಹೊತ್ತಾದ ಮೇಲೆ ರಾಜ ಮನೆಗೆ ಬಂದು ಮೇಜಿನ ಮೇಲಿಟ್ಟಿದ್ದ ಕಾಗದವನ್ನು ತೆಗೆದುಕೊಂಡು ಆಶ್ಚರ್ಯದಿಂದ ಓದಿಕೊಂಡ. ರೋಹಿಣಿ ಪುನಃ ತನ್ನನ್ನು ಕರೆಯುವುದಿಲ್ಲ ಎಂದಿದ್ದ. ರತ್ನ ಈ ಕಾಗದವನ್ನು ನೋಡಿದರೆ ಏನು ರಂಪವಾಗುತ್ತೋ ಎಂದುಕೊಂಡ. ಅವಳ ಮನೆಗೆ ಹೋಗುವುದೆ?.... ಪಾಪ ಬರೆದಿದ್ದಾಳೆ. ನನ್ನ ಜೀವಮಾನದಲ್ಲಿ ಇದೊಂದೇ ಸಾರಿ ನೋಡಿ, ಮಾತನಾಡಬೇಕಾಗಿದೆ, ಬನ್ನಿ ಎಂದು. ಸ್ವಲ್ಪ ಹೊತ್ತು ಯೋಚಿಸಿ ಹೋಗು ವುದೆಂದು ಕಾಗದವನ್ನು ಜೇಬಿನಲ್ಲಿಟ್ಟುಕೊಂಡ. ರತ್ನ ಕೋಣೆಯೊಳಕ್ಕೆ ಬಂದು "ಪಾನಕ ಮಾಡಿ ತರಲೆ" ಎಂದಳು.

" ಬೇಡ ರತ್ನ.... "

" ಆಳು ಒಂದು ಕಾಗದ ತಂದು ಕೊಟ್ಟು ಹೋದ. "

" ....ಎಲ್ಲಿಂದ ಎಂದು ಹೇಳಲಿಲ್ಲವೆ....

" ನಾನು ಕೇಳಲಿಲ್ಲ....ಕಾಗದ ಓದಿಕೊಂಡರೆ ಗೊತ್ತಾಗುವುದಿಲ್ಲವೆ?' ರಾಜ ನಕ್ಕು " ಅಡಿಗೆ ಆಗಿದ್ಯೆ ರತ್ನ.... "

" ಏಕೆ.... "

" ಸ್ವಲ್ಪ ಕೆಲಸವಿದೆ ಹೋಗಬೇಕು. "

" ಭಾನುವಾರವೂ ಬೇಗ ಊಟವೆ .... ಇನ್ನೂ ಹುಳಿ ಆಗಿಲ್ಲವೆಂದು ಕಾಣುತ್ತೆ"

" ಅರ್ಧ ಗಂಟೆಯ ಕೆಲಸವಿದೆ....ಹೋಗಿ ಬಂದು ಬಿಡ್ತೇನೆ. "

" ಊಟಮಾಡಿ ಹೋದ್ರೆ.... "

" ಬೇಡ, ಬೇಗ ಬಂದು ಬಿಡ್ತೀನಿ " ಎಂದು ರಾಜ ಹೊರಗೆ ಹೊರಟ ರಾಜನಿಗೆ ಸಂಶಯ ಬರದಂತೆ ರತ್ನ ನಡೆದುಕೊಂಡಿದ್ದಳು.

ರಾಜ ಬಂದರೂ ಮಧ್ಯಾಹ್ನ ಬರುವನೆಂದು ನಿರೀಕ್ಷಿಸುತ್ತಿದ್ದ ರೋಹಿಣಿಗೆ ಅವನು ಹಟತ್ತಾಗಿ ಬಂದದ್ದು ಆಶ್ಚರ್ಯವಾಯ್ತು. ಮಧ್ಯಾಹ್ನವಾಗಿದ್ದರೆ ವಿಶ್ವನಾಥನೂ ಇರುತ್ತಿದ್ದ. ಅವನೊಡನೆ ಚರ್ಚಿಸಿ ಏನಾದರೂ ನಿರ್ಧರಿಸಿ ಬಿಡಬಹುದಿತ್ತು. ಆದರೆ ರಾಜನೇ ಬಂದಿರುವಾಗ....

" ನೀವು ಖಂಡಿತ ಬರ್ತೀರಿ ಅಂತಿರಲಿಲ್ಲ....ನಿನುಗೆ ದಯೆ ಬಂತು. " ಕೃತಜ್ಞತೆಯಿಂದ ನುಡಿದಳು.

" ನಾನೂ ಅಂದುಕೊಂಡಿರಲಿಲ್ಲ....ಆದ್ರೆ ಬಂದೆ "

" ಹಾಗಾದ್ರೆ ನನ್ನನ್ನು ಮರೆತಿಲ್ಲ ನೀವು "

" ವಿಷಯ ಹೇಳಿದ್ರೆ .... ನನ್ನ ಕೈಯಿಂದ ಏನು ಸಾಧ್ಯವೋ ಅದು ಮಾಡ್ತೇನೆ....ನಾವಿಬ್ಬರು ಹೇಗೆ ನಡೆದರೂ ಸರಿಯಾಗಿ ಕಾಣದು. "

" ಒಂದು ಉಪಕಾರವಾಗಬೇಕು....ನನ್ನ ಸ್ಥಿತಿ ಕೆಡುತ್ತಾ ಇದೆ. ತಂದೆಯೊಡನೆ ಪೂನಾಕ್ಕೆ ಹೋಗಿಬಿಡುವುದೆಂದು ನಿರ್ಧರಿಸಿದ್ದೇನೆ ... ನೀವೇನು ಹೇಳ್ತೀರಿ "

" ವಿಶ್ವನಾಥ.... .... "

“ ಅವನು ಮನುಷ್ಯನಲ್ಲ .... ಅವನ ಜೊತೆಗೆ ನಾನು ಬಾಳಲಾರೆ.... ಕೊಲೆಗಾರ ಕೊಂದು ಬಿಡ್ತಾನೆ.” ಇಷ್ಟನ್ನೂ ಉದ್ವೇಗದಿಂದ ಹೇಳಿದ ರೋಹಿಣಿಯ ಮನಸ್ಸಿನ ಸ್ಥಿತಿ ಹೇಗಿತ್ತೆಂದು ಊಹಿಸಲು ರಾಜನಿಗೆ ಕಷ್ಟವಾಗಲಿಲ್ಲ. ರೋಹಿಣಿ ಬೆಳಗಿನ ಸಂಘಟನೆಯನ್ನು ತಿಳಿಸಿದಳು. ವಿಶ್ವನಾಥನ ಕೆಟ್ಟ ನಡತೆಗಳೂ ಅವನ ಕಿವಿಗೆ ಬಿದ್ದಿದ್ದವು. ಇದಕ್ಕೇನು ಉಪಾಯದ ಮಾರ್ಗವೆಂದು ಅವನು ಯೋಚಿಸಿ “ ನಾನೇನೂ ಹೇಳಲಾರೆ ರೋಹಿಣಿ....ನೀನೇ ನಿರ್ಧರಿಸಬೇಕು. ಈ ಕಷ್ಟದ ಪರಿಹಾರವೆಂದು ತಪ್ಪು ನಿರ್ಧರಿಸಿದರೆ ಆಮೇಲೆ ಸರಿಪಡಿಸುವುದು ಕಷ್ಟವಾಗುತ್ತೆ. ಆದರೂ ನಿನ್ನ ಗಂಡನ ಹತ್ತಿರ ಅಲ್ಲವೆ ನಿನ್ನ ಸ್ಥಾನ?” ಎಂದ.

“ ಅವನು ಪಶುವಾಗಿ ಬಿಟ್ಟಿದ್ದಾನೆ .... ಏನೀಗ ನನಗೆ ಮದುವೆಯೇ ಆಗಿಲ್ಲವೆಂದುಕೊಂಡು ಬಿಡ್ತೇನೆ. ”

“ ಅದು ಸರಿಯೋ ತಪ್ಪೋ ನೀನೇ ಹೇಳು ”

“ ನನಗೆ ಅದರ ತರ್ಕ ಬೇಕಿಲ್ಲ. ಇಷ್ಟು ಮಾತ್ರ ನಿಜ .... ಈ ಗಂಡನೊಡನೆ ಬಾಳಲಾರೆ, ನನಗೆ ಅವನು ಬೇಡ—ಅವನಿಗೆ ನಾನು ಬೇಕಿಲ್ಲ. ”

“ ಹೋಗ್ಲಿ ಕೆಲವು ದಿನ ಪೂನಾದಲ್ಲಿ ಇದ್ದರೆ ಅವನು ಸರಿಹೋಗಬಹುದು ” ರೋಹಿಣಿ ತಾನು ಹೇಳಬೇಕೆಂದಿದ್ದುದನ್ನು ಹೇಳಿ ಮುಗಿಸಿದಳು. ಅಡಿಗೆಯವನು ಎರಡು ಲೋಟ ಕಾಫಿಯನ್ನು ತಂದಿಟ್ಟು ಹೋದ. ಇನ್ನೇನು ಕುಡಿಯಬೇಕು, ಅಷ್ಟು ಹೊತ್ತಿಗೆ ಹೊರಗೆ ಹೋಗಿದ್ದ ವಿಶ್ವನಾಥ ಹಿಂತಿರುಗಿದ. ಮಹಡಿಯ ಮೇಲಿನ ವರಾಂಡದಲ್ಲಿ ರಾಜ ರೋಹಿಣಿ ಮಾತನಾಡುತ್ತಿದ್ದ ಕಡೆ ಬಂದ. ರೋಹಿಣಿಗೆ ಸ್ವಲ್ಪವೂ ಭಯವಾಗಲಿಲ್ಲ. ಬದಲಾಗಿ ಸದ್ಯ ಬಂದನಲ್ಲ ಹೇಳಿಬಿಡ ಬಹುದೆಂದುಕೊಂಡಳು.

“ ಓ! ಆಗ್ಲೆ ಕರೆಸಿಕೊಂಡಿದ್ದೀ....ಎಲ್ಲಾ ವಿಷಯ ತಿಳಿಸಿ ಆಯ್ತೋ. ಇಲ್ಲದಿದ್ದರೆ ನಾನೇ ಹೇಳಿಬಿಡ್ತೇನೆ ” ಎಂದು ಪಕಟವಾಗಿ ವಿಶ್ವನಾಥ ನಕ್ಕ.

“ ಮಿಸ್ಟರ್ ವಿಶ್ವನಾಥ! ನಿನ್ನ ಹೆಂಡತಿಗೆ ಬುದ್ಧಿವಾದ ಹೇಳಲು ನಾನಾರು? ನಾವು ನಾವು ಸರಿಯಾಗಿ ಅರ್ಥಮಾಡಿಕೊಂಡರೆ ತೀರಿತು. ”

“ ಅರ್ಥ ಎಂದೋ ಆಯ್ತು .... ಅಂತರಂಗದಲ್ಲಿ ನಿನ್ನನ್ನು ಸೇರಲು ಹೊಂಚು ಹಾಕುತ್ತಿದ್ದಾಳೆ....ನೀನೂ ಪ್ರೋತ್ಸಾಹಿಸುತ್ತಿದ್ದೀ. ”

" ತಪ್ಪು ತಿಳಿದಿದ್ದೀ ವಿಶ್ವ ! ನಾನೂ ನೀನೂ ಅಣ್ಣ ತಮ್ಮಂದಿರಾಗಿದ್ದರೆ ಎಷ್ಟು ಗೌರವಿಸುತ್ತಿದ್ದೆ. ಹಾಗೆ ತಿಳಿದುಕೋ....ಸರಿಯಾಗಿ ವಿವೇಚನೆಯಿಂದ ನಿರ್ಧರಿಸು....ನಾನು ತಪ್ಪು ನಡೆದಿದ್ದೇನೆಂದು ತೀರ್ಮಾನಿಸಿದರೆ....ಖಂಡಿತ ಅಪರಾಧಿಗೆ ಶಿಕ್ಷೆಯಾಗಲೇಬೇಕು."

"ಇಂತಹ ಮರುಳು ಮಾತಿನಿಂದಲೇ ಕೆಲಸ ಸಾಧಿಸಿದ್ದೀ....ದ್ರೋಹಿ ನೀನು" ರೋಹಿಣಿ ಕೈಕೈ ಹಿಸುಕಿಕೊಂಡಳು. ಅವರ ಮಾತು ಸಹನೆಯ ಎಲ್ಲೆ ಮೀರಿತ್ತು.

ವಿಶ್ವನಾಥನೇ ಮತ್ತೆ ಹೇಳಿದ: "ಈಗ ಒಂದು ವಿಷಯ....ಹೇಗಿದ್ದರೂ ಇವಳನ್ನು ಮೋಹಿಸಿದ್ದೆ....ನನಗೂ ಇವಳು ಮೋಸ ಮಾಡಿದ್ದಾಳೆ....ಈ ಮುಚ್ಚುಮರೆ ಏಕೆ ?"

"ಇಲ್ಲ ವಿಶ್ವ....ನಾನು ಇವಳನ್ನು ಪ್ರೀತಿಸುವ ಹಾಗಿಲ್ಲ....ನನಗೆ ಬೇರೆ ಮದುವೆಯಾಗಿರುವಾಗ ಅದು ಹೇಗೆ ಸಾಧ್ಯ....ನಿಜ ವಿಷಯವನ್ನು ತಿಳಿಯಲಾರೆಯಾ ?"

"ನಿನ್ನ ವೇದಾಂತ ಬೇಕಾಗಿಲ್ಲ....ರೋಹಿಣಿಯನ್ನು ನೀನು ಪ್ರೀತಿಸುತ್ತಿಲ್ಲವಲ್ಲ–ಅವಳಿಗೇನೂ ಬೋಧಿಸಬೇಕಾಗಿಲ್ಲ ಹೊರಡು...."

"ಒರಟಾಗಿ ಮಾತನಾಡುತ್ತೀ ಏಕೆ ವಿಶ್ವ? ಹೋಗ್ತೇನೆ, ಆದರೆ ರೋಹಿಣಿಗೆ ಎಂತಹ ಅನ್ಯಾಯವಾಯ್ತೆಂದು ಮಾತ್ರ ಮರೆಯಲಾರೆ"

"ಬಾಯಿ ಹಿಡಿದು ಮಾತನಾಡು....ರೋಹಿಣಿಯ ಬಗ್ಗೆ ಸಂತಾಪ ಸೂಚಿಸಬೇಕಾದ್ದಿಲ್ಲ" ಎಂದು ರಾಜನ ಷರಟಿನ ಕಾಲರನ್ನು ಹಿಡಿದ. ರೋಹಿಣಿ ಅವರಿಬ್ಬರ ಮಧ್ಯೆ ಬಂದು ನಿಂತು ವಿಶ್ವನಾಥನ ಕೈ ಹಿಡಿದಳು. ಅಷ್ಟರಲ್ಲೇ ವಿಶ್ವನಾಥ ರಾಜನ ಕೆನ್ನೆಗೊಂದು ಬಿಗಿದಿದ್ದ. ರಾಜನೂ ಕೈ ಎತ್ತಿದ್ದ. ರೋಹಿಣಿಯ ಮುಖವನ್ನು ನೋಡಿ ಸುಮ್ಮನಾಗಿ ವಿಶ್ವನಾಥನನ್ನು ತಳ್ಳಿಬಿಟ್ಟ.

"ಬೇಡಿ ಹೊಡೆದಾಡಬೇಡಿ....ಎಲ್ಲ ನನ್ನಿಂದಲೇನೆ" ಎಂದು ರೋಹಿಣಿ ಬೇಡಿಕೊಂಡಳು.

"ಅವನ ಹಿಂದೇ ಹೋಗು" ಎಂದು ವಿಶ್ವನಾಥ ಧಡಧಡನೆ ಮಹಡಿಯ ಮೆಟ್ಟಲನ್ನು ಇಳಿದು ಹೊರಟುಹೋದ.

ರೋಹಿಣಿ ರಾಜನ ಕ್ಷಮೆ ಬೇಡಿದಳು "ನಿಮ್ಮನ್ನು ಕರೆಸಿ ಇವರಿಂದ ಅವಮಾನ ಮಾಡಿಸಿದೆ."

“ಬಿಡು ರೋಹಿಣಿ! ನೀನು ಹೇಳಿದ ಮಾತು ನಿಜ.”

“ನನ್ನನ್ನೇನು ಮಾಡು ಅಂತೀರಿ?”

“ಕೆಲವು ದಿನ ಪೂನಾಕ್ಕೆ ಹೋಗಿರು—ನನ್ನನ್ನೂ ಸ್ನೇಹಿತನೆಂದು ತಿಳಿ. ನಿನ್ನ ಕಷ್ಟ ಸುಖಗಳನ್ನು ಹೇಳಿಕೊಳ್ಳಲು ಒಬ್ಬ ಸ್ನೇಹಿತನೋ ಗೆಳತಿಯೋ ಬೇಡವೆ?” ಎಂದು ಹೇಳಿದ. ಮತ್ತೊಮ್ಮೆ ರಾಜನ ಕ್ಷಮೆ ಬೇಡಿ ಅವನನ್ನು ಬೀಳ್ಕೊಟ್ಟು ವಿಶ್ವನಾಥನ ಕೊಠಡಿಗೆ ಬಂದಳು. ಅವಳನ್ನು ದುರುಗಟ್ಟಿ ನೋಡಿ ಬಾಯಿಗೆ ಬಂದಂತೆ ವಿಶ್ವನಾಥ ಆಡಿದ.

“ಅವನು ಹೊರಟುಹೋದನೋ....ಅವನ ಹಿಂದೇಕೆ ಹೋಗಲಿಲ್ಲ?

“.... ...............”

“ನೀನು ರಾಜನನ್ನು ಪ್ರೀತಿಸುತ್ತೀ....ಅದಕ್ಕೆ ನನ್ನನ್ನು ಅಲಕ್ಷಿಸುತ್ತೀ”

“..................”

“..................”

“ಈ ಊರನ್ನೇ ಬಿಟ್ಟುಬಿಡೋಣ....ನೀವು ಕೆಲಸವನ್ನು ಬಿಟ್ಟುಬಿಡಿ. ಪೂನಾಕ್ಕೆ ಹೋಗಿ ಇದ್ದುಬಿಡೋಣ.”

“ನನಗಾಗಲೇ ಬೊಂಬಾಯಿಗೆ ಹೋಗಲು ಆರ್ಡರ್ ಬಂದಿದೆ.... ಅಲ್ಲಿಂದ ಎಲ್ಲಿಗೋ ತಿಳಿಯದು”

“ಸೈನ್ಯಕ್ಕೆ ಸೇರುವುದೆಂದು ಕೊನೆಗೂ ನಿರ್ಧರಿಸಿದ್ರಾ?”

“ಅದೊಂದೇ ಮಾರ್ಗ. ನಿನಗೂ ಅಡ್ಡಿ ಆತಂಕಗಳೇಕೆ”

“ಪುನಃ ಸಂಶಯಪಡುತ್ತೀರಿ....” ಎಂದು ಏನನ್ನೋ ನಿರ್ಧರಿಸಿ ಆನಂದರಾಯರ ಕೋಣೆಗೆ ಹೋದಳು.

## ೨೫

ರತ್ನ ಕೋಣೆಯಲ್ಲಿ ಸರಸಳನ್ನು ತಟ್ಟುತ್ತಾ ಕುಳಿತಿದ್ದಳು. ಸರಸು ಇನ್ನೂ ನಿದ್ದೆ ಮಾಡಿರಲಿಲ್ಲ. ತಾನು ಅತ್ತೆಯ ಮನೆಗೆ ಬಂದುದು ನಾಲ್ಕು ವರ್ಷಗಳ ಹಿಂದೆ....ಹೌದು ಸರಸಳಿನ್ನೂ ಚಿಕ್ಕ ಮಗು.

ಕೆಲಸ ಮಾಡುತ್ತೇನೆಂದರೂ ಸಣ್ಣ ಪುಟ್ಟ ಕೆಲಸಗಳನ್ನೂ ಸಹ ಈಗ ಅತ್ತೆಯಾಗಲಿ ಅತ್ತಿಗೆಯಾಗಲಿ ಮಾಡಗೊಡುತ್ತಿರಲಿಲ್ಲ. ಪಟ್ಟಣದಲ್ಲಿದ್ದ ತಾಯಿ ತಂದೆಯನ್ನೂ ಮತ್ತು ತಂಗಿಯರನ್ನೂ ನೋಡಬೇಕೆಂದು ಅನ್ನಿಸು

ತ್ತಿತ್ತು. ತವರಿಗೆ ಹೋಗಿ ಆಗಲೇ ಒಂದು ವರ್ಷದ ಮೇಲಾಗಿತ್ತು. ಅದೂ ಅಲ್ಲಿ ಇದ್ದುದು ಒಂದು ತಿಂಗಳೇ. ರಾಜನನ್ನು ಹೆಚ್ಚು ದಿನ ಬಿಟ್ಟಿರಲಾಗದೆ ಬಂದುಬಿಟ್ಟಿದ್ದಳು. ಅತ್ತೆಯ ಮನೆಯಲ್ಲಿ ಮನೆಯ ಮಗಳಂತೆ ಕಾಣುತ್ತಿದ್ದರು. ಗೌರಿಯಂತೂ ರತ್ನಳಿಗೆ ಅಕ್ಕನಾಗಿದ್ದಳೇ ವಿನಾ 'ಅತ್ತಿಗೆ' ಯಾಗಿರಲಿಲ್ಲ. ಯಾವ ಗುಟ್ಟಿನ ವಿಷಯ ಕೇಳಬೇಕಾಗಲಿ ಗೌರಿಯ ಹತ್ತಿರ ಹೇಳಿಕೊಳ್ಳುತ್ತಿದ್ದಳು. ಪಾಪ! ಗೌರಿಯ ದುಃಖಮಯ ಜೀವನವನ್ನು ಸಂತೋಷದಿಂದ ತಳ್ಳುವಂತೆ ಮಾಡುವುದು ತನ್ನ ಕೆಲಸ ಅನ್ನುವಷ್ಟು ಅವಳ ಮನಸ್ಸಿಗೆ ಹಿಡಿದುಬಿಟ್ಟಿತ್ತು.

ತಾನು ಅತ್ತೆಯಮನೆಗೆ ಬಂದ ಹೊಸದರಲ್ಲಿ ಅಸಮಾಧಾನವಾಗುವ ಸಣ್ಣಪುಟ್ಟ ಸಂದರ್ಭಗಳು ಒದಗಿತ್ತು. ಇಂದು ಅವುಗಳನ್ನು ಆಕ್ಷೇಪಿಸುವುದಿರಲಿ ನೆನಸಿಕೊಂಡರೆ ಸಾಕು. ತನ್ನ ಹುಡುಗತನವನ್ನು ಕಾಣಬಹುದಿತ್ತು. ಎಲ್ಲಾ ಸೂಕ್ಷ್ಮವಾಗಿ ಜ್ಞಾಪಕಕ್ಕೆ ಬಂದವು.

ಒಂದು ಸಾರಿ ರಾಜ ಜಾಕೆಟ್ ಬಟ್ಟೆಗಳನ್ನಲ್ಲದೆ ಸರಸಳಿಗೆ ಲಂಗದ ಬಟ್ಟೆಯನ್ನು ತಂದು ಗೌರಿಯ ಕೈಲಿ ಕೊಟ್ಟಿದ್ದ. ಹಾಗೇ ರತ್ನಳಿಗೆ ಒಂದು ಜಾಕೆಟ ಹೊಲಿದುಕೊಡೆಂದು ಹೇಳಿದ್ದ. ಕೆಂಪು ರೋಜಾ ಹೂವಿನ ಬಟ್ಟೆ ಮಗುವಿನ ಲಂಗಕ್ಕೆ ಚೆನ್ನಾಗಿರುವುದೆಂದು ಕತ್ತರಿಸಿದಳು. ರತ್ನಳಿಗೂ ಅದೇ ಬಟ್ಟೆ ಚೆನ್ನೆಂದು ಕಂಡಿತು. ಇಬ್ಬರಲ್ಲಿ ಯಾರಾದರೂ ಸೋಲಬಹುದಿತ್ತು. ರತ್ನಳಿನ್ನೂ ಹುಡುಗಿ. ಬಟ್ಟೆ ಕತ್ತರಿಸಿದ ಮೇಲೆ, ಅಲ್ಲದೆ ಮಗು ಆಸೆ ಪಡ್ತಿರುವಾಗ ಹೇಗೆ ನಡೆದುಕೊಳ್ಳುವುದೋ ಗೌರಿಗೆ ತಿಳಿಯಲಿಲ್ಲ. ಸಹಜದಂತೆ ರತ್ನ ರಾಜನ ಹತ್ತಿರ ಹೇಳಿದಳು. ಆದರೆ ರಾಜ ಯಾವ ರೀತಿ ರತ್ನಳಿಗೆ ತಿಳಿಯುವಂತೆ ಹೇಳಿದ್ದ ಗೊತ್ತೆ?........

"ರತ್ನ ನೀನಿನ್ನೂ ಹುಡುಗಿ....ಅದೇ ಬಟ್ಟೆ ಬೇಕೆಂದು ಹಠ ಹಿಡಿಯುವುದು ತಪ್ಪಲ್ಲದಿದ್ದರೂ ಗೌರಿಯ ವಿಷಯ ಯೋಚಿಸಿದ್ದೀಯಾ....ಅವಳು ಬಾಳನ್ನು ಹೇಗೆ ಕಳೆಯಬೇಕು. ತನ್ನ ಸುತ್ತುಮುತ್ತಲಿನವರ ಸುಖ ನೋಡಿ ಕಾಲ ತಳ್ಳಬೇಕು. ನೀನು ಬೇಕಾದರೆ ನನಗೆ ಹೇಳಿ ತರಿಸಿಕೊಳ್ಳುತ್ತೀ.... ಅವಳೇನು ಮಾಡಬೇಕು. ಚಿಕ್ಕಂದಿನಲ್ಲೇ ಗಂಡ ಕಳೆದುಕೊಂಡವಳು" ಎಂದು ಹೇಳಿದ್ದ. ಸಾಲದೆ, ರತ್ನ ತುಂಬಾ ಅತ್ತಿದ್ದಲ್ಲದೆ ಗೌರಿಯ ಕಾಲನ್ನು

ಹಿಡಿದು ಕ್ಷಮಿಸುವಂತೆ ಬೇಡಿದ್ದಳು. ಅಷ್ಟರಲ್ಲೇ ಗೌರಿಗೂ ಅನ್ನಿಸಿತ್ತು.... ರತ್ನಳ ಇಷ್ಟ ನೋಡದೆ ಲಂಗಕ್ಕೆ ಬಟ್ಟೆಯನ್ನು ಕತ್ತರಿಸಿದ್ದು ತನ್ನದೇ ತಪ್ಪು ಎಂದು. ಇಬ್ಬರೂ ಅವರವರ ತಪ್ಪನ್ನು ಅರಿತರು. ಇನ್ನು ಒಬ್ಬರನ್ನೊಬ್ಬರು ಚೆನ್ನಾಗಿ ಅರ್ಥ ಮಾಡಿಕೊಳ್ಳುವುದು ಕಷ್ಟವಾಗಲಿಲ್ಲ ಇಬ್ಬರಲ್ಲಿ ಉಂಟಾದ ಬದಲಾವಣೆಯನ್ನು ನೋಡಿ ರಾಜನಿಗೆ ಸಮಾಧಾನವಾಯ್ತು....ಎಂತಹ ಸಂದರ್ಭ ಒದಗಿತ್ತು....ಆ ಮೇಲೆ ಬಂದ ಹೊಸದರಲ್ಲಿ ತಾನು ರಾಜನ ಹತ್ತಿರ ಮಾತ್ರ ಇರಲುಬಾದವಳೆಂದೂ ಗೌರಿ ಎಲ್ಲಾ ಕೆಲಸಕ್ಕೆ ಮೀಸಲೆಂದೂ ತಿಳಿನು ನಡೆಯುತ್ತಿದ್ದಳು. ಹಾಗಲ್ಲ ಅದಷ್ಟು ಹೆಚ್ಚು ಹೊತ್ತು ತನ್ನ ಗಂಡನ ಹತ್ತಿರ ಇರಬೇಕೆನ್ನುವ ವಯಸ್ಸು....ಇನ್ನೂ ಬಂದ ಹೊಸದು ಅಷ್ಟೆ. ಕೆಲವು ದಿನ ಗಳಲ್ಲಿ ತಿದ್ದಕೊಳ್ಳಬಹುದೆಂದು ಗೌರಿ ತಾನೇ ಎಲ್ಲವನ್ನೂ ಮಾಡುತ್ತಿದ್ದಳು. ಇದನ್ನು ರತ್ನ ಅರ್ಥಮಾಡಿಕೊಳ್ಳಲಿಲ್ಲವೇನೋ. ರಾಜ ಒಂದು ದಿನ ಸುತ್ತಾಡಿ ಬರಲು ಕರೆದುಕೊಂಡು ಹೋದಾಗ ಹೇಳಿದ್ದ.

“ ಕೆಲಸವನ್ನೆಲ್ಲಾ ಅವಳಿಗೆ ಬಿಟ್ಟರೆ ಅವಳೇನೆಂದುಕೊಳ್ತಾಳೆ. ಅಲ್ಲದೆ ಅವಳ ಹತ್ತಿರ ಹೆಚ್ಚಾಗಿ ಮಾತನಾಡಿ ಹೊಂದುಕೊಂಡು ಬಿಡಬೇಕು........ ನಿನಗೆ ಬೇಜಾರಾದರೆ ನಾನಿದ್ದೇನೆ ಹರಟೆಹೊಡೆದು ಚಿನ್ನಾಟವಾಡಲು.... ಪಾಪ. ಅಮ್ಮ ಬಿಟ್ಟರೆ ಸರಸು, ಗೌರಿಗೆ ಸಮಾಧಾನ ಹೇಳಬೇಕು. ಸರಸ ಳಿನ್ನೂ ಹುಡುಗಿ....ಅಮ್ಮ ತನ್ನ ಸಮಸ್ಯೆ ಮತ್ತು ಮನಸ್ಸನ್ನು ಅರ್ಥಮಾಡಿ ಕೊಳ್ಳಲು ತನಗಿಂತ ತುಂಬಾ ದೊಡ್ಡವಳು. ನೀನು ಆ ಕೊರತೆಯನ್ನು ತುಂಬಿ ಕೊಡು. ಅದೂ ನಿನ್ನ ಕೆಲಸವಲ್ಲವೆ ” ಎಂದಿದ್ದ. ರತ್ನ ಬೇಗ ಬದಲಾಯಿಸಿ ದ್ದನ್ನು ಕಂಡು ಈ ಸಾರಿಯೂ ಅವಳ ಗುರು ರಾಜನೆಂದು ಗೊತ್ತಾಗದೆ ಇರ ಲಿಲ್ಲ. ಇನ್ನೆಷ್ಟು ಹೇಳಿದರೂ ಗೌರಿಯ ವಿಷಯ ಅಷ್ಟೆ. ತಾನು ಅತ್ತಿಗೆಯೆಂದು ವರ್ತಿಸುತ್ತಿರಲಿಲ್ಲ. ಅಕ್ಕನೆಂದು ಏಕೆ ತಾಯಿ ಎಂದು ನಡೆದುಕೊಂಡಿದ್ದಳು.

ಕಮಲಮ್ಮನಂತೂ ಹಾಗೇನೆ....ಸೊಸೆಯಿಂದ ಅನೇಕ ವಿಧದ ಅನು ಸರಣೆಯನ್ನು ಎದುರು ನೋಡುವ ಹೆಂಗಸಲ್ಲದಿದ್ದರೂ ಹೊಂದಿಕೊಳ್ಳುವ ವರೆಗೂ ಹಾಗೆ ಸಣ್ಣ ಪುಟ್ಟ ಜಗಳವಾಗುತ್ತಿತ್ತು. ಮಡಿ ಮೈಲಿಗೆ, ಸಂಪ್ರ ದಾಯ, ಹಿರಿಯರು ಕಿರಿಯರು, ದೇವರು ದಿಂಡರು ಈ ವಿಷಯಗಳಲ್ಲಿ ತಪ್ಪಿ ನಡೆದಿದ್ದರೆ ದಂಡಿಸಲು ಕಮಲಮ್ಮನಿಗೆ ಅಧಿಕಾರ ಇತ್ತು. ಯಾರ ಒಳ್ಳೆಯ

ದಕ್ಕೋಸ್ಕರ ಅವಳು ಹಾಗೆ ಹೇಳ್ತಾಳೆ ಎಂದು ತಾತ್ಕಾಲವಲ್ಲಿ ಅರ್ಥವಾಗ ದಿದ್ದ ರತ್ನಳಿಗೆ ಅದು ಸರಿಯಾಗಿ ಕಂಡಿರಲಿಲ್ಲ. ಮನೆಯಲ್ಲಿ ಎಲ್ಲರಿಗೂ ಸರಿ ಕಾಣುವ, ಅಲ್ಲದೆ ನ್ಯಾಯವಾದ ಮಾತನ್ನು ಹೇಳಲು ರಾಜನೊಬ್ಬನೇ ಸಮರ್ಥನಾಗಿದ್ದ. "ಹಾಗೆ ಹೇಳಲು ಒಬ್ಬರು ಇದ್ದಾರಲ್ಲ. ಸಂತೋಷಪಡು. ಉದ್ದಿಶ್ಯ ಒಳ್ಳೆಯದಲ್ಲವೆ....ನಮಗೆ ತೋರಿದಂತೆ ನಡೆದರೆ ಎಷ್ಟು ಅನರ್ಥ ವಾದೀತೋ. ಇದು ಸರಿ, ತಪ್ಪು ಎಂದು ಹೇಳುವ ಹಿರಿಯರು ಬೇಕು-ಅವರ ಮಾತು ಕೇಳಬೇಕು" ಎಂದು ಸಮಾಧಾನ ಮಾಡಿದ್ದ. ಎಂತಹ ಮುತ್ತಿ ನಂತಹ ಮಾತುಗಳು. ಕೆಲವೇ ದಿನಗಳಲ್ಲಿ ಕಮಲಮ್ಮನಿಗೆ ಅಚ್ಚುಮೆಚ್ಚಿನವ ಳಾಗಿ ಬಿಟ್ಟಳು.

ತನ್ನ ತವರೂ ಅಷ್ಟೆ. ತುಂಬಿದ ಮನೆ. ಇದ್ದಿದ್ದರಲ್ಲೇ ತನ್ನ ಹೆಂಡತಿ ಮಕ್ಕಳನ್ನು ಸುಖವಾಗಿಡಬೇಕೆಂದು ಹಗಲಿರುಳು ದುಡಿಯುವ ತಂದೆ. ತನ್ನ ಅಧಿಕಾರ ಮರೆತು ಮಕ್ಕಳ ಅಭಿವೃದ್ಧಿ ಮತ್ತು ಗಂಡನ ಸುಖವನ್ನೇ ಬಯ ಸುವ ತಾಯಿ. ತಾನು ಹುಟ್ಟಿದ ಮನೆಯೂ ಹಾಗೆ ಸೇರಿದ ಮನೆಯಂತೆ ಸುಖದ ಗೂಡು.... .... ರತ್ನಳಿಗೆ ಸಂತೋಷದಿಂದ ಕಣ್ಣು ತುಂಬಿ ಬಂದಿತು. ಅವಳಿಗಾಗಲೇ ಏಳು ತಿಂಗಳು ತುಂಬಿತ್ತು. ಬಳೆ ತೊಡಿಸಿದ್ದಲ್ಲದೆ ಸೀಮಂತ ವೈಸೂರಲ್ಲೇ ಆಗಿತ್ತು. ಇನ್ನು ಎಂಟೆರಡು ದಿನಗಳಲ್ಲಿ ತವರಿಗೆ ಹೋಗಬೇಕು. ತಂಗಿ ಶಾಂತಳ ಮದುವೆ ಗೊತ್ತಾಗಿ ಆದರೆ .... ಅದನ್ನೂ ಮುಗಿಸಿಕೊಂಡು ಮಗನನ್ನೋ ಮಗಳನ್ನೋ ಕರೆದುಕೊಂಡು ಹಿಂತಿರುಗಿ ಎಲ್ಲರಿಗೂ ಸಂತೋಷ ವನ್ನು ತುಂಬಿಕೊಡುವುದು. ರತ್ನಳಿಗೆ ಅಭಿಮಾನದಿಂದ ಮೈಉಬ್ಬಿ ಬಂದು ಒಂದು ರೀತಿಯ ಅನುಭವವಾಯ್ತು.

"ಏಕೆ ಅಳುತ್ತಿದ್ದೀ ರತ್ನ" ಎಂದು ಹತ್ತಿರ ನಿಂತಿದ್ದ ರಾಜ ನೇವರಿಸಿದ. ರತ್ನ ಎಚ್ಚೆತ್ತು "ನೀವು ಬಂದಿದ್ದೇ ಗೊತ್ತಾಗಲಿಲ್ಲ.... ಯಾವಾಗ ಬಂದ್ರಿ?"

"ಆಗ್ಲೆ ಐದು ನಿಮಿಷ ಆಯ್ತು....ಏನೋ ಕನಸು ಕಂಡೆಯಾ?"

"ಕನಸೂ ಇಲ್ಲ, ಏನೂ ಇಲ್ಲ"

"ಎಂತಹ ಮಗುವೆಂದು ಯೋಚಿಸುತ್ತಿದ್ಯಾ"

"ಹೋಗ್ರೀ...." ಎಂದು ಮೋಹಕವಾದ ನೋಟವನ್ನು ಬೀರಿ ತಲೆ ತಗ್ಗಿಸಿದಳು.

ಮಗು, ಗಂಡಾದರೇನು ಹೆಣ್ಣಾದರೇನು ಎಂದು ಹಾಗೆ ನೋಡಿರಬೇಕು.

" ಪಟ್ಟಣದಿಂದ ಕಾಗದ ಬಂದಿದೆ.... ನಾಡಿದ್ದು ಬರ್‍ತಾರೆ.... "

" ರಾಜಿಕಳ ಮದುವೆ ಗೊತ್ತಾಯ್ತಂತೇನು "

" ಮುಂದಿನ ತಿಂಗಳಿಗೆ ಗೊತ್ತಾಗಿಬಿಟ್ಟಿದೆ ಎಂದು ಬರೆದಿದ್ದಾರೆ. "

" ಸದ್ಯ........ "

ರಾಜ ಕೋಣೆಯಿಂದ ಹೊರಗೆ ಬರುವುದಕ್ಕೂ ಗೌರಿ ಎದುರಿಗೆ ಬರುವುದಕ್ಕೂ ಸರಿಹೋಯ್ತು.

" ಅವಳಿಗೇನು ತಟ್ಟುತ್ತಾ ಕುಳಿತರೆ ಮಲಗಿಬಿಡ್ತಾಳೆ .... ಏಳು ರತ್ನ ಊಟ ಮಾಡಿಬಿಡು" ಎಂದು ಗೌರಿ ಹೇಳಿದಳು. ರತ್ನ ಊಟ ಮಾಡಲು ಅಡಿಗೆ ಮನೆಗೆ ಹೋದಳು.

ಮುಂಚೆಯೇ ಬರೆದಿದ್ದಂತೆ ಈಶ್ವರಯ್ಯ ಮೈಸೂರಿಗೆ ಬಂದರು. ರತ್ನಳಿಗೆ ತವರನ್ನು ಬೇಗ ಸೇರಬೇಕು ಎಂದು ಅನ್ನಿಸಿದುದಕ್ಕಿಂತ ಇವರನ್ನು ಬಿಟ್ಟು ಹೋಗಬೇಕಲ್ಲಾ ಎಂದು ದುಃಖವಾಯ್ತು. ಹೇಗೆ ಬಿಟ್ಟು ಹೋಗಬೇಕೆಂದು ಹೆಣ್ಣು ದುಃಖಪಟ್ಟರೆ ಆದೀತೆ? ಹೋಗುವಾಗ ವಾರಕ್ಕೊಂದು ಕಾಗದ ಬರೆಯುವಂತೆ ಮಾತನ್ನು ತೆಗೆದುಕೊಂಡು ಹೊರಟಳು. ಅವಳ ಖರ್ಚಿಗಿರಲಿ ಎಂದು ರಾಜ ೧೦ ರೂಪಾಯಿ ಕೊಟ್ಟಿದ್ದ. ರತ್ನ ತವರಿಗೆ ಹೋದ ಒಂದೆರಡು ದಿನಗಳವರೆಗೂ ರಾಜನಿಗೆ ತುಂಬಾ ಬೇಜಾರಾಯಿತು. ಕಾಲೇಜಿನ ಕೆಲಸದಲ್ಲಿ ಹೆಚ್ಚಿನ ಆಸಕ್ತಿ ವಹಿಸಿದ್ದಲ್ಲದೆ ವೆಂಕಟರಾಮಯ್ಯನೊಡನೆ ಹರಟೆ ಹೊಡೆಯುವದೇ ಆಗಿತ್ತು.

## ೨೬

ವಿಶ್ವನಾಥ ತನ್ನ ಹಟದಂತೆ ಸೈನ್ಯಕ್ಕೆ ಸೇರಿದುದು ರೋಹಿಣಿಗೆ ಆಶ್ಚರ್ಯವನ್ನುಂಟುಮಾಡಲಿಲ್ಲ. ತಿಂಗಳಿಗೊಂದರಂತೆ ಸ್ವಲ್ಪ ದಿನ ಕಾಗದ ಬರುತ್ತಿತ್ತು. ಈಚೆಗೆ ಒಂದು ತಿಂಗಳಿಂದ ಅವನ ಸುದ್ದಿಯೇ ತಿಳಿದಿರಲಿಲ್ಲ. ಹಿಂದೆ ಬರೆದಿದ್ದ ಕಾಗದ ಅಲೆಗ್ಜಾಂಡ್ರಿಯಾದಿಂದ ಬರೆದಿದ್ದ.

ಆನಂದರಾಯರಿಗೆ ಹೃದಯದ ದೌರ್ಬಲ್ಯ ಹೆಚ್ಚಿತ್ತು. ಹೆಚ್ಚಾಗಿ ಓಡಾಡುವುದು ಇರಲಿ ಮನಸ್ಸಿಗೆ ಹೆಚ್ಚಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕೆಂದು ಡಾಕ್ಟರು ತಿಳಿಸಿದ್ದರು. ತಂದೆಯನ್ನು ಚಿಕ್ಕ ಮಗುವಿನಂತೆ

ನೋಡಿಕೊಳ್ಳುವುದೊಂದೇ ರೋಹಿಣಿಗೆ ಇದ್ದ ಜವಾಬ್ದಾರಿ. ಬೆಳಗೆದ್ದು ತಂದೆ ಯೊಡನೆ ಸುತ್ತಾಡಿ ಬರಲು ಹೋಗುವಳು. ಆ ಮಾತು ಈ ಮಾತು ಆಡಿ, ಹವೆ ಸೇವಿಸಿ, ವಾಪಸು ಬರುವಹೊತ್ತಿಗೆ ೯ ಗಂಟೆಯಾಗಿಬಿಡುವುದು. ಅನಂ ತರ ಸ್ನಾನ ಉಪಹಾರ. ತಂದೆಗೆ ಟ್ಯಾಗೂರ ಅವರ ಕೃತಿಗಳನ್ನು ಓದಿಹೇಳು ವದು. ಊಟ ಆದನಂತರ ಜನಾರ್ದನರಾಯರು ಮಲಗಿಬಿಡುವರು.

ರೋಹಿಣಿ ಸ್ವಾಮಿ ವಿವೇಕಾನಂದರ ಕೃತಿಗಳನ್ನು ಓದುವಳು. ಓದು ವುದೊಂದೇ ಅವಳಿಗೆ ಸಮಾಧಾನ ಕೊಡುತ್ತಿದ್ದದು. ಪುನಃ ಒಂದೆರಡು ಗಂಟೆಗಳ ಕಾಲ ವಿಶ್ರಾಂತಿ ತೆಗೆದುಕೊಂಡು ತಂದೆಯೊಡನೆ ಟೀಯನ್ನು ಸೇವಿಸಿ ಮನೆಮುಂದಿನ ಕೈತೋಟದಲ್ಲಿ ಕಾಲ ಕಳೆಯುವಳು—ಇಲ್ಲವೆ ಎಂದಾ ದರೂ ಚಲನಚಿತ್ರಕ್ಕೆ ಹೋಗುವಳು ರಾತ್ರಿಯ ಹೊತ್ತು ಒಂದು ಗಂಟೆಯ ಸಮಯವಾದರೂ ವೀಣೆಯನ್ನು ನುಡಿಸದಿದ್ದರೆ ಅವಳಿಗೆ ಸಮಾಧಾನವೇ ಇಲ್ಲ. ರಾತ್ರಿ ಊಟಮಾಡಿದ ಮೇಲೆ ತಂದೆಯೊಡನೆ ಸ್ವಲ್ಪ ಹೊತ್ತು ಮಾತ ನಾಡಿ ಅವರು ಮಲಗಿದ ಮೇಲೆ ತನ್ನ ಕೋಣೆಗೆ ಬಂದರೆ ಮಲಗುವುದು ಹತ್ತೋ ಹನ್ನೊಂದಕ್ಕೋ. ದಿನವೂ ರಾಮಕೃಷ್ಣಪರಮಹಂಸ ಮತ್ತು ಶಾರದಮಣಿಯ ಚಿತ್ರಗಳಿಗೆ ಮಾಲೆಹಾಕಿ ತನಗೆ ಸರಿಯಾದ ಮಾರ್ಗ ತೋರೆಂದು ಬೇಡಿಕೊಳ್ಳುವಳು. ಅದರಿಂದ ಅವಳಿಗೆ ಒಂದು ಬಗೆಯ ಸಮಾ ಧಾನ. ರಾಜನನ್ನು ನೆನೆದುಕೊಳ್ಳಬಾರದೆಂದು ಎಷ್ಟು ಪ್ರಯತ್ನಿಸಿದರೂ ದುರ್ಬಲವಾದ ಮನಸ್ಸು ಜ್ಞಾಪಕ ಕೊಡುತ್ತಿತ್ತು.

ಎಂದಿನಂತೆ ರಾತ್ರಿ ಊಟ ಮುಗಿಸಿ ರೋಹಿಣಿ ವೀಣೆ ನುಡಿಸುತ್ತಿದ್ದಳು. ವೀಣಾನಾದದ ಸಮಕ್ಕೂ ಮನಸ್ಸು ತೂಗಾಡುತ್ತಿತ್ತು. ತನ್ನ ದೇಹವನ್ನು ತಾನೇ ನೋಡಿಕೊಂಡಳು. ಹೇಗಿದ್ದವಳು ಹೇಗಾದಳೆಂದು ಕಾಣಿಸಿತು. ದೇಹ ಕೃಶವಾಗಿ ತನಗೇ ಸಂದೇಹ ಬರುವಂತಿತ್ತು. ವೀಣೆ ನುಡಿಸುವುದನ್ನುನಿಲ್ಲಿಸಿ ಕನ್ನಡಿಯಲ್ಲಿ ತನ್ನ ಮುಖವನ್ನು ನೋಡಿಕೊಂಡಳು. ಏಕೋ ಮುಖವೆಲ್ಲಾ ಕಳವಳದಿಂದ ತುಂಬಿತ್ತು. ಉಟ್ಟ ಬಟ್ಟೆಬರೆಗಳು ಚೆನ್ನಿರಲಿಲ್ಲ. ಹಾಗೆಯೇ ಕೋಣೆಯ ಸುತ್ತಲೂ ನೋಡಿದಳು. ಎಲ್ಲವೂ ನೀಲಿ ಬಣ್ಣದಿಂದ ತುಂಬಿತ್ತು. ಗೋಡೆಗೆಲ್ಲಾ ತಿಳಿ ನೀಲಿಬಣ್ಣ ಹಚ್ಚಿ ಕಿಟಕಿ ಬಾಗಿಲಿಗೆಲ್ಲಾ ನೀಲಿ ಪರದೆ ಗಳು ಹಾಕಿತ್ತು. ಹೊರಗಿನಿಂದ ಕಿಟಕಿಯೊಳಕ್ಕೆ ಬೆಳದಿಂಗಳು ಬಿದ್ದಿತ್ತು.

ಕಿಟಕಿಯಿಂದಾಚೆ ನೋಡಿದಳು. ಸುಯ್ಯನೆ ಸುಳಿಗಾಳಿ ಬೀಸಿ ಹೂ ಗಿಡಗಳನ್ನು ಅಲ್ಲಾಡಿಸಿ ಹೂವಿನ ಕಂಪು ಬೀರಿ ಮನಸ್ಸಿಗೆ ಹಿತವನ್ನುಂಟು ಮಾಡಿತು. ಗಿಡಗಳೆಲ್ಲ ಸಂತೋಷದಿಂದಿವೆ–ಎಲ್ಲವೂ ನಗುನಗುತ್ತಿವೆ. ಕಿಟಕಿಗೆ ಹಬ್ಬಿಸಿದ್ದ ಗುಲಾಬಿ ಗಿಡದಿಂದ ಅರಳಿ ಬಿರಿದು ನಿಂತಿದ್ದ ಹೂವಿನ ದಳಗಳು ಬೀಳುತ್ತಿವೆ. ಚಂದ್ರ ತನ್ನನ್ನು ನೋಡಿ ಅಣಕಿಸುತ್ತಿರುವಂತೆ ಕಾಣಿಸಿತು....ಅಯ್ಯೊ ! ನಾನು ಮಾತ್ರ...."

ರೋಹಿಣಿ ಬೇರೆ ಸೀರೆಯುನ್ನುಟ್ಟು ಜಂಪರ್ ಹಾಕಿಕೊಂಡಳು. ಬೇಗ ಬೇಗ ತಲೆ ಬಾಚಿ ಹೆಳಲು ಹಾಕಿಕೊಂಡು ಒಂದು ಮರುಗದ ಎಸಳನ್ನು ತಲೆಗೆ ಮುಡಿದಳು. ಸರಿಯಾಗಿ ಕುಂಕುಮವಿಟ್ಟುಕೊಂಡಳು. ಪುನಃ ಕನ್ನಡಿಯಲ್ಲಿ ನೋಡಿಕೊಂಡಾಗ ಅವಳಿಗೆ ಅನ್ನಿಸಿತು– ತಾನಿನ್ನೂ ರೂಪವತಿ ಹೌದು– ತುಂಬು ಯೌವನದ ರೂಪಸಿ....ಹೀಗೆ ಸಾಯಬೇಕು....ಅಯ್ಯೋ ವಿಧಿಯೇ! ರೋಹಿಣಿ ತುಂಬಾ ಅತ್ತುಬಿಟ್ಟಳು. ಮನಸ್ಸಿಗೆ ಸಮಾಧಾನವಾಗುವವರೆಗೂ ಅತ್ತುಬಿಟ್ಟಳು. ಮತ್ತೆ ಕನ್ನಡಿಯಲ್ಲಿ ನೋಡಿಕೊಂಡಳು. ಆಗಲೂ ಚೆನ್ನಾಗಿಯೇ ಕಂಡಳು. ಅತ್ತರೂ ಚೆನ್ನ ನಕ್ಕರೂ ಚೆನ್ನ– ಅದೇ ಅಲ್ಲವೆ ಸೌಂದರ್ಯದ ತಿರುಳು. ತನ್ನ ಕೋಣೆಯಿಂದ ತೋಟಕ್ಕೆ ಬಂದು ಸುತ್ತಾಡಿದಳು. ಗಿಡಗಳೆಲ್ಲವೂ ಬೆಳದಿಂಗಳೊಡನೆ ಆಡುತ್ತಿರುವಂತೆ ಭಾಸವಾಯ್ತು ರಾತ್ರಿಯ ರಾಣಿಯ ಕಂಪಂತೂ ಸುತ್ತಲೂ ಪಸರಿಸಿ ಅವಳನ್ನು ಮುಗ್ಧಳನ್ನಾಗಿ ಮಾಡಿತ್ತು. ಪ್ರಕೃತಿ ಒಂದು ಗೊತ್ತಾದ ನಿಯಮಕ್ಕನುಸಾರವಾಗಿ ನಡೆಯುವುದು. ಅದನ್ನು ನೋಡಿ ಮನುಷ್ಯ ಕಲಿತುಕೊಳ್ಳಬಾರದೆ....ನಮ್ಮ ಕಷ್ಟಗಳಿಗೆ ಎಷ್ಟೋ ಸಾರಿ ನಾವೇ ಹೊಣೆ. ಮನಸ್ಸಿಗೆ ಸಮಾಧಾನ ದೊರೆಯಬಹುದೆಂದು ತೋಟಕ್ಕೆ ಬಂದ ರೋಹಿಣಿಯ ಮನಸ್ಸಿನ ಕಳವಳವಿನ್ನೂ ಹೆಚ್ಚಿತು. ಕೋಣೆಗೆ ಬಂದು ಜ್ಯೋತಿ ! ದಾರಿ ತೋರೆಂದು ಪರಮಪುರುಷನನ್ನು ಬೇಡಿದಳು. ತನ್ನ ಚಿಕ್ಕಂದಿನ ದಿನಗಳು....ರಾಜನೊಡನೆ ತನ್ನ ಸ್ನೇಹ.... ಮದುವೆಯ ರೂಪದಲ್ಲಿ ಸ್ನೇಹ ಬಲಪಡುವುದೆಂದು ನಂಬಿದ್ದಳು. ಆ ರೀತಿಯಾಗದೆ ವಿಶ್ವನಾಥನ ರೂಪದಲ್ಲಿ ವಿಧಿ ಕ್ರೂರವಾಯ್ತು. ದುಃಖದ ಕಡಲಿನಲ್ಲಿ ಮುಳುಗಿದ್ದಳು. ಸುಖದ ಕಿರಣವನ್ನೇ ಕಂಡಿರಲಿಲ್ಲ. ಗೋಡೆಯ ಮೇಲೆ ತಗುಲಿಹಾಕಿದ್ದ ಗತಿಸಿದ ತಾಯಿಯ ಭಾವಚಿತ್ರವನ್ನು ನೋಡಿ ಭಾವನಾಪರ

ವಶಳಾದಳು. ತಾಯಿ ಬದುಕಿರುವಳೆಂದು ತಿಳಿದು ಅತ್ತಳು, ಬೇಡಿದಳು, ತನಗೆ ಮುಂದಿನದಾರಿ ಏನೆಂದು ಕೇಳಿದಳು. ತಾಯಿಯ ಭಾವಚಿತ್ರ ರೋಹಿಣಿಗೆ ಯಾವ ಸಂದೇಶವನ್ನಿತ್ತಿತೋ, ಹಾಸಿಗೆಯಮೇಲೆ ಬಂದು ಮಲಗಿಕೊಂಡು ಹಾಗೆಯೇ ತನ್ನ ಸ್ಥಿತಿಯನ್ನು ಯೋಚಿಸುತ್ತಾ ಕುಳಿತಳು. ಅವಳಿಗೆ ಯಾವಾಗ ನಿದ್ದೆ ಆವರಿಸಿತೋ, ಬೆಳಗೆದ್ದು ಸೇವಿಕೆ ಉರಿಯುತ್ತಿದ್ದ ದೀಪ ಆರಿಸಿ ಎಚ್ಚರಿಸಿದಾಗಲೇ ಬಾಹ್ಯಪ್ರಪಂಚದ ನೆನಪು. ಚೆನ್ನಾಗಿ ಶೃಂಗರಿಸಿಕೊಂಡು ಹಾಗೇ ಮಲಗಿದ್ದ ರೋಹಿಣಿ ಸೇವಿಕೆಗೆ ಅತಿಯಾಗಿ ಕಾಣಲಿಲ್ಲ. ಬೆಳಗ್ಗೆ, ಹಿಂದಿನರಾತ್ರಿ ನಡೆದಿದ್ದೆಲ್ಲಾ ಜ್ಞಾಪಿಸಿಕೊಂಡಳು. ತನ್ನರಿವಿಲ್ಲದಂತೆ ಎಲ್ಲವನ್ನೂ ಮಾಡಿದ್ದಳು. ಬೆಳಗಿನ ಜಾವದಲ್ಲಿ ಆನಂದರಾಯರಿಗೆ ಹೃದಯ ರೋಗ ಹೆಚ್ಚಿ ಡಾಕ್ಟರು ಬಂದು ಪರೀಕ್ಷಿಸುತ್ತಿರುವರೆಂದು ತಿಳಿದಕೂಡಲೇ ತಂದೆಯ ಕೋಣೆಗೆ ಓಡಿದಳು. ಡಾಕ್ಟರಿನ್ನೂ ಪರೀಕ್ಷಿಸುತ್ತಿದ್ದರು. ರೋಹಿಣಿ ಬಂದು ತಂದೆಯ ಪಕ್ಕದಲ್ಲಿ ಕುಳಿತು ತನ್ನ ಕೈಯಿಂದ ಆವರ ಕೈಯನ್ನು ಹಿಡಿದುಕೊಂಡಳು. ಆನಂದರಾಯರು ಕಣ್ಣೀರಿಟ್ಟರೇ ವಿನಾ ಮಾತನಾಡಲಿಲ್ಲ. ಸ್ವಲ್ಪಹೊತ್ತಿಗೆ ಪುನಃ ಬಂದು ಇಂಜೆಕ್ಷನ್ ಕೊಡವುದಾಗಿ ಹೇಳಿ ಡಾಕ್ಟರು ಹಿಂತಿರುಗಿದರು ಡಾಕ್ಟರು ಹೋದುದೇ ತಡ ರೋಹಿಣಿಯ ಕೈಗಳನ್ನು ಮುಖದ ಮೇಲಿಟ್ಟುಕೊಂಡು ಅತ್ತರು. ರೋಹಿಣಿ ಸಮಾಧಾನ ಮಾಡುತ್ತ " ಅಳಬೇಡ ಅಣ್ಣ....ಹೆಚ್ಚಾದೀತು " ಎಂದಳು.

" ರೋಹಿಣಿ....ನಿನಗೆ ಅನ್ಯಾಯ ಮಾಡಿದೆ.... "

" ಏನು ಮಾತಣ್ಣ....ಎಲ್ಲ ಸರಿಹೋಗುತ್ತೆ, ಸುಮ್ನಿರಬಾರದೆ "

" ಅವಳು ತೀರಿ ಹೋದುದೇ ಬಂತು ನೋಡು.... "

" .... .... .... .... "

" ಪುನಃ ಮದುವೆಯಾಗದೆ ಇದ್ದರೆ ಎಷ್ಟೋ ಚೆನ್ನಾಗಿತ್ತು.... "

" ಆ ಮಾತಿನಿಂದ ಏನು ಪ್ರಯೋಜನ ಅಣ್ಣ....ಈಗೇನೂ ಆಗಿಲ್ಲ...."

" ನಿನ್ನ ಬಾಳನ್ನು ಹಾಳುಮಾಡಿದೆ .... ನೀನು ಪ್ರೀತಿಸಿದವನೊಡನೆ ಮದುವೆ ಮಾಡಿದ್ದರೆ ಚೆನ್ನಾಗಿತ್ತು.... "

" .... .... .... .... "

" ಅವಳ ಅದೇ ರೂಪಿನ ಸುಂದರಿ ನೀನು ರೋಹಿ.... "

" ಸುಮ್ಮನಿರಣ್ಣ .... .... "

" ಅಯ್ಯೋ ಅವಳು ಅಲ್ಲಿ ನಗುತ್ತಿದ್ದಾಳೆ .... ಹಾಗೇಕೆ ದುರುಗುಟ್ಟಿ ನೋಡುತ್ತೀ ಬೇಡ....ಎಲ್ಲ ನನ್ನ ಕೈಮೀರಿತ್ತು....ರೋಹಿ ನೀನಾದ್ರೂ ಹೇಳ ಬಾರದೆ ನಿನ್ನ ತಾಯಿಗೆ. ಹೇಳು.... " ಎಂದು ಎದ್ದು ಕೂತರು.

ಅವರನ್ನು ಪುನಃ ಮಲಗಿಸಿ ರೋಹಿಣಿ ಸಮಾಧಾನಮಾಡಿದಳು. ಕೋಣೆಯೊಳಕ್ಕೆ ಸುಂದರಮ್ಮ ಬಂದು ಕಾಲಿನ ಹತ್ತಿರ ಕುಳಿತಳು. ಆನಂದ ರಾಯರು ಅವಳನ್ನು ಕಂಡ ತಕ್ಷಣವೇ ಹೋಗೆಂದು ಕಿರುಚಿದರು. ಸುಂದ ರಮ್ಮ ಅಳುತ್ತಾ ಕೋಣೆಯಿಂದ ಹೊರಬಿದ್ದಳು. ಪುನಃ ಆನಂದರಾಯರು ಬಾಯಿಗೆ ಬಂದಂತೆ ಮಾತನಾಡುತ್ತಿದ್ದರು.

" ರೋಹಿಣಿ ಕ್ಷಮಿಸುವೆಯಾ .... ನಿನಗೆ ಮಾಡಿದ ಅನ್ಯಾಯವನ್ನು ಮರೆಯುವೆಯಾ.... "

" ಅಣ್ಣಾ....ಎಷ್ಟು ಕೇಳಿಕೊಂಡರೂ ಸುಮ್ಮನಿರುವುದಿಲ್ಲವೆ "

ಒಮ್ಮೆ ಕಿರುಚಿ ಈ ಕಾಗದಗಳನ್ನು ತೆಗೆದುಕೋ ಎಂದು ಹೇಳಿ ಆನಂದ ರಾಯರು ಹಾಸಿಗೆಯ ಮೇಲೆ ಬಿದ್ದು ಬಿಟ್ಟರು. ರೋಹಿಣಿ ಗಾಬರಿಯಾಗಿ ನೋಡಿದಳು. ಅವರು ಆ ಹೊತ್ತಿಗಾಗಲೇ ಇಹಲೋಕವನ್ನು ಬಿಟ್ಟಿದ್ದರು. ಡಾಕ್ಟರು ಬಂದು ತಮ್ಮ ಸಹಾಯವಿನ್ನು ಬೇಕಿಲ್ಲವೆಂದು ತಿಳಿದು ಸಂತಾಪ ಸೂಚಿಸಿ ಹಿಂತಿರುಗಿದರು. ರೋಹಿಣಿಗೆ ಹತ್ತಿರ ಬಂಧುಗಳ್ಯಾರೂ ಇರಲಿಲ್ಲ. ಸುಂದರಮ್ಮನ ಅಣ್ಣನಿಗೆ ತಂತಿ ಕಳುಹಿಸಿದಳು. ತಕ್ಷಣ ರಾಜನ ಜ್ಞಾಪಕ ಬಂದು ಆಳೊಡನೆ ಸಂದರ್ಭವನ್ನು ಹೇಳಿ ಕಳುಹಿಸಿದಳು. ಸುಂದರಮ್ಮ ತನ್ನ ಅದೃಷ್ಟ ಹೀಗಾಯ್ತೆ ಎಂದು ಅತ್ತಳು. ಅವರ ಪೈಕಿ ತನ್ನ ದುಃಖ ವನ್ನೆಲ್ಲಾ ಮರೆತು ರೋಹಿಣಿಯೇ ಧೈರ್ಯಗೊಂಡು ಮುಂದಿನ ಏರ್ಪಾ ಡಿಗೆ ಯೋಚಿಸಿದಳು. ರಾಜ ಮಹಡಿಯ ಮೆಟ್ಟಿಲನ್ನು ಧಡಧಡ ಹತ್ತಿ ಬಂದು ರೋಹಿಣಿಯೊಡನೆ ಮಾತನಾಡದೆ ಅವಾಕ್ಕಾಗಿ ನಿಂತ.

" ಹೌದು! ಎಲ್ಲಾ ಆಗಿಹೋಯ್ತು. ನನಗಾಗಿ ಮರುಗುತ್ತಿದ್ದ ತಂದೆ ಇಂದಿಗೆ ಇಲ್ಲವಾದರು " ರೋಹಿಣಿ ಅತ್ತು ಬಿಟ್ಟಳು.

ರಾಜ ರೋಹಿಣಿಗೆ ಎಷ್ಟೋ ಹೇಳಿದ: ತನ್ನ ಕಷ್ಟ ಸುಖಗಳನ್ನು ಹೇಳಿ ಕೊಳ್ಳಲು ರಾಜ ಒಳ್ಳೆಯ ಬಂಧುವಾಗಿದ್ದ. ಮುಂದಿನ ಏರ್ಪಾಡನ್ನು ಸುಂದ

ರಮ್ಮನ ಅಣ್ಣ ಬಂದಮೇಲೆ ಮಾಡಿದರು. ಆ ದಿನವೆಲ್ಲಾ ರಾಜ ಅವರ ಮನೆಯಲ್ಲೇ ಕಳೆದ. ರೋಹಿಣಿಗೆ ಧೈರ್ಯ ಹೇಳಿದ. ಕೆಲವು ದಿನಗಳಾದ ಮೇಲೆ ಪೂನಾದಲ್ಲಿದ್ದ ಅವರ ಮನೆಯಲ್ಲಿ ಹೋಗಿದ್ದು ಬಿಡುವುದೆಂದು ರೋಹಿಣಿ ನಿರ್ಧರಿಸಿದಳು. ಮನಸ್ಸು ಸ್ತಿಮಿತಕ್ಕೆ ಬರಲು ಅದು ಒಳ್ಳೆಯದೆಂದು ರಾಜನು ಹೇಳಿದ. ಹದಿನೈದು ದಿನಗಳನಂತರ ರೋಹಿಣಿ ಸುಂದರಮ್ಮನೊಂದಿಗೆ ಪೂನಾಕ್ಕೆ ಹೋದಳು.

× × × ×

ರತ್ನಳ ತಂಗಿ ಶಾಂತಳ ಮದುವೆಯೇನೋ ಗೊತ್ತಾಗಿಬಿಟ್ಟಿತ್ತು. ಆದರೆ ಮುಹೂರ್ತವನ್ನು ನಿಶ್ಚಯಿಸಲು ತೊಂದರೆ ಇತ್ತು. ಇನ್ನೊಂದು ತಿಂಗಳಿನ ಒಳಗೆ ಆದ್ರೆ ಲಗ್ನ ಇದ್ದುವು. ಅದನ್ನು ಬಿಟ್ಟರೆ ಇನ್ನೆರಡು ತಿಂಗಳಿಗೆ ಒಂದೇ ಒಂದು ಲಗ್ನ. ಆ ಹೊತ್ತಿಗೆ ರತ್ನಳಿಗೆ ಹೆರಿಗೆಯ ದಿನಗಳು. ಆಗಂತೂ ಏರ್ಪಡಿಸುವಂತಿಲ್ಲ. ಅಂದ್ರೆ ಇನ್ನೊಂದು ತಿಂಗಳಿಗೇ ಎಲ್ಲಾ ಸಿದ್ಧವಾಗಿ ಬಿಡಬೇಕಿತ್ತು. ಮನೆ ಮತ್ತು ಜಮೀನಿನ ಮೇಲೆ ಈಶ್ವರೈಯ ಎರಡು ಸಾವಿರ ರೂಪಾಯಿ ಸಾಲಮಾಡಿ, ೨೦ ದಿನಗಳಲ್ಲಿದ್ದ ಲಗ್ನ ನಿಷ್ಕರ್ಷೆಯಾಯ್ತು. ಸಾಮಾನು ಸರಂಜಾಮು ಕೊಳ್ಳುವುದು ನಡೆಯುತ್ತಿತ್ತು.

ತುಂಬು ಬಸುರಿ ರತ್ನ ಆಯಾಸವಾಗದ ಸಣ್ಣಪುಟ್ಟ ಕೆಲಸಗಳನ್ನು ಮಾಡುತ್ತಿದ್ದಳು. ಅರಿಸಿನದ ಪಟ್ಟಣ ಕಟ್ಟುವುದು, ಅಡಿಕೆಪುಡಿ ಕಲಸುವುದು, ಇವು ಕಷ್ಟವಾಗುತ್ತಿರಲಿಲ್ಲ. ಶಾಂತಳಂತೂ ರತ್ನಳ ಹತ್ತಿರವೇ ಇದ್ದುಬಿಡುವಳು.

ಸಾಧ್ಯವಾದ ಭಾನುವಾರಗಳಲ್ಲಿ ರಾಜ ಪಟ್ಟಣಕ್ಕೆ ಬಂದು ಹೋಗುತ್ತಿದ್ದ. ರತ್ನಳಂತೂ ಆನಂದದಿಂದ ಉಬ್ಬಿಹೋಗುವಳು. ಶಾಂತಳ ಮದುವೆ ಇನ್ನೇನು ನಾಲ್ಕುದಿನ ಇದೆ ಅನ್ನುವಹೊತ್ತಿಗೆ ರಾಜ ಪಟ್ಟಣಕ್ಕೆ ಬಂದುಬಿಟ್ಟ. ಬರೀ ಶಾಂತಳ ಮದುವೆಯಾಗಿದ್ದರೆ ರಾಜ ಧಾರೆಯದಿನ ಮಾತ್ರ ಬಂದು ಹೋಗುತ್ತಿದ್ದನೇನೋ. ಮದುವೆಯ ಮನೆಯಲ್ಲಿ ನಾಲ್ಕುದಿನ ನಾಲ್ಕು ನಿಮಿಷದಂತೆ ಕಳೆಯಿತು. ಮದುವೆಯ ಮನೆಯಲ್ಲಿ ರತ್ನಳ ಓಡಾಟ ಹೆಚ್ಚಿಲ್ಲದಿದ್ದರೂ ಎಲ್ಲರಿಗೂ ಅಚ್ಚುಮೆಚ್ಚಾಗಿ ಕಂಡಳು.

ಎಷ್ಟು ತಗ್ಗಿ ನಡೆದರೂ ಮದುವೆ ಮುಗಿಯಿತೆನ್ನಿಸಲು ಈಶ್ವರೈಯನಿಗೆ ಸಾಕು ಸಾಕಾಯ್ತು. ಮೊದಲನೆಯ ಬೀಗರಾತೆ ಹೊಂದಿ ನಡೆಯುವ ಜನ ರಲ್ಲ. ಅದು ಆಗಲಿಲ್ಲ-ಇದು ಮಾಡಲಿಲ್ಲ....ಎಂದು ಬಿಮ್ಮೆಂದು ಕುಳಿತ ಬೀಗರು. ಏನೇ ಆಗಲಿ....ಕೈಕಾಲುಕಟ್ಟಿ ಮದುವೆ ಮುಗಿಸಿಬಿಟ್ಟಿದ್ದರು.

ಬೀಗರನ್ನು ಬೀಳ್ಕೊಳ್ಳುವ ಮುಂಚೆ ರಾಜ ರತ್ನಳಿಗೆ ಬೇಕಾದಷ್ಟು ಹೇಳಿ ಮೈಸೂರಿಗೆ ಹೊರಡಲು ಸಿದ್ಧವಾದ. ಇತರ ದಿನಗಳಾಗಿದ್ದರೆ ಅವ ನೊಬ್ಬನನ್ನೇ ಕರೆದು ಕೋಣೆಯಲ್ಲಿ ಕುಳ್ಳಿರಿಸಿ ತಿಂಡಿತೀರ್ಥದ ಉಪಚಾರ ವಾಗುತ್ತಿತ್ತು. ಹಾಗೆಂದು ಕೆಲವು ವಿಷಯಗಳನ್ನು ಎಲ್ಲರೆದುರು ಮಾತ ನಾಡಲು ಆಗುತ್ತೈೕ? ಮುಂದಿನ ಕೋಣೆಗೆ ಬಂದಳು. ರಾಜ ತನ್ನ ಹಾಸಿಗೆ ಯನ್ನು ಕಟ್ಟಿಸಿದ್ದ. ರತ್ನ ಟ್ರಂಕಿನಿಂದ ಒಂದು ಪೊಟ್ಟಣವನ್ನು ತೆಗೆದು "ಅತ್ತಿಗೆ ಕೊಟ್ಟುಬಿಡಿ....ಹೂಬತ್ತಿ ಮಾಡಿದ್ದೇನೆ" ಎಂದಳು.

"ಕೊಡು .... ಅವೇನು ಉಣ್ಣೆದಾರದ ಉಡುಗೆಗಳು! ಸ್ವೆಟ್ಟರ್ ಹಾಕು ತ್ತಿದ್ದೀಯಾ?"

"ಹೂ...."

"ನೋಡೋಣ ಎಲ್ಲಿ...." ಎಂದು ಕೈಗೆ ತೆಗೆದುಕೊಂಡ.

ರತ್ನ "ಬೇಡಿ ಇಲ್ಲಿ ಕೊಡಿ" ಎಂದು ಕಿತ್ತುಕೊಳ್ಳಲು ಬಗ್ಗಿದಳು. ಆ ಹೊತ್ತಿಗಾಗಲೆ ರಾಜ ಟ್ರಂಕಿನಿಂದ ದಾರದ ಉಡುಗೆಯನ್ನು ತೆಗೆದಿದ್ದ. ಅದರ ಕೊನೆಗೆ ಅರ್ಧ ಹಾಕಿದ್ದ ಕುಲಾಯಿ ಕೂಡ ಬಂತು.

ಓ! ಎಂದು ರಾಜ ನಕ್ಕುಬಿಟ್ಟ. ರತ್ನ ಮುಖ ಮುಚ್ಚಿಕೊಂಡು "ನಿಮ್ಮನ್ಯಾರು ನೋಡು ಎಂದು ಹೇಳಿದವರು" ಎಂದು ಅವುಗಳನ್ನು ಕಿತ್ತು ಕೊಂಡು ಟ್ರಂಕಿನಲ್ಲಿ ಮುಚ್ಚಿಟ್ಟಳು.

"ಗಾಡಿ ಸಿದ್ಧವಾಗಿದೆ....ನಾನು ಬೀಗರ ಪಾಳ್ಯ ನೋಡಿಕೊಳ್ಳಬೇಕು" ಎಂದು ಈಶ್ವರೈಯ ಬಂದರು.

"ನಿಮ್ಮ ಪಾಡಿಗೆ ನಿಮ್ಮ ಕೆಲಸ ನೋಡಿಕೊಳ್ಳಿ....ನಾನು ಗಾಡಿಯಲ್ಲಿ ಹೋಗ್ತೇನೆ" ಎಂದ ರಾಜ ರತ್ನಳನ್ನು ಬೀಳ್ಕೊಟ್ಟು ಗಾಡಿಯಲ್ಲಿ ಕುಳಿತ. ಕಿಟಕಿಯಲ್ಲಿ ರತ್ನ ರಾಜನನ್ನೇ ನೋಡುತ್ತಿದ್ದಳು. ಅವಳನ್ನು ನೋಡಿದ ರಾಜನಿಗೆ ತಕ್ಷಣ ಜ್ಞಾಪಕಕ್ಕೆ ಬಂತು. ತನ್ನ ಮದುವೆಯ ಮುಂಚೆ ವಧು

ಪರೀಕ್ಷೆಗೆ ಬಂದು ಹಿಂತಿರುಗುವಾಗ ರತ್ನಳ ಅದೇ ನೋಟ. ಆದರೆ ಈಗ ಆ ನೋಟ ಎಷ್ಟು ಬದಲಾಯಿಸಿತ್ತು !

ಮೂರು ಗಂಟೆಯ ಹೊತ್ತಿಗೆ ರಾಜ ಸರಸಳೊಂದಿಗೆ ಪೇಟೆಯಿಂದ ವಾಪಸು ಬರುತ್ತಿದ್ದ. ಸರಸು ತಮಾಷೆಯಾದ ಪ್ರಶ್ನೆಗಳನ್ನು ಕೇಳುವಳು. ಮೋಟಾರು ಹೇಗೆ ಓಡುತ್ತೆ, ಎಲೆಕ್ಟ್ರಿಕ್ ದೀಪ ಎಣ್ಣೆಯಿಲ್ಲದೆ ಹೇಗೆ ಉರಿಯುತ್ತೆ ಎಂದು ಕೇಳುವಳು. ಅವಳಿಗೆ ಸಮಂಜಸವಾದ ಉತ್ತರ ಕೊಡಲು ರಾಜನಿಗೆ ಸಾಕಾಗಿಹೋಯ್ತು. ಬರುತ್ತಾ ದಾರಿಯಲ್ಲಿ ರೋಹಿಣಿಯ ಮನೆ ಕಣ್ಣಿಗೆ ಬಿತ್ತು. ಅದೇ ಪಾದರಿಹೂವಿನಮರ ಕೆಳಗೆ ಬಿದ್ದಿದ್ದ ಹೂವನ್ನು ಸರಸು ಆರಿಸಿಕೊಳ್ಳಲು ನಿಂತಳು. ಮರದ ನೆರಳಿನಲ್ಲಿ ರಾಜನಿಗೂ ನಿಲ್ಲೋಣವೆನ್ನಿಸಿತು. ಸರಸು ತನ್ನ ಪಾಡಿಗೆ ತಾನು ಹೂವನ್ನು ಆರಿಸುತ್ತಿದ್ದಳು. ರಾಜನಿಗೆ ಮಾತ್ರ ಆ ಸನ್ನಿವೇಶ ಅದರಲ್ಲೂ, ರೋಹಿಣಿಯ ಮನೆಯನ್ನು ಸುತ್ತಿದ ನೆನಪು ಬಂತು. ಎಷ್ಟೋ ದಿನದಿಂದ ಆ ಮನೆಯಲ್ಲಿ ಯಾರೂ ವಾಸಿಸುತ್ತಿರಲಿಲ್ಲ. ಮಾಲಿ ಮಾತ್ರ ತೋಟವನ್ನೂ ಮನೆಯನ್ನೂ ನೋಡಿಕೊಳ್ಳುತ್ತಿದ್ದ. ಇನ್ನೂ ಹೂವನ್ನು ಆರಿಸುತ್ತಿದ್ದ ಸರಸಳನ್ನು "ಬಾ ಹೊತ್ತಾಗುತ್ತೆ" ಎಂದು ಅವಳನ್ನು ಕರೆದುಕೊಂಡು ಮನೆಯನ್ನು ಸೇರಿದ. ಗೌರಿ, ರಾಜನ ಕೈಗೆ ಪಟ್ಟಣದಿಂದ ಬಂದ ಕಾಗದವನ್ನು ಕೊಟ್ಟಳು. ರಾಜ ಕಾಗದವನ್ನೋದಿಕೊಂಡು ತನ್ನ ಕೋಣೆಗೆ ಬಂದ. ಆಗಲೇ ಕಮಲಮ್ಮನಿಗೆ ಮೊಮ್ಮಗ ಹುಟ್ಟಿದ್ದ ಆ ಸುದ್ದಿ ಎಲ್ಲರಿಗಿಂತಲೂ ಕಮಲಮ್ಮನಿಗೆ ಹೆಚ್ಚಿನ ಸಂತೋಷವನ್ನುಂಟು ಮಾಡಿತ್ತು.

ನಾಮಕರಣದ ಹೊತ್ತಿಗೆ ಸುಬ್ಬಣ್ಣನೊಂದಿಗೆ ಎಲ್ಲರೂ ಪಟ್ಟಣಕ್ಕೆ ಬಂದರು. ರಾಜ ಮಗುವಿಗೆಂದು ಕೆಲವು ಬಟ್ಟೆಗಳನ್ನು ಕೊಂಡು ತಂದಿದ್ದ. ಮಗುವಿಗೇನು ಹೆಸರಿಡಬೇಕೆಂದು ಮಾತುಕತೆ ಆಯ್ತು. ಮೈ ಕೈ ತುಂಬಿಕೊಂಡು ಬೆಳ್ಳಗಿದ್ದ ಮಗುವಿಗೆ ಸುಂದರನೆಂದು ಹೆಸರಿಡಿ ಎಂದು ಗೌರಿ ಯೋಚಿಸಿದಳು. ಎಲ್ಲ ಹೆಸರಿಗಿಂತಲೂ ರತ್ನ ಸೂಚಿಸಿದ್ದ 'ವಸಂತ' ಚೆನ್ನಾಗಿತ್ತು. ಕಮಲಮ್ಮನ ಮೊಮ್ಮಗ ವಸಂತ ಕುಮಾರನಾಗಿ ಬಿಟ್ಟ.

ಇನ್ನೊಂದು ತಮಾಷೆಯ ಪ್ರಸಂಗ ನಡೆಯಿತು. ತಾನು ತಂದಿದ್ದ ಹೊಸಬಟ್ಟೆಗಳನ್ನು ಮಗುವಿಗೆ ಹಾಕಲು ಗೌರಿಯ ಕೈಲಿಕೊಟ್ಟ. ರತ್ನ ಆ

ಬಟ್ಟೆಗಳನ್ನು ನೋಡಿ ಸಂತೋಷಪಟ್ಟಳು. ಸಾಧಾರಣವಾಗಿ ಒಂದೆರಡು ತಿಂಗಳ ಮಗುವಿಗೆ ಆಗುವಂತಹ ಬಟ್ಟೆಗಳ ಅಳತೆ ದಪ್ಪನಾಗಿದ್ದ ವಸಂತ ಕುಮಾರನಿಗೆ ಬಿಗಿಯಾಗಿತ್ತು. ಕುಲಾವಿ ಒಂದು ಮಾತ್ರ ಸರಿಯಾಗಿತ್ತು.

"ಈ ರಾಜಕುಮಾರನಿಗೆ ಆಗೋಲ್ಲಮ್ಮ ಈ ಸಣ್ಣ ಅಳತೆ ಬಟ್ಟೆಗಳು" ಎಂದು ಹೇಳಿದಳು ಗೌರಿ.

"ದಂಡ ಆಯ್ತಲ್ಲ ಗೌರಕ್ಕ....ಇವರು ಯಾವಾಗಲೂ ಹಾಗೇ...."

"ದಂಡವೇನು.... ಇದನ್ನು ಹಾಗೆ ಇಟ್ಟಿದ್ದರೆ ಮುಂದಿನ ಸಾರಿಗೆ ಆಗುತ್ತೆ" ಎಂದು ಗೌರಿ ನಕ್ಕಳು. ರಾಜ ರತ್ನ ಇಬ್ಬರೂ ನಕ್ಕುಬಿಟ್ಟರು.

ಪಟ್ಟಣದಲ್ಲಿ ಒಂದೆರಡು ದಿನಗಳನ್ನು ಕಳೆದು ಎಲ್ಲರೂ ಸಂಪಿಗೆಹಳ್ಳಿಗೆ ಬಂದರು. ರಾಜ ಬರುವಾಗ್ಗೆ 'ಆರೋಗ್ಯ ಚೆನ್ನಾಗಿ ನೋಡಿಕೋ' ಎಂದು ಹೇಳಿದ್ದ. ಸಂಪಿಗೆಹಳ್ಳಿಯಲ್ಲಿ ದೇವರ ಕೆಲಸ ಮಾಡಬೇಕಿತ್ತು. ಇಂತಹ ಶುಭ ಸಮಯದಲ್ಲಿ ಚೆನ್ನಾಗಿಯೇ ಮಾಡಬೇಕೆಂದು ಸುಬ್ಬಣ್ಣನ ಹಿರಿಯರು ಸುಮಾರು ಎರಡು ತಲೆಗಳ ಹಿಂದಿನಿಂದಲೂ ಅಲ್ಲಿಯ ರಾಮದೇವರ ಗುಡಿಯ ಆಡಳಿತವನ್ನದೆ ಪೂಜೆ-ಉತ್ಸವಗಳನ್ನು ನಡೆಸಿಕೊಂಡು ಬಂದಿದ್ದರು. ಹಿರಿಯರು ಮಾಡುತ್ತಿದ್ದಷ್ಟು ವಿಜೃಂಭಣೆಯಿಂದಲ್ಲದಿದ್ದರೂ ಕಾಲಕ್ಕೆ ತಕ್ಕಂತೆ ಚೆನ್ನಾಗಿಯೇ ಸುಬ್ಬಣ್ಣ ನಡೆಸುತ್ತಿದ್ದ. ರಾಮದೇವರ ಉತ್ಸವ, ಊರಿನವರಿಗೆಲ್ಲಾ ಸಮಾರಾಧನೆ, ಹರಿಕಥೆ; ಇವೆಲ್ಲಾ ಮುಗಿದು ಪ್ರತಿವರ್ಷದಂತೆ ನಡೆಯಬೇಕಾದರೆ ಸುಬ್ಬಣ್ಣನಿಗೆ ಸಾಕುಸಾಕಾಯ್ತು. ಪಟ್ಟಣದ ಜೀವನಕ್ಕೂ ಹಳ್ಳಿಯ ಆಡಂಬರವಿಲ್ಲದ ಸರಳಜೀವನಕ್ಕೂ ಎಷ್ಟು ಅಂತರ ಎಂದು ರಾಜನಿಗೆ ಅನ್ನಿಸಿತು. ಕಮಲಮ್ಮ ತನ್ನ ಬಂಧುಬಳಗದವರ ಮನೆಗಳಿಗೆ ಹೋಗಿ ಮೊಮ್ಮಗ ಹುಟ್ಟಿದ ಸುದ್ದಿಯನ್ನು ಬೀರಿ ಕೊಬರಿ ಸಕ್ಕರೆ ಹಂಚಿದಳು.

× × ×

ಐದು ತಿಂಗಳು ತುಂಬಿದ ಮೇಲೆ ಮಗಳನ್ನು ಈಶ್ವರೈಯ ಕರೆದುಕೊಂಡು ಬಂದು ಬಿಟ್ಟುಹೋದರು. ಮಗುವಂತೂ ಈಗ ಮೈಕೈ ತುಂಬಿಕೊಂಡು ಚೆನ್ನಾಗಿತ್ತು. ಬಂದ ಒಂದೆರಡು ದಿನಗಳಲ್ಲಿಯೇ ಮಗುವಿಗೆ ತೊಟ್ಟಿಲು ಕಟ್ಟಲು ಅಲ್ಲದೆ ರತ್ನಳಿಗೆ ಮಲಗಲು ಜಾಗಕ್ಕೆಂದು ರಾಜನ ಕೋಣೆಯ ಅರ್ಧಭಾಗವೆಲ್ಲ ಆವರಿಸಿ ಬಿಟ್ಟಿತು. ವಸಂತ ಯಾರ ಹತ್ತಿರ

ಬೇಕಾದರೂ ಹೋಗುತ್ತಿದ್ದ. ಹೊಸ ಮುಖವೊಂದು ಅಳುತ್ತಿರಲಿಲ್ಲ. ಕಮಲಮ್ಮನಂತೂ ಮೂರು ಹೊತ್ತೂ ಎತ್ತಿ ಕೊಂಡಿರುವಳು. ಗೌರಿ ಮಗುವಿಗೆ ನೀರುಹಾಕಿ ಬಟ್ಟೆಬರೆಗಳನ್ನು ಒಗೆದು ಕೊಡುತ್ತಿದ್ದಳು. ರತ್ನಳಿಗೆ ಮಾಡಲು ಹೆಚ್ಚಿನ ಯಾವ ಕೆಲಸ ಇರುತ್ತಿರಲಿಲ್ಲ. ಕಾಲೇಜಿನಿಂದ ವಾಪಸು ಬಂದನೆಂದರೆ ವಸಂತನನ್ನು ಎತ್ತಿಕೊಂಡು ರಾಜ ಕುಳಿತುಬಿಡುತ್ತಿದ್ದ. ಅವನ ಮೂಗು ಹಿಡಿಯುವುದು ಕೂದಲನ್ನು ಕೀಳುವುದು, ಇದೇ ವಸಂತನ ಚೇಷ್ಟೆ. ಪ್ರಪಂಚವೆಲ್ಲಾ ಬರಿಯ ಆಟವೆಂದು ತಿಳಿದ ಮಗು. ರಾಜ ರತ್ನ ಗೌರಿ ಮತ್ತು ಸರಸಳ ಜೊತೆಗೆ ರಜಾ ದಿನಗಳಲ್ಲಿ ಒಂದೊಂದು ಕಡೆ ಹೋಗಿ ತಮಾಷೆಯಾಗಿ ಕಾಲಕಳೆದು ಬರುವರು. ತನ್ನ ಸ್ನೇಹಿತರ ಮನೆಗೆ ರಾಜ ಅನೇಕ ಸಾರಿ ರತ್ನಳನ್ನು ಕರೆದುಕೊಂಡು ಹೋಗುತ್ತಿದ್ದ. ಅದರಲ್ಲೂ ವೆಂಕಟರಾಮಯ್ಯನ ಮನೆಗೆ ವಾರಕ್ಕೊಂದು ಸಾರಿಯಾದರೂ ತಪ್ಪುತ್ತಿರಲಿಲ್ಲ. ತಿಂಗಳಿಗೊಮ್ಮೆ ರತ್ನಳನ್ನು ಸಿನೀಮಕ್ಕೆ ಕರೆದುಕೊಂಡು ಹೋಗುತ್ತಿದ್ದ. ಒಂದೊಂದು ಸಾರಿ ಬಂದರೆ ಗೌರಿ ಬರುವಳು.

ವಸಂತನ ಮೊದಲನೆಯ ಹುಟ್ಟಿದ ಹಬ್ಬಕ್ಕೆ ಗಿರಿಜೆ ವೆಂಕಟರಾಮಯ್ಯ ಬಂದಿದ್ದರು. ಗಿರಿಜೆ ಕೆಂಪು ಹರಳಿನ ಪುಟ್ಟ ಉಂಗರವನ್ನು ಉಡುಗೊರೆ ಕೊಟ್ಟಳು ಪುಟ್ಟ ಬೆರಳಿಗೆ ಪುಟ್ಟಉಂಗುರ ಒಪ್ಪಿತ್ತು. ವಸಂತ ತೊದಲ ನುಡಿಯಿಂದ ಗಿರಿಜೆಯನ್ನು ಅತ್ತೆ ಅತ್ತೆ ! ಎಂದ. ಹೋಗೋ! ಅತ್ತೆ ಅಂತೆ ಅತ್ತೆ .... ನಿನ್ನಂತಹ ಅಳಿಯನಿದ್ದರೆ ಆಯ್ತು " ಎಂದು ಮಗುವನ್ನು ಎತ್ತಿಕೊಂಡು ಮುತ್ತಿನ ಸುರಿಮಳೆ ಹರಿಸಿಬಿಟ್ಟಳು. ಆನಂದದಿಂದ ಆ ದಿನ ಕಳೆಯಿತು.

ಮಗುವನ್ನೆತ್ತಿಕೊಂಡು ಫೋಟೋ ತೆಗೆಸಿಕೊಳ್ಳಬೇಕೆಂದು ರತ್ನಳಿಗೆ ಆಸೆಯಾಗಿ ರಾಜನಿಗೆ ತಿಳಿಸಿದಳು. ರಾಜ ಅವಳ ಆಸೆಯನ್ನು ಈಡೇರಿಸಿದ್ದ. ಅನೇಕ ಭಂಗಿಗಳಲ್ಲಿ ಮಗುವನ್ನೆತ್ತಿಕೊಂಡಿದ್ದ ಚಿತ್ರ ತೆಗೆಸಿದ. ವಸಂತನೊಬ್ಬನೇ ಇರುವಂತೆ ತೆಗೆಯಲು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಕೊನೆಗೆ ರಾಜ ಮಗುವನ್ನೆತ್ತಿಕೊಂಡು ರತ್ನಳ ಪಕ್ಕದಲ್ಲಿ ಕುಳಿತಿರುವಂತೆ ಇನ್ನೊಂದು ಚಿತ್ರ ತೆಗೆಸಿಯಾಯ್ತು. ಒಂದೆರಡು ದಿನಗಳಲ್ಲಿ ಎಲ್ಲಾ ಚಿತ್ರಗಳನ್ನು ಮನೆಗೆ ತಂದಾಗ ಗೌರಿ ಮತ್ತು ರತ್ನಳಿಗೆ ಉತ್ಸಾಹ. ಕಮಲಮ್ಮ ಮಾತ್ರ ಯಾಕೋ! ಅವೆಲ್ಲ ದುಡ್ಡು ದಂಡ ಅಂದುಬಿಟ್ಟಳು.

ರಾಜ ಆ ವರ್ಷ ವಿಶ್ವವಿದ್ಯಾನಿಲಯದ ಪರೀಕ್ಷಕನಾಗಿದ್ದುದರಿಂದ ಒಂದು ಸಾವಿರ ರೂಪಾಯಿನವರೆಗೂ ಹೆಚ್ಚಿನ ವರಮಾನ ಬಂದಿತ್ತು. ಅದನ್ನು ಬ್ಯಾಂಕಿನಲ್ಲಿಡಬೇಕೆಂದು ರಾಜನ ಇಷ್ಟ.

" ನನಗೆ ಒಂದೆರಡು ಸೀರೆ ಬೇಕು. ಅಲ್ಲದೆ ಗೌರಕ್ಕನಿಗೆ ಒಂದು ತಂದು ಕೊಡಿ " ಎಂದು ರತ್ನ ಪ್ರಾರಂಭಿಸಿದಳು.

" ಎಲ್ಲಾ ಖರ್ಚು ಮಾಡು ಅಂತೀ....ನಿನಗೇನು.... "

" ಅದೃಷ್ಟ ಬಂದರೆ ನಾವೆಲ್ಲಾ ಅನುಭವಿಸಬೇಡವೆ ? "

" ಹಾಗಾದರೆ ಏನನ್ನುತ್ತಿ....? "

" ಹೀಗೆ ಮಾಡಬೇಕು ಎಂದು ನಾನು ಹೇಳ್ತೀನೆಯೆ....ನಿಮ್ಮಿಷ್ಟ. ನಿಮಗೆ ತಿಳಿದಂತೆ ಮಾಡಿ " ಎಂದಳು.

ಆ ದುಡ್ಡಿನಲ್ಲಿ ಸ್ವಲ್ಪ ಬಟ್ಟೆಬರೆಗಳನ್ನು ಕೊಂಡು ಮಿಕ್ಕದ್ದನ್ನು ಬ್ಯಾಂಕಿನಲ್ಲಿಡುವುದೆಂದು ತೀರ್ಮಾನಿಸಿದ. ರತ್ನಳಿಗೆ ಎರಡು ಸೀರೆ, ಗೌರಿಗೆ ಒಂದು ಮತ್ತು ಕಮಲಮ್ಮನಿಗೆ ನಿತ್ಯ ಉಡುವ ಎರಡು ಸೀರೆಗಳು. ಸರಸಳನ್ನು ರತ್ನ ಮರೆಯುವಳೆ ? ಅವಳಿಗೆ ಒಂದು ಗಾಂಧೀಸೀರೆ ಅಲ್ಲದೆ ಕಿವಿಗೆ ಒಂದು ಜೊತೆ ಓಲೆ. ಇವನ್ನು ಕೊಂಡುತರಲು ರಾಜ ರತ್ನ ಇಬ್ಬರೇ ಹೋಗಿದ್ದರು ಜೊತೆಗೆ ಸರಸು ಹಿಂಬಾಲಿಸಿದ್ದಳು. ಅವರು ಮನೆಗೆ ಬಂದಾಗ ಗೌರಿಗೆ ಆಶ್ಚರ್ಯವಾಯ್ತು. ಸರಸಳ ಕಿವಿಯಲ್ಲಿ ಓಲೆ. ಬಂದವಳೆ ಗಾಂಧೀಸೀರೆ ಉಟ್ಟುಕೊಂಡು " ಅಮ್ಮಾ ನೋಡೇ ಚೆನ್ನಾಗಿಲ್ಲವೇನೆ....ಸ್ಕೂಲಿನಲ್ಲಿ ಮೇಡಂ ಉಡೋದು ಇಂತಹ ಸೀರೇನೆ " ಎಂದು ಉಬ್ಬಿ ಹೇಳಿದಳು. ರತ್ನಳೇ ಇವನ್ನು ಕೊಳ್ಳಲು ಒತ್ತಾಯಪಡಿಸಿದ್ದನ್ನು ಕೇಳಿ ಗೌರಿ ಕಣ್ಣೀರಿಟ್ಟು– " ಒಳ್ಳೆಯ ಹುಡುಗಿ.... ನಾಲ್ಕು ಜನ ಬೇಕು ಅನ್ನುವಳು " ಎಂದುಕೊಂಡಳು. ಸಧ್ಯ ಉಡುವುದಕ್ಕೆ ಎರಡು ಸೀರೆ ಆಯ್ತಲ್ಲ ಎಂದು ಕಮಲಮ್ಮ ಸುಮ್ಮನಿದ್ದಳು.

ರತ್ನ ಕೊಂಡುಕೊಂಡ ಸೀರೆಯನ್ನು ಗೌರಿಗೆ ತೋರಿಸುತ್ತಾ " ಇವಳು ಹಳ್ಳಿಯವಳ ಹಾಗೆ ಈ ಸೀರೆ ಆರಿಸಿದ್ದಾಳೆ ನೋಡು " ಎಂದ ರಾಜ. " ಚೆನ್ನಾಗಿದೆ ರಾಜ ! ಅವಳು ಇಷ್ಟಪಟ್ಟಿದ್ದಾಳೆ.... "

" ಗಿರಿಜೆ ಉಡುವ ಸೀರೆ ಹಾಗಿಲ್ಲವೆ ಗೌರಕ್ಕ " ಎಂದಳು ರತ್ನ.

" ಅದಿನ್ನೂ ಸ್ವಲ್ಪ ಕಪ್ಪು....ಇದೇ ಚೆನ್ನಾಗಿದೆ. "

“ಸರಸು ಸೀರೆ ಹೇಗಿದೆ ಗೌರಿ....”

“ಚೆನ್ನಾಗಿದೆ. ಅವಳಿಗೇಕೆ ತಂದೆಯೆ?”

“ರತ್ನ ಬೇಡವೇ ಬೇಡ ಅಂದ್ಲು....ನಾನೇ ಇರ್ಲಿ ಅಂತ ಹೇಳಿ ಓಲಿಯನ್ನೂ ತೆಗೆದುಕೊಂಡೆ.”

“ಎಲ್ಲ ಸುಳ್ಳು ಹೇಳ್ತಾರೆ ಗೌರಕ್ಕ....ಹೌದು! ನಾನೇ ಕೆಟ್ಟವಳು.”

“ನನಗೆ ಗೊತ್ತಿಲ್ಲೇನೆ ರತ್ನ ನಿನ್ನ ಗುಣ....ರಾಜ ತಮಾಷೆಗೆ ಅಂದ ಅಷ್ಟೆ”

“ಅವಳು ಬೇಡ ಅನ್ನಲಿಲ್ಲವೇನೋ ತುಂಟ” ಎಂದು ರಾಜ ವಸಂತನ ಗಲ್ಲವನ್ನು ಅಲುಗಿಸಿದ.

ವಸಂತ ಹೋ! ಹೋ! ಎಂದು ಕೇಕೆ ಹಾಕುತ್ತಾ ಕುಣಿದ. ಎಲ್ಲರೂ ನಕ್ಕುಬಿಟ್ಟರು.

“ಸುಳ್ಳು ಸಾಕ್ಷಿಗೆ ಇವನು ಬೇರೆ” ಎಂದು ರತ್ನ ಕೋಣೆಗೆ ಹೊರಟು ಹೋದಳು.

## ೨೮

ವಿಶ್ವನಾಥ ಅಲೆಗ್ಸಾಂಡ್ರಿಯದಿಂದ ಅನೇಕ ಊರುಗಳನ್ನು ಸುತ್ತಿ ಕೈರೋಗೆ ಬಂದ. ಅವನ ಜೊತೆಗೆ ಇದ್ದ ೧೫ ಡಾಕ್ಟರುಗಳೂ ಸುಮಾರು ೧೦೦ ನರ್ಸುಗಳಪ್ಪೈಕಿ ಅನೇಕರೂ ಯುದ್ಧದ ಹಾವಳಿಯಿಂದ ಸತ್ತರು. ಕೆಲವರು ಅಂಗಹೀನರಾದರು. ಮಿಲಿಟರಿ ಆಸ್ಪತ್ರೆಯೆಂದರೆ ಮೂರುಹೊತ್ತು ಗಾಯಗೊಂಡ ಸಿಪಾಯಿಗಳ ಮೇಲ್ವಿಚಾರಣೆ, ಉಪಚಾರ. ಈ ಜೀವನ ವಿಶ್ವನಾಥನಿಗೇಕೆ–ಅವನ ಸ್ನೇಹಿತರಿಗೆಲ್ಲ ಬೇಜಾರಾಯಿತು. ಅವರ ಜೊತೆಗಿದ್ದ ನರ್ಸುಗಳ ಜೊತೆಗೆ ತಮಾಷೆಯಾಗಿ ಕಾಲಕಳೆಯುವುದೊಂದುಬಿಟ್ಟರೆ ಎಲ್ಲವೂ ನೀರಸ ಜೀವನ.

ಸೈನ್ಯಕ್ಕೆ ಸೇರಿದ ಮೊದಲು ತಾನು ಮಾಡಿದ್ದು ಸರಿಯೆಂದು ವಿಶ್ವನಾಥ ನಂಬಿದ್ದ. ರೋಹಿಣಿಗೆ ತಕ್ಕಪ್ರತೀಕಾರವೆಂದರೆ ಅದೇಸರಿ. ಕೆಲವು ವರ್ಷಗಳಾದ ಮೇಲೆ ಅವಳೇ ಸರಿಹೋಗುವಳೆಂದುಕೊಂಡ. ಆದರೆ ತಪ್ಪು ತನ್ನದೇ ಎನ್ನುವುದು ಒಪ್ಪಿಕೊಳ್ಳುವುದಿರಲಿ–ಅದು ಅವನ ತಲೆಗೇ ಹೊಕ್ಕಿರಲಿಲ್ಲ. ಅವನ ಸ್ವೇಚ್ಛಾ ಜೀವನ ಸೈನ್ಯದ ವಾತಾವರಣಕ್ಕೆ ಬೇಗ ಹೊಂದಿಕೊಂಡುಬಿಟ್ಟಿತು.

ಬೆಳಗೆಲ್ಲಾ ದನದಂತೆ ಕೆಲಸ. ಸಿಕ್ಕಿದುದನ್ನೆಲ್ಲಾ ತಿಂದು ಊರುಊರುಗಳನ್ನು ಅಲೆಯುತ್ತಿದ್ದ. ಜೊತೆಗೆ ಕುಡಿತ. ಅಲ್ಲದೆ ನರ್ಸ್ ಆಗಿ ತನ್ನ ಜತೆಗೇ ಬಂದಿದ್ದ ಫರಂಗಿ ಹುಡುಗಿಯ ಸಹವಾಸ. ಇಂತಹವರಲ್ಲಿ ಅವನಿಗೆ ರೋಹಿಣಿಯ ನೆನಪು ಹೇಗೆ ಬರುವುದು ? ಅದರ ಬದಲು ಅವನ ಪ್ರಿಯತಮೆಗೂ ರೋಹಿಣಿಗೂ ಎಷ್ಟು ವ್ಯತ್ಯಾಸ ಅನ್ನಿಸಿತು. ಅವಳು ಕೇಳಿ ಕೇಳಿದ ಬಟ್ಟೆಗಳನ್ನು ತೆಗೆದುಕೊಟ್ಟ. ಅವಳೂ ಇವನ ಬಲಹೀನತೆಯನ್ನು ನೋಡಿ ಮರುಳುಮಾಡಿ ಬೇಕಾದಷ್ಟು ಸುಲಿದಳು. ವಿಶ್ವನಾಥನಿಗೇನೋ ಒಂದು ತೃಪ್ತಿ ಕೊಟ್ಟಿದ್ದಳು. ಅದನ್ನು ಅವನು ಗ್ರಹಿಸುವ ಮುಂಚೆಯೇ ಅವಳು ಚಂಚಲಳಾಗಿ ಬೇರೊಬ್ಬನಲ್ಲಿ ಅನುರಕ್ತಳಾದಳು. ಇದನ್ನು ಕಂಡ ವಿಶ್ವನಾಥನ ಮನಸ್ಸು ಒಡೆಯಿತು. ಅವಳಲ್ಲದಿದ್ದರೆ ಬೇರೊಬ್ಬಳೆಂದು ಎಲ್ಲರೊಡನೆ ಸೇರತೊಡಗಿದ. ಆ ಗುರಿಯಿಲ್ಲದ ಜೀವನ ವಿಶ್ವನಾಥನಿಗೆ ಸಾಕಾಗಿತ್ತು. ಮನಸ್ಸಿಗೆ ಶಾಂತಿಯಿಲ್ಲ. ಆರೋಗ್ಯ ತುಂಬಾ ಕೆಟ್ಟಿತ್ತು. ರೇಶಿಮೆ ಅಂಗಿಯನ್ನು ಹಾಕಿಕೊಂಡು ಗಂಟೆಗಟ್ಟಲೆ ಪುಸ್ತಕ ಓದುವುದರಲ್ಲಿ ಅಥವಾ ಸಿಗರೇಟು ಸೇದುವುದರಲ್ಲಿ ಕಳೆಯುತ್ತಿದ್ದ. ಗೊತ್ತುಗುರಿಯಿಲ್ಲದೆ ಸಿಗರೇಟು ಸೇದಿಸೇದಿ ದೇಹವೆಲ್ಲ ಒಣಗಿ ಕಾಷ್ಠದಂತಾಗಿತ್ತು. ಅವನಿಗೂ ಅನ್ನಿಸಿತು—ಯಾರಿಗಾಗಿ ಬಾಳಬೇಕೆಂದು, ನಾಲ್ಕೈದು ದಿನದಿಂದ ಜ್ವರದಿಂದ ಮಲಗಿಬಿಟ್ಟ. ತಾನೂ ಒಬ್ಬ ಸಿಪಾಯಿಯಂತೆ ಅವನಿಗೆ ಉಪಚಾರ ಆಗುತ್ತಿತ್ತು. ತನ್ನನ್ನು ಪ್ರೀತಿಸಿದ್ದ ಹುಡುಗಿಗೆ (ನರ್ಸ) ಹೇಳಿಕಳುಹಿಸಿದ. ಬಹಳ ಹೊತ್ತು ಮಾಡಿ ಅವಳು ಬಂದು ಒಂದೆರಡು ಉಪಚಾರದ ಮಾತುಗಳನ್ನು ಹೇಳಿ ಹೊರಟುಹೋದಳು. ಆದರದಿಂದ ಮಾತನಾಡಿಸಿ ಉಪಚರಿಸುವಳೆಂದು ಎಣಿಸಿದ್ದ ವಿಶ್ವನಾಥನಿಗೆ ನಿರಾಸೆ ಆಯಿತು. ಇತ್ತೀಚಿನ ತನ್ನ ಜೀವನವನ್ನು ಯೋಚಿಸುತ್ತಾ ಮಲಗಿದ್ದ. ಜ್ವರ ಬಂದು ಮೈ ಕೆಂಡದಂತೆ ಕಾದಿತ್ತು. ತಲೆ ಒಡೆದು ಹೋಗುವುದೇನೋ ಅನ್ನುವಷ್ಟು ನೋಯುತ್ತಿತ್ತು. ಒಮ್ಮೆ ರೋಹಿಣಿಯ ಜ್ಞಾಪಕ ಬಂದು ಕಣ್ಣೀರಿಟ್ಟ. ರೋಹಿಣಿಯನ್ನು ಮದುವೆಯಾಗಿ ಆದರ್ಶ ಜೀವನವನ್ನು ಬಾಳುತ್ತೇನೆಂದು ನಂಬಿದ್ದ ಆನಂದರಾಯರ ಆಸ್ತಿಗೆ ತಾನೇ ಹಕ್ಕುದಾರ. ಸುಂದರ ಹೆಂಡತಿ, ಹಾಗೆ ನಡೆಯದೇ ಏನು. ಆದರೆ ರೋಹಿಣಿ ತನ್ನನ್ನು ಪ್ರೀತಿಸುತ್ತಿರಲಿಲ್ಲ. ಅವಳ ಮನಸ್ಸನ್ನು ಬದಲಾಯಿಸಲು ತಾನು ಏನಾದರೂ ಪ್ರಯತ್ನಪಟ್ಟನೆ ?

ಮನಸ್ಸಿನ ಭಾವಕ್ಕೂ ವಿವೇಕಕ್ಕೂ ಹೋರಾಟ ನಡೆಯುತ್ತಿತ್ತು. ನಾನು ಮಾಡಿದ್ದೇ ಸರಿಯೆಂದು ಅವನ ಭಾವ ಹೇಳುತ್ತಿದ್ದರೆ, ಪರಿಣಾಮ ನೋಡಿಯೂ ಹಾಗೆ ಹೇಳುತ್ತೀಯೆ....ನೀನು ಮಾಡಿದ್ದು ತಪ್ಪು ಎಂದು ವಿವೇಕ ನುಡಿಯುತ್ತಿತ್ತು. ಎರಡು ಭಾವನೆಗಳ ಹೋರಾಟದಲ್ಲಿ ವಿಶ್ವನಾಥ ಅಸಹಾಯಕನಾಗಿ ಬಿದ್ದಿದ್ದ.

“ನೀನು ರೋಹಿಣಿಯ ಬಾಳನ್ನು ಸುಟ್ಟು ನಿನಗೇ ಮೋಸಮಾಡಿಕೊಂಡೆ” ಎಂದು ವಿವೇಕ ಹೀಯಾಳಿಸಿತು.

“ಅದು ಹೇಗೆ ? ಅವಳು ನನ್ನನ್ನು ಪ್ರೀತಿಸಿದ್ದರೆ ಹೀಗಾಗುತ್ತಿತ್ತೆ ?”

“ಅವಳು ನಿನ್ನನ್ನು ಪ್ರೀತಿಸಲಿಲ್ಲವೆಂದು ನಿನಗೆ ಹೇಗೆ ಗೊತ್ತು ?”

“ಇನ್ನು ಹೇಗೆ ಗೊತ್ತಾಗಬೇಕು....ನನ್ನ ಮುಂದೇ ರಾಜನನ್ನು ಪ್ರೀತಿಸುವಾಗ !”

“ಮೊದಲು ರಾಜನನ್ನು ಪ್ರೀತಿಸಿದ್ದರೂ ಅನಂತರ ಅವನನ್ನೂ ಮರೆತಳು.”

“ಅದು ಹೇಗೆ ?....ಹಾಗಿದ್ದರೆ ನನ್ನನ್ನು ಕಂಡರೆ ಅಲಕ್ಷ್ಯದಿಂದೇಕೆ ಇರುತ್ತಿದ್ದಳು ?”

“ನೀನು ಮದುವೆಯಾಗುವ ಮೊದಲು ಅವಳು ನಿನ್ನನ್ನು ಪ್ರೀತಿಸುವಳೆ ಎಂದು ನೋಡಬೇಕಿತ್ತು”

“ನನಗೆ ಅವಳನ್ನು ಕಂಡರೆ ಇಷ್ಟವಿತ್ತು....”

“ಆದರೆ ನಿನ್ನನ್ನು ಕಂಡರೆ ಅವಳಿಗೆ ಇಷ್ಟವಿರಲಿಲ್ಲವಲ್ಲ....”

“ಹಾಗಾದರೆ ಮದುವೆಗೇಕೆ ಒಪ್ಪಿದಳು ?”

“ಅವಳು ಮದುವೆಗೆ ಒಪ್ಪಲಿಲ್ಲ.... ಸುಂದರಮ್ಮನ ಬಲವಂತದಿಂದ ಅಷ್ಟೆ.”

“.... .... .... ....”

“ಬಾಲ್ಯದಿಂದಲೂ ರಾಜನನ್ನು ಪ್ರೀತಿಸುತ್ತಿದ್ದವಳು ಬೇಗ ನಿನ್ನಲ್ಲಿ ಅನುರಕ್ತಳಾಗಲು ನಿನ್ನಲ್ಲಿ ಅಂತಹ ಗುಣಗಳಿದ್ದವೆ ?”

“.... .... .... ....”

“ಅವಳನ್ನು ಒಲಿಸುವ ಪ್ರಯತ್ನ ಮಾಡಿದೆಯಾ ....”

" ಬೇರೊಬ್ಬನನ್ನು ಪ್ರೀತಿಸುವಾಗ ನಾನು ಹೇಗೆ ಪ್ರಯತ್ನಪಡಲಿ...."

" ಪುನಃ ತಪ್ಪು ಮಾಡುತ್ತಿದ್ದೀ .... ರೋಹಿಣಿ ರಾಜನನ್ನು ಮರೆಯಲು ಪ್ರಯತ್ನದಲ್ಲಿ ಸಫಲಳಾಗಿದ್ದಳು."

" ಆದರೂ ರಾಜನನ್ನು ಮನೆಗೆ ಕರೆಸಿದ್ದೇಕೆ.... "

" ನೀನು ಅವಳನ್ನು ಸರಿಯಾಗಿ ಕಾಣದ್ದರಿಂದ.... "

" ಹೇಗೆ ಕಾಣಬೇಕಿತ್ತು..... "

" ನಿನ್ನ ಪ್ರೀತಿಯ ಮಡದಿಯಾಗಿ, ಹೆಣ್ಣೆಂದು.... "

" ಅವಳು ನಿರಾಕರಿಸಿದಳಲ್ಲಾ.... "

" ಹಾಗೆಂದು ಬೇರೆ ಹೆಂಗಸಲ್ಲಿ ಅನುರಕ್ತನಾಗುವುದೇ.... "

" ಅದೊಂದೇ ಮಾರ್ಗ ಇದ್ದುದು...."

" ಅದು ಮಾರ್ಗವೇ ಅಲ್ಲ .... ನಿನ್ನ ಮನಸ್ಸನ್ನು ಅವಳಿಗೆ ಅರ್ಥವಾಗುವಂತೆ ಹೇಳಿ ನಡೆದುಕೊಳ್ಳಬೇಕಿತ್ತು.... "

" .... .... .... .... "

" ಬದಲು ನೀನು ಸ್ವೇಚ್ಛಾವಿಹಾರಿಯಾದೆ.... "

" .... .... .... .... "

" ಅವಳಿಗೆ ಅನ್ಯಾಯ ಮಾಡಿದ್ದೀ.... "

" ಇಲ್ಲ....ನಾನು ನಿಸ್ಸಾಯಕನಾಗಿದ್ದೆ " ವಿಶ್ವನಾಥನಿಗೆ ತಾನು ಮಾಡಿದ್ದು ತಪ್ಪೆಂದು ಸೂಕ್ಷ್ಮವಾಗಿ ತಿಳಿದಿದ್ದರೂ ಏನೂ ಮಾಡುವಂತಿರಲಿಲ್ಲ. ತುಂಬಾ ಅತ್ತುಬಿಟ್ಟ. ತನ್ನ ವಿವೇಕವಿನ್ನೂ ಅಣಕಿಸುತ್ತಿತ್ತು. ತಕ್ಷಣ ಅಳುತ್ತಿದ್ದ ರೋಹಿಣಿಯ ಮುಖ ಪುನಃ ಅವನನ್ನು ಬೇಡುತ್ತಿತ್ತು.

" ನಿಮ್ಮನ್ನು ದುಡ್ಡು ಕೇಳಲಿಲ್ಲ ಒಡವೆ ವಸ್ತ್ರ ಕೇಳಲಿಲ್ಲ .... ಆದ್ರೂ ನನ್ನಮೇಲೆ ನಿರ್ದಯತೆ.... "

" ಅಯ್ಯೋ ರೋಹಿ....ನಾನು ಪಾಪಿ! ಹಾಗೆ ನೋಡಬೇಡ. "

" ನಾವೇನಾಗಿದ್ದೇವೆ....ಕೊಡಲು ನನ್ನಲ್ಲಿ ಬೇಕಾದಷ್ಟು ಪ್ರೇಮವಿದೆ. ಇನ್ನೂ ಸತಿಪತಿಗಳಾಗಿ ಬಾಳಬಹುದು.... "

"ಹೌದು ರೋಹಿ....ನಿನ್ನಮಾತನ್ನುಕೇಳಿದ್ದರೆ ವಿವೇಕಿಯಾಗುತ್ತಿದ್ದೆ."

" ನಾನೂ ತಪ್ಪುಮಾಡಿರಬಹುದು .... ನೀವು ತಿದ್ದಿ.... ಪಶುವಾಗಿ ಬಾಳದೆ ಮನುಷ್ಯರಾಗಿ ಬಾಳೋಣ. "

" ನಿನ್ನ ಮಾತುಗಳಿಂದ ನನ್ನ ಹೃದಯವನ್ನು ಚುಚ್ಚಬೇಡ ರೋಹಿ. "

" ನಾನಿಂದು ಅನಾಥಳಾದೆ....ಕೈಹಿಡಿದ ನೀವೂ ಕೈಬಿಟ್ಟಿರಿ "

" ಕ್ಷಮಿಸಿ ಬಿಡು ರೋಹಿ....ನೀನು ದೇವತೆ.... "

ವಿಶ್ವನಾಥನಿಗೆ ತಲೆತಿರುಗಿ ಬಂತು. ರೋಹಿ ! ಎಂದು ಕಿರುಚಿದ. ರೋಹಿಣಿಯ ಮುಖ ಕಾಣದಾಯಿತು. ತನ್ನನ್ನು ಉಪಚರಿಸುತ್ತಿದ್ದ ನರ್ಸ್ ತಲೆ ಸವರಿದಳು. ಮೈತುಂಬಾ ರಗ್ಗನ್ನುಹೊದ್ದಿಸಿದಳು ವಿಶ್ವನಾಥನ ಹೃದಯ ವಿವೇಕದ ಕರೆಗೆ ಮನಸೋತಿತ್ತು, ರೋಹಿಣಿಯ ಬಗ್ಗೆ ಮನ ಕರಗಿತ್ತು. ರೋಹಿಣಿಯಿಂದ ಕಾಗದಗಳೇನೋ ಬರುತ್ತಿದ್ದುವು. ತಾನು ಮಾತ್ರ ಒಂದು ಕಾಗದವನ್ನೂ ಬರೆಯುತ್ತಿರಲಿಲ್ಲ. ಅವಳ ಕೊನೆಯ ಕಾಗದದಲ್ಲಿ ತಾನು ಪೂನಾಕ್ಕೆ ಸುಂದರಮ್ಮನೊಡನೆ ಬಂದಿರುವುದಾಗಿ ಅಲ್ಲದೆ ಆನಂದರಾಯರ ಸಾವು ತಿಳಿಸಿದ್ದಳು. ಪಾಪ! ಕಾಗದವನ್ನೂ ಬರೆಯದೆ ಅವಳಿಗೆ ಅನ್ಯಾಯ ಮಾಡಿದೆ ಎನ್ನಿಸಿತು. ಮಾರನೆಯ ದಿನ ಕಾಗದ ಬರೆಯುವುದೆಂದು ನಿರ್ಧರಿಸಿದರೂ ಕೆಲವು ದಿನ ತನ್ನ ನಡವಳಿಕೆಯನ್ನು ಸರಿಪಡಿಸಿಕೊಂಡು ಆತ್ಮ ಪರೀಕ್ಷೆಯಾದ ನಂತರ ಊರಿಗೆ ಹಿಂತಿರುಗಬೇಕೆಂದು ನಿಶ್ಚಯಿಸಿದ. ಎಂದಿನಂತೆ ಸಾಯಂಕಾಲ ಕುಡಿಯಲು ಬ್ರಾಂಡಿಯನ್ನು ತೆಳ್ಳನೆ ಬೆಳ್ಳನೆಯ ಸುಂದರಿ ತಂದು ಕೊಟ್ಟಾಗ ತೆಗೆದುಕೊಳ್ಳದೆ ವಿಶ್ವನಾಥ ಬೇರೆ ಪಕ್ಕಕ್ಕೆ ಹೊರಳಿದ.

## ೨೯

ಬೇವೂ ಇರದಿದ್ದರೆ ಬೆಲ್ಲದ ಸವಿ ಚೆನ್ನಾಗಿರದೇನೋ. ಆನಂದದಲ್ಲಿದ್ದ ದಿನಗಳು ಕಾಣದಾದವು. ಏಕೋ ಜ್ವರವೆಂದು ರತ್ನ ಒಂದು ದಿನ ಮಲಗಿಕೊಂಡಳು. ಮುಖದಮೇಲೆ ಮತ್ತು ಮೈಯೆಲ್ಲಾ ಗುಳ್ಳೆ ಹುಯ್ದಿತ್ತು. "ಡಾಕ್ಟರಿಗೆ ತೋರಿಸಿ ಬಿಡು ರಾಜ" ಎಂದು ಗೌರಿ ಹೇಳಿದರೂ " ಒಂದೆರಡು ದಿನ ನೋಡಿ ತೋರಿಸೋಣ " ಎಂದ ರಾಜ. ಕಮಲಮ್ಮನಿಗೇನೋ ಅನುಮಾನ–ಸುತ್ತುಮುತ್ತಲಲ್ಲಿ ಕೆಲವರಿಗೆ ದೊಡ್ಡಅಮ್ಮ ಎದ್ದಿತ್ತು–ರತ್ನಳಿಗೂ ಎದ್ದರೆ ಗತಿಯೇನು ಎಂದು.

ಒಂದೆರಡು ದಿನಗಳ ಹೊತ್ತಿಗೆ ಮೈಮೇಲೆಲ್ಲಾ ಗುಳ್ಳೆ ದಪ್ಪನಾಗಿ ಕಡಲೆಕಾಳಷ್ಟು ಕಾಣಿಸಿತು. ಅದು ' ಅಮ್ಮ ' ನೆಂದು ಕಮಲಮ್ಮ ನಿರ್ಧಾರ

ಮಾಡಿ ಹೆದರಿದರು. ಹಾಗೆಂದು ತಿಳಿದ ರತ್ನ ತುಂಬಾ ಅತ್ತಳು. ಆ ಸ್ಥಿತಿಯ ಲ್ಲಿದ್ದ ರತ್ನ ಮನೆಯಲ್ಲಿರುವುದು ಸರಿಯಲ್ಲವೆಂದು ತಿಳಿದು ಆಸ್ಪತ್ರೆಗೆ ಸೇರಿಸಿ ಯಾಯ್ತು. ಗೌರಿಯಂತೂ ಆಸ್ಪತ್ರೆಗೆ ಮನೆಗೆ ದಿನಕ್ಕೆ ಎರಡು ಸಾರಿಯಾತಿ ತಿರುಗುವಳು. ವಸಂತ ಗೌರಿಯ ಹತ್ತಿರ ಸುಮ್ಮನಿರುತ್ತಿದ್ದರೂ ಒಂದೊಂದು ಸಾರಿ 'ಅಮ್ಮ' ಎಂದು ಹಠಹಿಡಿದರೆ ಆಸ್ಪತ್ರೆಗೆ ಕರೆದುಕೊಂಡು ಹೋಗುವ ವರೆಗೂ ಬಿಡುತ್ತಿರಲಿಲ್ಲ. ರತ್ನಳ ಮೈಮೇಲಿನ ಗುಳ್ಳೆಗಳೆಲ್ಲಾ ಹೊಮ್ಮಿ ಇಳಿ ಯುತ್ತಾ ಬಂತು. ಒಂದೊಂದುಸಾರಿ ತನ್ನ ಗತಿಯನ್ನು ನೆನೆದು ಗೌರಿಯ ಕೈಲಿ ಹೇಳಿಕೊಂಡು ಅತ್ತುಬಿಡುವಳು

"ನನ್ನ ಮುಖದಮೇಲೆ ಕಲೆ ನಿಂತರೆ ಏನು ಗತಿ ಗೌರಕ್ಕ" ಎಂದು ರತ್ನ ಅತ್ತರೆ "ಎಲ್ಲಾ ವಾಸಿಯಾಗುತ್ತೆ ರತ್ನ....ಕೆಲವು ದಿನ ಮನಸ್ಸನ್ನು ಗಟ್ಟಿಮಾಡು" ಎಂದು ಗೌರಿ ಸಮಾಧಾನಮಾಡುವಳು. ಆವಳಿಗೆ ಒಂದು ಕಣ್ಣು ಹೋಗಬಹುದೆಂದು ಗೊತ್ತಾಗಿದ್ದರೂ ಇಲ್ಲವೆಂದು ಧೈರ್ಯಹೇಳಬೇಕಾಯ್ತು.

"ಇನ್ನುಮೇಲೆ ನನ್ನ ಹತ್ತಿರ ಅವರು ಮೊದಲಿನ ಹಾಗೆ ಇರ್ತಾರೆಯೆ ಗೌರಕ್ಕಾ" ಎಂದರೆ "ರತ್ನ ಅದೆಲ್ಲ ಯೋಚಿಸಬೇಡಾ....ರಾಜನ ಗುಣ ತಿಳಿ ಯದೇ?" ಎಂದು ಹೇಳುವಳು. ಆಸ್ಪತ್ರೆಗೆ ಬಂದರೆ ರತ್ನಳಿಗೆ, ಮನೆಗೆ ಬಂದರೆ ಕಮಲಮ್ಮನಿಗೆ ಗೌರಿ ಸಮಾಧಾನಮಾಡಬೇಕು. ಎಲ್ಲಕ್ಕಿಂತ ರಾಜ ಆಸ್ಪತ್ರೆಗೆ ಹೋದಾಗ ರತ್ನ ಒಂದು ರೀತಿ ನಡೆದುಕೊಳ್ಳುತ್ತಿದ್ದಳು. ರಾಜನನ್ನು ನೋಡಿದ ತಕ್ಷಣ ಕಣ್ಣೀರಿಟ್ಟು ಬೇರೆಯಕಡೆ ಮುಖ ತಿರುಗಿಸುವಳು. ಮಾತೇ ಆಡುತ್ತಿರಲಿಲ್ಲ. ಈ ಹಾಳು ಮುಖವನ್ನು ಅವರಿಗೆ ಹೇಗೆ ತೋರಿಸಲೆಂದು ಹಾಗೆ ಮಾಡುತ್ತಿದ್ದಳೇನೋ-ಗೌರಿಯೇ ಇಬ್ಬರಿಗೂ ಸರಿಕಾಣುವ ಮಾತ ನಾಡುವಳು.

ನಲವತ್ತು ದಿನಗಳು ರತ್ನ ಆಸ್ಪತ್ರೆಯಲ್ಲಿರಬೇಕಾಯ್ತು. ದಿನ ಹೆಚ್ಚಿ ದಂತೆ ಮುಖದಮೇಲೆ ಕಲೆ ಹೆಚ್ಚು ನಿಂತಿದ್ದಲ್ಲದೆ ಒಂದು ಕಣ್ಣು ಹೋದುದು ರತ್ನಳಿಗೂ ತಿಳಿಯಿತು. ಎಲ್ಲೆಲ್ಲಿ ಕಲೆ ನಿಂತಿದೆ ಎಂದು ರತ್ನ ಗೌರಿಯನ್ನು ಕೇಳುವಳು. ಮುಖವೆಲ್ಲಾ ಕಲೆಯಿಂದಿದ್ದರೂ ಮೂರು ನಾಲ್ಕು ಕಡೆ ಇದೆ ಎಂದು ಗೌರಿ ಹೇಳುವಳು.

ವಸಂತ ರತ್ನಳನ್ನು ಮರೆತು ಬಿಟ್ಟನೇನೋ:-ಗೌರಿಯನ್ನು ಹೊಂದಿಕೊಂಡು ಬಿಟ್ಟ. ಅಮ್ಮಾ ಎಂದು ಹಠಹಿಡಿದಾಗ ಆಸ್ಪತ್ರೆಗೆ ಕರೆದುಕೊಂಡು ಹೋಗಿ ರತ್ನಳನ್ನು ತೋರಿಸಿದರೆ ಅವಳ ಹತ್ತಿರ ಹೋಗದೆ ಗೌರಿಯನ್ನು ತಬ್ಬಿಕೊಂಡು ಬಿಡುತ್ತಿದ್ದ.

ಈ ಸುದ್ದಿ ಪಟ್ಟಣಕ್ಕೆ ತಿಳಿಯಿತು. ಲಕ್ಷ್ಮಮ್ಮ ಶಾಂತಳೊಡನೆ ಮೈಸೂರಿಗೆ ಬಂದು ಮಗಳನ್ನು ನೋಡಿದಳು. ಯಾರು ಬಂದು ಏನು ಮಾಡುವುದು? ರತ್ನಳ ದುಃಖ ಹೆಚ್ಚಿಸಿದ್ದಲ್ಲದೆ ತಾವೂ ದುಃಖಪಟ್ಟರು. ಅವರು ಮೈಸೂರಲ್ಲಿ ಒಂದು ವಾರವಿದ್ದು ಪಟ್ಟಣಕ್ಕೆ ಹೋಗುವ ಮುಂಚೆ ರತ್ನಳನ್ನು ಆಸ್ಪತ್ರೆಯಲ್ಲಿ ಕಂಡಾಗ—

" ಇನ್ನೂ ಏಕೆ ಬದುಕಿದ್ದೇನಮ್ಮ....ರೋಗದಲ್ಲಿ ಸತ್ತಿದ್ದರೆ.... "

" ಹಾಗೆ ಮಾತನಾಡಬೇಡ ರತ್ನ....ಇನ್ನೂ ಬದುಕಿ ಬಾಳಬೇಕು."

" ಹೇಗೆ ಬಾಳಲೋ " ಎಂದು ಕಣ್ಣೀರ ಕೋಡಿಯನ್ನು ಹರಿಸಿದಳು ರತ್ನ. ಈ ರೀತಿ ಜೀವಮಾನವೆಲ್ಲಾ ದುಃಖದಲ್ಲಿ ಕಳೆಯುವಂತೆ ಕಲೆ ನಿಲ್ಲುವುದೆಂದು ಕನಸಿನಲ್ಲಿ ಕಂಡಿರಲಿಲ್ಲ.

ರಾಜನಿಗೂ ಯೋಚನೆ; ಸರಿಯಾದ ಕಡೆ ಮದುವೆಯಾದ; ಬೀಗರೂ ಒಳ್ಳೆಯವರೆ; ಹುಡುಗಿಯೂ ಮನೆಯಲ್ಲಿ ಹೊಂದಿಕೊಂಡು ಬಿಟ್ಟಿದ್ದಳು. ಪುತ್ರೋತ್ಸವವೂ ಆಗಿತ್ತು. ಈಗ....ಎಲ್ಲರ ಜೊತೆಗೆ ತಾನೂ ದುಃಖಪಟ್ಟರೆ ಸಮಾಧಾನ ಯಾರು ಮಾಡಬೇಕು? ಆದರೂ ಮನಸಿನಲ್ಲೇ ಕೊರಗುತ್ತಿತ್ತು.

ನಲವತ್ತು ದಿನಗಳಾದ ಮೇಲೆ ರತ್ನಳನ್ನು ಮನೆಗೆ ಕರೆದುಕೊಂಡು ಬಂದರು. ರತ್ನ ಕೊರಗಿ ತುಂಬಾ ಬಡವಾಗಿದ್ದಳು. ಕನ್ನಡಿಯಲ್ಲಿ ತನ್ನ ಮುಖವನ್ನು ನೋಡಿಕೊಳ್ಳಬೇಕೆಂದು ಅವಳಿಗೆ ಕುತೂಹಲ. ಗೌರಿ ಹೇಳಿದ್ದಂತೆ ಮುಖದ ಮೇಲೆ ಎಲ್ಲೋ ಒಂದೆರಡು ಕಲೆ ನಿಂತಿರಬಹುದೆ? ಎಂದು ಯೋಚಿಸಿದಳು.

ಮನೆಗೆ ಬಂದವಳೆ ರತ್ನ ಬಿಸಿನೀರಿನಲ್ಲಿ ಸ್ನಾನಮಾಡಿ ರಾಜನ ಕೋಣೆಗೆ ಬಂದಳು. ತನಗಾಗಿ ಹಾಸಿಗೆ ಹಾಸಿ ಸಿದ್ಧವಾಗಿತ್ತು. ಗೌರಿ ಬರುತ್ತೇನೆಂದು ಹೇಳಿದರೂ ಬೇಡವೆಂದು ಹೇಳಿ ಕೋಣೆಯ ಬಾಗಿಲನ್ನು ಹಾಕಿಕೊಂಡು ಹಾಸಿಗೆಯ ಮೇಲೆ ಕುಳಿತುಕೊಂಡಳು. ಮುಖವನ್ನು ಕನ್ನಡಿಯಲ್ಲಿ

ನೋಡಿಕೊಳ್ಳಬೇಕು....ಏಕೋ ಎದೆ ಡವಡವನೆ ಹೊಡೆದುಕೊಳ್ಳುತ್ತಿತ್ತು. ಧೈರ್ಯಮಾಡಿ ಪಕ್ಕದಲ್ಲಿದ್ದ ಕನ್ನಡಿಯನ್ನು ಹಿಡಿದು ಮುಖವನ್ನು ನೋಡಿಕೊಂಡಳು. ಅಬ್ಬಾ! ಏನು ವಿಕಾರ....ತನ್ನ ಮುಖವನ್ನೇ ಕನ್ನಡಿಯಲ್ಲಿ ನೋಡುತ್ತಿರುವುದು? ಕಾವಲಿ ಮೇಲೆ ಹಾಕಿದ ದೋಸೆಯಂತೆ....ಗೆದ್ದಲು ಹಿಡಿದು ಬಿಟ್ಟಿದೆ; ಬಲಗಣ್ಣಲ್ಲಿ ಹೂ ಬಂದು ಕಾಣಿಸದು. ಅದಕ್ಕಾಗಿ ಸಂತಾಪ ಪಡುವಂತೆ ಎಡಗಣ್ಣೂ ನೀರಿನಿಂದ ತುಂಬಿಬಂತು. ಹೇಗೆ ಈ ಮುಖದಿಂದ ಬಾಳುವುದು? ಇತರರಿಗಿರಲಿ, ತನಗೇ ಅಸಹ್ಯವಾಗಿದೆಯಲ್ಲಾ. ಅಮ್ಮಾ! ಎಂದು ಕಿರುಚಿ ಕನ್ನಡಿಯನ್ನು ದೂರ ಎಸೆದು ರತ್ನ ದಿಂಬಿಗೆ ಮುಖಹಚ್ಚಿ ಮಲಗಿಬಿಟ್ಟಳು.

ಗೌರಿ ಕೋಣೆಯ ಬಾಗಿಲನ್ನು ತೆಗೆದು ಓಡಿಬಂದಳು. ರತ್ನಳ ಹತ್ತಿರ ಕುಳಿತು ಸಮಾಧಾನಮಾಡಲು ಬೆನ್ನುಸವರಿ "ರತ್ನ...." ಎಂದಳು.

"ನೀವು ಸುಳ್ಳು ಹೇಳಿದ್ರಿ, ಗೌರಕ್ಕ...."

".... .... .... ...."

"ಎಷ್ಟು ಚನ್ನಾಗಿತ್ತು ನನ್ನ ಮುಖ....ಈಗೆಷ್ಟು ವಿಕಾರ"

".... .... .... ...."

"ಕುರುಡಿ ಜೇರೆ .... ಅಯ್ಯೋ" ಎಂದು ರತ್ನ ಕಿರುಚಿದಳು. ಗೌರಿ 'ಸುಮ್ಮನಿರು ರತ್ನ' ಎಂದು ಬಹಳ ಹೊತ್ತಿನವರೆಗೂ ಸಮಾಧಾನ ಮಾಡುತ್ತಿದ್ದಳು.

× × × ×

ಶುಭ್ರ ಆಕಾಶದಲ್ಲಿನ ನಕ್ಷತ್ರಗಳಂತೆ ಅವಳ ಮುಖದ ಮೇಲಿನ ಕಲೆ ರತ್ನಳಿಗೆ ಕಾಣಿಸಿತು. ವಸ್ತುವನ್ನು ನೋಡುವ ಮನಸ್ಸಿನಲ್ಲಿ ಎಲ್ಲವೂ ನಿರ್ಣಯವಾಗುವುದು. ರತ್ನ ತನ್ನ ಕೋಣೆಯಲ್ಲಿ ಕುಳಿತು ದುಂಡಾದ ಕುಂಕುಮವನ್ನು ಹಣೆಯಲ್ಲಿಟ್ಟುಕೊಂಡಳು. ಮುಖದಲ್ಲಿ ಕಲೆ ನಿಂತಿದ್ದರೆ ಅವಳ ಕುಶಲತೆ ಹೋದೀತೆ? ಇದ್ದಿದ್ದರಲ್ಲಿಯೇ ಚೆನ್ನಾಗಿ ಅಲಂಕಾರ ಮಾಡಿಕೊಂಡಳು. ವಸಂತನ ಮೊದಲನೆಯ ಹುಟ್ಟಿದ ಹಬ್ಬಕ್ಕೆ ಮೊದಲು ತೆಗೆಸಿದ್ದ ತನ್ನ ಭಾವಚಿತ್ರವನ್ನು ನೋಡಿದಳು. ಅದರಲ್ಲೆಷ್ಟು ಸುಂದರ ವದನ, ಚಂದ್ರಕಾಂತಿಯಿತ್ತು. ಮತ್ತೆ ಕನ್ನಡಿಯಲ್ಲಿ ನೋಡಿಕೊಂಡಳು. ಚಂದ್ರವದನವೇನೋ

ಹೌದು. ಆದರೆ ಸೂಕ್ಷ್ಮವಾಗಿ ನೋಡಿದ್ದರಿಂದ ಚಂದ್ರನ ಕಲೆಯೂ ಕಾಣಿಸಿ ಚಂದ್ರನಿಗಿಂತ ಕಲೆಯ ಮೇಲೆ ದೃಷ್ಟಿ ಚಲಿಸಿತು.

ಆ ದಿನ ವಸಂತನ ಎರಡನೆಯ ಹುಟ್ಟಿದ ಹಬ್ಬ. ಹೋದ ಸಾರಿ ಆಚರಿಸಿದಂತೆ ವೈಭವದಿಂದ ಮಾಡಲಿಲ್ಲ. ರಾಜ ತನ್ನ ಸ್ನೇಹಿತರ್ಯಾರನ್ನೂ ಕರೆದಿರಲಿಲ್ಲ. ರತ್ನಳಂತೂ ಈಚೆಗೆ ಯಾವ ಗೆಳತಿಯೊಡನೆ ಸೇರುತ್ತಿರಲಿಲ್ಲ. ಅವಳಿಗೆ ಯಾವುದೂ ಬೇಕಾಗಿರಲಿಲ್ಲ. ತಾನಾಯ್ತು, ತನ್ನ ತುದಿಮೊದಲಿಲ್ಲದ ಯೋಚನೆಯಾಯ್ತು. ಯಾವುದೋ ಸಂಕಟವನ್ನು ಇತರರಿಗೆ ತೋರ್ಪಡಿಸಿಕೊಳ್ಳದೆ ತಾನೇ ಅನುಭವಿಸುತ್ತಿದ್ದಳು. ಇದು ರಾಜನಿಗೂ ಗೊತ್ತಿತ್ತು. ಅವನೂ ಒಂದು ವಿಧದಲ್ಲಿ ಕೊರಗುವವನು. ತಾನು ಕೊರಗುತ್ತಿದ್ದೇನೆಂದು ರತ್ನಳಿಗೆ ತಿಳಿದು ದುಃಖಪಟ್ಟಾಳೆಂದು ತೋರ್ಪಡಿಸಿಕೊಂಡಿರಲಿಲ್ಲ, ಅಷ್ಟೇ. ಚೆನ್ನಾಯ್ತು. ಇಬ್ಬರೂ ಒಬ್ಬರಿಂದ ಒಬ್ಬರು ಮರೆಮಾಚಿದ್ದರು.

ರತ್ನ ಆಸ್ಪತ್ರೆಯಿಂದ ಬಂದ ಹೊಸದರಲ್ಲಿ ಕೆಲವು ದಿನ ರಾಜ ಮನಸ್ಸಿಗೆ ತುಂಬಾ ಹಚ್ಚಿಕೊಂಡು ಬಿಟ್ಟಿದ್ದ. ರತ್ನಳೂ ಅವನೊಂದಿಗೆ ಹಿಂದಿನಂತಿರಲಿಲ್ಲ. ಯಾವಾಗಲಾದರೂ ರಾಜನೇ ಕೂಗಿದರೆ ಹೋಗುವಳು. ರಾಜ ಕೂಗುತ್ತಲೇ ಇರಲಿಲ್ಲ. ಈ ಬಿಂಕ ಬಹಳ ದಿನಗಳು ನಡೆಯಲಿಲ್ಲ. ಒಂದು ದಿನ ರಾತ್ರಿ ಮಲಗುವಾಗ್ಗೆ ರತ್ನಳೇ ಕೇಳಿ ಅತ್ತುಬಿಟ್ಟಳು.

"ಮೊದಲಿನಂತೆ ಇಲ್ಲ ನೀವು!"

"…. …. …. …."

"ಇನ್ನುಮೇಲೆ ನನ್ನ ಹತ್ತಿರ ಮಾತನಾಡೋಲ್ಲ ಎಂದು ನಿರ್ಧರಿಸಿದ್ರಾ?"

"ರತ್ನ ಸುಮ್ಮನಿರು…. ಏನು ಮಾತು…."

"ನಿಮ್ಮ ಸ್ನೇಹಿತರೊಂದಿಗೆ ತಲೆತಗ್ಗಿಸಿ ಓಡಾಡುವಂತಾಯ್ತೆ?"

"ಏಕೆ……..?"

"ನಾನು ಕುರೂಪಿಯೆಂದು …….."

"ಹುಚ್ಚಿ….ಅವರು ಆ ರೀತಿ ನಡೆದರೆ ಅಂತಹ ಸ್ನೇಹಿತರೇ ಬೇಡ…. ಹೀಗಾದ್ದು ಯಾರ ತಪ್ಪು?"

"ಮೊದಲಿನಂತೆ ನನ್ನನ್ನು ಪ್ರೀತಿಸುತ್ತೀರಾ?"

ರಾಜ ತುಂಬಾ ಮರುಗಿದ. ತಾನು ಸುಮ್ಮನಿದ್ದುದೇ ರತ್ನಳ ಇಲ್ಲದ ಊಹೆಗೆ ಕಾರಣವಾಯ್ತೆಂದು ರತ್ನಳ ಕಡೆ ನೋಡಿದ. ಅವಳ ಕಣ್ಣು ಹೊಳೆ

ಬರುತ್ತಿತ್ತು. ಹೋದ ಕಣ್ಣು ಅದುರಿ ಈ ದುಃಖಕ್ಕೆಲ್ಲಾ ನಾನೇ ಕಾರಣ ಎಂದು ಮಿಂಚಿತು. ರಾಜ ಅವಳನ್ನು ಅಪ್ಪಿ ಮುದ್ದಾಡಿ ತನ್ನನ್ನು ಮೊದಲಿನಂತೆ ಪ್ರೀತಿಸುತ್ತಾನೆಂದು ರತ್ನಳಿಗೆ ಭರವಸೆ ಕೊಟ್ಟ.

ಹೌದು; ಗೌರಿ ರತ್ನಳಿಗಾಗಿ ತುಂಬಾ ಒದ್ದಾಡಿದಳು. ಪಾಪ! ರತ್ನ ಕಣ್ಣಿಲ್ಲದ ಹುಡುಗಿ. ಮನಸ್ಸಿನ ತುಂಬಾ ಹಚ್ಚಿಕೊಂಡು ಬಿಟ್ಟಿದ್ದಾಳೆ. ಮನೆಯ ಎಲ್ಲಾ ಕೆಲಸವನ್ನು ತಾನೇ ಮಾಡುವಳು. ಸರಸಳಂತೂ ರತ್ನಳ ಊರುಗೋಲು. ಹೋದ ಒಂದು ಕಣ್ಣಿನ ಜೊತೆಗೆ ಚೆನ್ನಾಗಿದ್ದ ಇನ್ನೊಂದು ಕಣ್ಣು ಮಂಕಾಗುತ್ತಿತ್ತು. ಸಾಯಂಕಾಲವಾಯ್ತೆಂದರೆ ಕಾಣಿಸುತ್ತಿರಲಿಲ್ಲ. ಮನೆಯಲ್ಲಿ ಸರಸು ಕೈಹಿಡಿದು ಓಡಾಡಿಸುವಳು.

ಈಶ್ವರೈಯ ಲಕ್ಷ್ಮಮ್ಮನೊಂದಿಗೆ ಮೈಸೂರಿಗೆ ಬಂದು ರತ್ನಳನ್ನು ಕಳುಹಿಸಿಕೊಡಿ ಎಂದು ಕೇಳಿದರು. ಕಮಲಮ್ಮ ತನ್ನ ಅಡ್ಡಿಯೇನೂ ಇಲ್ಲ ಎಂದಳು ರಾಜನೂ ಒಪ್ಪಿದ. ಆದರೆ ರತ್ನ ತಾನೆಲ್ಲೂ ಬರುವುದಿಲ್ಲ ಎಂದು ಬಿಟ್ಟಳು. ತವರಿಗೆ ಹೋಗಲು ಇಷ್ಟಪಡುವ ಹೆಣ್ಣು ಈ ರೀತಿ ಖಂಡಿತವಾಗಿ ನುಡಿದು ಬಿಟ್ಟಿದ್ದಳು ಅಂದಿನಿಂದ ರತ್ನ ನಿರ್ಧರಿಸಿಬಿಟ್ಟಳು. ತಾನೆಲ್ಲೂ ಹೋಗದೆ ರಾಜನ ಹತ್ತಿರವಿದ್ದು ಬಿಡುವುದೆಂದುಕೊಂಡಳು.

ರಾಜ ಒಂದೊಂದು ದಿನ ಸಾಯಂಕಾಲ ರತ್ನಳನ್ನು ಕೈಹಿಡಿದು ಸುತ್ತಾಡಿಸಿ ಬರುತ್ತಿದ್ದ. ಹತ್ತಿರವೇ ಇದ್ದ ಪಾರ್ಕಿನಲ್ಲಿ ಅರ್ಧಗಂಟೆಯ ಹೊತ್ತು ಕುಳಿತಿದ್ದು ಬರುತ್ತಿದ್ದರು.

"ಏನು ಪುಣ್ಯಮಾಡಿದ್ದೆನೋ.... ಚಿನ್ನದಂತಹ ಗಂಡನನ್ನು ಪಡೆದೆ." ಎಂದಳು ರತ್ನ.

"ನಿನ್ನದು ಒಳ್ಳೆಯ ಗುಣ ರತ್ನ."

"ನನ್ನ ಸುಖವನ್ನು ಇನ್ನೂ ನೋಡುತ್ತಿದ್ದೀರಿ."

"ಚೆನ್ನಾಯ್ತು...."

"ನೀವು ಹೇಳಿ....ಏಕೆ ಬಹಳ ಯೋಚಿಸುತ್ತಿದ್ದೀರಿ"

"ಇಲ್ಲ ರತ್ನ........"

"ಈ ಕುರುಡಿಯೊಡನೆ ಬಾಳನ್ನು ಕಳೆಯುವುದು ಹೇಗೆಂದು ಯೋಚಿಸುತ್ತೀರಿ ಅಲ್ಲವೆ?"

"ಹೂಂ! ಅಂತ ಇಟ್ಕೊ."

" ಅದಕ್ಕೆ ಪರಿಹಾರ.... "

" ಆಗಲೇ ಯೋಚಿಸಿದ್ದೇನೆ ...."

" ಏನು.... ಹೇಳಿ. "

" ನಾನೂ ಕುರುಡನಾಗಿ ಬಿಡುವುದೆಂದು... ಹುಚ್ಚಿ! ಅದಲ್ಲವೆ ಯೋಚಿಸುವುದು ನಮ್ಮ ಕಾಲೇಜಿನ ವಿಷಯ. "

" ಈ ಸಾರಿಯೂ ಇಂಕ್ರೀಮೆಂಟ್ ಬರಲಿಲ್ಲವೆಂದೇ? "

" ಅದೊಂದೇ ಅಲ್ಲ. ಹೀಗೆ ಹತ್ತು ವರ್ಷ ದುಡಿದರೂ ಪ್ರಯೋಜನವಿಲ್ಲ. "

" ಏನು ಮಾಡಬೇಕೆಂದಿದ್ದೀರಿ.... "

" ದೆಹಲಿಯಲ್ಲಿ ಒಂದು ಕೆಲಸಕ್ಕೆ ಪ್ರಯತ್ನಪಡುತ್ತಿದ್ದೇನೆ.... "

" ಅಂದ್ರೆ ಬಹಳ ದೂರ ಆಗಲಿಲ್ಲವೆ ? "

" ಹೌದು.... "

" ಇಲ್ಲಿ ಭೂಮಿಕಾಣಿ ಇಟ್ಟುಕೊಂಡು ಅಲ್ಲಿಗೆ ಹೋಗೋದೆ? "

" ಅದೇ ಯೋಚಿಸುತ್ತಿದ್ದೇನೆ.... "

" ನಿಮ್ಮಿಷ್ಟ. ನೀವೆಲ್ಲಿ ಕರೆದುಕೊಂಡು ಹೋದರೆ ಅಲ್ಲಿಗೆ ಬರ್ತೀನೆ. "

ರಾಜ ಕೆಲಸದ ವಿಷಯವನ್ನೂ ಹೆಚ್ಚು ಸಂಬಳ ಬರುವುದೆಂದೂ ಹೇಳಿ ಮನೆಗೆ ಕರೆತಂದ. ರತ್ನಳಿಗೂ ಅನ್ನಿಸಿತು; ದೆಹಲಿಯಂತಹ ದೂರ ಪಟ್ಟಣಕ್ಕೆ ಹೋದರೆ ತನ್ನವರಿಂದ ದೂರ ಹೋದಂತಾಗುತ್ತದೆಂದು.

ವಸಂತನಂತೂ ತುಂಬಾ ತುಂಟನಾಗಿದ್ದ. ಮೊದಮೊದಲು ರತ್ನಳ ಹತ್ತಿರವೇ ಹೋಗುತ್ತಿರಲಿಲ್ಲ. ಬರುತ್ತಾ ಅಮ್ಮನ ಮುಖವೇ ಹೀಗೆಂದು ತಿಳಿದೇನೋ ಅವಳ ಹತ್ತಿರ ಮೊದಲಿನಂತೆ ಹೊಂದಿಕೊಂಡ. ಅವನು ಯಾವಾಗಲಾದರೂ ಹಟಹಿಡಿದರೆ ಗೌರಿ ಹೇಳುವಳು–ಪಾಪ ನಿಮ್ಮಮ್ಮನಿಗೆ ಕಷ್ಟವಾಗುವುದಿಲ್ಲವೇನೋ ವಸಂತ ಹೀಗೆ ಹಟಹಿಡಿದರೆ–ಅಂದರೆ ಹುಡುಗನಿಗೆ ತಿಳಿದು ರತ್ನಳ ಕತ್ತಿಗೆ ಜೋತುಬಿದ್ದು ಅವಳ ಕಣ್ಣನ್ನು ತನ್ನ ಪುಟ್ಟ ಕೈಯಿಂದ ಮುಚ್ಚುವನು. ರತ್ನಳಿಗೆ ಅದಕ್ಕೂ ಆನಂದ–ಚಿಗುರು ಎಸಳಿನಿಂದ ಮುಟ್ಟಿಸಿದಂತಾಗುತ್ತಿತ್ತು.

## ೩೦

ದೆಹಲಿಯ ಔದ್ಯೋಗಿಕ ಶಾಲೆಯ ಉಪಾಧ್ಯಾಯರ ಸ್ಥಾನಕ್ಕೆ ಹಾಕಿದ್ದ ಅರ್ಜಿ ಅಂಗೀಕೃತವಾಗಿ ಭೇಟಿಗೆ ದೆಹಲಿಗೆ ಬರಬೇಕೆಂದು ರಾಜನಿಗೆ ಅಪ್ಪಣೆ ಬಂದಿತ್ತು. ಹೋಗುವುದೋ ಬಿಡುವುದೋ ಎಂದು ರಾಜ ತನ್ನ ಸ್ನೇಹಿತರನ್ನು ಕೇಳಿದ. ಅಷ್ಟು ದೂರ ಹೋಗಿ ಏನು ಪ್ರಯೋಜನ–ಎಂದರು ಕೆಲವರು. ಹೋಗಿ ಪ್ರಯತ್ನಪಡುವುದು ಒಳ್ಳೆಯದೆಂದರು ಇನ್ನು ಕೆಲವರು. ಹೇಗಿದ್ದರೂ ರೈಲು ಛಾರ್ಜು ಕೊಡುತ್ತಾರೆ. ಹೋದರೆ ದೆಹಲಿಯನ್ನು ನೋಡಿಕೊಂಡು ಬಂದಹಾಗೆ ಆಗುತ್ತೆ ಎಂದು ತಮಾಷೆಯಾಗಿ ವೆಂಕಟರಾಮಯ್ಯ ಹೇಳಿದ. ಕೆಲಸ ಸಿಕ್ಕಿದ ಮೇಲೆ ನಿರ್ಧರಿಸುವುದೆಂದು ದೆಹಲಿಗೆ ಹೋಗಲು ಸಿದ್ಧ ಮಾಡಿಕೊಂಡ.

ನಾಲ್ಕೈದು ದಿನಕ್ಕೆ ಬೇಕಾಗುವ ಬಟ್ಟೆಬರೆಗಳು; ದೆಹಲಿಯಲ್ಲಿ ಎಲ್ಲಿರಬೇಕು ಮುಂತಾದ ವಿವರಗಳನ್ನು ತಿಳಿದುಕೊಂಡು ಹೊರಡಲು ಸಿದ್ಧವಾದ. ದಾರಿಯಲ್ಲಿ ತಿನ್ನಲಿಕ್ಕೆಂದು ಕಮಲಮ್ಮ ಚಪಾತಿ ಮಾಡಿಕೊಟ್ಟಳು. ಹೋಗುವ ಮುಂಚೆ “ ದೊಡ್ಡ ಊರು, ಹುಷಾರಾಗಿರಿ ” ಎಂದು ರತ್ನ ಹೇಳಿದಳು. ವಸಂತನಿಗೆ ಅನೇಕ ತರಹದ ಆಟದ ಸಾಮಾನು ತಂದು ಕೊಡುವುದಾಗಿ ಹೇಳಿ ರೈಲುಹತ್ತಿದ. ಸ್ವಲ್ಪಹೊತ್ತು ಮನೆಯ ಯೋಚನೆ ಬಂದರೂ ರೈಲಿನಲ್ಲಿ ಬೇರೆ ವಿಷಯಗಳ ಕಡೆ ಮನಸ್ಸನ್ನು ಹೊರಳಿಸಿದ.

ದಾರಿ ಉದ್ದಕ್ಕೂ ಹೇಗೆ ಬೇರೆ ಜನರ ಭಾಷೆ, ಉಡಿಗೆತೊಡಿಗೆ, ಮಾತು ಬದಲಾಯಿಸುತ್ತಾ ಇದೆ ಎಂದುಕೊಂಡ. ಎಷ್ಟಾದರೂ ನಮ್ಮ ಊರಿನಷ್ಟು ನಯವಾದ ಮನುಷ್ಯರಲ್ಲವೆಂದು ಆವನಿಗೆ ಅನ್ನಿಸಿತು. ತಾನು ಕುಳಿತಿದ್ದ ಗಾಡಿಯಲ್ಲೇ ಇನ್ನೊಬ್ಬನ ಹತ್ತಿರ ಸ್ನೇಹಮಾಡಿಕೊಂಡುಬಿಟ್ಟ. ಅವನೇ ದೆಹಲಿಗೆ ಬಂದಮೇಲೆ ಸೌಥಇಂಡಿಯಾ ಹೊಟೆಲ್‌ಗೆ ಹೋಗುವ ದಾರಿಯನ್ನು ತೋರಿಸಿಕೊಟ್ಟ.

ಹೋಟಲಿಗೆ ಬಂದು ಸ್ನಾನಮುಗಿಸಿ ಊಟ ಮಾಡಿದ ಮೇಲೆ ಮಲಗಿಬಿಟ್ಟ. ಪ್ರಯಾಣದ ಆಯಾಸದಿಂದ ಅವನಿಗೆ ಎಚ್ಚರವಾದದ್ದು ಸಾಯಂಕಾಲ ನಾಲ್ಕು ಗಂಟೆಗೇನೆ. ಹೊಸ ದೆಹಲಿಯ ಮುಖ್ಯ ಬೀದಿಗಳು ಮತ್ತಿತರ ಸ್ಥಳಗಳನ್ನೆಲ್ಲಾ ನೋಡಿ ತಾನು ಮಾರನೆಯ ದಿನ ಭೇಟಿ ಮಾಡಬೇಕಾ

ಗಿದ್ದ ಔದ್ಯೋಗಿಕ ಶಾಲೆಯನ್ನು ನೋಡಿಕೊಂಡು ಹೋಟೆಲಿಗೆ ಹಿಂದಿರುಗುವ ಹೊತ್ತಿಗೆ ರಾತ್ರಿ ಒಂಭತ್ತು ಗಂಟೆಯಾಗಿತ್ತು. ಆ ದೊಡ್ಡ ಪಟ್ಟಣದ ವೈಶಿಷ್ಟತೆಯನ್ನು ನೆನೆದು ಮಲಗಿಕೊಂಡ.

ಮಾರನೆಯ ಬೆಳಿಗ್ಗೆ ಸ್ನಾನ-ಊಟ ಮುಗಿಸಿ ಒಳ್ಳೆಯ ಬಟ್ಟೆ ಧರಿಸಿ ೯ ಗಂಟೆಗೆಲ್ಲಾ ಹೋಟೆಲನ್ನು ಬಿಟ್ಟ. 'ಭೇಟಿ' ಇದ್ದುದು ಹತ್ತು ಗಂಟೆಗೆ. ಅವನು ಶಾಲೆಯನ್ನು ಸೇರಿದಾಗ ಅವನಂತೆ ಇನ್ನಿಬ್ಬರು ಮೊದಲೇ ಬಂದಿದ್ದರು. ರಾಜ ಅವರನ್ನೂ ಪರಿಚಯ ಮಾಡಿಕೊಂಡ. ಒಬ್ಬ ಕಲ್ಕತ್ತಾದಿಂದ ಬಂದಿದ್ದ—ಇನ್ನೊಬ್ಬ ಲಕ್ನೋದಿಂದ. ಒಟ್ಟು ಮೂವರಿಗೆ 'ಕರೆ' ಬಂದಿತ್ತು. ಈ ಸ್ಪರ್ಧೆಯಲ್ಲಿ ತನ್ನ ಸ್ಥಾನ ಎಲ್ಲಿಯೋ ಎಂದು ರಾಜ ಯೋಚಿಸಿದ. ಮೊದಲು ಕಲ್ಕತ್ತಾದಿಂದ ಬಂದವನ ಭೇಟಿ ಮುಗಿಯಿತು. ಎರಡನೆಯದಾಗಿ ರಾಜನನ್ನು ಕೂಗಿದರು. ತನ್ನ ಊರು, ಕಾಲೇಜು ಮತ್ತಿತರ ವಿಷಯ ಕೇಳಿ ಅರ್ಧ ಗಂಟೆಯಲ್ಲೇ ಅವನ 'ಭೇಟಿ' ಮುಗಿಯಿತು. ಯಾರನ್ನು ಚುನಾಯಿಸಿರುವರೆಂದು ಮಾರನೆಯ ದಿನ ಪ್ರಕಟಿಸುವುದಾಗಿ ಮತ್ತೊಂದು ದಿನ ಕೊಳೆಹಾಕಿದರು. ರಾಜನಿಗೇನೋ ತನಗೆ ಆ ಕೆಲಸ ಸಿಗಬಹುದೆನ್ನುವ ನಂಬಿಕೆಯಿತ್ತು. ಬದಲಾಗಿ ಆ ಜಾಗಕ್ಕೆ ಲಕ್ನೋದಿಂದ ಬಂದಿದ್ದ ಕ್ರಿಶ್ಚಿಯನ್ ಉಮೇದುವಾರನನ್ನು ಚುನಾಯಿಸಿದರು. ರಾಜ ವೆಂಕಟರಾಮಯ್ಯನನ್ನು ನೆನೆದು "ಊರು ನೋಡಿಕೊಂಡು ಹೋಗುವುದೆಂದು" ಸಮಾಧಾನಮಾಡಿಕೊಂಡ. ಆಗಿನ್ನೂ ಎರಡು ಗಂಟೆಯಾಗಿದ್ದುದರಿಂದ ಯಾವುದಾದರೂ ಚಲನಚಿತ್ರಕ್ಕೆ ಹೋಗಲು ಹೊರಟ. 'ರಿಟ್ಸ್' ಚಿತ್ರಶಾಲೆಗೆ ಸುತ್ತಾಡಿ ಬಂದುದರಿಂದ ಚಿತ್ರವಾಗಲೇ ಪ್ರಾರಂಭಿಸಿತ್ತು. ಯುದ್ಧ ಸಮಾಚಾರಗಳು ಮತ್ತಿತರ ಚಿಕ್ಕ ಚಿತ್ರಗಳಾದಮೇಲೆ ಮುಖ್ಯ ಚಿತ್ರ ಪ್ರಾರಂಭವಾಯ್ತು. ಆ ಚಿತ್ರ ಬರೀ ನೃತ್ಯ, ಸಂಗೀತದಿಂದ ತುಂಬಿ ತುಳುಕಿದ್ದುದರಿಂದ ರಾಜನಿಗೆ ಹಿಡಿಸಲಿಲ್ಲ. ಹಾಗೆಯೇ ಕತ್ತಲಲ್ಲಿ ಸುತ್ತಲೂ ದೃಷ್ಟಿಯನ್ನು ಬೀರಿದ. ಅವನ ಪಕ್ಕದ ಸೀಟಿನಲ್ಲಿ ಯಾರೋ ಹೆಣ್ಮಗಳು ಕುಳಿತಿರಬೇಕು. ಇಲ್ಲದಿದ್ದರೆ ಕೈಯನ್ನು ಒರಗುಮೆತ್ತೆಯ ಮೇಲಿಟ್ಟುಕೊಂಡಾಗ ಬಳೆಯ ಶಬ್ದ ಕೇಳಿಸುತ್ತಿರಲಿಲ್ಲ. ವಿರಾಮಕಾಲಕ್ಕೆ ಮುಂಚೆಯೇ ಅವನ ಪಕ್ಕದಲ್ಲಿ ಕುಳಿತಿದ್ದ ಹೆಂಗಸು ಹೊರಟುಹೋದಳು. ಅವಳು ಹೋದ ಹತ್ತು ನಿಮಿಷಕ್ಕೆಲ್ಲಾ ವಿರಾಮಕಾಲ.

ಚರ್ಮದ ಕೈಚೀಲವನ್ನು ಸೀಟಿನ ಮೇಲಿಟ್ಟಿದ್ದಳು. ಪುನಃ ಚಿತ್ರ ಪ್ರಾರಂಭ ವಾದರೂ ಅವಳು ಹಿಂತಿರುಗಿ ಬರಲೇ ಇಲ್ಲ. ಪಾಪ! ಚರ್ಮದ ಕೈಚೀಲವನ್ನು ಮರೆತುಬಿಟ್ಟು ಹೋಗಿದ್ದಳು. ಚಿತ್ರ ಅಷ್ಟು ಚೆನ್ನಾಗಿಲ್ಲದಿದ್ದುದರಿಂದ ರಾಜನ ಮನಸ್ಸಿನಲ್ಲಿ ತುಮುಲವುಂಟಾಯಿತು. ಕೈಚೀಲವನ್ನು ತೆಗೆದುಕೊಂಡು ಹೋದರೆ ಅವಳು ಪುನಃ ಬಂದರೆ ಗತಿ? ಕೈಚೀಲ ಅವಳದಲ್ಲದೆ ಬೇರೆಯವರದಲ್ಲ ವೆಂದೂ ಗೊತ್ತು. ಧೈರ್ಯಮಾಡಿ ಕೈಚೀಲವನ್ನು ತೆಗೆದುಕೊಂಡು ಹೊರಗೆ ಬಂದೇಬಿಟ್ಟ. ಅದನ್ನು ಅದರ ವಾರಸುದಾರಳಿಗೆ ತಲುಪಿಸಬೇಕೆಂಬ ಕುತೂ ಹಲ ಅವನಿಗಿತ್ತು. ಅಲ್ಲೇ ಬಿಟ್ಟಿದ್ದರೆ ಮತ್ತಿನ್ಯಾರ ಪಾಲಾಗುತ್ತಿತ್ತು. ಕತ್ತ ಲಲ್ಲಿ ಯಾರೂ ಅವನನ್ನು ನೋಡಿ ನಗುವಂತಿರಲಿಲ್ಲದಿದ್ದರೂ ಟ್ಯಾಕ್ಸಿಯವನು ಕೇಳಿದ—" ಬಾಯಿ ಬರುವದಿಲ್ಲವೆ? " ಎಂದು.

ರಾಜ ಚೆನ್ನಾಗಿದೆ ಎಂದುಕೊಂಡು " ಆಗಲೇ ಮನೆಗೆ ಹೋದರು " ಎಂದು ಮೋಟರಿನಲ್ಲಿ ಕುಳಿತ. ಸ್ವಲ್ಪ ದೂರದಲ್ಲಿದ್ದ ಐಸ್‌ಕ್ರೀಮ್‌ಪಾರ್ಲರ್ ಹತ್ತಿರ ಮೋಟಾರನ್ನು ನಿಲ್ಲಿಸಿ ಐಸ್ ಕ್ರೀಮ್ ತಿಂದು ' ಹಳೆಯಕೋಟೆ 'ಯ ಹತ್ತಿರ ನಡಿ ಎಂದು ಟ್ಯಾಕ್ಸಿಯವನಿಗೆ ತಿಳಿಸಿದ. ಕಾರು ಭರ್ರನೆ ಸಾಗಿತು. ಕೈಚೀಲ ಯಾರದೆಂದು ನಿರ್ಧರಿಸುವುದಕ್ಕೆ ಅದನ್ನು ತೆಗೆದು ನೋಡಬೇಕಿತ್ತು. ಆ ಬಗ್ಗೆ ಮನಸ್ಸಿನ ಹೋರಾಟದ ಕೊನೆಯಲ್ಲಿ ಕೈಚೀಲವನ್ನು ತೆಗೆದು ನೋಡಿದ. ಅದರಲ್ಲಿ ಬಾಚಣಿಕೆಯೊಂದಲ್ಲದೆ ಒಂದು ಕರವಸ್ತ್ರ ಮತ್ತೆ ಕೆಲವು ಕಾಗದಗಳಿದ್ದವು. ಕಾಗದಗಳಿಂದ ಅವಳು ರೋಹಿಣಿಯೇ ಎನ್ನಿಸಿತು. ಇದೆ ಲ್ಲಿಯ ರೋಹಿಣಿ....ಕಳೆದ ನಾಲ್ಕೈದು ವರ್ಷಗಳಿಂದಲೂ ಅವಳ ಸುದ್ದಿಯೇ ತಿಳಿದಿರಲಿಲ್ಲ. ಪೂನಾದಲ್ಲಿದ್ದವಳು ಇಲ್ಲಿಗೇಕೆ ಬಂದಿರಬೇಕು. ಒಂದೂ ಸರಿ ಯಾಗಿ ಅರ್ಥವಾಗಲಿಲ್ಲ. ಅವಳು ಇಳಿದುಕೊಂಡಿದ್ದ ಹೊಟಲಿನ ವಿಳಾಸ ಕೈಚೀಲದಲ್ಲಿರದಿದ್ದರೆ ಆ ದೊಡ್ಡ ಊರಲ್ಲಿ ಅವಳನ್ನು ಪತ್ತೆ ಹಚ್ಚುವ ರೀತಿ ಹೇಗೆ ಅಂದುಕೊಂಡ. Palace Hotel ಗೆ ಹೋಗಿ ಆಮೇಲೆ ಹಳೆಯ ಕೋಟೆಗೆ ಹೋಗಬೇಕೆಂದು ಕಾರು ನಡೆಸುವವನಿಗೆ ಹೇಳಿದ. ಭರದಿಂದ ಹೋಗುತ್ತಿದ್ದ ಕಾರು ಶಬ್ದ ಮಾಡುತ್ತಾ ಬೇರೆಯ ರಸ್ತೆಗೆ ತಿರುಗಿತು. ಒಂದೆ ರಡು ಫರ್ಲಾಂಗು ಹೋದಮೇಲೆ ದೊಡ್ಡ ಭವನದ ಹತ್ತಿರ ಕಾರು ನಿಂತು ಡ್ರೈವರ್ ' ಇದೇ Palace ಹೊಟೆಲ್ ' ಎಂದ. ಅವನಿಗೆ ದುಡ್ಡನ್ನು

ಕೊಟ್ಟ ರೂಮ್. ನಂ. ೧೨ ರ ಹತ್ತಿರ ಬಂದ. ರೂಮಿನ ಬಾಗಿಲಿಗೆ ಬೀಗ ಹಾಕಿದ್ದುದರಿಂದ ರಾಜನಿಗೆ ನಿರಾಸೆ ಆಯ್ತು. ಹೊಟಲಿನ ಆಫೀಸಿನಲ್ಲಿ ವಿಚಾರಿಸುವಲ್ಲಿ ಆ ರೂಮಿನಲ್ಲಿರುವವಳು ರೋಹಿಣಿಯೆಂದು ಗೊತ್ತಾಯ್ತು. ಆಗಲೇ ಆರು ಗಂಟೆಯಾಗಿತ್ತು ಒಂದೆರಡು ಗಂಟೆ ಹೊತ್ತು ಕಾದಿದ್ದು ಅವಳನ್ನು ನೋಡಿಯೇ ಹೋಗುವುದೆಂದು ಹೋಟಲಿನ ಹಿಂದಿದ್ದ ಕೈತೋಟಕ್ಕೆ ಬಂದು ಕಲ್ಲು ಬೆಂಚಿನ ಮೇಲೆ ಕುಳಿತ. ಆ ಹೋಟಲಿನಲ್ಲಿಳಿದುಕೊಂಡಿದ್ದ ನೂತನ ದಂಪತಿಗಳು ತೋಟದಲ್ಲಿ ತಿರುಗಾಡುತ್ತಿದ್ದರು. ಅವರು ಪ್ರೇಮವೇ ಬಾಳೆಂದು ತಿಳಿದಿದ್ದರೆಂದು ಕಾಣುತ್ತೆ. ಆದರೆ ಆ ಪ್ರೇಮ ಎಲ್ಲಿಯವರೆಗೆಂದು ಅವರಿಗೆ ತಿಳಿದಿದ್ದರೆಷ್ಟು ಚೆನ್ನಾಗಿತ್ತು ಎಂದುಕೊಂಡ. ರತ್ನಳ ಜ್ಞಾಪಕ ಬಂತು. ಇಬ್ಬರು ಸಣ್ಣ ಹುಡುಗರು ಜಗಳವಾಡುತ್ತಾ ಅವನು ಕುಳಿತಿದ್ದ ಕಲ್ಲು ಬೆಂಚಿನ ಹತ್ತಿರ ಬಂದರು. ಇಬ್ಬರೂ ಫರಂಗಿ ಹುಡುಗರು. ಇಬ್ಬರಲ್ಲಿ ಕಿರಿಯುವನು ಹಿರಿಯುವನನ್ನು ಹೀಯಾಳಿಸುತ್ತಿದ್ದ. ರಾಜ ಚಿಕ್ಕವನನ್ನು ಕೈ ಹಿಡಿದು "ಏಕೆ ಹಾಗೆ ಮಾಡುತ್ತಿ?" ಅಂದ. ಚಿಕ್ಕವನು "ಇವನು ನೋಡಿ, ಸುಳ್ಳುಗಾರ....ಅಪ್ಪ ಹೇಳುತ್ತಿದ್ದ—ಸುಳ್ಳುಗಾರರು ಬದುಕಲೇಬಾರದೆಂದು" ಎಂದು ಹೇಳಿದ. ದೊಡ್ಡ ಹುಡುಗ ಚಿಕ್ಕವನಿಗೊಂದು ಏಟು ಕೊಟ್ಟ. ಆ ಹೊತ್ತಿಗೆ ಹುಡುಗನ ತಂದೆಯೆಂದು ಕಾಣುತ್ತೆ. ಅವನು ಬರುತ್ತಲೆ ಚಿಕ್ಕವನು ಅವನ ಹತ್ತಿರ ಓಡಿದ. ಆ ಚಿಕ್ಕ ಹುಡುಗನ ಮನಸ್ಸನ್ನು ನೆನೆದು ಒಳ್ಳೆಯವನಾಗಿ ಬಾಳುತ್ತಾನೆ ಅಂದುಕೊಂಡ. ಥಟಕ್ಕನೆ ರೋಹಿಣಿಯ ನೆನಪಾಯ್ತು. ವಿಶ್ವನಾಥ ಎಲ್ಲಿದ್ದಾನೋ. ರತ್ನಳ ವಿಷಯ ಅವಳಿಗೆ ಗೊತ್ತಿಲ್ಲೆಂದು ಕಾಣುತ್ತೆ. ಎಲ್ಲವನ್ನೂ ಹೇಗೆ ಅವಳಿಗೆ ಹೇಳುವುದು. ಇವೆಲ್ಲಾ ಈಗ ನೋಡುವವಳು ರೋಹಿಣಿ ಆಗಿದ್ದರೆ ತಾನೆ? ಹೋಟಲಿನ ಹುಡುಗ ಬಂದು ಆ ರೂಮಿನವರು ಬಂದಿದ್ದಾರೆಂದು ತಿಳಿಸಿಹೋದ. ರಾಜ ಕೈಚೀಲವನ್ನು ತೆಗೆದುಕೊಂಡು ರೂಮಿನ ಹತ್ತಿರ ಬಂದು ಬಾಗಿಲನ್ನು ತಟ್ಟಿದ. ಸ್ವಲ್ಪ ಹೊತ್ತಿಗೆ ಬಾಗಿಲು ತೆರೆದು, ಒಬ್ಬಳು ಸುಂದರಿ ಏನು ಬೇಕೆನ್ನುವಂತೆ ರಾಜನನ್ನು ನೋಡಿದಳು. ರಾಜನ ಅನುಮಾನ ಪರಿಹಾರವಾಯ್ತು. ಅವಳು ಖಂಡಿತ ರೋಹಿಣಿ, ಎಷ್ಟು ಬದಲಾಯಿಸಿದ್ದಾಳೆ! ಅವಳನ್ನೇ ನೋಡುತ್ತಾ ನಿಂತಿದ್ದ ರಾಜನನ್ನು ನೋಡಿ ಆ ಸುಂದರಿಗೆ ಅರ್ಥವಾಗಲಿಲ್ಲ. ಅವಳಿಗೆ ರಾಜನ ಜ್ಞಾಪಕ

ಬಂದಿರಲಾರದು. ರಾಜನ ಕೈಲಿದ್ದ ಕೈಚೀಲವನ್ನು ನೋಡಿ 'ಓ! ಸಿನಿಮಾ ದಲ್ಲಿ ಬಿಟ್ಟುಬಂದೆ....ಒಳ್ಳೆಯವರ ಕೈಲಿ ಸಿಕ್ಕಿದ್ದರಿಂದ ಇಲ್ಲಿಗೆ ಬಂತು.... ಬಹಳ ಥ್ಯಾಂಕ್ಸ್....' ಎಂದು ಅವಳು ಇಂಗ್ಲಿಷಿನಲ್ಲಿ ನುಡಿದಳು. ರಾಜ ಕೈಚೀಲವನ್ನು ಅವಳ ಕೈಗೆ ಕೊಟ್ಟು 'ರೋಹಿ! ಜ್ಞಾಪಕಕ್ಕೆ ಬರಲಿಲ್ಲವೆ.... ನಿನ್ನ ರಾಜನಲ್ಲವೆ?' ಎಂದು ರೋಹಿಣಿಗೆ ಆಶ್ಚರ್ಯವನ್ನುಂಟುಮಾಡಿದ. ರೋಹಿಣಿ ತನ್ನ ಕಣ್ಣನ್ನೇ ನಂಬಲಾರಳು. ತಲೆ ತಿರುಗಿ ಬಂತು. ಹೌದು ರಾಜನೇ....ಇಲ್ಲಿಗೆ ಹೇಗೆ ಬಂದ? ರಾಜನನ್ನು ಒಳಗೆ ಕರೆದುಕೊಂಡು ಹೋಗಿ ಸೋಫಾದ ಮೇಲೆ ಕೂರಿಸಿ ಇನ್ನೊಂದು ಕೊನೆಯಲ್ಲಿ ತಾನೂ ಕೂತಳು.

"ನೀವು ತುಂಬಾ ಬದಲಾಯಿಸಿದ್ದೀರಿ....ಗುರುತೇ ಸಿಕ್ಕಲಿಲ್ಲ."

"ನೀನೂ ಬದಲಾಯಿಸಿದ್ದೀ...."

"ಆದರೂ ನನ್ನನ್ನು ನೀವು ಮರೆಯಲಿಲ್ಲ...."

"ಹೇಗೆ ಮರೆಯಲಿ ರೋಹಿಣಿ!"

"ಇಲ್ಲಿಗೆ ಬಂದುದು?"

"ಯಾವುದೋ ಕೆಲಸ ನೋಡಲು ಬಂದಿದ್ದೆ...."

"ಆಯ್ತೇನು...."

"ಇಲ್ಲ ಬೇರೊಬ್ಬರಿಗೆ ಆಯ್ತು...."

"ನನ್ನನ್ನು ನೋಡಿ ಹೋಗೋಣವೆಂದು ಬಂದ್ರಿ.... ನನ್ನ ನೀರಸ ಜೀವನಕ್ಕೆ ಏನು ಉತ್ತರ ಕೊಡ್ತೀರಿ...."

ರಾಜ ಸ್ತಬ್ಧನಾದ. ರೋಹಿಣಿಯ ಅಂದಿನ ಸ್ಥಿತಿಗೆ ತಾನೇ ಕಾರಣ ಎಂದು ಅವಳ ಕಣ್ಣುಗಳು ಹೇಳುತ್ತಿವೆ. ರೋಹಿಣಿ ತನ್ನ ವಿಷಯವನ್ನು ರಾಜ ನಿಗೆ ಹೇಳಿದಳು. ವಿಶ್ವನಾಥ ಮಿಲಿಟರಿಗೆ ಸೇರಿದಮೇಲೆ ತಂದೆಯ ಸಾವು, ಅನಂತರ ಪೂನಾದ ಯಾಂತ್ರಿಕ ಜೀವನ. ಅದೂ ಒಂದೆರಡು ವರ್ಷ ಗಳಿಂದ ವಿಶ್ವನಾಥ ಎಲ್ಲಿದ್ದಾನೆಂದೂ ಸಹ ತಿಳಿಯದು. ಅವಳ ವಿಷಯ ಮುಗಿದ ಮೇಲೆ ಕಮಲಮ್ಮನ ವಿಷಯ ಕೇಳಿ ದೀವರಾತಹವಳೆಂದಳು. ಗೌರಿ, ಸರಸು ಎಲ್ಲರನ್ನೂ ವಿಚಾರಿಸಿದಳು. ಗೌರಿ, ಇತರರ ಸುಖಕ್ಕೆ ಒದ್ದಾಡುವ ಜೀವ ಎಂದಳು. ತನ್ನ ಮದುವೆ, ಎಲ್ಲವನ್ನೂ ರಾಜ ತಿಳಿಸಿದ. ಎಲ್ಲವನ್ನೂ ಕೇಳು ತ್ತಿದ್ದ ರೋಹಿಣಿಯ ಮನಸ್ಸಿನಲ್ಲಿ ಆಕಾಶದ ಹೂಬಾಣ ನಿರಾಸೆಯ

ಅಂಧಕಾರದಲ್ಲಿ ಬೆಳಗಿ ಧಗ್ಗೆಂದು ಹತ್ತಿಕೊಂಡಿತು. ರಾಜನ ಹತ್ತಿರ ಬಂದು ಅವನ ಕೈಹಿಡಿದು ರೋಹಿಣಿ "ನೀವು ನನ್ನ ಬಾಳನ್ನೇ ಹಾಳು ಮಾಡಿಬಿಟ್ರಿ" ಎಂದು ರೋಹಿಣಿ ಅತ್ತುಬಿಟ್ಟಳು.

" ಹೌದು ರೋಹಿ-ನಾನು ಹಾಳುಮಾಡಿದೆ.... "

" ರೋಹಿಯೆಂದು ಇನ್ನೊಂದು ಸಾರಿ ಕೂಗಿ....ಹಳೆಯ ನೆನಪು ಬರುತ್ತಿದೆ "

" ರೋಹಿ.... "

" ಸ್ವಾಮಿ.... "

" ನನ್ನನ್ನು ಕ್ಷಮಿಸುವಂತಿಲ್ಲವೆ ರೋಹಿ?"

" ನಿಮ್ಮನ್ನೇ ನಂಬಿದ್ದ ನನ್ನನ್ನು ಕೈಬಿಟ್ರಿ "

" ಹಾಗಾಯ್ತು ರೋಹಿ.... "

" ಮುಡ್ಡಿನವರು ಎಂದು ಅಸಡ್ಡೆಯಿಂದ ಕಂಡಿರಿ."

" ಎಲ್ಲ ನಡೆದುಹೋದುದಕ್ಕೆ ಅತ್ತು ಪ್ರಯೋಜನವೇನು....?"

" ಅಳುತ್ತಿಲ್ಲ! ಪುನಃ ಬೇಡುತ್ತಿದ್ದೇನಷ್ಟೆ.... "

ರೋಹಿಣಿ ತನ್ನ ಹೃದಯವನ್ನೆಲ್ಲ ತೋಡಿಕೊಂಡಳು. ರಾಜನಿಗೆ ಅವಳ ಹೃದಯವೇದನೆ ಎಂತಹದೆಂದು ತಿಳಿಯಿತು.

ಪುನಃ ರೋಹಿಣಿ " ಈಗಲೂ ಕಾರ್ಯ ಮಿಂಚಿಲ್ಲ, ಯೋಚಿಸಿ " ಎಂದಳು.

ರಾಜ ರೋಹಿಣಿಯ ಕಡೆ ನೋಡಿದ.

" ರತ್ನಳಿಗೊಪ್ಪಿಸುವ ಭಾರ ನನ್ನದು.... " ಪುನಃ ಬೇಡುತ್ತಿದ್ದಾಳೆ.

" ಅದು ಹೇಗೆ ಸಾಧ್ಯ ರೋಹಿ.... "

" ಹೆಣ್ಣಿನ ವಿಚಾರದಲ್ಲಿ ಹೆಣ್ಣು ಎಂದೂ ಮೋಸಹೋಗುವುದಿಲ್ಲ. ನಾನು ಹೇಗೆ ಬಾಳಲಿ " ಎಂದು ಗದ್ಗದ ಕಂಠದಿಂದ ನುಡಿದು ರಾಜನ ಭುಜಕ್ಕೆ ಒರಗಿಕೊಂಡಳು. ರಾಜನಿಗೆ ಮೈಯೆಲ್ಲಾ ಜುಂ ಎನ್ನಿಸಿತು. ಯೋಚಿಸಿದ –ತಾನೇಕೆ ಬೇರೆ ಮದುವೆಯಾಗಬಾರದು. ತಮ್ಮ ಹಿಂದಿನ ಪ್ರೀತಿಯಿಂದ ಕಳೆದಿದ್ದ ದಿನಗಳು ನೆನಪಾದವು. ಹತ್ತಿರ ಕುಳಿತು ರೋಹಿಣಿ ತನ್ನ ಪ್ರೇಮವನ್ನ ಯೋಚಿಸುತ್ತಿದ್ದಾಳೆ. ಸುಂದರ ಅಮೃತದ ಬಟ್ಟಲನ್ನು

ಹಿಡಿದು ನಿಂತಿದ್ದಾಳೆ. ಸೂರೆಗೊಳ್ಳಬಾರದೆ ಅನ್ನಿಸಿತು. ಅಲ್ಲದೆ ರೋಹಿ ತನ್ನೆರಡು ಕೈಗಳನ್ನು ಅವನ ಕತ್ತಿನ ಸುತ್ತಲೂ ಬಳಸಿತಂದಳು....ಅಷ್ಟರಲ್ಲಿ .... .... ಟೀಯನ್ನು ತಂದ ಹೊಟಲಿನ ಪ್ರಾಣಿ ಬರದಿದ್ದರೇನು ಗತಿ? ಎಂತಹ ಕೆಲಸವಾಗುತ್ತಿತ್ತು! ರೋಹಿಣಿ ತಟಕ್ಕನೆ ಎದ್ದು ಒಂದು ಲೋಟ ಟೀಯನ್ನು ರಾಜನಿಗೆ ಕೊಟ್ಟು ತಾನೂ ಕುಡಿದಳು. ರಾಜನಿಗಿನ್ನೂ ಎದೆ ಹೊಡೆದುಕೊಳ್ಳುತ್ತಿತ್ತು. ಅವನೇ "ಎಂತಹ ಅಪರಾಧವಾಗುತ್ತಿತ್ತು ರೋಹಿ!"

".... .... .... ...."

"ಸದ್ಯ ದೇವರು ತಪ್ಪಿಸಿದ...."

"ನನಗಿನ್ನೂ ನೀವು ಉತ್ತರಕೊಟ್ಟಿಲ್ಲ...."

"ಏಕೆ....ನಿನ್ನ ಮದುವೆಯ ಮುಂಚೆಯೇ ಹೇಳಿದ್ದೆ...."

"ಏನು...."

"ನಿನ್ನ ಕಷ್ಟ ಸುಖ ಹೇಳಿಕೊಳ್ಳಲು ಒಬ್ಬ ಸ್ನೇಹಿತ ಬೇಕೆಂದು."

"ಹೂಂ...."

"ನಾನು ತುಂಬಿಕೊಡ್ತೇನೆಂದು"

ರೋಹಿಣಿ ಬಿಕ್ಕಿಬಿಕ್ಕಿ ಅತ್ತಳು. ಐದು ನಿಮಿಷದವೇಲೆ ಅವಳೇನು ನಿರ್ಧರಿಸಿದಳೋ "ಸ್ನೇಹವನ್ನು ತುಂಬಿಕೊಟ್ಟಿದ್ದೀರಿ" ಎಂದು ರಾಜನ ಮನೆಯ ವಿಷಯ ಮತ್ತಿಷ್ಟನ್ನು ಕೇಳಿದಳು. ರತ್ನಳಿಗೆ ಕಣ್ಣುಹೋದುದನ್ನು ಹೇಳಿ ನಿನ್ನಂತೆಯೇ ನಾನೂ ಒಂದು ವಿಧದಲ್ಲಿ ದುಃಖಿಯೆಂದು ಆಗಲೇ ಹತ್ತು ಗಂಟೆಯಾಗಿದ್ದುದರಿಂದ ತಾನು ಹೋಗುವುದಾಗಿ ಹೇಳಿದ. ವಿಶ್ವನಾಥನ ವಿಷಯವನ್ನು ಮಿಲಿಟರಿ ಆಫೀಸಿನಲ್ಲಿ ವಿಚಾರಿಸಲು ರೋಹಿಣಿ ದೆಹಲಿಗೆ ಬಂದಿದ್ದಳು. ರಾಜ ಮಾರನೆಯ ದಿನ ಬೆಳಗ್ಗೆ ಮೈಸೂರಿಗೆ ಹೊರಟು ಬಿಡುತ್ತೇನೆಂದು ಹೇಳಿ ಟ್ಯಾಕ್ಸಿಯೊಂದನ್ನು ಗೊತ್ತುಮಾಡಿಕೊಂಡು ತಾನಿಳಿದಿದ್ದ ಹೊಟಲಿಗೆ ಬಂದ. ತಾನು ದೆಹಲಿಗೆ ಬಂದ ಕೆಲಸ ನೆರವೇರಲಿಲ್ಲ. ಆದರೆ ಬಹು ದಿನದ ಗೆಳತಿ ಭೇಟಿಯಾದಳು.

## ೩೧

ಕಾಲೇಜಿನಿಂದ ಮುಕ್ತಿ ದೊರಕುವುದಲ್ಲ ಎಂದಿದ್ದ ರಾಜನಿಗೆ ನಿರಾಶೆ ಆಗಿತ್ತು. ದೆಹಲಿಯಲ್ಲಿ ಕೆಲಸ ತನಗೆ ಸಿಕ್ಕಿದ್ದರೆ ಇದೇ ಕೆಲಸದಿಂದ ಪಾರಾಗಬಹುದಿತ್ತು. ರಾಜ ಮನಸ್ಸು ಬಾದರೆ ಚೆನ್ನಾಗಿ ಪಾಠಹೇಳುತ್ತಿದ್ದ. ಇಲ್ಲದಿದ್ದರೆ ಸಾಮಾನ್ಯನಾಗಿ ಊದಿಬಿಡುವನು. ಬಹು ಬೇಗನೆ ಕಾಲೇಜಿನ ಹುಡುಗರಿಗೆಲ್ಲಾ ರಾಜನಲ್ಲಿ ಏನೋ ಮಾರ್ಪಾಡು ಆಗಿದೆ ಎಂದು ಕಂಡಿತು. ಸಂಭಾವನೆ ರೂಪದಲ್ಲಿ ಪ್ರೋತ್ಸಾಹ ದೊರೆಕದೆ ಪ್ರತಿ ವರ್ಷವೂ ಎದುರು ನೋಡಿದ ರಾಜ ನಿರುತ್ಸಾಹಿ ಆದುದು ಹೆಚ್ಚೇನೂ ಅಲ್ಲ.

ಮನೆಯಲ್ಲೂ ಹಾಗೆ ಮನ ಬಂದರೆ ರತ್ನಳನ್ನು ಪ್ರೀತಿಯಿಂದ ಕಾಣುತ್ತಿದ್ದ. ಬೇಜಾರಾದರೆ ಅವಳನ್ನು ಹೊಡೆಯುತ್ತಿದ್ದ. ಅಂತೂ ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡಿರಲು ಬಹಳ ದಿನಗಳು ಸಾಧ್ಯವಾಗಲಿಲ್ಲ. ರಾಜನಿಗೂ ಬಾಳು ಕಷ್ಟವಾಗಿ ಕಂಡಿತು. ಮನೆಗೆ ಬಂದರೆ ಕುರುಡು ಹೆಣ್ಣಿನ ಹತ್ತಿರ ಕಾಲಕಳೆಯಬೇಕು. ಆದರೆ ಕೈಬಿಡಲಾರ. ಯಾವುದಾದರೂ ಸಿದ್ಧವಾಗಿರದಿದ್ದರೆ ಗೊಣಗಲು ಪ್ರಾರಂಭ. ಕಾಲೇಜಿಗೆ ಹೋಗುವಾಗ ಒಗೆದ ಬಟ್ಟೆಗಳು ಸಿದ್ಧವಾಗಿರಬೇಕು. ಸ್ವಲ್ಪ ಹೆಚ್ಚುಕಡಿಮೆ ಆದ್ರೆ ಸರಿ ರತ್ನಳನ್ನು ಬೈದುಬಿಡುತ್ತಿದ್ದ. ಎಲ್ಲಕ್ಕೂ ನನ್ನ ಹಣೆಬರಹವೆಂದು ರತ್ನ ಸುಮ್ಮನಿರುತ್ತಿದ್ದಳು. “ಅವಳನ್ನು ಅಂದರೆ ಅವಳೇನು ಮಾಡ್ತಾಳೆ.... ಇನ್ನು ಮೇಲೆ ನನಗೆ ಹೇಳು” ಎಂದು ಗೌರಿ ಹೇಳುತ್ತಿದ್ದಳು. ತಾನಾಡಿದ ಮಾತನ್ನು ನೆನೆಸಿಕೊಂಡು ತಪ್ಪನ್ನರಿತು ರತ್ನಳಿಗೆ ಸಮಾಧಾನಮಾಡುತ್ತಿದ್ದ. ಒಟ್ಟಿನಲ್ಲಿ ತನ್ನ ಮೇಲಿನ ಆದರ ಮಾಸಿಲ್ಲವೆಂದು ರತ್ನಳಿಗೆ ಅನ್ನಿಸಿತು.

ರಾಜ ಒಬ್ಬನೇ ಕುಳಿತಿರುವಾಗ ರೋಹಿಣಿಯ ಬಗ್ಗೆ ಯೋಚಿಸುತ್ತಿದ್ದ. ಮೈಕೈತುಂಬಿಕೊಂಡಿದ್ದ ಪ್ರೌಢೆಯ ಸೌಂದರ್ಯವನ್ನು ಕಂಡಿದ್ದ. ಈ ಸೌಂದರ್ಯ ಎಲ್ಲಾ ನಿನಗೆ ಎಂದು ಒಲಿದು ಬಂದಿದ್ದಳು. ಬೇಡವೆಂದು ಒದ್ದು ಬಿಟ್ಟೆ! ಎಂತಹ ಸಮಯವನ್ನು ಕಳೆದುಕೊಂಡೆ ಎನ್ನಿಸಿತು. ಕೊಠಡಿಯಲ್ಲಿ ಕುಳಿತು ರಾಜನ ಬೂಟ್ಸಿಗೆ ಬಣ್ಣ ಹಾಕುತ್ತಿದ್ದ ರತ್ನಳನ್ನು ನೋಡಿದ. ಅವಳನ್ನು ನೋಡಿದರೇನೋ ಅಯ್ಯೋ! ಎನ್ನಿಸುತ್ತಿತ್ತು. ಆದರೆ ರೋಹಿಯ ಸೌಂದರ್ಯದ ಮುಂದೆ ರತ್ನಳ ಮರುಕವೆಲ್ಲಿ?

ಮನೆಯಲ್ಲಿ ತಾನು ಯಾವ ಕೆಲಸವನ್ನೂ ಮಾಡುವಂತಿರಲಿಲ್ಲ. ಅಲ್ಲದೆ ಆವಳ ಕೈಲಿ ಆಗುತ್ತಲೂ ಇರಲಿಲ್ಲ. ರತ್ನ ಏನು ಮಾಡಬೇಕು ? ಒಂದೇ ಸಮಾಧಾನಕೊಡುವುದೆಂದರೆ ಅಳುವುದು. ರತ್ನ ತುಂಬಾ ಅತ್ತುಬಿಟ್ಟಳು. ಅದನ್ನು ನೋಡಿದ ರಾಜ—

" ನಿಲ್ಲಿಸು ! ಅಳುವುದನ್ನು ನಿಲ್ಲಿಸು .... ನನ್ನ ಹತ್ತಿರ ಯಾರೂ ಅಳ ಬೇಕಾಗಿಲ್ಲ " ಎಂದು ಹಂಗಿಸಿದ.

ಸಮಯವನ್ನು ನೋಡಿ ರಾಜನನ್ನು ಕೇಳಿಯೆ ಬಿಟ್ಟಳು.

" ನೀವು ಹೀಗೇ ದುಃಖದಲ್ಲಿ ಕಾಲ ತಳ್ತೀರ ?"

"ಏನು ಮಾಡು ಅಂತಿ.... "

" ನನ್ನ ಮಾತು ಕೇಳುವುದಾದರೆ.... "

" ಏನು ರತ್ನ.... "

" ಬೇರೆ ಮದುವೆ ಮಾಡಿಕೊಳ್ಳಿ.... "

" ನೀನು.... "

" ನಾನು ನಿಮ್ಮ ದಾಸಿಯಾಗಿರುತ್ತೀನೆ.... ನಿಮ್ಮ ಮನೆಯ ಕೆಲಸ ಮಾಡಲು ಯಾರಾದರೂ ಬೇಡವೆ?"

" ಚೆನ್ನಾಗಿ ಹೇಳ್ದೆ. "

" ಏಕೆ ಅಂದ್ರೆ.... "

" ನೀನಿರುವಾಗ ರತ್ನ "

" ಅದ್ರೆ........ "

" ಬೇರೆ ಮದುವೆ ಹೇಗೆ ಸಾಧ್ಯ?"

ರಾಜ " ಬೇರೆ ಮದುವೆ ಹೇಗೆ ಸಾಧ್ಯ " ಎಂದಾಗ ರತ್ನ "ನಾನು ಬದುಕಿರುವ ವರೆಗೂ ಹೇಗೆ ಸಾಧ್ಯ" ಎಂದು ತಪ್ಪು ಅರ್ಥಮಾಡಿಕೊಂಡಳು. ಎಲ್ಲವನ್ನೂ ನೆನೆದು ರತ್ನಳಿಗೆ ತುಂಬಾ ದುಃಖ ಆವರಿಸಿ ಬಂದು ಕೆನ್ನೆಯ ಮೇಲೆ ಕಣ್ಣೀರು ಹರಿಯಿತು.

" ನಾನು ಈ ಮನೆಯಲ್ಲಿ ಯಾರಿಗೂ ಬೇಡದವಳಾಗಿದ್ದೀನೆ. "

" ನಿನ್ನ ಗೋಳು ಇದ್ದೇ ಇರುತ್ತೆ."

" ಹೌದು ನನ್ನ ಬಾಳೇ ಒಂದು ಗೋಳು .... ಆದರೆ ನೀವೂ ನನ್ನ ವಿಷಯದಲ್ಲಿ ........"

“ ಹೇಗಿದ್ದೇನೆ.... ?”

“ ಮುಂಚಿನಂತಿಲ್ಲ. ”

“ ನೀನೂ ಮುಂಚಿನಂತಿಲ್ಲವಲ್ಲ. ” ರಾಜ ಬಾಯಿತಪ್ಪಿ ನುಡಿದ.

ಏನೋ ಕೇಳಿ ನಿರ್ಧರಿಸಬೇಕೆಂದಿದ್ದ ರತ್ನಳಿಗೆ ಈ ಚುಚ್ಚುಮಾತು ನಾಟಿತು. ಅವಳಿಗೆ ಅನ್ನಿಸಿತು: ಹೌದು ನಾನು ಮೊದಲಿನಂತೆ ಸುಂದರಳಲ್ಲ ....ಆದಕ್ಕೆ ಅವರು ನನ್ನನ್ನು ಅಲಕ್ಷ್ಯ ಮಾಡುತ್ತಿದ್ದಾರೆ....ಅಯ್ಯೊ ಜೀವನವೆಲ್ಲಾ ರೂಪಿನ ಸ್ಪರ್ಧೆಯೇ? ಇನ್ನು ಮುಂದೆ ರಾಜನ ಹತ್ತಿರ ಈ ವಿಷಯ ಚರ್ಚಿಸುವುದಿಲ್ಲ ಎಂದು ರತ್ನ ನಿರ್ಧರಿಸಿದಳು. ಅಂದಿನಿಂದ ರತ್ನಳ ರೀತಿಯೇ ಬೇರೆಯಾಯ್ತು. ತಾನು ಇದುವರೆಗೂ ಆ ಮನೆಯವರಲ್ಲಿ ಒಬ್ಬಳೆಂದು ತಿಳಿದಿದ್ದಳು. ಅಂದಿನಿಂದ ಆ ಮನೆಯ ದಾಸಿಯೆಂದುಕೊಂಡಳು, ಅದೂ ಒಂದು ರೀತಿ ನಿಜವೇ. ಮುಂಚಿನಂತಿರಬೇಕೆಂದರೆ ಇತರರು ತನ್ನನ್ನು ಮೊದಲು ಕಾಣುತ್ತಿದ್ದಂತೆ ಕಾಣಬೇಕು. ಮನೆಯ ಸೇವಕಳೆಂದು ತಿಳಿದರೆ ತೀರಿತು. ತನ್ನ ವಿಷಯದಲ್ಲಿ ಯಾರು ಯಾವ ರೀತಿ ನಡೆದುಕೊಂಡರೇನು. ಹೆಣ್ಣಾಗಿ ಹುಟ್ಟಿ ದೇಹವನ್ನು ಈ ಮನೆಯ ಕೆಲಸದಲ್ಲಿ ಸವೆಸಬೇಕು. ಬೆಳ್ಳಂ ಬೆಳಗೆದ್ದು ಕಮಲಮ್ಮ ಮಾಡುತ್ತಿದ್ದ ಕೆಲಸಗಳನ್ನೆಲ್ಲಾ ಅವಳೇ ಮಾಡುವಳು. ಬೆಳಗಿನ ಮುಸುಕಿನಲ್ಲಿ ಕಣ್ಣುಕಾಣದೆ ಒಲೆಗೆ ಉರಿಹಾಕುವಾಗ ಸೌದೆಯನ್ನು ಕಾಲ ಮೇಲೆ ಕೆಡವಿಕೊಳ್ಳುವಳು. ಒಂದು ಹೊರೆ ಬಟ್ಟೆಯನ್ನು ಒಗೆಯುವಳು. ಎಷ್ಟು ಬೇಡವೆಂದು ಹೇಳಿದರೂ ಕೇಳುತ್ತಿರಲಿಲ್ಲ. ಮನೆಯ ಕೆಲಸವೆಲ್ಲಾ ಮುಗಿದರೆ ಮನೆಯ ಹಿತ್ತಲಲ್ಲಿ ತಾನೇ ಮಾಡಿದ್ದ ತೋಟದ ಕೆಲಸಕ್ಕೆ ಬಂದು ಬಿಡುವಳು. ಊಟದ ಹೊತ್ತಿಗೆ ಕಮಲಮ್ಮ ಅವಳನ್ನು ಕರೆದು ಒಳ್ಳೆಯ ಮಾತನಾಡಿ ಊಟ ಹಾಕುತ್ತಿದ್ದಳು. ರತ್ನಳಿಗೆ ಅನ್ನಿಸಿತು: ತನ್ನ ಆ ಸ್ಥಿತಿಯಲ್ಲಿ ಗಂಡನಲ್ಲದೆ ಇತರರೂ ಅಲಕ್ಷಿಸುವುದಿರಲಿ ಹುರಿದು ತಿಂದರೇನು ಗತಿ ಎಂದು. ಒಂದು ದಿನವೂ ಬಾಳಲು ಆಗುತ್ತಿರಲಿಲ್ಲ. ರಾಜನ ಪ್ರೇಮವೇನೊ ಇಲ್ಲದಾಯಿತೆಂದುಕೊಂಡಳು. ಗೌರಿ ಅನೇಕ ಸಾರಿ ರತ್ನಳಿಗೆ ಹೆರಳು ಹಾಕುತ್ತಾ ಕೆಲವು ಸಮಾಧಾನದ ಮಾತನ್ನು ಹೇಳುವಳು.

“ ಇಲ್ಲಿ ನೋಡು ರತ್ನ, ನೀನು ಬಂದು ನಮ್ಮ ಮನೆಯನ್ನು ಸೇರಿದೆ.... ಎಲ್ಲರಿಗೂ ಅಚ್ಚುಮೆಚ್ಚಾದೆ.... ”

" ಗೌರಕ್ಕ ನಿಮ್ಮದು ಯಾವಾಗಲೂ ದೊಡ್ಡಗುಣ....ಸಣ್ಣದನ್ನು ದೊಡ್ಡದನ್ನಾಗಿ ಮಾಡಿ ಹೊಗಳಬಿಡ್ತೀರಿ. "

" ಇಲ್ಲ ರತ್ನ...."

" ನಾನು ಖಂಡಿತ ಅದೃಷ್ಟವಂತೆ....ಅತ್ತೆ ಅತ್ತಿಗೆ ಇಬ್ಬರೂ ನನ್ನನ್ನು ಮಗಳಂತೆ ಕಾಪಾಡ್ತೀರಿ. "

" ರತ್ನ ನಾವು ಯಾವುದನ್ನೂ ಹೀಗೆ ಎಂದು ನಿರ್ಧರಿಸುವುದು ತಪ್ಪು. "

" ಅವರು ನನ್ನನ್ನು ಕಂಡರೆ ಹೀಗಾಡಲು ಏನೋ ಕಾರಣವಿರಬೇಕು."

" ಹೌದು ಒಂದು ಕಾರಣವಿದೆ....ಅವನನ್ನು ಅಂಕೆಯಲ್ಲಿಟ್ಟುಕೊಳ್ಳ ತಕ್ಕದ್ದು. "

" ನನಗೆ ಧೈರ್ಯ ಸಾಲದು ಗೌರಕ್ಕ....?"

" ಒಳ್ಳೆಯವಳು....ರಾಜನ ಮನಸ್ಸನ್ನು ಬದಲಾಯಿಸಿ.... "

" ಮೊದಲಿನಂತೆ ಬಾಳ್ತೀನೆಯೆ ಗೌರಕ್ಕ. "

" ಖಂಡಿತ ರತ್ನ.... "

" ನಿಮ್ಮ ಬಾಯಿಂನ ಹರಕೆ ಫಲಿಸಲಿ ಗೌರಕ್ಕ "

ಗೌರಿ ರತ್ನಳಿಗೆ ತುರುಬನ್ನು ಹಾಕಿ ಮಲ್ಲಿಗೆ ದಂಡೆಯನ್ನು ಮುಡಿಸಿ ರತ್ನಳ ಮುಖವನ್ನು ಒರಸಿ ದುಂಡಾದ ಕುಂಕುಮವನ್ನಿಟ್ಟಳು. ಗೌರಿಗೆ ಮಾತ್ರ ನೋಡಿದಾಗ ರತ್ನಳಲ್ಲಿ ಯಾವ ವ್ಯತ್ಯಾಸವೂ ಕಾಣಲಿಲ್ಲ. ಅವಳು ಸುಮ್ಮನೆ ಕೊರಗುತ್ತಾಳೆ ಎಂದು ಮರುಗಿದಳು. ರತ್ನಳೂ ಯೋಚಿಸಿರಬೇಕು. ಗಂಡನನ್ನು ಕಳೆದುಕೊಂಡು ಸರಸಳ ಅಭ್ಯುದಯವನ್ನೇ ಎಣಿಸಿ ಬಾಳುವ ಗೌರಿಯನ್ನು ನೆನೆದಳು. ರಾಜ ತನ್ನನ್ನು ಅಲಕ್ಷಿಸಿದರೂ ವಸಂತ ದೊಡ್ಡವನಾಗಿ ತನ್ನನ್ನು ಸಾಕುತ್ತಾನೆ. ಹೌದು ತಂದೆಯ ಗುಣವೇಕೆ ಮಗನಲ್ಲಿರಬಾರದು? ಕಮಲಮ್ಮನನ್ನು ಮುಪ್ಪಿನಲ್ಲಿ ರಾಜ ಸುಖವಾಗಿಟ್ಟಿಲ್ಲವೆ.

" ಅಮ್ಮಾ ಸಂಪಿಗೆ ಹೂವು ತೊಗೊಳ್ಳಿ " ಎಂದು ಒಂದು ಬಗಸೆ ತುಂಬಾ ಹೂವನ್ನು ತಂದು ರತ್ನಳ ಮಡಲಿಗೆ ಹಾಕಿ ಅವಳ ತೊಡೆಯಮೇಲೆ ವಸಂತ ಬಿದ್ದ. ರತ್ನ ಅವನ ತಲೆಯನ್ನು ನೇವರಿಸುತ್ತಾ ಕುಳಿತಳು. ಗೌರಿ ಅಲ್ಲಿಂದೆದ್ದು ಒಳಕ್ಕೆ ಹೋದಳು.

" ಅಮ್ಮಾ, ಹೂ ಮುಡಿದುಕೊಳ್ಳಮ್ಮ.... "

"ಮಲ್ಲಿಗೆ ಮುಡಿದುಕೊಂಡಿದ್ದೇನೆ ಪುಟ್ಟ."

"ಹೋಗಮ್ಮ....ಪಕ್ಕದ ಮನೆಯವರ ಕೈಲಿ ಬೈಸಿಕೊಂಡು ತಂದಿದ್ದೇನೆ; ನೀನು ಬೇಡ ಅಂತಿ"

"ಆ! ಒಂದು ಹೂ ಮುಡಿದುಕೊಳ್ತೀನೆ."

"ನಾನೇ ಮುಡಿಸ್ತೀನಮ್ಮ."

ರತ್ನ ಸುಮ್ಮನೆ ಕುಳಿತಳು. ವಸಂತ ಎರಡು ಸಂಪಿಗೆ ಹೂವನ್ನು ತಾಯಿಗೆ ಮುಡಿಸಿದ.

"ಚೆನ್ನಾಗಿದೆ ಅಮ್ಮ ಇವತ್ತು ಹೆರಳು" ಎಂದ.

"ನಾನು ಚೆನ್ನಾಗಿದ್ದೇನೆ. ಪುಟ್ಟ."

"ಬಾಕಮ್ಮ...."

"ನನ್ನನ್ನು ಕಂಡರೆ ಭಯವಾಗುವುದಿಲ್ಲವೆ ?"

"ಭಯವೇಕಮ್ಮ....ನಿನ್ನ ಕಂಡರೆ ನನಗೆ ತುಂಬಾ ಇಷ್ಟ, ಅಮ್ಮ."

"ದೊಡ್ಡವನಾದಮೇಲೆ ನನ್ನ ಕಾಪಾಡ್ತೀಯಾ ವಸಂತ?"

"ಓ! ನಾನು ದೊಡ್ಡವನಾಗಿ, ಮದುವೆ ಮಾಡಿಕೊಂಡು ದೊಡ್ಡ ಬಂಗಲೆಯಲ್ಲಿ ನಿನ್ನನ್ನು ಕಾಪಾಡ್ತೇನಮ್ಮ." ಎಂದ ವಸಂತ. ಎಲ್ಲರ ಮಾತಿಗಿಂತಲೂ ವಸಂತನ ಮಾತು ರತ್ನಳಿಗೆ ಹಿತವಾಯಿತ್ತು. "ನನ್ನ ಕಂದಾ!" ಎಂದು ವಸಂತನನ್ನು ತಬ್ಬಿಕೊಂಡು ಕಣ್ಣೀರಿಟ್ಟಳು. "ಹೋಗಮ್ಮ, ನೀನು ಯಾವಾಗ್ಲೂ ಅಳ್ತೀದೆ" ಎಂದ ವಸಂತ. "ಅಳೋಲ್ಲಪ್ಪ" ಎಂದು ಕಣ್ಣೀರನ್ನು ಒರಸಿಕೊಳ್ಳುವ ಹೊತ್ತಿಗೆ ವಸಂತನಾಗಲೇ ಅವಳ ತೊಡೆಯಿಂದ ಚಿಮ್ಮಿ ಆಡಿಕೊಳ್ಳಲು ಹೊರಟುಹೋಗಿದ್ದ.

## ೩೨

ಐದಾರು ವರ್ಷಗಳಿಂದಲೂ ಯಾರೂ ವಾಸಿಸುತ್ತಿಲ್ಲದ ರೋಹಿಣಿಯ ಮನೆಯನ್ನು ಸ್ವಚ್ಛಮಾಡುತ್ತಿದ್ದಲ್ಲದೆ ಮಾಲಿ ತುಂಬಾ ಚಟುವಟಿಕೆಯಿಂದ ಓಡಾಡುತ್ತಿದ್ದುದನ್ನು ರಾಜ ಕಾಲೇಜಿಗೆ ಹೋಗುವಾಗ ನೋಡುತ್ತಿದ್ದ. ಒಂದೆರಡು ದಿನಗಳಲ್ಲಿಯೇ ಮನೆ ವಾಸಿಸಲು ಸಿದ್ಧವಾಯಿತ್ತು. ಯಾರೋ ಕೊಂಡವರು ಬಂದಿರಬಹುದೆಂದು ರಾಜ ಸುಮ್ಮನಾದ.

ತಾನು ಆ ರೀತಿ ಆಗುತ್ತೆ ಎಂದು ರಾಜ ನೆನೆದಿರಲಿಲ್ಲ. ರೋಹಿಣಿ ಪುನಃ ಮೈಸೂರಿಗೆ ಬಂದಿದ್ದಳು. ದೆಹಲಿಯಲ್ಲಿ ಅವಳನ್ನು ನೋಡಿದಾಗ ತಾನು ಪೂನಾಕ್ಕೆ ಹೋಗಿ ಅಲ್ಲಿ ಇದ್ದು ಬಿಡುವಳೆಂದು ತಿಳಿಸಿದ್ದಳು. ಮತ್ತೇಕೆ ಇಲ್ಲಿಗೆ ಬಂದಳು? ಮತ್ತೊಂದು ಸಾರಿ ತನ್ನನ್ನು ಕೇಳುವಳೆ.? ಈ ಸಾರಿ ಕೇಳಿದರೆ ತನ್ನ ಒಪ್ಪಿಗೆಯನ್ನು ಕೊಟ್ಟುಬಿಡಬೇಕೆಂದು ಯೋಚಿಸಿದ. ಅದರಂತೆ ರೋಹಿಣಿಯ ಮನೆಯಾಳು ಬಂದು ಒಡತಿಯ ಸಂದೇಶವನ್ನಿತ್ತು ಹೋದ. ಅಂಧನಾಗಿದ್ದ ರಾಜ ತನ್ನ ಮನಸ್ಸಿನಂತೆ ನಡೆದು ರೋಹಿಣಿಯ ಮನೆಯನ್ನು ಸೇರಿದ.

ರೋಹಿಣಿ ಮಹಡಿಯ ಮೇಲಿದ್ದ ತನ್ನ ಕೊಠಡಿಯಲ್ಲಿ ಆಕರ್ಷಣೀಯವಾಗಿದ್ದ ಬಟ್ಟೆಗಳನ್ನು ತೊಟ್ಟು ಕುಳಿತಿದ್ದಳು. ಸೌಂದರ್ಯಕ್ಕೆ ಸೋತಿದ್ದ ರಾಜನ ಕಣ್ಣಿಗೆ ಅವಳು ಅಪ್ಸರೆಯಂತೆ ಕಂಡಳು. ನಗುನಗುತ್ತಾ ಎದುರುಗೊಂಡು ಅವನ ಮನಸ್ಸನ್ನು ಸೂರೆಗೊಂಡಳು.

“ ನೀನು ಸುರಸುಂದರಿ.... ನಿನ್ನ ಅಲಂಕಾರ ಒಡವೆ ವಸ್ತ್ರ ಏಕೆ ನಿನ್ನ ಸರ್ವಸ್ವವೂ ಸುಂದರವಾಗಿದೆ. ಈ ಹೂವನ್ನು ತೆಗೆದುಕೋ ” ಎಂದು ರಾಜ ಅವಳಿಗಾಗಿ ತಂದಿದ್ದ ಹೂವನ್ನು ಕೊಟ್ಟ.

ಹೂವನ್ನು ತೆಗೆದುಕೊಂಡು ರೋಹಿಣಿ “ ನಿಮಗೆ ಆಶ್ಚರ್ಯವಾಗಿರಬೇಕು. ನಾನು ಇಲ್ಲಿಗೆ ಬಂದುದು ” ಎಂದಳು.

“ ಪುನಃ ಮೈಸೂರಿಗೆ ಬರುವುದಿಲ್ಲ ಎಂದಿದ್ದೆ ”

“ ಹೌದು ದೆಹಲಿಯಲ್ಲಿ ನಿಮ್ಮನ್ನು ನೋಡಿದಾಗ ಮರೆತಿದ್ದ ನಿಮ್ಮ ಪ್ರೇಮ ನನ್ನ ಹೃದಯದಲ್ಲಿ ತಾಂಡವವಾಡಿಬಿಟ್ಟಿತು. ”

“ .... .... .... .... ”

“ ನೀವೇನೋ ಧರ್ಮದ ಸೂತ್ರಗಳನ್ನು ಹೇಳಿ ಸಮಾಧಾನಮಾಡಲು ಪ್ರಯತ್ನಿಸಿದಿರಿ ”

“ ಪ್ರಯತ್ನದಲ್ಲಿ ಸೋತೆ.... ”

“ ಹೌದು ನೀವು ಸೋತಿರಿ.... ನಿಮ್ಮ ತತ್ವ ನನಗೆ ಸರಿಯಾಗಿ ಕಾಣಲಿಲ್ಲ”

“ ಅದೇಕೆ ?”

"ನೀವು ಒಳ್ಳೆಯ ಸ್ನೇಹಿತರು. ನನ್ನ ಮದುವೆಯ ಮುಂಚೆ ನನ್ನನ್ನು ಒಪ್ಪಿದ್ದಿರಿ, ನಾನೂ ಒಪ್ಪಿದ್ದೆ. ದುಡ್ಡಿನವಳೆಂದು ನಿರಾಕರಿಸಿದಿರಿ."

"ಹೂಂ ಈಗೇಕೆ ಆ ಮಾತು"

"ನಾನೂ ಬಡವರ ಹೆಣ್ಣಾಗಿದ್ದರೆ ನಿಮ್ಮ ಪ್ರೇಯಸಿ ಆಗುತ್ತಿರಲಿಲ್ಲವೆ?" ಎಂದು ರಾಜನಿಗೊಂದು ದೊಡ್ಡ ಸಮಸ್ಯೆಯನ್ನೊಡ್ಡಿದಳು. ಅವನೂ ತರ್ಕಿಸಿದ. ಹೌದು! ಆಗಬೇಕಿತ್ತು, ಆಗಲಿಲ್ಲ.... ಈಗೇನು ಮಾಡಬೇಕು. ರೋಹಿಣಿಯನ್ನು ಗೆಳತಿಯೆಂದಲ್ಲದೆ ಬೇರೆ ಭಾವಿಸುವದು ತಪ್ಪು. ಆದರೆ ಅವಳ ರೂಪ ಪ್ರೇಮ ತನ್ನನ್ನು ಸೆಳೆಯುತ್ತಿದೆ. ರಾಜನ ತಲೆ ಸುತ್ತಿ ಬಂತು. ಕಮಲಮ್ಮ, ಗೌರಿ, ಸುಬ್ಬಣ್ಣ ಕಾಣಿಸಿಕೊಂಡು ಛೀಮಾರಿ ಹಾಕುತ್ತಿದ್ದಾರೆ. ವೆಂಕಟೇಶ ತನ್ನನ್ನು ಕಂಡು ಅಸಹ್ಯಪಡುತ್ತಿದ್ದಾನೆ. ಹೀಗೆ ಮಾಡುವುದು ಸರಿಯೇ ಎಂದು ಡಾ. ಕೃಷ್ಣಸ್ವಾಮಿ, ಶಾರದಮ್ಮ ಕೇಳುತ್ತಿದ್ದಾರೆ.... ಎಲ್ಲಕ್ಕಿಂತಲೂ ರತ್ನ ಸೆರಗೊಡ್ಡಿ ಬೇಡಿಕೊಳ್ಳುತ್ತಿದ್ದಾಳೆ. ಕಣ್ಣುಜ್ಜಿ ರೋಹಿಣಿಯನ್ನು ನೋಡಿದ. ಕಾಮದ ಪಶುವಾಗಿದ್ದಾಳೆ. ರಾಜ ಕಾಲಕ್ಕೆ ಸರಿಯಾಗಿ ವಿವೇಕದಿಂದ ನಡೆದುಕೊಂಡ. ಅವನಿಗೆ ದೊಡ್ಡ ಸಮಸ್ಯೆಯಾಯಿತು. ನಾಲ್ಕೂಜನರ ಸಹಾಯ, ತ್ಯಾಗದಿಂದ ಬೆಳೆದಿದ್ದ ದೇಹವನ್ನು ನಾಲ್ಕು ಜನರಿಗೆ ಚೆನ್ನಾಗಿ ಕಾಣುವಂತೆ ಸವೆಸುವುದೆ ? ಅಥವಾ ತನಗೆ ತೋರಿದಂತೆ ನಡೆಯುವುದೆ ? ಎಂದು ರಾಜ ಮನೆಗೆ ವಾಪಸು ಬಂದು ಬಿಟ್ಟ. ತನ್ನ ಮೋಹಪಾಶದಿಂದೇನೋ ರಾಜನನ್ನು ಬಿಗಿದಿದ್ದಳು. ಅವಳ ತುಂಬಿದ ಸೆಳತದ ಕಣ್ಣು ಇನ್ನೂ ಅವನ ಕಣ್ಣಿಗೆ ಕಟ್ಟಿತ್ತು.

ಮನೆಗೆ ಬಂದವನೆ ಯಾರ ಹತ್ತಿರವೂ ಮಾತನಾಡದೆ ನೇರವಾಗಿ ಕಾಲೇಜಿಗೆ ಹೊರಟುಬಿಟ್ಟ. ಕಾಲೇಜಿನಲ್ಲಿ ನಡೆಯುತ್ತಿದ್ದ "ವಿಜ್ಞಾನ ಪ್ರದರ್ಶನಕ್ಕೆ" ಅವನು ಕಾರ್ಯದರ್ಶಿಯಾಗಿದ್ದುದರಿಂದ ಬೆಳಗ್ಗೆ ಅಲ್ಲಿಗೆ ಹೋದ ಅಂದ್ರೆ ಬರುವಾಗ್ಗೆ ರಾತ್ರಿ ಹತ್ತುಗಂಟೆಯಾಗಿ ಬಿಡುತ್ತಿತ್ತು. ಬಿಡುವೆ ಸಿಗುತ್ತಿರಲಿಲ್ಲ. ಈ ಅವಾಂತರದಲ್ಲಿ ರೋಹಿಯನ್ನು ನೋಡಲು ಆಗಲಿಲ್ಲ. ತಾನು ನಿರ್ಧರಿಸಿದ್ದರೇನೋ ಬಿಡುವು ಮಾಡಿಕೊಂಡು ನೋಡುತ್ತಿದ್ದ. ಆವನ ಮನಸ್ಸು ನಿರ್ಧಾರದ ಉಯ್ಯಾಲೆ ಏರಿತ್ತು.

ಈ ವಿಚಾರ ಕಮಲಮ್ಮನಿಗೂ ಗೌರಿಗೂ ಸೂಕ್ಷ್ಮವಾಗಿ ಗಿರಿಜೆಯಿಂದ ತಿಳಿದಿತ್ತು. ಅಲ್ಲದೆ ರಾಜ ಬಹಳ ಬದಲಾಯಿಸಿದ್ದ. ಇದುವರೆಗೂ ಗೌರಿಯ

ಮಾತು ಕೇಳುತ್ತಿದ್ದ ರಾಜ ಒಂದೊಂದು ಚುಚ್ಚುಮಾತು ಆಡುತ್ತಿದ್ದ. ಕಮಲಮ್ಮ ಮನಸ್ಸಿಗೆ ಹಚ್ಚಿಕೊಳ್ಳದೆ "ಎಲ್ಲ ಆಯ್ತು. ಇನ್ನು ಅವನ ಪಾದ ಸೇರುವ ನನಗೇಕೆ ಹೇಳು ಗೌರಿ" ಎನ್ನುತ್ತಿದ್ದಳು. ಆದರೂ ಮಗ ಕೆಟ್ಟನಲ್ಲಾ ಎಂದು ಸಂಕಟಪಟ್ಟು "ಇದೇ ವಿಪರೀತವಾದ್ರೇನು ಗತಿ ಗೌರಿ" ಎಂದಾಗ ರತ್ನಳ ಕಡೆ ಸನ್ನೆಮಾಡಿ ಅಲ್ಲಿಂದ ಬೇರೆಯ ಕಡೆ ಬಂದು "ಚೆನ್ನಾಗಿ ಹೇಳಿದ್ದಾಯ್ತು. ಅವನು ಹಾಗೆ ಮಾಡಲಾರ" ಎಂದಳು. ಈ ವಿಷಯ ರತ್ನಳಿಗೆ ಗೊತ್ತಾಗದಂತೆಯೆ ನೋಡಿಕೊಳ್ಳುವುದನ್ನು ಮಾತ್ರ ಮರೆಯಲಿಲ್ಲ.... ಹತ್ತಿರವಿದ್ದ ರತ್ನ ಕೇಳಿಸಿಕೊಂಡಳೇನೋ ಎಂದುಕೊಂಡು ಗೌರಿ "ಬರ್ತೀಯಾ ಹರಿ ಕಥೆಗೆ" ಎಂದಳು.

"ಏನು ಕಥೆ ಗೌರಕ್ಕ.... "

"ಪಂಚರಾತ್ರ"

"ಬರ್ತೀನಿ....ಅದ್ರೆ ಅವರು ಬಂದ್ರೆ?"

"ಅಮ್ಮನಿಗೆ ಹೇಳಿಹೋಗೋಣ" ಎಂದು ಕಮಲಮ್ಮನಿಗೆ ಹೇಳಿ ಇಬ್ಬರೂ ಹರಿಕಥೆಗೆ ಹೋದರು. ದಾರಿಯಲ್ಲಿ ಆ ಮಾತು ಈ ಮಾತು ಆಡಿ "ನೀನು ಈ ತರಹ ಇರದೆ ರಾಜನ ಹತ್ತಿರ ಪ್ರೀತಿಯಿಂದಿರಬೇಕು" ಎಂದು ಗೌರಿ ಹೇಳಿದಾಗ ಹಾಗೆ ಏಕೆ ಹೇಳಿದಳೆಂದು ರತ್ನಳಿಗೆ ಅರ್ಥವಾಗದೆ ಇರಲಿಲ್ಲ.

೩೩

ಹಜಾರದಲ್ಲಿ ಗೌರಿ ಸರಸಳಿಗೆ ಜಡೆಯನ್ನು ಹಾಕುತ್ತಿದ್ದಳು. ರಾಜ ಹೀಗಾಗಿ ಬಿಟ್ಟನಲ್ಲಾ ಎಂದು ಕಮಲಮ್ಮ ಯೋಚಿಸುತ್ತಾ ಕುಳಿತಿದ್ದಳು. ಹೇಗೆ ಮಗನನ್ನು ದಾರಿಗೆ ತರಬೇಕೋ ಆಕೆಗೆ ತಿಳಿಯಲಿಲ್ಲ. ಖಂಡಿತವಾಗಿ ಮಾತನಾಡಲಿ—ತನ್ನ ಕಣ್ಣನ್ನು ತಾನೇ ತಿವಿದುಕೊಂಡಂತಾಗುತ್ತಿತ್ತು. ಇವನ ಚರ್ಯೆ ಗೌರಿಗೆ ಸಾಕಾಗಿತ್ತು.

ಗೌರಿ "ಗುಪಗುಪ ಎಂದು ಎಷ್ಟು ದಿನ ಇರೋದಮ್ಮ.... ಇವತ್ತು ಕೇಳಿಯೇ ಬಿಡ್ತೇನೆ" ಎಂದಳು.

"ಬೇಡಮ್ಮ....ಆ ಸಾಹಸ ಮಾಡಬೇಡ."

"ಅದೇನಮ್ಮಾ!"

"ನಮಗೆ ತಿಳಿಯದೆಂದು ತನ್ನ ಪಾಡಿಗೆ ತಾನಿದ್ದಾನೆ."

"ಚೆನ್ನಾಯ್ತು. ಅದ್ಕೆ ಆತಂಕ ಇಲ್ದೆ ಅವನು ಆಡಿದ ಹಾಗೆ ಬಿಟ್ಟು ಬಿಡು ಅಂತೀಯೇನು?"

"ನೀನು ಹೇಳುವುದು ಸರಿ ಗೌರಿ...."

"ಮತ್ತೆ...."

"ನೀನೂ ಯೋಚಿಸಬೇಡವೆ....ನೀನು ಹೇಳುವುದನ್ನು ಅಪಾರ್ಥ ಮಾಡಿಕೊಂಡ್ರೆ?"

"ಏನಾಗುತ್ತೆ ಬಿಡಮ್ಮ....ಮನೆಯಿಂದ ಹೊರಕ್ಕೆ ತಳ್ಳಬಹುದು, ಅಷ್ಟೆ ತಾನೆ. ಬಟ್ಟೆ ಹೊಲಿದು ಹೇಗೋ ಜೀವನ ಮಾಡ್ತೇನೆ"

"ನನಗೊಂದೂ ತೋಚುತ್ತಿಲ್ಲಾ ಗೌರಿ....ನಿನ್ನಿಷ್ಟ" ಎಂದು ಸುಮ್ಮನಾದಳು ಕಮಲಮ್ಮ. ಗೌರಿಯೂ ಯೋಚಿಸಿದಳು. ರಾಜನನ್ನೇನೋ ಅನುಸರಿಸಬೇಕಿತ್ತು. ಸರಸಳಿಗಿನ್ನೂ ಮದುವೆಯಾಗಬೇಕಿತ್ತು. ಆದರೆ ಈ ರೀತಿ ನೀತಿ ಕೆಟ್ಟು ಬಾಳುವ ತಮ್ಮನ ಹತ್ತಿರವಿರುವುದೆ? ಛೀ ಇವತ್ತು ಖಂಡಿತ ಕೇಳಿಯೇ ಬಿಡಬೇಕು ಎಂದು ಗೌರಿ ನಿರ್ಧರಿಸಿದಳು.

ರಾಜ ಮಧ್ಯಾಹ್ನ ಮನೆಗೆ ಬಂದಾಗ ಹನ್ನೆರಡು ಗಂಟೆಯಾಗಿತ್ತು. ಊಟ ಮಾಡಿ ಮಲಗಲೆಂದು ತನ್ನ ಕೋಣೆಗೆ ಹೋದ. ಹತ್ತು ಹದಿನೈದು ದಿನಗಳಿಂದಲೂ ಅವನಿಗೆ ಪುರಸೊತ್ತೇ ಇರಲಿಲ್ಲ. ಬಹಳ ಹೊತ್ತು ವಿರಾಮ ತೆಗೆದುಕೊಳ್ಳಬೇಕೆಂದಿದ್ದ. ಗೌರಿ ಏನೋ ಹುಡುಕುವವಳಂತೆ ಕೋಣೆಗೆ ಬಂದಳು. ರಾಜ ಬೇರೊಂದು ಪಕ್ಕಕ್ಕೆ ತಿರುಗಿ ಮಲಗಿದ.

"ರಾಜಣ್ಣ...." ಎಂದು ಗೌರಿ ಕೂಗಿದಳು.

ಆಶ್ಚರ್ಯದಿಂದ ರಾಜ "ಏನು ಗೌರಿ...." ಎಂದು ಎದ್ದು ಕುಳಿತ.

"ನಾನೊಂದು ಮಾತು ಕೇಳ್ತೇನೆ. ಏನೂ ತಿಳಿದುಕೊಳ್ಳುವುದಿಲ್ಲ ಅಂತ ಹೇಳು."

"ಹೇಳು ಗೌರಿ....ಏನು ಅದು?"

"ಇಷ್ಟು ಒಳ್ಳೆಯ ಬುದ್ಧಿಯವನಿಗೆ ಈ ಕೆಟ್ಟ ಚಾಳಿ ಹೇಗೆ ಬಂತಪ್ಪ?" ರಾಜ ತಲೆತಗ್ಗಿಸಿ ಸುಮ್ಮನೆ ಇದ್ದ. ಅವನಿಗೆ ವಿಷಯ ಏನೆಂದು ಗೊತ್ತಾಯ್ತು. ಆದರೂ ಅಭಿಮಾನದಿಂದ

"ಯಾರೋ ಏನೋ ಹೇಳ್ತಾರೆ ಅಂತ ನೀನೂ ಕೇಳ್ತೀಯಾ ಗೌರಿ?"

"ಹಾಗೆ ಜನ ಹೇಳೋದು ಸುಳ್ಳಾಗ್ಲಿ ಅಂತ ನನ್ನಿಷ್ಟ ರಾಜ. ಆದಿರಿ ನೋಡು, ನಿನಗಿಂತ ಮುಂಚೆ ಹುಟ್ಟಿದವಳು. ನನ್ನಿಂದ ಏನು ಮರೆಮಾಚ ಬೇಕೆಂದಿದ್ದೀ ಅದೆಲ್ಲಾ ನನಗೆ ಗೊತ್ತು. ಅವಳಿಗೆ ಮದುವೆಯಾಗಿದೆ-ಅವ ಳೊಡನೆ ಎಂತಹ ಸರಸ!"

" .... .... .... "

"ಅವಳೊಡನೆ ಪ್ರೇಮವೆಂದರೇನು....ಅವಳು ಒಳ್ಳೆಯವಳಲ್ಲ"

"ಹೌದು ಎಲ್ಲ ನಿಜ, ನಾನು ಅವಳನ್ನು ಪ್ರೀತಿಸಿದ್ದೇನೆ. ಇದನ್ನೇ ಅಲ್ಲವೆ ನೀನು ಕೇಳಬೇಕೆಂದಿದ್ದು ? ಅಷ್ಟೇತಾನೆ....ಇನ್ನೇನಾದರೂ...."

"ಅಷ್ಟೆ ಸಾಲ್ದೆ....ಒಂದೇ ಮಾತಿನಲ್ಲಿ ಎಷ್ಟು ಸುಲಭವಾಗಿ ಹೇಳ್ತಿ...."

"ಗೌರಿ! ನನ್ನ ತಂಟೆಗೆ ನೀನು ಬರಬೇಡ....ನಿನ್ನ ಕೆಲಸ ನೀನು ಮಾಡುಹೋಗು"

"ರಾಜ! ನೀನು ಹಾಗೆ ಬಾಯಿ ಬಡಿಬೇಡಾ. ಆ ಮನೇಹಾಳಿ ಮನೆಗೆ ಹೇಗೆ ಹೋಗ್ತೀಯೋ ನೋಡ್ತೀನಿ."

"ಪಾಪ ಎಂದು ಸುಮ್ಮನಿದ್ರೆ ಹೆಚ್ಚಿಬಿಟ್ಟೆ. ನಿನ್ನಕೆಲಸ, ನಿನ್ನ ಪಾಡು...."

"ನನ್ನ ಪಾಡು ನೋಡಿಕೊಳ್ಳುವ ಅದೃಷ್ಟ ಕೇಳಿಕೊಂಡು ಬಂದಿದ್ದರೆ ನಿನ್ನ ಕೈಕೆಳಗೆ ಬೀಳ್ತಿರಲಿಲ್ಲ" ಎಂದು ಬಿರುಸಾಗಿ ನುಡಿದು ಕೋಣೆಯ ಬಾಗಿ ಲನ್ನು ಹಾಕಿಕೊಂಡು ಬಂದಳು. ಹೊರಗೆ ನಿಂತಿದ್ದ ರತ್ನ ಗೌರಿಯ ಕೈಹಿಡಿದು

"ಬೇಡವೆಂದ್ರೂ ಕೇಳದೆ ನನ್ನಿಂದ ಒಂದು ಮಾತು ಅನ್ನಿಸಿಕೊಂಡ್ರಿ ಗೌರಕ್ಕ."

"ಅನ್ನಲೇಳು ರತ್ನ....ಅಂದ್ರೂ ನನ್ನ ತಮ್ಮನಲ್ಲವೆ?"

" .... .... .... "

"ರತ್ನ ನೀನು ಸ್ವಲ್ಪ ಹೆಚ್ಚಿನ ಆಸಕ್ತಿವಹಿಸಬೇಕು...."

"ಏನು ಗೌರಕ್ಕ...."

"ಆಗ್಩ೀ ಹೇಳಿದನಲ್ಲ ಸಾಯಂಕಾಲ ಅವಳ ಮನೆಗೆ ಹೋಗಿ...."

"ಅವಳ ಮನೆಗೆ ಬೇಡ ಗೌರಕ್ಕ. ಅವರು ಅಲ್ಲಿದ್ರೆ."

"ಇದ್ರೇನು....?"

"ಆದ್ರೂ ಸಾಯಂಕಾಲ ಬೇಡ."

"ನಾಳೆ ಬೆಳಿಗ್ಗೆ ಹೋಗೋಣ ಬಿಡು."

ಗೌರಿ ರತ್ನಳಿಗೆ ಅನೇಕ ಸೂಚನೆಗಳನ್ನು ತಿಳಿಸಿದಳು. ಜಾಗರೂಕತೆಯಿಂದಲ್ಲದೆ ಧೈರ್ಯದಿಂದ ವರ್ತಿಸಿದ್ದೇ ಆದರೆ ನಿನ್ನ ಗಂಡನನ್ನು ನೀನೇ ಉಳಿಸಿಕೊಳ್ಳಬಹುದೆಂದು ಎಚ್ಚರಿಸಿದಳು. ಇದೆಲ್ಲಾ ರತ್ನಳಿಗೆ ಹೊಸದಾಗಿದ್ದುದರಿಂದ ಒಂದೂ ತೋಚದೆ ಗೌರಿ ಹೇಳಿದಂತೆ ನಡೆಯುವುದಾಗಿ ತಿಳಿಸಿದಳು.

ಮಾರನೆಯ ದಿನ ರಾಜ ಎಂದಿನಂತೆ ಹತ್ತು ಗಂಟೆಗೆಲ್ಲಾ ಊಟ ಮಾಡಿ ಕಾಲೇಜಿಗೆ ಹೋದ. ಆ ಸಮಯವನ್ನೇ ಕಾಯುತ್ತಿದ್ದ ಗೌರಿ ರತ್ನಳನ್ನು ಕರೆದುಕೊಂಡು ರೋಹಿಣಿಯ ಮನೆಗೆ ಬಂದಳು. ರತ್ನಳನ್ನು ರೋಹಿಣಿಗೆ ತೋರಿಸಿ ಅವಳಿಗೆ ಅನ್ಯಾಯಮಾಡುವುದು ಸರಿಯೆ ಎಂದು ಮರುಕ ಹುಟ್ಟಿಸುವುದು ಅವಳ ಗುಟ್ಟಾಗಿತ್ತು.

ಬಿಸಲುಮಹಡಿಯ ಮೇಲೆ ಏನನ್ನೋ ಓದುತ್ತಾ ಕುಳಿತಿದ್ದ ರೋಹಿಣಿಗೆ ಗೌರಿ ಬರುತ್ತಿರುವುದು ಕಾಣಿಸಿತು. ಅವಳ ಜೊತೆಯಲ್ಲಿ ಇನ್ಯಾರೊ ಇದ್ದಳೆನ್ನುವುದು ಕಾಣಿಸಿತು. ಏನೋ ರಂಪವಾಗುವುದೆಂದು ತಿಳಿದು ಪೋರ್ಟಿಕೊ ಹತ್ತಿರ ಬಂದು ಅವರಿಬ್ಬರನ್ನೂ ಒಳಗೆ ಕರೆದುಕೊಂಡು ಹೋದಳು. ಹೇಗೆ ಮಾತನಾಡಿಸಬೇಕೆಂದು ಗೌರಿ ಲೆಖ್ಖಾಚಾರ ಹಾಕುತ್ತಿದ್ದಳು. ಆವೇಶ ಬಂದವಳಂತೆ—

"ಇವಳನ್ನು ನೋಡಿದ್ದ್ಯಾ ರೋಹಿಣಿ" ಎಂದಳು.

"ಹೂಂ. ಇವಳ್ಯಾರು"

"ಗುರ್ತು ಸಿಗಲಿಲ್ಲವೆ.... ?"

"ಇಲ್ಲ ಗೌರಿ...."

"ನಿನಗೆ ಹೇಗೆ ಗುರ್ತು ಸಿಗಬೇಕು....ನನ್ನ ಗುರ್ತು ಸಿಕ್ಕದ್ದೂ ಹೆಚ್ಚೆ!"

"ಬರುತ್ತಲೇ ಹೇಗೆ ಮಾತನಾಡುತ್ತೀಯಲ್ಲ ಗೌರಿ.... ಯಾರು, ಗೊತ್ತಿಲ್ಲ ಅಂದರೆ ತಿಳಿಸಬೇಕು."

"ರತ್ನ....ಗೊತ್ತಿಲ್ಲವೆ ನಿನ್ನ ರಾಜನ ರತ್ನ."

ರೋಹಿಣಿಗೆ ಮುಖದ ಮೇಲೆ ಹೊಡೆದಂತಾಯ್ತು. ರಾಜನಿಂದ ರತ್ನಳ ಮುಖ ಕಳೆಯಿಂದ ತುಂಬಿತ್ತೆಂದು ಅವಳಿಗೆ ತಿಳಿದಿತ್ತು. ಆದರೆ ರತ್ನಳನ್ನು

ನೋಡಿದ ತಕ್ಷಣವೇ ಅಯ್ಯೋ ಎನ್ನಿಸಿತು. ರತ್ನಳ ಮದುವೆಯಲ್ಲಿ ತೆಗೆಸಿದ್ದ ಚಿತ್ರವನ್ನು ನೋಡಿದ್ದಳು-ಎಂತಹ ಬದಲಾವಣೆ !

" ಪಾಪ !" ಎಂದಿಷ್ಟೇ ಅವಳ ಬಾಯಿಂದ ಹೊರಬಿತ್ತು.

" ನಿನಗೂ ಅಯ್ಯೋ ಪಾಪ ಎನ್ನಿಸುವುದೆ ? "

" ಬಳಸಿ ಬಳಸಿ ಏಕೆ ಮಾತನಾಡುತ್ತೀ ಗೌರಿ. ನೀನು ಕೇಳಬೇಕೂ ಅಂತ ಇರುವುದು ನನಗೆ ಗೊತ್ತು. "

" ಕಣ್ಣು ಕಸಿದುಕೊಂಡ ದೇವರು, ರೂಪವನ್ನೂ ಕಿತ್ತುಕೊಂಡ. "

" ಪಾಪ ! "

" ನೀನು ಗಂಡನನ್ನು ಕಸಿದುಕೊಳ್ತೀಯ....ಇದು ನ್ಯಾಯವೆ ?" ಗೌರಿಯ ಮಾತೇನೋ ಬಿಸಿ ಏರಿತ್ತು. ರೋಹಿಣಿಗೆ ತುಂಬಾ ಕೋಪ ಬಂದು ಹುಬ್ಬುಗಂಟಿಕ್ಕಿ ಮಾತನಾಡಲು ಹವಣಿಸುವಲ್ಲೇ ಗೌರಿ—

" ರೋಹಿಣಿ ! ನೀನು ಏನು ಬೇಕಾದರೂ ಮಾಡಬಹುದು, ಮನ ಬಂದಂತೆ ನಡೆಯಬಹುದು. ದುಡ್ಡಿನ ಬೆಂಬಲವಿದೆ, ಜನ ಚೆನ್ನು ಎನ್ನುತ್ತಾರೆ. ಆದರೆ, ಇವಳೇನು ಮಾಡಬೇಕು.... ನಿನ್ನಂತೆಯೇ ಬೇರೆಯವನನ್ನು ಮೋಹಿಸಲು ಸಾಧ್ಯವೆ?" ಎಂದು ಸರಸರನೆ ನುಡಿದಳು.

" ನನ್ನಿಷ್ಟ....ನನಗೆ ಸರಿ ತೋರಿದಂತೆ ನಡೆಯುತ್ತೇನೆ. "

" ಒಪ್ಪಿದೆ....ಆದ್ರೆ ಇವಳ ಪಾಡು?"

" ಅದು ಅವಳ ಕರ್ಮ !"

" ಕರ್ಮವಲ್ಲವೆ ? ನಿನ್ನ ಗಂಡ ಅಲೆದಲೆದು ಎಷ್ಟು ಹೆಣ್ಮಕ್ಕಳನ್ನು ಕೆಡಿಸಿದ್ದಾನೋ....ನೀನು ಅವನಿಗೆ ಸರಿಯಾದ ಹೆಂಡ್ತಿ ಸಿಕ್ಕಿದ್ದೀ. ನಿನ್ನ ಗಂಡನ ಉದ್ದೇಶವನ್ನು ಸಾರ್ಥಕಗೊಳಿಸುತಿದ್ದೀ.... ಹೇಗೆ ಈ ಹೆಣ್ಣುಗಳ ಸರ್ವಸ್ವವನ್ನೂ ಕಿತ್ತುಕೊಂಡು.... "

" ಅವರ ಮಾತು ನೀನೇನು ಹೇಳಬೇಕಾಗಿಲ್ಲ" ಎಂದು ದುರುಗುಟ್ಟಿ ನೋಡಿದಳು ರೋಹಿ.

" ಹೀಗೆ ನಿನ್ನ ದಿನಗಳು ನಡೆಯಲಾರವು.... ಹೆಣ್ಣುಗಳ ಶಾಪ ನಿನಗೆ ತಟ್ಟದೆ ಇರದು. ಒಂದು ವೇಳೆ ನಿನ್ನಿಷ್ಟದಂತೆ ಅವನನ್ನು ಬಲೆಗೆ ಹಾಕಿ ಕೊಂಡರೂ ಅವನ ಹೆಂಡತಿ ಆಗಲಾರೆ....ಸಾಮಾನ್ಯ ವೇಶ್ಯೆ ಆಗುತ್ತೀ.... "

"ಹಲ್ಲು ಹಿಡಿದು ಮಾತನಾಡಿ...."

"ನಿನಗೆ ನಿಜ ಸಂಗತಿ ಬೇಕಾಗಿಲ್ಲ....ನಿನ್ನಿಷ್ಟ-ಒಂದು ಮಾತ್ರ ನೆನಪಿನಲ್ಲಿಡು. ಅಹಂಕಾರದಿಂದ ಹೀಗೆ ಮಾತನಾಡಿದ್ದೀ....ಬಿಡುವಿನಲ್ಲಿ ಯೋಚಿಸು ನಾನು ಹೇಳಿದ್ದು ಸರಿಯೋ ತಪ್ಪೋ?" ಎಂದು ಹೇಳಿ ಗೌರಿ ರತ್ನಳನ್ನು ಕೈಹಿಡಿದು ಕರೆದುಕೊಂಡು ಹೋದಳು. ಅವರಿಬ್ಬರು ಹೋಗುವುದನ್ನೇ ನೋಡುತ್ತಾ ರೋಹಿಣಿ ಒಂದೆರಡು ನಿಮಿಷ ಸ್ತಬ್ಧಳಾಗಿ ನಿಂತುಬಿಟ್ಟಳು.

೩೪

ರೋಹಿಣಿ ಸಿಡಸಿಡನೆಂದುಕೊಂಡು ತನ್ನ ಕೋಣೆಗೆ ಹೋದಳು. ಗೌರಿ ತನ್ನನ್ನು ಎಷ್ಟು ವಿಧದಲ್ಲಿ ಹೀಯಾಳಿಸಿದ್ದಳು. ರತ್ನಳ ಕರುಣಾಮಯ ಮುಖ ತನ್ನನ್ನೆಷ್ಟು ಚುಚ್ಚಿ ಬೇಡುತ್ತಿತ್ತು. ಅವಳ ನೋಟವಿನ್ನೂ ತನ್ನ ಮನಸಿನಲ್ಲಿ ನಾಟಿತ್ತು. ಮಂಚದ ಮೇಲೆ ಕುಸಿದುಬಿದ್ದು ಗೌರಿ ಹೇಳಿದ್ದನ್ನೇ ಯೋಚಿಸಿದಳು. "ನಿನ್ನ ಗಂಡ ಎಷ್ಟು ಹೆಣ್ಮಕ್ಕಳನ್ನು ಕೆಡಿಸಿದ್ದಾನೋ!" ವಿಶ್ವನಾಥ ಮೊದಮೊದಲು ತನಗೆ ಎಷ್ಟು ಕಷ್ಟ ಕೊಡುತ್ತಿದ್ದ. ಅವನೊಡನೆ ತನ್ನ ಬಾಳು ಎಷ್ಟು ಕಷ್ಟವಾಗಿತ್ತು. ವಿಶ್ವನಾಥ ಮಿಲಿಟರಿಗೆ ಸೇರಿದ ಮೇಲೆ ತನ್ನ ಜೀವನ ನೀರಸವಾಗಿತ್ತು. ರಾಜನನ್ನು ಒಮ್ಮೆ ಕಳೆದುಕೊಂಡು ದೆಹಲಿಯಲ್ಲಿ ಅಕಸ್ಮಾತ್ತಾಗಿ ಭೇಟಿಯಾದಾಗ ಪುನಃ ತನ್ನವನನ್ನಾಗಿ ಮಾಡಿಕೊಳ್ಳುವ ಪ್ರಯತ್ನ ಮಾಡಿದಳು. ಅಂದು ಗೌರಿ ರತ್ನಳನ್ನು ಕರೆದುಕೊಂಡು ಬಂದು ರಾಜನನ್ನು ಬಿಟ್ಟು ಕೊಡುವಂತೆ ಬೇಡಿದ್ದಳು. ಗೌರಿಗೆ ತಾನು ಒರಟಾಗಿ ಉತ್ತರ ಕೊಟ್ಟದ್ದು ಸರಿಯಾಗಿ ಕಾಣಲಿಲ್ಲ. ಮುಂಚೆ ಗೌರಿ ತನ್ನನ್ನು ಎಷ್ಟು ಪ್ರೀತಿಯಿಂದ ಕಾಣುತ್ತಿದ್ದಳು. ತಾನು ಗೌರಿಯನ್ನು ಅಕ್ಕನೆಂದು ಗೌರವಿಸಿದ್ದಳು. ಆ ಮನೆಗೆ ಎರಡು ಬಗೆದಂತಾಯ್ತಲ್ಲ ಎಂದು ಮನಸ್ಸೆಲ್ಲಾ ಕಲುಕಿ ಹೋಯಿತು.

ಸೇವಕನು ಬಂದು ಒಂದು ದಪ್ಪ ಕವರನ್ನು ತಂದು ಕೊಟ್ಟಾಗಲೇ ರೋಹಿಣಿಗೆ ಎಚ್ಚರ. ದೆಹಲಿಯಿಂದ ಬಂದ ಕಾಗದವಾದ್ದರಿಂದ ಕುತೂಹಲದಿಂದ ಒಡೆದು ನೋಡಿದಳು. ಎಷ್ಟೋ ದಿನಗಳಿಂದ ವಿಶ್ವನಾಥನ ವಿಷಯ ತಿಳಿಯದಿದ್ದು ಈಗ ಇಟಲಿಯಲ್ಲಿದ್ದನೆಂದೂ ಅಂಗಹೀನನಾದುದರಿಂದ ಭಾರತಕ್ಕೆ ಶುಕ್ರವಾರ ಬರುವನೆಂದೂ ಸೈನ್ಯದ ಇಲಾಖೆಯಿಂದ ಆ ಕಾಗದ

ಬಂದಿತ್ತು. ವಿಶ್ವನಾಥ ಅಂಗಹೀನ. ಎಡಗಾಲನ್ನು ಕಳೆದುಕೊಂಡಿದ್ದಾನೆ. ರೋಹಿಣಿಗೆ ದುಃಖ ಆವರಿಸಿಬಂತು. ಗೌರಿ ಬೆಳಿಗ್ಗೆ ಎಷ್ಟು ನೊಂದು ನುಡಿದಿದ್ದಳೋ ಆಗಲೇ ಶಾಪ ತಟ್ಟಿತ್ತು. ಚೆನ್ನಾಗಿ ಅತ್ತುಬಿಟ್ಟಳು. ಪುನಃ ವಿಷಯವನ್ನೆಲ್ಲಾ ವಿಮರ್ಶೆ ಮಾಡಿದಳು. ಕೊನೆಗೆ ಎಲ್ಲರಂತೆ ವಿಶ್ವನಾಥನೊಡನೆ ಬಾಳುವುದು ತನಗೂ ಅಲ್ಲದೆ ರತ್ನಳಿಗೂ ಕ್ಷೇಮವೆನಿಸಿತು. ಗೌರಿಯ ಮನೆಗೆ ಹೋಗಿ ತನ್ನ ನಿರ್ಧಾರವನ್ನು ತಿಳಿಸುವುದೆಂದು, ರೇಡಿಯೋ ಹಾಡುತ್ತಿದ್ದ ಸಂಗೀತದ ಜತೆಗೆ ಮೆಲ್ಲನೆ ಹಾಡಿದಳು.

ಸಾಯಂಕಾಲ ಐದು ಗಂಟೆಯ ಹೊತ್ತಿಗೆ ಅವರ ಮನೆಗೆ ರೋಹಿಣಿ ಬಂದುದು ಗೌರಿಗೆ ಆಶ್ಚರ್ಯವಾಯ್ತು. ಕಮಲಮ್ಮ ಮನೆಯಲ್ಲಿರಲಿಲ್ಲ. ರತ್ನ ತಲೆ ನೋವೆಂದು ಮಲಗಿದ್ದಳು. ಮನೆಯ ಮುಂದೆ ಬೊಗರಿಯನ್ನು ಆಡುತ್ತಿದ್ದ ವಸಂತನ ಕೈಹಿಡಿದು ರೋಹಿಣಿ ಮನೆಯ ಒಳಕ್ಕೆ ಬಂದಳು. ಗೌರಿ ಅವಳನ್ನು ಎದುರುಗೊಂಡು ರಾಜನ ಕೋಣೆಗೆ ಕರೆದುಕೊಂಡು ಹೋದಳು.

"ಬೆಳಿಗ್ಗೆ ನಿನ್ನೊಡನೆ ಒರಟೊರಟಾಗಿ ಮಾತನಾಡಿದೆ. ಕ್ಷಮೆ ಕೇಳೋಣವೆಂದು ಬಂದೆ" ಎಂದಳು ರೋಹಿಣಿ.

"ಅಷ್ಟು ದೊಡ್ಡ ಮಾತೇಕೆ....ಅನ್ನಬೇಕು ಎನ್ನಿಸಿರಬೇಕು ಅಂದೆ. ನಾನೇನು ಕಡಿಮೆ ಮಾತನಾಡಿದ್ದೇನು"

"ನಾನು ಪೂನಾಕ್ಕೆ ಮತ್ತೆ ಹೊರಟುಬಿಡ್ತೇನೆ....ಏನೋ ಯೋಚಿಸಿ ಇಲ್ಲಿಗೆ ಬಂದೆ....ನೀವು ನನಗೆ ಬೆಳಕನ್ನು ತೋರಿಸಿದ್ರಿ"

"ರೋಹಿ" ಎಂದು ಗೌರಿ ಅವಳನ್ನು ತಬ್ಬಿಕೊಂಡಳು. ಹಳೆಯ ಸ್ನೇಹ ಉಕ್ಕಿಬಂತು. ರೋಹಿಣಿ ವಿಶ್ವನಾಥನ ವಿಷಯ ಹೇಳಿದಳು. ಅವನಿಗೂ ಗೌರಿ ಮರುಗಿದಳು.

"ರತ್ನಮ್ಮ ಎಲ್ಲಿ ಗೌರಕ್ಕ ?"

"ಅಲ್ಲಿ ಮಲಗಿದ್ದಾಳೆ"

ರೋಹಿಣಿ ಮಲಗಿದ್ದ ರತ್ನಳ ಹತ್ತಿರ ಕುಳಿತು ಅವಳ ಮುಖವನ್ನು ಕೈಯಿಂದ ಸವರಿದಳು. ಏನೋ ಯೋಚಿಸುತ್ತಿದ್ದ ರತ್ನ ಎಚ್ಚತ್ತು ನೋಡಿದಳು. ರೋಹಿಣಿ ತನ್ನ ಹತ್ತಿರ ಕುಳಿತು ಮುಖವನ್ನು ಕೈಯಿಂದ ಸವರುತ್ತಿದ್ದಾಳೆ.

ಕಿಟಾರನೆ ಕಿರುಚಿ "ಅವರನ್ನು ಬಿಟ್ಟುಕೊಡು" ಎಂದು ಹೇಳಿ ಎದ್ದು ಕುಳಿತು ಸುತ್ತಲೂ ನೋಡಿದಳು. ಗೌರಿಯೂ ಹತ್ತಿರ ಇದ್ದಳು.

"ಅದಕ್ಕೇ ಬಂದಿದ್ದೇನೆ. ರತ್ನಕ್ಕ ನನ್ನನ್ನು ಕ್ಷಮಿಸಿಬಿಡು" ಎಂದು ರೋಹಿಣಿ ರತ್ನಳನ್ನು ತಬ್ಬಿಕೊಂಡಳು. ರತ್ನಳಿಗೆ ಮಾತೇ ಹೊರಡಲಿಲ್ಲ. ತಾನಿನ್ನೂ ಕನಸು ಕಾಣುತ್ತಿದ್ದೇನೆಂದು ಕಣ್ಣುಜ್ಜಿ ನೋಡಿದಳು. ನಿಜ–ತನ್ನ ತಪಸ್ಸು ಫಲಿಸಿತ್ತು. ಯಾವ ರೂಪಿನಿಂದ ತನ್ನ ರಾಜನನ್ನು ಕಳೆದುಕೊಳ್ಳುವುದರಲ್ಲಿದ್ದಳೋ ಅದೇ ರೂಪು ರೋಹಿಣಿಯಲ್ಲಿ ಪರಿವರ್ತನೆ ಉಂಟು ಮಾಡಿತ್ತು. ರೋಹಿಣಿ ತನ್ನ ಬೆರಳಲ್ಲಿದ್ದ ಉಂಗುರವನ್ನು ರತ್ನಳಿಗೆ ತೊಡಿಸಿ ತನ್ನನ್ನು ಕ್ಷಮಿಸಬೇಕೆಂದು ಮತ್ತೊಮ್ಮೆ ಕೇಳಿಕೊಂಡು ತನ್ನ ಕಾರಿನಲ್ಲಿ ಕುಳಿತು ನಡೆದಳು. ಬೀದಿಯಲ್ಲಿ ರಾಜ ಬರುತ್ತಿದ್ದ. ತಮ್ಮ ಮನೆಯಿಂದ ಆಗ ರೋಹಿಣಿ ಹೋದುದು ಅವನಿಗೆ ಆಶ್ಚರ್ಯವಾಯ್ತು. ತನಗಾಗಿ ತಮ್ಮ ಮನೆಯಲ್ಲಿ ಕಾದಿರುವುದಾಗಿ ಹೇಳಿದವಳು ನಮ್ಮ ಮನೆಗೇಕೆ ಬಂದಳು? ಅಲ್ಲದೆ ರೋಹಿಣಿಯ ಮನೆಯ ಸೇವಕ ಬುಧವಾರ ಪೂನಾಕ್ಕೆ ಎಲ್ಲರೂ ಹೊರಟು ಹೋಗುವುದಾಗಿ ತಿಳಿಸಿ ಸಂಬದಂತೆ ಮಾಡಿದ್ದ. ಇನ್ನು ರೋಹಿಣಿ ಮೈಸೂರಲ್ಲಿರುವುದು ಎರಡೇ ದಿನಗಳು. ಇದಕ್ಕೆಲ್ಲಾ ಗೌರಿಯೇ ಕಾರಣಳೆಂದು ಊಹಿಸುವುದು ಅವನಿಗೆ ಕಷ್ಟವಾಗಲಿಲ್ಲ. ರಾಜ ಅವಸರ ಅವಸರವಾಗಿ ಮನೆಗೆ ಬಂದ. ನಡುಮನೆಯಲ್ಲಿ ನಿಂತಿದ್ದ ಗೌರಿಯನ್ನು ದುರುಗುಟ್ಟಿ ನೋಡಿ ತನ್ನ" ಕೋಣೆಗೆ ಹೋಗಿ ಬಟ್ಟೆಯನ್ನು ಬಿಚ್ಚಿಟ್ಟು ಪುನಃ ಹಜಾರಕ್ಕೆ ಬಂದು" ಗೌರಿ" ಎಂದು ಕೂಗಿದ. ಗೌರಿ ಅವನನ್ನು ಆಶ್ಚರ್ಯದಿಂದ ನೋಡಿ "ಏನ ರಾಜಣ್ಣ" ಎಂದಳು.

"ಮನೆಯಲ್ಲೂ ಅಲ್ಲದೆ ಊರಿಗೆಲ್ಲಾ ಈ ವಿಷಯ ಸಾರುತ್ತಾ ಹೊರಟಿದ್ದೀ"

"ಹೌದು, ಇರುವುದೆ ಉಂಟಂತೆ. ಮುಚ್ಚುಮರೆ ಏನು ಎಲ್ಲರಿಗೂ ತಿಳೀಲಿ"

"ದೊಡ್ಡ ಕೆಲಸ ಮಾಡಿದೆ....ಹೋಗಲಿ. ರೋಹಿಣೀ ಮನೆಗೆ ಹೋಗಿದ್ಯಾ"

" ಹೋಗಿದ್ದೆ....ನಾನೊಬ್ಬಳೇ ಅಲ್ಲ, ರತ್ನಳನ್ನೂ ಕರೆದುಕೊಂಡು ಹೋಗಿದ್ದೆ "

" ಅದೇಕೆ ಹೋಗಿದ್ದು "

" ನನ್ನಿಷ್ಟ.... "

"ನಿನ್ನಿಷ್ಟ ಅಲ್ಲವೆ" ಇನ್ನು ಅವಳ ಹತ್ತಿರ ಮಾತನಾಡುವುದು ಪ್ರಯೋಜನವಿಲ್ಲೆಂದು ತಿಳಿದು ತನ್ನ ಕೋಣೆಗೆ ಹೋದ. ಕೋಣೆಯ ಬಾಗಿಲಲ್ಲಿ ರತ್ನ ಅಳುತ್ತಾ ನಿಂತಿದ್ದಳು. ಅವಳನ್ನು ನೋಡಿದಾಗ ರಾಜನಿಗೆ ಕೋಪ ಉಕ್ಕಿ ಬಂದು ರತ್ನಳ ಕೆನ್ನೆಗೊಂದು ಬಿಗಿದು ಕೋಣೆಯ ಬಾಗಿಲನ್ನು ಹಾಕಿಕೊಂಡು ಬಿಟ್ಟ. ರತ್ನ ಬಾಗಿಲಿನಲ್ಲಿ ಅಳುತ್ತಾ ನಿಂತುಬಿಟ್ಟಳು. ಗೌರಿ ರತ್ನಳ ಹತ್ತಿರ ಬಂದು ಸಮಾಧಾನಮಾಡಿದಳು. ರತ್ನ ಅವಳಿಂದ ಬಿಡಿಸಿಕೊಂಡು ರಾಜನ ಕೋಣೆಗೆ ಬಂದಳು. ತಲೆಯ ಮೇಲೆ ಕೈಇಟ್ಟುಕೊಂಡು ಯೋಚಿಸುತ್ತಾ ರಾಜ ಕುಳಿತಿದ್ದ. ಪಾಪ ! ಏನೂ ತಿಳಿಯದ ರತ್ನಳಿಗೆ ಹೊಡೆದುದು ತಪ್ಪೆಂದು ಅವನಿಗೂ ಅನ್ನಿಸಿತು. ರತ್ನ ಒಳಗೆ ಬಂದಾಗ ಅವಳನ್ನು ಕರೆದು ಮಂಚದ ಮೇಲೆ ಕೂಡಿಸಿಕೊಂಡ. " ರತ್ನ ಎಂತಹ ಏಟು ಬಿಗಿದೆನೆ " ಎಂದು ಅವಳ ಕೈಗಳನ್ನು ಹಿಡಿದು ಅದುಮಿದ. ರತ್ನಳಿಗೆ ದುಃಖ ಹೆಚ್ಚಾಗಿ ರಾಜನ ಎದೆಗೆ ತಲೆಯನ್ನಿಟ್ಟು ಅತ್ತಳು. ರಾಜ ಅವಳ ಕೈಯನ್ನು ಸವರಿದಾಗ ಬೆರಳಿಗೆ ರೋಹಿಣಿಯ ಉಂಗುರ ಇದ್ದುದನ್ನು ನೋಡಿದ ಅವನಿಗೆ ಆಶ್ಚರ್ಯವಾಯ್ತು.

" ರತ್ನ.... "

" ಸ್ವಾಮಿ.... "

" ನಿನ್ನನ್ನು ಕೆಲಸದವಳಿಗಿಂತ ಕಡೆಯಾಗಿ ಕಾಣುತ್ತಿದ್ದೇನಲ್ಲವೆ?"

" ನಿಮ್ಮ ದಾಸಿಯಾಗಿರಲು ಅದೃಷ್ಟ ಇದೆ. "

" ಅವಳು ಏನು ಹೇಳಿದಳು.... "

" ........ನನ್ನನ್ನು ಪ್ರೀತಿಯಿಂದ ಕಂಡಳು. "

ರಾಜ ರತ್ನಳನ್ನು ಸಮಾಧಾನ ಮಾಡಿದ. ರೋಹಿಣಿಯ ಮನಸ್ಸನ್ನು ಹೇಗೆ ಬದಲಾಯಿಸಿದಳೆಂದು ಗೌರಿಯನ್ನು ಶ್ಲಾಘಿಸಿದ. ಅವಳಿಗೆ ಬೈದಿದ್ದಕ್ಕೆ ತನ್ನ ಪರವಾಗಿ ಕ್ಷಮೆ ಬೇಡೆಂದು ರತ್ನಳಿಗೆ ಹೇಳಿದ. ರೋಹಿಣಿಯನ್ನು ಅವಳು ಹೋಗುವ ಮುಂಚೆ ಒಂದು ಸಾರಿ ನೋಡಬೇಕೆಂದುಕೊಂಡ.

ರಾಜನ ಕೋಣೆಯಿಂದ ಹೊರಗೆ ನಗು ಮುಖದಿಂದ ಬಂದ ರತ್ನಳನ್ನು ನೋಡಿ ಸಂತೋಷವಾಯ್ತು. “ಸಾಯುವವರೆಗೂ ನಿಮ್ಮನ್ನು ನೆನೆಸಿಕೊಳ್ಳುತ್ತೀನೆ....ನನ್ನ ಮನೆ ಸರಿ ಮಾಡಿದ್ರಿ ” ಎಂದಳು.

“ರತ್ನ, ಏನಾದ್ರೂ ಅಂದ್ನೇನೆ” ಎಂದಳು ಗೌರಿ.

“ಇಲ್ಲ ಪಶ್ಚಾತ್ತಾಪಪಟ್ಟರು. ”

ಆ ಹೊತ್ತಿಗೆ ರಾಜ ಹಜಾರಕ್ಕೆ ಬಂದಿದ್ದ. ಗೌರಿ ರತ್ನಳ ಕಡೆ ತಿರುಗಿ “ಆ ಕೋಣೆಯಲ್ಲಿರುವ ನನ್ನ ಟ್ರಂಕನ್ನು ತೆಗೆದುಕೊಡೆ. ಇನ್ನೊಂದು ನಿಮಿಷ ಈ ಮನೆಯಲ್ಲಿರಲಾರೆ” ಎಂದಳು.

“ಏಕೆ ಗೌರಕ್ಕ ”

“ನಾನು ಈ ಮನೆಯಲ್ಲಿ ಹೇಗಮ್ಮಾ ಇರುವುದು. ನಿನ್ನ ಗಂಡನಿಗೆ ಇಷ್ಟವಿಲ್ಲ.... ”

“ರತ್ನ, ಟ್ರಂಕು ನಮ್ಮದು. ಕೊಡೋದಕ್ಕಾಗುವುದಿಲ್ಲ ಅಂತ ಹೇಳು” ಎಂದ ರಾಜ.

“ಅದೂ ಇಟ್ಟುಕೊಳ್ಳಲಿ....ಗೌರಕ್ಕ ಒಬ್ಬರೇ ಹೋಗ್ತಾರಂತೆ ಏನು ಮಾಡುವುದು ಅಂದ್ರೆ ” ಎಂದು ಹೇಳಿ ನಕ್ಕಳು ರತ್ನ.

ರಾಜ ಗೌರಿಯ ಹತ್ತಿರ ಬಂದು “ಏಕೆ ಗೌರಿ ಹೀಗೆ ಹೇಳ್ತೀಯಾ ”

“ನನಗೀ ಮನೆಯಲ್ಲಿ ಸ್ಥಳವಿಲ್ಲವಲ್ಲಪ್ಪಾ ”

“ಯಾರು ಹೇಳಿದ್ರು ಹಾಗಂತ ”

“ನನಗೆ ಹಾಗೆ ತೋರಿದೆ.... ”

“ಮನೆ ನಿನ್ನದು.... ನಿನಗೆ ಸ್ಥಳವಿಲ್ಲವೆ ”

“ಸಧ್ಯ ಅಮ್ಮ ಹಾಗಂತ ಕೇಳಿದ್ರೆ ಮಾಡ್ತಾಳೆ ನನಗೆ ಸರಿಯಾಗಿ”

“ಇನ್ನೂ ನನ್ನ ಮನಸ್ಸು ಅರ್ಥವಾಗಲಿಲ್ಲವೆ? ಗೌರಿ, ಎಡವಿದೆ, ಅಂಧಕಾರದಲ್ಲಿದ್ದ ನನಗೆ ಬೆಳಕು ತೋರಿಸಿದೆ .... ”

“ಇಲ್ಲಪ್ಪ.... ನಾನು ಬೇರೆ ಹೊರಟು ಹೋಗ್ತೀನೆ....ಎಷ್ಟು ದಿವಸ ಅಂತ ಇಲ್ಲಿರೋದು. [illegible] ಎಲ್ಲಾದರೂ ರಾಮಾ ಕೃಷ್ಣಾ ಅಂತ ಇದ್ದು ಬಿಡ್ತೀನೆ....

ಆಟದಿಂದ ಹಿಂತಿರುಗಿದ ಸರಸು "ನಾನಿಲ್ಲೇ ಇರ್ತೀನೆ, ನೀನು ಬೇಕಾದ್ರೆ ಹೋಗಮ್ಮ" ಎಂದಳು. ಅವಳ ಮಾತಿನಿಂದ ಎಲ್ಲರಿಗೂ ನಗು ಬಂದಬಿಡ್ತು. ಕಮಲಮ್ಮ ಪುರಾಣದಿಂದ ಹಿಂತಿರುಗಿದಾಗ ಮನೆಯು ಹುಟ್ಟಿ ಬದಲಾಯಿಸಿತ್ತು. ಹಿಂದಿನ ಆನಂದ ಪುನಃ ಬರಲು ಕಾರಣವೇನೆಂದು ತಿಳಿಯದೆ ಕಮಲಮ್ಮ ಆಶ್ಚರ್ಯಪಟ್ಟಳು. ರಾತ್ರಿ ಮಲಗುವಾಗ ಗೌರಿ ಹೇಳದಿದ್ದರೆ ಅವಳಿಗೆ ತಿಳಿಯುತ್ತಲೇ ಇರಲಿಲ್ಲ.

೩೫

ಬುಧವಾರ ಬಂದೇ ಬಂತು. ರೋಹಿಣಿ ಅಂದು ಮೈಸೂರಿನಿಂದ ಹೊರಟುಬಿಡುವ ದಿನ. ರಾಜನಿಗೆ ಅವಳನ್ನು ಮರೆಯುವ ದಿನ. ಮೊದಲೆ ನಿರ್ಧರಿಸಿದಂತೆ ರಾಜ ವಸಂತನನ್ನೆತ್ತಿಕೊಂಡು ರೋಹಿಣಿಯ ಮನೆಗೇ ಬಂದ. ರೋಹಿಣಿಯ ಮನೆಯ ಸೇವಕ ವಸಂತನನ್ನು ಆಡಿಸಲು ಕರೆದುಕೊಂಡು ತೋಟದ ಉಯ್ಯಾಲೆಯ ಹತ್ತಿರ ಹೋದ. ರಾಜ ಮೆಲ್ಲನೆ ಮಹಡಿಯ ಮೆಟ್ಟಲನ್ನು ಹತ್ತಿ ಹಜಾರಕ್ಕೆ ಬಂದ. ರೋಹಿಣಿ ತನ್ನ ಕೊಠಡಿಯಲ್ಲಿ ಬಟ್ಟೆಬರೆಗಳನ್ನೆಲ್ಲಾ ಟ್ರಂಕಿನಲ್ಲಿಡುತ್ತಿದ್ದಳು. ರಾಜ ಅಲ್ಲಿಗೆ ಬಂದುದು ಅವಳಿಗೆ ಆಶ್ಚರ್ಯವನ್ನುಂಟುಮಾಡಿತು.

" ಬನ್ನಿ ! ಹೋಗುವಾಗ ನಾನೇ ಬಂದು ಮಾತನಾಡೋಣ ಅಂತಿದ್ದೆ " ಎಂದು ರೋಹಿಣಿ ಎದುರುಗೊಂಡಳು.

ಇಬ್ಬರೂ ದುಂಡುಮೇಜಿನ ಹತ್ತಿರ ಕುಳಿತರು. ರಾಜನೇ ಮಾತನಾಡಲು ಆರಂಭಿಸಿದ. " ನಿನ್ನ ನಿರ್ಧಾರವನ್ನೇಕೆ ಬದಲಾಯಿಸಿದೆ. ರೋಹಿ!"

"ಹೌದು ಬದಲಾಯಿಸಿದೆ ಏತಕ್ಕೆ....ಏತಕ್ಕೆ....ನನಗೆ ತಿಳಿಯದು...."

" ಎಷ್ಟು ಬೇಗ ಮನಸ್ಸನ್ನು ಬದಲಾಯಿಸಿಬಿಟ್ಟೆ "

" ನೀವು ನನ್ನ ಮಾತನ್ನು ಇನ್ನೂ ನಂಬುತ್ತಿಲ್ಲ ಅಲ್ಲವೆ? ಹಾಗಾದರೆ ಕೇಳಿ. ನಾನು ಮಾಡುತ್ತಿದ್ದುದು ಸರಿಯಲ್ಲ ಎಂದು ತಿಳಿದಕ್ಷಣ ನಿರ್ಧಾರ ಬದಲಾಯಿಸಿದೆ. ರಾಗ ದ್ವೇಷಗಳಲ್ಲಿ ಮುಳುಗಿದ್ದ ನನಗೆ ಗೌರಕ್ಕ ದಾರಿ ತೋರಿಸಿ ಉಪಕಾರ ಮಾಡಿದರು. ನಿಮಗೆ ಅನ್ಯಾಯ ಮಾಡಿದ್ದೇನೆಯೆ ?"

" ಏನು ಮಾತು ರೋಹಿ "

" ಕ್ಷಮಿಸಿ ನನ್ನನ್ನು.... "

" .... .... .... "

" ಒಂದು ನಿಮಿಷ....ನಿಮಗೆ ಮಾತುಕೊಟ್ಟಂತೆ ನಡೆಯಲಿಲ್ಲ. ಅಲಕ್ಷ್ಯ ದಿಂದ ಎಷ್ಟೋ ವರ್ಷಗಳನ್ನು ಕಳೆದು ಪಾಪದ ಸೋಪಾನಗಳನ್ನು ಮೆಲ್ಲಗೆ ಇಳಿಯುತ್ತಿದ್ದೆ. ಉದಾಸೀನ, ಜಂಭ, ಐಶ್ವರ್ಯದ ಮದದಲ್ಲಿ ತುಂಬಿರುವ ನನ್ನನ್ನು ಕಂಡು ನಗಬೇಡಿ....ಮರುಕ ತೋರಿಸಿ. "

" ಹೌದು ರೋಹಿಣಿ....ನಾನೂ ಅಂಧನಾಗಿದ್ದೆ....ಬೇಗ ತಿದ್ದಿಕೊಂಡೆ ನಲ್ಲ.... "

" ಇನ್ನು ನಿಮ್ಮ ಪ್ರೇಮ ಪ್ರೀತಿ ಆದರಗಳೆಲ್ಲಾ ರತ್ನಳಿಗೆ....ಅವಳು ಬೇಗ ಸಾಧಿಸಿದಳು. ನಾವಿನ್ನೂ ಬಹುದೂರ ಇದ್ದೇವೆ.... "

" ಆದರೆ ದೇವರು ನಿನಗೆ ಅನ್ಯಾಯಮಾಡಿದಾ ರೋಹಿ "

"ಅದೇ ತಪ್ಪುತಿಳುವಳಿಕೆಯಿಂದ ನಾನು ಸುಖವನ್ನು ಕಾಲಿನಿಂದೊದ್ದೆ. ವಿಶ್ವನಾಥನನ್ನು ಹೊಂದುಕೊಂಡು ಬಾಳಿದ್ದರೆ ಅದರ ರೀತಿಯೇಬೇರೆ. "

"............ನಿನ್ನನ್ನು ಜೀವನಪರ್ಯಂತ ಮರೆಯಲಾರೆ....ರೋಹಿ !"

" ನಿಮ್ಮನ್ನು ಮರೆಯಲು ಪ್ರಯತ್ನಿಸುತ್ತೇನೆ. ಈ ಸಾರಿ ಜಯಸಿದ್ಧ. ಆದರೆ ರತ್ನಳ ದಿವ್ಯ ಜ್ಯೋತಿಯನ್ನೆಂದೂ ಮರೆಯಲಾರೆ. ಅವಳು ನನ್ನೊ ಡನೆ ಬಹಳ ದಿನದ ಪರಿಚಯವಿಲ್ಲದಿದ್ದರೂ ಮಾತನಾಡದಿದ್ದರೂ ಆ ಒಂದೇ ಕ್ಷಣದಲ್ಲಿ ನನಗೆ ಸರಿ ತಪ್ಪು ಯಾವುದು ಎನ್ನುವುದನ್ನು ತೋರಿಸಿಕೊಟ್ಟ ಅಮೋಘ ಶಕ್ತಿ ಅವಳಲ್ಲಿದೆ. ಆ ಜ್ಯೋತಿಯನ್ನೇ ಆದರ್ಶವನ್ನಾಗಿಟ್ಟುಕೊಂಡು ಪುನಃ ಇದ್ದು ಬಾಳಲು ಪ್ರಾರಂಭಿಸುತ್ತೇನೆ. ನನ್ನ ಗಂಡನನ್ನು ಸೇರುತ್ತೇನೆ" ಎಂದು ಎಲ್ಲವನ್ನೂ ಆವೇಶದಿಂದ ರೋಹಿಣಿ ನುಡಿದಳು.

ಆ ವೇಳೆಗೆ ವಸಂತನಾಗಲೇ ಮಹಡಿಯ ಮೇಲೆ ಬಂದಿದ್ದ. ರೋಹಿ ಅವನನ್ನೆತ್ತಿಕೊಂಡು ಮುದ್ದಾಡಿ ಕಣ್ಣೀರಿಟ್ಟಳು. ವಸಂತನಿಗೆ ತಿನ್ನಲು ಬಿಸ್ಕತ್ತು ಕೊಟ್ಟಳು; ಆದರಿಸಿದಳು.

ಎಷ್ಟೋ ಮಾತನಾಡಬೇಕೆಂದು ಬಂದಿದ್ದ ರಾಜನಿಗೆ ಇನ್ನೇನು ಮಾತ ನಾಡಬೇಕೋ ತಿಳಿಯಲಿಲ್ಲ. ವಸಂತನನ್ನು ಕರೆದುಕೊಂಡು ಹೊರಡಲು ಎದ್ದುನಿಂತ. ರೋಹಿಣಿ ಬೀಳ್ಕೊಟ್ಟಳು. ರೇಡಿಯೋದಲ್ಲಿ ಚಲನಚಿತ್ರದ

ಸಂಗೀತ ಕೇಳಿ ಬರುತ್ತಿತ್ತು. ಕಣ್ಣನ್ ಹಾಡುತ್ತಿದ್ದಳು. "ದೂರ ದೇಶಕಾ ರಹನೆವಾಲಾ........" ಎಂದು. ರಾಜ ಮೆಲ್ಲನೆ ಮೆಟ್ಟಿಲನ್ನು ಇಳಿದು ಗೇಟಿನ ವರೆಗೆ ನಡೆದು ಬಂದ. ಬಿಸಿಲುಮಹಡಿಯಿಂದ ಅವನು ಹೋಗುವುದನ್ನೇ ರೋಹಿಣಿ ನೋಡುತ್ತಾ ನಿಂತಿದ್ದಳು. ಮಧುರಗಾನದಲ್ಲಿ ಅವಳು ಮೈಮರೆತಳು. ಮಧ್ಯೆ ಮಧ್ಯೆ ತಂದೆಯ ಜೊತೆಗೆ ಹೋಗುತ್ತಿದ್ದ ವಸಂತ ಹಿಂತಿರುಗಿ ರೋಹಿಣಿಯನ್ನು ನೋಡಿ ಅವಳ ಉದ್ವೇಗ ಹೆಚ್ಚಿಸುತ್ತಿದ್ದ. ಅವರಿಬ್ಬರೂ ಗೇಟನ್ನು ದಾಟಿದಮೇಲೆ ಒಮ್ಮೆ ರಾಜ ರೋಹಿಣಿಯ ಮನೆಯಲ್ಲವನೂ ದೃಷ್ಟಿಸಿ, ಪಾದರಿಗಿಡವನ್ನು ನೋಡಿ ಕಣ್ಮರೆಯಾದ. ಅವರು ಕಣ್ಮರೆಯಾಗುವ ವರೆಗೂ ನೋಡುತ್ತಾ ನಿಂತಿದ್ದ ರೋಹಿಣಿ ಹಿಂತಿರುಗಿದಳು. ಕಣನ್ ಹೇಳುತ್ತಿದ್ದ ಮಧುರ ಸಂಗೀತದಲ್ಲಿ ಅವಳ ಮನಸ್ಸು ಹೊಯ್ದಾಡುತ್ತಿತ್ತು. ಅವಳ ಬಾಯಿಂದಲೂ "ದೂರ ದೇಶಕಾ ರಹನೆವಾಲಾ........" ಎಂದು ಹೊರಬಿದ್ದು ರೇಡಿಯೋ ಸಂಗೀತದ ಜೊತೆಗೆ ಹಾಡಿದಳು.

## ೩೬

ಪೂನಾಕ್ಕೆ ಬಂದು ಸೇರುವ ಹೊತ್ತಿಗೆ ರೋಹಿಣಿಯ ಮನಸ್ಸು ಸ್ತಿಮಿತಕ್ಕೆ ಬಂದಿತ್ತು. ಮನೆಗೆ ಬಂದವಳೆ ವಿಶ್ವನಾಥನ ವಿಷಯವನ್ನು ಸುಂದರಮ್ಮನಿಗೆ ತಿಳಿಸಿದಳು. ತಮ್ಮ ಊರಿಗೆ ಬರುವನೆಂಬ ಸಂತೋಷದ ಹೊರತು ಸುಂದರಮ್ಮನಿಗೆ ಮನಸ್ಸು ಸಮಾಧಾನವಾಗಲಿಲ್ಲ. ಮಾರನೆಯ ದಿನ ಬರುವ ವಿಶ್ವನಾಥನಿಗೆ ಇರಲು ಕೋಣೆ ಸರಿಪಡಿಸಿದ್ದಲ್ಲದೆ ಕೆಲವು ಬಟ್ಟೆಬರೆಗಳನ್ನು ತೆಗೆದಿಟ್ಟಳು.

ಶುಕ್ರವಾರ ಬೆಳಿಗ್ಗೆ ಹತ್ತು ಗಂಟೆಯ ವೇಳೆಗೆ ರೆಡ್‌ಕ್ರಾಸವ್ಯಾನಿನಲ್ಲಿ ವಿಶ್ವನಾಥನನ್ನು ಕರೆದುಕೊಂಡು ಬಂದಿದ್ದರು. ಬೆಳಿಗ್ಗೆ ಬೊಂಬಾಯಿಂದ ಹೊರಟು ಪೂನಾಕ್ಕೆ ಬಂದಿದ್ದ. ಇಬ್ಬರು ಸೈನಿಕರ ಹೆಗಲಿಗೆ ಕೈಕೊಟ್ಟು ಮೆಲ್ಲನೆ ಮುಂದಿನ ಕೋಣೆಗೆ ವಿಶ್ವನಾಥ ಬಂದ. ರೋಹಿಣಿ ಅವನಿಗಾಗಿ ಕಾದಿದ್ದಳು. ವಿಶ್ವನಾಥನನ್ನು ನೋಡಿ ಅವಳಿಗೆ ಅಯ್ಯೋ ಎನ್ನಿಸಿತು. ಮುಖದಲ್ಲಿ ಮುಂಚಿನ ದುಗುಡವಿಲ್ಲದೆ ತಾಳ್ಮೆ ಇತ್ತು. ಅವನಿಗೆ ಉಪಹಾರ ಕೊಟ್ಟು ಬೇಕಾದಷ್ಟು ಮಾತನಾಡಿದಳು. ರೋಹಿಣಿ ಮನಸ್ಸಿನಲ್ಲೇ ತರ್ಕಿಸಿ, ತನ್ನ ಮಗುವನ್ನು ನೋಡಿಕೊಳ್ಳುವಂತೆ ವಿಶ್ವನಾಥನನ್ನು ನೋಡಿಕೊಳ್ಳಬೇಕೆಂದು

ಶೀರ್ವದಿಸಿದಳು. ಚಕ್ರದ ಕುರ್ಚಿಯಲ್ಲಿ ಕುಳಿತು ಮನೆಯ ಹತ್ತಿರವಿದ್ದ ತೋಟದಲ್ಲಿ ಓಡಾಡುವುದೇ ಅವನಿಗೆ ಒಂದು ಬಗೆಯ ಶಾಂತಿಯನ್ನು ಕೊಡುತ್ತಿತ್ತು.

ಆ ದಿನ ಸಾಯಂಕಾಲ ವಿಶ್ವನಾಥನನ್ನು ಚಕ್ರದ ಕುರ್ಚಿಯಲ್ಲಿ ಕುಳ್ಳಿರಿಸಿ ತೋಟದಲ್ಲಿ ತಳ್ಳುತ್ತಿದ್ದಳು ರೋಹಿಣಿ. ಹತ್ತಿರವಿದ್ದ ಕಲ್ಲುಬೆಂಚಿನ ಸಮೀಪದಲ್ಲಿ ನಿಲ್ಲಿಸಿ ಬೆಂಚಿನಮೇಲೆ ಕುಳಿತು ಗೀತಾಂಜಲಿಯನ್ನು ಓದುತ್ತಿದ್ದಳು. ಗೀತಾಂಜಲಿಯೆಂದರೆ ವಿಶ್ವನಾಥನಿಗೆ ಪ್ರಾಣ. ದಿನಕ್ಕೆ ಒಂದು ಗಂಟೆಯ ಹೊತ್ತಾದರೂ ಓದಿ ಅಥವಾ ಓದಿಸಿ ಕೇಳದಿದ್ದರೆ ಆಗದು. ಇದ್ದಕ್ಕಿದ್ದ ಹಾಗೆಯೇ ವಿಶ್ವನಾಥ “ ರೋಹಿ ! ನಿನ್ನ ಭವಿಷ್ಯ ಹೀಗಾಯ್ತು.”

“ ................ ”

“ ಈಗಲೂ ನೀನು ರಾಜನನ್ನು ಸೇರಲು ನನ್ನ ಒಪ್ಪಿಗೆಯಿದೆ.”

“ ನನಗೆ ಇಲ್ಲ....”

“ ಸಾಯುವ ವರೆಗೂ ನನ್ನ ಗೋಳಿನಲ್ಲೇ ಕಾಲಕಳೆಯುತ್ತೀಯಾ ?”

“ ನನ್ನ ಕೆಲಸ ಇದು....ಸರಿಯಾಗಿ ಮಾಡಿ ಮುಗಿಸುವುದೇ ನನ್ನ ಕೆಲಸ ” ಎಂದಳು.

ಸೇವಕ ಬಂದು ಮೈಸೂರಿಗೆ ರಿಜಿಸ್ಟಾರ್ಡ್ ಕಾಗದ ಕಳುಹಿಸಿವೆ ಎಂದು ಹೇಳಿ ಹೊರಟು ಹೋದ.

“ ಆ ಪತ್ರವನ್ನೂ ಕಳುಹಿಸಿದೆ....ನಿಮಗೆ ಒಪ್ಪಿಗೆ ತಾನೆ ” ಎಂದಳು ರೋಹಿ. ವಿಶ್ವನಾಥ “ ನಿನ್ನಿಷ್ಟ....” ಎಂದ. ತುಂಬಿದ ಕಣ್ಣಿನಿಂದ ರೋಹಿಣಿ ವಿಶ್ವನಾಥನನ್ನು ನೋಡಿದಳು. ಅವನೂ ಕಣ್ಣೀರಿಟ್ಟಿದ್ದ. ಅಲ್ಲದೆ ಅವರಿಗೆ ಹೇಗೆ ಅನ್ನಿಸಿರಬೇಕು ?

× × × ×

ಈಗ ರೋಹಿಣಿ ಮನೆಯ ಹೆಸರು “ ಆನಂದ ವಿಲಾಸ ”ವಲ್ಲ. ಆನಂದ ವಿಲಾಸವೇ ‘ ಪ್ರೇಮಧಾಮ’ವಾಗಿದೆ. ಪ್ರೇಮಧಾಮದಲ್ಲೀಗ ರಾಜ, ಅವನ ತಾಯಿ, ಅಕ್ಕ, ರತ್ನ ಮತ್ತು ಹುಡುಗರೊಂದಿಗೆ ವಾಸಮಾಡುತ್ತಿದ್ದಾನೆ. ರೋಹಿಣಿ ಪೂನಾಕ್ಕೆ ಹೋದಮೇಲೆ ಆ ಮನೆಯನ್ನು ರಾಜನಿಗೆ

ಪ್ರೇಮದ ಕಾಣಿಕೆಯಾಗಿ ಕೊಟ್ಟಿದ್ದಳು. ಅವಳ ಇಷ್ಟದಂತೆ ಆ ಮನೆಯ ಹೆಸರೂ ಪ್ರೇಮಧಾಮವಾಗಿ ಮಾರ್ಪಟ್ಟಿತು.

ಭಾನುವಾರದ ದಿನ ಬೆಳಿಗ್ಗೆ ರಾಜ ತೋಟದ ಸುತ್ತಲೂ ಸುತ್ತಾಡಿ ಬಂದ. ಪೋರ್ಟಿಕೋದಿಂದ ವಸಂತ ನಾಯಿ ಜಾನಿಯ ಜೊತೆಗೆ ಅವನ ಹತ್ತಿರಕ್ಕೆ ಓಡಿ ಬರುತ್ತಿದ್ದ. ರಾಜ ಗೇಟಿನ ಹತ್ತಿರ ಬಂದು ಪಾದರಿ ಗಿಡದ ಹತ್ತಿರ ನಿಂತು ಸುತ್ತಲೂ ನೋಡಿದ. ಪಾದರಿಗಿಡದ ನೆರಳು ತಂಪನ್ನಲ್ಲದೆ ಕಂಪನ್ನೂ ಬೀರಿತ್ತು. ಒಂದೊಂದಾಗಿ ಪಾದರಿಗಿಡದ ಹೂವು ಅವನ ಮೇಲೆ ಬೀಳುತ್ತಿತ್ತು. ರಾಜ ಬಾಗಿಲಿನಿಂದ ಮನೆಯ ಕಡೆ ನೋಡಿದ. ಆ ಮನೆಯ ಜೊತೆಗೆ ಎಷ್ಟು ನೆನಪು ಬಳಸಿ ಬಂದಿತ್ತು. ರೋಹಿಣಿಯ ಸ್ನೇಹ, ಪ್ರೇಮಾಂಕುರ, ನಿರಾಕರಣೆ, ಪ್ರೇಮಯಾಚನೆ, ಪ್ರೇಮಕಾಣಿಕೆ ಎಲ್ಲವೂ ಜ್ಞಾಪಕಕ್ಕೆ ಬಂದುವು. ರೋಹಿಣಿಯ ಮನಸ್ಸನ್ನು ಅಳೆಯಲಾರದೆ ಹೋದ ದಾರಿ ತಪ್ಪುವುದರಲ್ಲಿದ್ದ. ತನ್ನನ್ನು ಹಿಡಿದು ನಿಲ್ಲಿಸಿದ ಗೌರಿಯನ್ನು ನೆನೆಸಿ ಕೊಂಡ. ರೋಹಿಣಿ ಬರೆದಿದ್ದ ಕಾಗದ ನೆನೆಸಿಕೊಂಡಾಗ ರತ್ನ ನನಗೆ ನಿಜ ವಾದ ಪ್ರೇಮ ಯಾವುದು ಎನ್ನುವುದನ್ನು ತೋರಿಸಿಕೊಟ್ಟಳು. ಪ್ರೇಮಕ್ಕಾಗಿ ಎಲ್ಲಿಯೂ ಅಲೆಯಬೇಕಾಗಿಲ್ಲ. ನಿನ್ನಲ್ಲಿಯೇ ಇದೆ ಎಂದು ತೋರಿಸಿಕೊಟ್ಟಳು ಎಂದು ತನ್ನ ವಿವೇಕ ನುಡಿಯಿತು. ಹಾಗೆಯೇ ಯೋಚಿಸುತ್ತಾ ರಾಜ ನಿಂತಿದ್ದ. ವಸಂತ ಸರಸಳೊಂದಿಗೆ ರಾಜನ ಹತ್ತಿರ ಓಡಿ ಬಂದು ಅವ ನನ್ನು ರನ್ನಿಂಗ್‌ರೇಸ್‌ಗೆ ಬರ್ತೀಯಾ ಎಂದು ಕೂಗಿದ. "ಅಣ್ಣಾ ಒನ್ ಟೂ ತ್ರೀ ಅಪ್" ಎಂದು ವಸಂತ ಹೇಳಿ ಮನೆಯ ಕಡೆ ಓಡಿದ; ಸರಸು, ನಾಯಿ ಜಾನಿ ಓಡಿದರು. ರಾಜನೂ ಹುಡುಗರ ಜೊತೆಗೆ ಓಡಿದ. ಮಹಡಿಯ ಮೇಲೆ ನಿಂತಿದ್ದ ಕಮಲಮ್ಮನಿಗೆ ಹುಡುಗರ ಜೊತೆಯಲ್ಲಿ ಹುಡುಗನಾಗಿದ ರಾಜನನ್ನು ನೋಡಿ ನಗು ಬಂತು.

ರಾಜ ಹುಡುಗರ ಜೊತೆಗೆ ಓಡುತ್ತಿದ್ದ. ಅದೇ ತೋಟ, ಅದೇ ಪೋರ್ಟಿಕೋ, ಮಹಡಿಗೆ ಹತ್ತುವ ಮೆಟ್ಟಲು-ಧಡಧಡನೆ ಹತ್ತಿದ. ರೋಹಿಣಿ ಇರುತ್ತಿದ್ದ ಕೋಣೆಗೆ ಓಡಿದ. ರತ್ನ ಸೋಫಾದ ಮೇಲೆ ಕುಳಿತು ರೇಡಿಯೊ ಸಂಗೀತ ಕೇಳುತ್ತಿದ್ದಳು. ರಾಜ ಬಂದವನೆ ಹಿಂದಿನಿಂದ ಅವಳ ಕಣ್ಣು ಮುಚ್ಚಿದ. ತನಗೆ ಪರಿಚಯವಿದ್ದ ಆ ಎರಡು ಕೈಗಳನ್ನು ಬಿಡಿಸಿಕೊಳ್ಳಲು